ಜಾನಪದ ತಲೆಮಾರು

೧

● ಪ್ರೊ. ಹಿ.ಶಿ. ರಾಮಚಂದ್ರೇಗೌಡ ● ಡಾ. ಚಕ್ಕೆರೆ ಶಿವಶಂಕರ್

ಜಾನಪದ ತಲೆಮಾರು - ೧

ಸಂಪಾದಕರು

ಪ್ರೊ. ಹಿ. ಶಿ. ರಾಮಚಂದ್ರೇಗೌಡ

ಡಾ. ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು- ೫೬೦ ೦೦೨

Janapada Talemaaru - ೧
(A collection of articles on Folklorists of Karnataka)
edited by Prof: Hi.Shi. Ramachandre Gowda & Dr. Chakkere Shivashankar Published by: M. Muniraju, Registrar, Karnataka Janapada and Yakshagana Academy, Kannada Bhavana, J.C.Road, Bangalore-560002.
Phone: 080-2215509

First Impression: 2003

Pages: X+132 Rs: 60/-

ಜಾನಪದ ತಲೆಮಾರು-೧
(ಕರ್ನಾಟಕದ ಜಾನಪದ ತಜ್ಞರುಗಳನ್ನು ಕುರಿತ ಲೇಖನಗಳ ಸಂಕಲನ)

ಸಂಪಾದಕರು: ಪ್ರೊ.ಹಿ.ಶಿ. ರಾಮಚಂದ್ರೇಗೌಡ
ಡಾ. ಚಕ್ಕೆರೆ ಶಿವಶಂಕರ್

ಪ್ರಕಾಶಕರು: ಎಂ.ಮುನಿರಾಜು, ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560 002
ದೂರವಾಣಿ: ೦೮೦-೨೨೧೫೫೦೯

ಮುಖಪುಟ ಚಿತ್ರ: ಮುರಳೀಧರ ರಾಥೋಡ್

ಪರಿಶೀಲನಾ ಸಮಿತಿ:
ಡಾ. ಚಕ್ಕೆರೆ ಶಿವಶಂಕರ್
ಡಾ. ಎಚ್.ಎಂ. ಮಹೇಶ್ವರಯ್ಯ
ಶ್ರೀ ಎಸ್. ಮಲ್ಲಾರಾಧ್ಯ ಪ್ರಸನ್ನ

ಮುದ್ರಕರು: ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
ನಂ. ೨೬೬, ೫ನೇ ಅಡ್ಡ ರಸ್ತೆ,
ವಿಧಾನಸೌಧ ಬಡಾವಣೆ,
ಕವಿಧಾಮ ನಗರ, ಬೆಂಗಳೂರು-೫೬೦ ೦೫೮.

'ಒಂದೆ ಚಿತ್ತದಿಂ ನೆನೆದು'

ಜಾನಪದ ತಲೆಮಾರಿನ ಮೂಲಕ ನಮ್ಮ ನಾಡೋಜರ ಕಥೆ ಹೇಳ ಹೊರಟಿದ್ದೇವೆ. ಅದು ನಾವು ಕಂಡಂತೆ. ನಿಮ್ಮದೊಂದು ಕಥೆ ಇರಬಹುದು! ಅದನ್ನು ಒಡೆಚಿರಿ ಎಂದು ಕೇಳುತ್ತೇವೆ. ಇಂಥ ತಲೆಮಾರಿನ ನೆನಪು ಯಾಕೆ ಎಂದು ನೀವು ಕೇಳಬಹುದು. ತಲೆ ಇರುವವರು ತಲೆಮಾರು ಸೃಷ್ಟಿಸುತ್ತಾರೆ ; ಅದಿಲ್ಲದವರು ತಲೆಕೆಳಕಾಗಿರುತ್ತಾರೆ. ಈ ಥರ 'ನಾವು' ಆಗಿದ್ದೇವೆಯೆ ಅಥವ ಆಗುವ ಸ್ಥಿತಿಯಲ್ಲಿ ಇದ್ದೇವೆಯೆ ಎಂಬ ಪ್ರಶ್ನೆ ಹುಟ್ಟಬಹುದು. ನಾವು ತಲೆಮಾರನ್ನು ಕಟ್ಟಿಕೊಂಡು ಬಂದಿದ್ದೇವೆ. ಆದರೆ ಮಧ್ಯಂತರದಲ್ಲಿ ಅದನ್ನು ಕಳಕೊಳ್ಳುವ ಅಪಾಯಕ್ಕೆ ಒಳಗಾಗಿದ್ದೇವೆ.

'ಆಧುನಿಕ' ಎಂಬ ವಸ್ತು, ವ್ಯಕ್ತಿ ಮತ್ತು ಸಂದರ್ಭ ನಮ್ಮ ತಲೆಮಾರೆಂಬ ಹಳಮೆ, ಹಿರಿಮೆ, ಮಹಿಮೆ, ಮಹತ್ತು, ಸೌಶೀಲ.........ಇಂಥಪ್ಪ ಗುಣ ಗೌರವವನ್ನು ನಿರಾಕರಿಸಿದೆಯಲ್ಲ; ಅದರೊಡನೆ 'ನಾವು' ಎಂಬ ವ್ಯಕ್ತಿತ್ವಗಳೂ ನಿರಾಕೃತಾರ್ಥರಾಗಿದ್ದೇವಲ್ಲ! ಜ್ಞಾನ ಶ್ರೇಷ್ಠ, ಹೌದು; ಜ್ಞಾನದ ಯಜಮಾನಿಕೆ ಶ್ರೇಷ್ಠವಲ್ಲ. ಆಧುನಿಕತೆ ಜ್ಞಾನವಾಗಿ ನಮಗೆ ಯಾಹೊತ್ತು ಬೇಕು, ಆದರೆ ಯಜಮಾನನಾಗಿ ಅಲ್ಲ. ಪರಂಪರೆ ಶ್ರೇಷ್ಠ ಆದರೆ ಅದರ ಸನಾತನತೆಯ ಪ್ರತಿಪಾದನೆ ಯಾಹೊತ್ತೂ ಅನಾಹುತಕಾರಿ. ನಾವು ಪರಂಪರೆ : ಜಾನಪದ ಎನ್ನುವಾಗ ಸನಾತನ ವಾದವನ್ನು ತಿರಸ್ಕರಿಸುತ್ತೇವೆ, ನಿರಂತರವಾದ, ನಿರ್ವಂಚಿತ ಸಾಂಸ್ಕೃತಿಕ ಇತಿಹಾಸವನ್ನು ಗೌರವಿಸುತ್ತೇವೆ. ಅದೇ ರೀತಿ ವಿಕಾಸ ಪ್ರಚೋದಿತ ಆಧುನಿಕತೆಯನ್ನು ಕೈನೀಡಿ ಸ್ವಾಗತಿಸುತ್ತೇವೆ. ವಿಜ್ಞಾನವನ್ನು ಸೆರೆಯಲ್ಲಿಟ್ಟುಕೊಂಡು ಉದ್ಯಮವಾಗಿಸಿರುವ 'ಆಧುನಿಕ'ವೆಂಬ ಪ್ರವೃತ್ತಿಯನ್ನು ದೂರುತ್ತೇವೆ. ಒಂದು ದೇಶದ ಜ್ಞಾನ-ವಿಜ್ಞಾನವನ್ನು ಅದರಿಂದ ಸಾಧಿತವಾಗುವ ತಲೆಮಾರನ್ನೂ ನಾವು ಗ್ರಹಿಸುವುದು ಮತ್ತು ಕಟ್ಟಿಕೊಳ್ಳುವುದು ಈ ಮೇಲಿನ ಚಿಂತನೆಯ ವಿವೇಕದಿಂದ.

ನಮ್ಮ ದೇಶದ ಶ್ರೇಷ್ಠತೆ ಎಂಬುದು ಜಾತಿ ಆಗಿದ್ದಾಗ ಕಲಿತ ಜಾತಿಯ ಒಂದು ಕೂಸು ಕಲಿಯದ ಜಾತಿಯ ಹಿರಿಯನನ್ನು ಏನೊ ಅಂದಾಗ ಆತ ಹಿನ್‌ತಲೆ ಕೆರೆದುಕೊಳ್ಳುತ್ತ 'ಏನೂ ಇಲ್ಲ ಬುದ್ಧಿ, ಎಲ್ಲ ತಮ್ಮದೆ' ಎನ್ನುತ್ತಿದ್ದ. ಶ್ರೇಷ್ಠತೆ ಎಂಬುದು 'ಆಧುನಿಕತೆ' ಆದ ಈ ಸಂದರ್ಭದಲ್ಲಿ ಒಂದು ಕೆಂಚ ಪ್ರಾಣಿ ಕಂಡರೂ ಕೂಡ ಭಗವಂತ ಭೂಮಿಗೆ ಬಂದಂತೆ ಕಂಡು ಉನ್ಮಾದಗೊಳ್ಳುತ್ತೇವಲ್ಲ! ಹಾಗಿದ್ದಲ್ಲಿ ನಾವು ನಿರೀಕ್ಷಿಸುವ 'ಸಂಭವಾಮಿ ಯುಗೇ ಯುಗೇ' ಪುರುಷ ಇವನೆ ಎಂದು ತಿಳಿಯಬಹುದೆ? ಏನು ಹೇಳುವಿರಿ : ಯುಗಜ್ಞಾನವೆಂಬ ಕಾಲಗಳ ಸಂಪತ್ತು ಈ 'ಆಧುನಿಕ'ವೆಂಬ ಏಕಕಾಲ ಜ್ಞಾನದ ಮುಂದೆ ಮಂಡಿಯೂರಿ ಕುಳಿತು ಬಿಟ್ಟಿತಲ್ಲ. ಇಂಥ ದೊಡ್ಡ ದಾಳಿ ನೀವು ಕಂಡ ಹಾಗೆ ಯಾವತ್ತಾದರೂ ಹಿಂದೆ ನಡೆದುದುಂಟೆ!

ನಮ್ಮ ಜ್ಞಾನದ ಕುಸಿತ ನಮ್ಮ ಅಜ್ಞಾನದ ಏರಿಕೆಯ ಮೂಲ. ಈ ಕುಸಿತ ಎರಡು ರೀತಿಯದು. ಒಂದು, ನಮ್ಮ ಸಮಾಜದೊಳಗೆ ಏಕ ಮುಖಿ ಅಥವ ಪರಸ್ಪರ ಶೋಷಣೆಗೆ ತೊಡಗಿರುವುದು. ಎರಡು, ನಾವು ಕುಸಿದಿದ್ದೇವೆ ಎಂದು ಸ್ವಯಂ ಘೋಷಿಸಿಕೊಳ್ಳುವುದು. ಆಧುನಿಕತೆ ಜಾತಿ ಶ್ರೇಷ್ಠತೆಯನ್ನು ಒಡೆಯಿತು ಎಂಬುದು ಅಮೋಘ ಸಾಧನೆ, ಅದಕ್ಕೆ ಎಲ್ಲ ಬಡವರ ಧನ್ಯವಾದಗಳು. ಅದು ನಮ್ಮನ್ನೆಲ್ಲ ಅಜ್ಞಾನಿಗಳು ಎಂದು ಘೋಷಿಸಿತಲ್ಲ ಅದು ನಮ್ಮ ಮರಣ ಶಾಸನ. ನಾವೀಗ ನಮ್ಮ ಮರಣ ಶಾಸನವನ್ನು ತಲೆಯ ಮೇಲೆ ಹೊತ್ತುಕೊಂಡು ತಿರುಗಾಡುತ್ತಿದ್ದೇವೆ.

ಆದರೆ ಜಾನಪದ ಜೀವಂತ, ಅದು ಸಾಯಲು ನಿರಾಕರಿಸುತ್ತದೆ. ಜಾನಪದ ಉಳಿಕೆ ಎಂದರು, ಕೆಲವರು ಪಳೆಯುಳಿಕೆ ಎಂದರು, ಮತ್ತೆ ಸ್ವಲ್ಪ ಜನ ಜೀವಂತ ಪಳೆಯುಳಿಕೆ ಎಂದರು. ಇದೆ 'ಆಧುನಿಕತೆ' ಬರೆದ ಮರಣಶಾಸನ. ವಿಜ್ಞಾನ ಹೀಗೆ ಹೇಳದು. ಯಾಕಂದರೆ ನಮ್ಮ ಆಧುನಿಕತೆ ಓಡುತ್ತಿರುವ ಚಕ್ರಗಳು, ನಮ್ಮ ಪುರಾತನರು ಕಂಡು ಹಿಡಿದ ಚಕ್ರದ ಪರಿಷ್ಕೃತ ಚಾಲನೆಗಳು. ಜ್ಞಾನ-ವಿಜ್ಞಾನ ಉದ್ಯಮವಾಗಿ ಉದ್ಯಮಪತಿಯ ವಶಕ್ಕೆ ಒಳಗಾದಾಗ ಅದು ''ಆಧುನಿಕ'' ಎಂಬ ವಿಶೇಷ ಹೆಸರನ್ನು ಪಡೆದುಕೊಂಡು ಸಾಮಾನ್ಯವನ್ನು ಶೋಷಿಸುವ ಉದ್ಯಮದ ಚಿನ್ಹೆ ಆಗಿಬಿಡುತ್ತದೆ. ವಿಜ್ಞಾನ ವಿಶೇಷ ಎನ್ನುತ್ತೇವೆ. ಇದು ಸಾಮಾನ್ಯದ ಮತ್ತೊಂದು ಮುಖ. ಅದು ಸಾಮಾನ್ಯದ ಶೋಷಕ ಅಲ್ಲ; ಸಾಮಾನ್ಯದ ಸಾರ್ವಕಾಲಿಕ ಅಭಿವೃದ್ಧಿಯ ಅಳತೆಗೋಲು. ಸಾಮಾನ್ಯ ಎಂಬುದು ಸಾರ್ವಕಾಲಿಕ ವಿಜ್ಞಾನ ; ವಿಶೇಷವೆಂಬುದು ಸಮಕಾಲೀನ ವಿಜ್ಞಾನ. ವಿಜ್ಞಾನ ಇಲ್ಲದ ಬದುಕು ಇಲ್ಲ. ಜಾನಪದವೆಂಬುದು ಸಾರ್ವಕಾಲಿಕ ಜ್ಞಾನ-ವಿಜ್ಞಾನ. ಈ ಜ್ಞಾನದಲ್ಲಿ ಮೂಡುವ ವಸ್ತುಗಳು ಮತ್ತು ವ್ಯಕ್ತಿಗಳು ಸಾರ್ವಕಾಲಿಕ ಸತ್ಯದ ಕ್ರಿಯೆಗಳಾಗುತ್ತಾರೆ. ಇವುಗಳೊಳಗಿಂದ ಎದ್ದು ನಿಲ್ಲುವ ವ್ಯಕ್ತಿತ್ವಗಳು ಆ ಸಮಾಜದ ಮಾರ್ಗದರ್ಶಕ ತತ್ವಗಳಾಗಿರುತ್ತಾರೆ. ಮತ್ತೊಂದು ಅರ್ಥದಲ್ಲಿ ಸಾಂಸ್ಕೃತಿಕ ಪ್ರತಿನಿಧಿಗಳು.

ಹೀಗೆ ಒಂದು ಜಾನಪದ ಸಮಾಜವನ್ನು ಕಟ್ಟುವ ಮತ್ತು ಉಳಿಸುವ ಪ್ರಯತ್ನದಲ್ಲಿರುವವರೆಲ್ಲ ಜಾನಪದ ಗ್ರಹಿಕೆ ಮತ್ತು ಬೆಳವಣಿಗೆಯ ಮಾರ್ಗ ಸೂಚಿಗಳಾಗುತ್ತಾರೆ. ನಾವು ಈಗ ಜಾನಪದ ತಲೆಮಾರು ಕೃತಿಯ ಮೂಲಕ ನಿಮ್ಮ ಮುಂದೆ ನಿಲ್ಲಿಸುತ್ತಿರುವ ವ್ಯಕ್ತಿತ್ವಗಳು ಜನಪದ ಮತ್ತು ಅದರ ಸಂಸ್ಕೃತಿಯನ್ನು ಉಳಿಸಲು ಹಳಹಳಿಸಿದವರು. ಅರ್ಥಾತ್ ಇಪ್ಪತ್ತನೆಯ ಶತಮಾನದ 'ಆಧುನಿಕ' ಎಂಬ 'ಉದ್ಯಮ ವಿಜ್ಞಾನದ' ವಿರುದ್ಧ ಧ್ವನಿ ಎತ್ತಿದವರು, ಜನಪದಕ್ಕಿರುವ ನೆಲ ಮತ್ತು ನೆಲೆಯನ್ನು ಗಟ್ಟಿಯಾಗಿ ಪ್ರತಿಪಾದಿಸಿದವರು. ಆ ಮೂಲಕ ಪರಂಪರೆ ಯಾವ ಕಾರಣಕ್ಕೂ ಕಡಿತಗೊಳ್ಳಬಾರದು ಎಂದು ಅಹರ್ನಿಶಿ ದುಡಿದವರು. ಇವರು ವಿಜ್ಞಾನ ವಿರೋಧಿಗಳಲ್ಲ; ವಿಜ್ಞಾನದೊಳಗಿನ ಅಜ್ಞಾನವನ್ನು ತೊಡೆಯಲು ಸಜ್ಜು ಮಾಡಿದವರು.

ಜನಪದರು ಲಕ್ಷಾಂತರ ವರ್ಷಗಳಿಂದ ಬದುಕಿ ಜಾನಪದವನ್ನು ಹುಟ್ಟಿಸಿ, ಸಾಕಿದ್ದಾರೆ ಮತ್ತು ಅದನ್ನು ಅನುಭವಿಸಿದ್ದಾರೆ. ಜಾನಪದವೆಂಬ ಪರಿಕಲ್ಪನೆ ಹುಟ್ಟಿದ್ದು 1846ರಲ್ಲಿ. ಭಾರತದಲ್ಲಿ

ಇದರ ಗ್ರಹಿಕೆ ಶುರುವಾದದ್ದು ಹತ್ತೊಂಬತ್ತನೆಯ ಶತಮಾನದಲ್ಲಿ. ಇದಕ್ಕೆ ಕಾರಣರು ಪಾಶ್ಚಿಮಾತ್ಯರು. ಅಂದು ಜಾನಪದವನ್ನು ಸಾಮಗ್ರಿ ಎಂದು ಗ್ರಹಿಸಿ ಸಂಗ್ರಹಿಸಿದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಮ್ಮ ಜಾನಪದ ವಿದ್ವಾಂಸರೆಂಬುವವರು ಜಾನಪದವನ್ನು ಒಂದು ಕಡೆ ಸಾಮಗ್ರಿ ಎಂದು ಗ್ರಹಿಸಿದರು ಮತ್ತೊಂದು ಕಡೆ ನಮ್ಮದೆಂಬ ದೇಸಿ ಸಾಹಿತ್ಯ ಎಂದು ತಿಳಿದರು. ಸ್ವದೇಶಿ ಬಿಡುಗಡೆಗಾಗಿ ಸ್ವದೇಶಿಯಾದ ಜಾನಪದವನ್ನು ಸಂಗ್ರಹಿಸಿದರು ಮತ್ತು ಬಳಸಿಕೊಂಡರು. ಆ ಮೂಲಕ ದೇಶದ ಪರಿಕಲ್ಪನೆ ಬೆಳೆಯಲು ನೆರವಾದರು. ಸ್ವಾತಂತ್ರ್ಯ ಸಂಪಾದನೆ ಮತ್ತು ಸ್ವದೇಶಿ ಪರಿಕಲ್ಪನೆಯನ್ನು ಮೂಡಿಸುವಲ್ಲಿ ಪಾತ್ರ ವಹಿಸಿದ ಇವರನ್ನು ದೇಶ ಪ್ರೇಮಿಗಳು ಹಾಗೂ ದೇಶೋದ್ಧಾರಕರು ಎಂದು ಕರೆಯಬಹುದು. ಇವರು ಸಾಮಾನ್ಯ ಸ್ವಾತಂತ್ರ್ಯ ಹೋರಾಟಗಾರರಿಗಿಂತ ಭಿನ್ನರಾಗಿದ್ದಾರೆ. ಯಾಕಂದರೆ ಒಂದು ಕಡೆ ದೇಶದ ಬಿಡುಗಡೆಗೆ ನೆರವಾಗುತ್ತಿದ್ದರೆ ಮತ್ತೊಂದು ಕಡೆಗೆ ದೇಶೀ ಸಂಪತ್ತಿನ ಮೂಲಕ ದೇಶೋದ್ಧಾರ ಎಂಬ ಒಂದು ಸ್ಥಳೀಯ ಅರ್ಥಶಾಸ್ತ್ರ ತತ್ವವನ್ನು ಇವರು ನಮ್ಮ ಮುಂದೆ ಇರಿಸಿದ್ದಾರೆ. ಈ ದೃಷ್ಟಿಯಲ್ಲಿ ಜಾನಪದವೆಂಬುದು ಸ್ವದೇಶಿ ಅರ್ಥಶಾಸ್ತ್ರ ಕೂಡ ಆಗಿದೆ. ಪಾಶ್ಚಾತ್ಯ ಜಾನಪದ ತತ್ವ ಮತ್ತು ಸಿದ್ಧಾಂತಗಳ ಹಿಡಿತದಿಂದ ಹೊರಬಂದ ಯಾವುದೇ ಜಾನಪದ ವಿದ್ವಾಂಸ ಜಾನಪದವನ್ನು ಸ್ವದೇಶಿ ವಿಜ್ಞಾನ ಮತ್ತು ಅರ್ಥಶಾಸ್ತ್ರ ಎಂದು ನೋಡುತ್ತಾನೆ. ಪಾಶ್ಚಾತ್ಯವನ್ನು ನೇರವಾಗಿ ಅನುಕರಿಸುವ ಜಾನಪದ ವಿದ್ವಾಂಸ ಒಬ್ಬ ಮುಗ್ಧ ತರ್ಜುಮೆಗಾರ ಮಾತ್ರ ಆಗಿರುತ್ತಾನೆ.

ಜಾನಪದ ತಲೆಮಾರು ಕೃತಿಯನ್ನು ಹೊರತರುವ ಮೂಲಕ ಜಾನಪದ ತಜ್ಞರೆಂಬ ಈ ದೇಶಿ ತತ್ವಚಿಂತಕರು ಮತ್ತು ದೇಶಿ ಅರ್ಥ ಶಾಸ್ತ್ರಜ್ಞರನ್ನು ನಾವು ಗುರುತಿಸಿ ಗೌರವಿಸುತ್ತಿದ್ದೇವೆ. ಭವಿಷ್ಯದ ಭಾರತವನ್ನು ಕಟ್ಟಬಯಸುವ ರಾಜಕೀಯ ಮುಂದಾಳುಗಳು ಈ ಜಾನಪದ ತಜ್ಞರು ಒಟ್ಟಾಗಿ ಏನು ಹೇಳಿದ್ದಾರೆ ಎಂಬುದನ್ನು ಗಮನಿಸಲಿ. ದೇಶದ ಅಭಿವೃದ್ಧಿಯಲ್ಲಿ ಪಾಲುಗಾರರಾಗಬೇಕೆಂಬ ಈ ಸದುದ್ದೇಶದಿಂದಲೆ ಜಾನಪದ ಅಕಾಡೆಮಿ ಇಂಥ ಮಹತ್ವದ ಕೆಲಸಕ್ಕೆ ಕೈಯಾಕಿದೆ. ಕರ್ನಾಟಕದಾದ್ಯಂತ ಜಾನಪದ ಕಲಿಯುವವರು, ಸಂಗ್ರಹಿಸುವವರು ಮತ್ತು ಅಧ್ಯಯನ ಮಾಡುವವರು ಈ ಕೃತಿಗಳಿಂದ ಪ್ರಯೋಜನ ಪಡೆಯಲಿ ಎಂಬ ಪಾಠ ಕಲಿಸುವ ಮೇಸ್ತರಿಕೆ ಕೆಲಸದ ದೃಷ್ಟಿಯಿಂದ ಮಾತ್ರ ಈ ಜಾನಪದ ತಲೆಮಾರು ಕೃತಿಗಳನ್ನು ಹೊರತರುತ್ತಿಲ್ಲ ಎಂಬುದನ್ನು ಓದುಗರು ಅರ್ಥ ಮಾಡಿಕೊಳ್ಳಲಿ.

ಜಾನಪದ ತಲೆಮಾರಿನ ಸಾಧಕರನ್ನು ನಾಲ್ಕು ಹಂತಗಳಲ್ಲಿ ಗುರುತಿಸಿ ನಾಲ್ಕು ಕೃತಿಗಳನ್ನು ಹೊರತರುತ್ತಿದ್ದೇವೆ. ಮೊದಲ ತಲೆಮಾರನ್ನು ೧೯೫೦ಕ್ಕೆ ನಿಲ್ಲಿಸಿಕೊಂಡಿದ್ದೇವೆ. ತಲೆಮಾರಿನ ಲೆಕ್ಕವನ್ನು ಇಡುವಾಗ ಲೇಖನ ಅಥವ ಕೃತಿ ಪ್ರಕಟಣೆಯ ವರ್ಷವನ್ನು ಮಾನದಂಡವಾಗಿ ಇರಿಸಿಕೊಂಡಿದ್ದೇವೆ. ಮೊದಲ ಲೇಖನ ಅಥವ ಕೃತಿಯ ಪ್ರಕಟಣಾ ವರ್ಷ ಜ್ಞಾಪಕದಲ್ಲಿದ್ದ ಹಾಲಿ ಆ ಮಾಹಿತಿ ಸಿಗದಿದ್ದಾಗ ಜ್ಞಾಪಕದ ವರ್ಷದ ಆಧಾರದ ಮೇಲೆ ಹಿರಿತನವನ್ನು ಗೌರವಿಸಿದ್ದೇವೆ. ಮೊದಲಿಗೆ ನಮ್ಮ ಮಧ್ಯೆ ಸಾಧನೆಯಿಂದ ಪರಿಚಿತರಾದ ಜಾನಪದ

ವಿದ್ವಾಂಸರನ್ನು ತಲೆಮಾರು ಕೃತಿಯಲ್ಲಿ ಸೇರಿಸಿದ್ದೇವೆ. ನಮ್ಮ ಗಮನಕ್ಕೆ ಬರದ ಬೇರೆ ಸಾಧಕರು ಇದ್ದಿರಲೂಬಹುದು. ಈ ಕೃತಿ ಪ್ರಕಟಣೆಯ ಉದ್ದೇಶ ಕೂಡ ಹೀಗೆ ನಮ್ಮ ಲೆಕ್ಕಕ್ಕೆ ಸಿಗದೆ ಹೋದವರನ್ನು ಮುಂದಿನ ಪ್ರಕಟಣೆಯಲ್ಲಿ ಸೇರಿಸುವಂತಾಗಲಿ ಎಂಬುದೆ ಆಗಿದೆ. ಈ ಆರಂಭಿಕ ಪ್ರಯತ್ನಗಳಲ್ಲಿ ಕೊರತೆಗಳಿದ್ದರೆ ಅದು ಅಪರಾಧ ಎಂದು ಗಣಿಸದೆ ಓದುಗರು ಮನ್ನಿಸಬೇಕೆಂದು ನಾವು ಕೋರುತ್ತೇವೆ.

ಅಕಾಡೆಮಿಯ ಅಧ್ಯಕ್ಷರ ಸಂಪಾದಕತ್ವದಲ್ಲಿ ಈ ಮಾಲಿಕೆಯ ಕೃತಿಗಳು ಹೊರಬರುತ್ತಿವೆ. ಪ್ರಥಮ ಪ್ರಯತ್ನದ ಕೆಲಸ ಇದಾಗಿರುವುದರಿಂದ ತಪ್ಪು ಮತ್ತು ಒಪ್ಪುಗಳು ಅವರಿಗೇ ಸೇರಲಿ. ಈ ಕೃತಿ ಮಾಲಿಕೆಯ ಸಂಪಾದನೆಯ ಹಿಂದೆ ಒಂದು ಸಮಿತಿ ಇದೆ. ಡಾ. ಚಕ್ಕೆರೆ ಶಿವಶಂಕರ್, ಡಾ.ಎಚ್.ಎಂ. ಮಹೇಶ್ವರಯ್ಯ ಮತ್ತು ಶ್ರೀ ಮಲ್ಲಾರಾಧ್ಯ ಪ್ರಸನ್ನ ಅವರು ಈ ಸಮಿತಿಯಲ್ಲಿ ಇದ್ದಾರೆ. ಚಕ್ಕೆರೆ ಮತ್ತು ಮಹೇಶ್ವರಯ್ಯ ವಿದ್ವಾಂಸರ ನೆಲೆಗಿಂತ ನನ್ನ ಮಿತ್ರರಾಗಿ ಬೆಲೆ ಕಟ್ಟುವ ಕೆಲಸ ಮಾಡಿಕೊಟ್ಟಿದ್ದಾರೆ. ನಮ್ಮೆಲ್ಲರಿಗಿಂತ ದೊಡ್ಡವರು ಈ ಮಾಲಿಕೆಗೆ ಜಾನಪದ ತಜ್ಞರನ್ನು ಕುರಿತು ಲೇಖನ ಬರೆದು ಕೊಟ್ಟವರು. ನಮ್ಮ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಮುನಿರಾಜು ಮತ್ತು ಸಿಬ್ಬಂದಿ ಶ್ರದ್ಧೆಯಿಟ್ಟು ನೆರವಾಗಿದ್ದಾರೆ. ಶ್ರೀ ಸಿ.ವಿ.ಜಿ. ಚಂದ್ರು ಮುದ್ರಕರು, ಹೆಚ್ಚಾಗಿ ಹೋರಾಟದ ಹುಡುಗ, ಚೈತನ್ಯಶೀಲ - ಅಚ್ಚುಕಟ್ಟಾಗಿ ಪುಸ್ತಕ ಹೊರಬರಲು ಕಾರಣರಾಗಿದ್ದಾರೆ. ಈ ಎಲ್ಲರಿಗೂ ನನ್ನ ವಂದನೆಗಳು ಸಲ್ಲುತ್ತವೆ.

ಈಗ ನಿಮ್ಮ ಕೈಯಲ್ಲಿ ಇರುವುದು ಜಾನಪದ ತಲೆಮಾರು - ೧. ಹಿರಿಯ ಜಾನಪದ ಚೇತನಗಳು ತಮ್ಮನ್ನು ಇಲ್ಲಿ ತೋಡಿಕೊಂಡಿವೆ. ಕಟ್ಟುವ ಪ್ರತಿಭೆ ಅವರಲ್ಲಿ ತುಂಬಿ ತುಳುಕಿದೆ. ದೇಶ ಮತ್ತು ಜನತೆಯ ಮಧ್ಯೆ ನಿಂತು ಕಳಚಬೇಕಾದುದು ಹೊದಿಯಬೇಕಾದುದು ಯಾವುದು ಎಂದು ತುಲನೆ ಮಾಡಿದ್ದಾರೆ. ನಾವು ನಿಲ್ಲಬೇಕಾದ ನೆಲ ಯಾವುದು, ಅದು ಎಷ್ಟು ಸುರಕ್ಷಿತ ಎಂಬ ತಪಶೀಲು ನಡೆಸಿದ್ದಾರೆ. ಮೂರು ಪ್ರಧಾನ ಚಿಂತನಾ ನೆಲೆಗಳು ಇಲ್ಲಿ ನಮ್ಮನ್ನು ತಡಕುತ್ತವೆ. ಮೊದಲಾಗಿ ಶ್ರೀಯವರು ''ಜನವಾಣಿ ಬೇರು, ಕವಿವಾಣಿ ಹೂವು'' ಎಂದರಲ್ಲ. ಕರ್ನಾಟಕದ ಸಾಹಿತ್ಯ ಚರಿತ್ರೆ ಬರೆದವರಿಗಾಗಿ ಬಂತು, ಬರೆಯದೆ ಹಾಡಿದವರನ್ನು ಚರಿತ್ರೆಯ ಮೊದಲ ಅಧ್ಯಾಯದ ಮೊದಲ ಅಕ್ಷರದಲ್ಲಿ ಇಟ್ಟರಲ್ಲ. ಸಾಹಿತ್ಯ ಮೀಮಾಂಸೆಗಳ ಹೊಸ ದಿಕ್ಕು ತೋರಿದರಲ್ಲ. ಆದರೆ ಮುಂದೆ ಬಂದವರು ತಮ್ಮ ಜಡತ್ವದಿಂದ ಹೊರಗೆ ಬಂದಂತೆ ಕಾಣಲಿಲ್ಲ. ಜನರೊಳಗೆ, ಜನರಿಗಾಗಿ ಬರೆದ ಮಾಸ್ತಿ ಜಾನಪದದ ಬಗ್ಗೆ ತೋರಿಸಿದ ನಿಯತ್ತು ಬಹಳ ಬೆಲೆಯದು. ಶ್ರೀಯವರಿಗಿಂತ ಮುಂದೆ ಹೋಗಿ ಜನಪದ ಸಾಹಿತ್ಯವೆಂಬುದು ಒಂದು ಪ್ರತ್ಯೇಕ ಅನನ್ಯತೆ, ಅದನ್ನು ಬರಹದ ಸಾಹಿತ್ಯದ ಮಾನದಂಡದಿಂದ ನೋಡಲು ಆಗದು ಎಂದರಲ್ಲ, ಇವರನ್ನು ಅರ್ಥೈಸಿ ಹೇಳಲು ನಮ್ಮಂಥ ಹೊಸ ತಲೆಮಾರಿನ ಜಾನಪದ ವಿದ್ವಾಂಸರೆ ಬರಬೇಕಾಯಿತು. ಜನಪದ ಸಾಹಿತ್ಯವನ್ನು ''ಇಟ್ಟುಕೊಂಡಂತೆ ಮಾತನಾಡಬೇಡಿ, ಸಂಪನ್ಮೂಲ ಎಂದು ಉಪ ಸಾಹಿತ್ಯಸ್ಥಾನ ನೀಡಬೇಡಿ, ಅದು ಬಹುಕ್ರಮ ಸಮಾಜದ ಬಹು ಉತ್ಪತ್ತಿ'' ಎಂದು ತಿಳಿಯಲು ಮಾಸ್ತಿಯವರು ನೆರವಾಗಿದ್ದಾರೆ.

ಇದೇ ಸಂದರ್ಭದಲ್ಲಿ ಜಾನಪದ ಕುರಿತ ಒಂದು ಭಿನ್ನವಾದ ನೆಲೆ ಸಾಮಾನ್ಯನೆಂಬ ಜನಪದ 'ಶ್ರೀಸಾಮಾನ್ಯ' ನಾಗಬೇಕೆಂದರಲ್ಲ ಕುವೆಂಪು. ಅವರಿಗೆ ಹೇಳಿದರು. 'ಸೋಬಾನೆ ಹಾಡುತ್ತಾ ಕೂರಬೇಡಿ' ಎಂದು ಏನಿದರ ಅರ್ಥ? ಜಾನಪದ ವಿರೋಧವೆ? ಅಲ್ಲ. ಜಾನಪದವೆಂಬುದು, ಜನರೆಂಬುವವರು ಹಳಸು ಮತ್ತು ಹಳಬರಲ್ಲ. ಇರುವಾಗ ಜಾನಪದವೆಂಬುದು ಒಂದು ಸ್ಥಿತಿ, ಬೆಳೆಯುವಾಗ ಅದು ಸಮಕಾಲೀನ ಆಗಲೇಬೇಕು. ಆದ್ದರಿಂದ ಜನಪದರು ಕೂರಬಾರದು. ಜನಪದ ಸಮಾಜಗಳು ತಮ್ಮ ಮಹಾಸೃಷ್ಟಿಯ ಏಕಲವ್ಯನಂತೆ, ಜಲಗಾರನಂತೆ, ಶಂಬೂಕನಂತೆ ಮಂಥರೆಯಂತೆ...... ಬೆಳೆಯಬೇಕು. ಬೇಡವಾದುದನ್ನು ಹಿಂದೆ ಚೆಲ್ಲಿ ಬೇಕಾದುದನ್ನು ಉಳಿಸಿಕೊಳ್ಳುವುದೇ ಜನಪದ- ಜಾನಪದದ ಅಸ್ತಿತ್ವ ಪ್ರತಿಪಾದನೆ. ಇಲ್ಲದಿದ್ದಲ್ಲಿ ನಮ್ಮ ಜಾತಿಶ್ರೇಷ್ಠ ಸಮಾಜದಲ್ಲಿಯ ಅಗಸರು, ಬೆಸ್ತರು, ಬೇಡರು, ಕುರುಬರು, ಕೊರಚರು, ದೀವರು.........ಈ ಜನಪದಗಳು ಪಳೆಯುಳಿಕೆಗಳೇ ಆಗಿ ಕಾಣುತ್ತವೆ. ಅವರನ್ನು ಹಾಗೆಯೆ ಉಳಿಸಿ ಹೊಗಳುವ ಪಾಠ ಒಪ್ಪಿತವಾಗಿ ಬಿಡುತ್ತದೆ. ಅವರೂ ಕೂಡ ''ಶ್ರೀ'' ಆಗಬೇಕು. ಕುವೆಂಪು ಅವರ ಏಕಲವ್ಯನಂತೆ ಇವರೆಲ್ಲ ಮನೆಮನೆಯ ತಪಸ್ವಿಗಳಾಗಬೇಕು, ತಮ್ಮ ಸಮುದಾಯದ ಸಾಂಸ್ಕೃತಿಕ ನೇತಾರರಾಗಬೇಕು. ಆಗ ನಾವು ಒಟ್ಟು ಸಂಸ್ಕೃತಿಯ ಬೆಳವಣಿಗೆಯನ್ನು ಕಾಣುತ್ತೇವೆ. ಈ ಸಂಸ್ಕೃತಿ ಬೆಳವಣಿಗೆಯಿಂದ ಸಂವೃದ್ಧ ಜಾನಪದವನ್ನು ಕಾಣುತ್ತೇವೆ. ಅಂದರೆ ಜಾನಪದದ ಬೆಳವಣಿಗೆಯನ್ನು ಕಾಣುತ್ತೇವೆ. ಹೀಗೆ ಜಾನಪದವನ್ನು ನೋಡದಿದ್ದರೆ ಹತ್ತೊಂಬತ್ತನೆ ಶತಮಾನದ ಮಾನವಶಾಸ್ತ್ರಜ್ಞರು ಹೇಳಿದ ''ಸಂಸ್ಕೃತಿ ಬೆಳೆಯುತ್ತದೆ, ಜಾನಪದ ಅಳಿಯುತ್ತದೆ (Culture evolves, Folklore devolves) ಎಂಬ ತಳಬುಡವಿಲ್ಲದ ತತ್ವಕ್ಕೆ ಬದ್ಧರಾಗಿ ಜಾನಪದವನ್ನು ಕಳೆದುಕೊಳ್ಳಬೇಕಾಗುತ್ತದೆ.

ದ.ರಾ. ಬೇಂದ್ರೆಯವರು ಜನಪದ ಸಾಹಿತ್ಯ, ಧ್ವನಿ, ಸಂಗೀತವನ್ನು ಧಾರಾಳವಾಗಿ ಬಳಸಿಕೊಂಡರು, ಬೆಳೆಸಿಕೊಂಡರು. ಇದೆಲ್ಲ ಜಾನಪದದ 'ದೇಹ ಭಾಷೆ' (Body language). ಕುವೆಂಪು ಅವರು ಮಾತನಾಡಿದ್ದು ಜನಪದ ಬೆಳೆಯಲು ಬೇಕಾದ ವಸ್ತು ಭಾಷೆ (Content language) ಬಗ್ಗೆ. ಜನಪದ ಭಾಷೆ ಪ್ರದೇಶಮಿತ ಮತ್ತು ಹಿತ. ಜನಪದ ವಸ್ತು ಎಂಬುದು ಜನಪದವೊಂದರ ಅನನ್ಯತೆಯ ನೆಲೆ. ಮದುವೆ ಗಂಡಿಗೆ ''ಅದು'' ಇದ್ದಹಾಗೆ. ಶೃಂಗಾರ ಒಂದು ಸನ್ನಿವೇಶ ಮಾತ್ರ. ಹೀಗೆ ಜಾನಪದ ವಸ್ತು ವಿಷಯದ ಬಗ್ಗೆ ಮಾತನಾಡಿದ ಕುವೆಂಪು ಅವರು ನಮ್ಮ ಜಾನಪದ ತಲೆಮಾರಿನಲ್ಲಿ ಇದ್ದಾರೆ. ಮುಂದೊಮ್ಮೆ ಹೊಸದಾಗಿ ಸೇರಬೇಕಾದವರ ಪಟ್ಟಿ ಬೆಳೆಯಬಹುದು. ಆಗಲಿ.

ವಂದನೆಗಳು

ಪ್ರೊ. ಹಿ.ಶಿ.ರಾಮಚಂದ್ರೇಗೌಡ
ಅಧ್ಯಕ್ಷರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ಕುಂಭ ಸಾಲು - ೧

		ಪುಟಸಂಖ್ಯೆ
೧.	ಕ್ರೈಸ್ತ ಮಿಷನರಿ	1
೨.	ವಿ.ಎಸ್. ನರಸಿಂಹಯ್ಯಂಗಾರ್	10
೩.	ರಾವ್ ಬಹದ್ದೂರ್ ಸಿ. ಹನುಮಂತೇಗೌಡ	11
೪.	ಎಂ.ಎಲ್. ಶ್ರೀಕಂಠೇಶಗೌಡ	12
೫.	ನಡಿಕೇರಿಯಂಡ ಚಿಣ್ಣಪ್ಪ	14
೬.	ಮಾಸ್ತಿ ವೆಂಕಟೇಶ ಅಯ್ಯಂಗಾರ್	16
೭.	ಪ್ರಹ್ಲಾದ ನರೇಗಲ್ಲ	25
೮.	ಬೆಟಗೇರಿ ಕೃಷ್ಣಶರ್ಮ	26
೯.	ಹಲಸಂಗಿ ಗೆಳೆಯರು	34
೧೦.	ಸಿಂಪಿ ಲಿಂಗಣ್ಣ	38
೧೧.	ಬಿ.ಎಂ. ಶ್ರೀಕಂಠಯ್ಯ	46
೧೨.	ದ.ರಾ.ಬೇಂದ್ರೆ	53
೧೩.	ಕುವೆಂಪು	55
೧೪.	ತೀ.ನಂ. ಶ್ರೀಕಂಠಯ್ಯ	63
೧೫.	ಅರ್ಚಕ ಬಿ. ರಂಗಸ್ವಾಮಿ ಭಟ್ಟ	68
೧೬.	ವಿಠೋಬ ವೆಂಕನಾಯಕ ತೊರ್ಕೆ	70
೧೭.	ಬೇಕಲ ರಾಮನಾಯಕ	74
೧೮.	ದೇವುಡು ನರಸಿಂಹ ಶಾಸ್ತ್ರಿ	77
೧೯.	ಎಸ್.ವಿ. ರಂಗಣ್ಣ	80
೨೦.	ಪಿ. ಧೂಲಾ	81
೨೧.	ಗೊರೂರು ರಾಮಸ್ವಾಮಿ ಅಯ್ಯಂಗಾರ್	85
೨೨.	ಎಸ್.ಕೆ. ಕರೀಂಖಾನ್	92
೨೩.	ಕೆ. ಶಿವರಾಮ ಕಾರಂತ	96
೨೪.	ಎಲ್.ಕೆ. ಅನಂತಕೃಷ್ಣ ಅಯ್ಯರ್	104
೨೫.	ಹುಲ್ಲೂರು ಶ್ರೀನಿವಾಸ ಜೋಯಿಸ	105
೨೬.	ಎನ್. ಅನಂತರಂಗಾಚಾರ್	106

೨೭.	ಬಿ.ಎನ್. ರಂಗಸ್ವಾಮಿ	107
೨೮.	ಎಂ.ಎನ್. ಅನಂತ ಪದ್ಮನಾಭರಾವ್	108
೨೯.	ಎಚ್.ಎಸ್. ಅಚ್ಚಪ್ಪ	109
೩೦.	ಮತಿಘಟ್ಟ ಕೃಷ್ಣಮೂರ್ತಿ	110
೩೧.	ಎಲ್. ಗುಂಡಪ್ಪ	120
೩೨.	ಶಿವೇಶ್ವರ ದೊಡ್ಡಮನಿ	124
೩೩.	ಕೆ.ಆರ್. ಲಿಂಗಪ್ಪ	125

ಕ್ರೈಸ್ತ ಮಿಷನರಿ

ಡಾ|| ಬಿ.ಎಸ್.ತಲ್ವಾಡಿ

ಪಾಶ್ಚಾತ್ಯ ಪ್ರಾಚೀನಾನ್ವೇಷಕರೆನಿಸಿದ ಕ್ರೈಸ್ತ ಮಿಷನರಿಗಳು ನಮ್ಮನಾಡಿನ ಜಾನಪದಾಧ್ಯಯನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡದ್ದು ೧೯ನೆಯ ಶತಮಾನದ ಪೂರ್ವಾರ್ಧದಲ್ಲಿ. ಸರಿ ಸುಮಾರು ಅದೇ ಕಾಲದಲ್ಲಿ ಅವರಿಂದ ಭಾರತೀಯ ಜಾನಪದ ಸಂಪನ್ಮೂಲಗಳ ಅನ್ವೇಷಣೆಯೂ ಆಯಿತೆನ್ನಬಹುದು. ಮಿಷನರಿ ವಿದ್ವಾಂಸರು ಭಾರತೀಯ ಜಾನಪದ ಅಧ್ಯಯನಕ್ಕೆ ತೊಡಗುತ್ತಿದ್ದಂತೆ, ಕರ್ನಾಟಕದಲ್ಲಿನ ಕೆಲವು ಪಾಶ್ಚಾತ್ಯ ವಿದ್ವಾಂಸರು ಕನ್ನಡ ಜಾನಪದ ಕ್ಷೇತ್ರಕ್ಕೆ ಧುಮುಕಿದರು. ಕನ್ನಡ ಜಾನಪದದ ಶ್ರೀಮಂತಿಕೆಯನ್ನು ಕಂಡುಕೊಂಡರು. ಸಂಗ್ರಹ ಸಂಪಾದನೆಗೆ ತೊಡಗಿದರು.

ಆಗಾಗಲೇ ಪಶ್ಚಿಮ ಬಂಗಾಳ, ರಾಜಸ್ಥಾನ, ಪಂಜಾಬುಗಳಲ್ಲಿ ಪಾಶ್ಚಾತ್ಯ ಮಿಷನರಿಗಳು ಆಯಾ ರಾಜ್ಯಗಳ ಜಾನಪದ ಅಧ್ಯಯನದಲ್ಲಿ ತೊಡಗಿಕೊಂಡಿದ್ದರು. ರೆ.ವಿಲ್ಯಂ ಮಾರ್ಟಿನ್ ಬಂಗಾಳಿ ಗಾದೆಗಳ ಸಂಗ್ರಹವನ್ನು ಪ್ರಕಟಿಸಿದ್ದರು (೧೮೩೫). ರಾಜಸ್ಥಾನದ ಪುರಾಣ ಐತಿಹ್ಯಗಳನ್ನು ಕುರಿತು ಕರ್ನಲ್ ಟೋಡ್ ಕೆಲಸ ಮಾಡಿದ್ದರು (೧೮೨೯). ಪಂಜಾಬಿನ ಜನಪದಕತೆಗಳ ಸಂಗ್ರಹವನ್ನು ಸಿ.ಸ್ವಿನ್ನರ್‌ಟನ್ ಪ್ರಕಟಿಸಿದ್ದರು. ಆರ್.ಸಿ. ಟೆಂಪಲ್, ಸಿ.ಎಫ್.ಓಸ್ಬೊರ್ನ್ ಮುಂತಾದವರು ಜಾನಪದ ಕ್ಷೇತ್ರದಲ್ಲಿ ಆಗಲೇ ಗುರುತಿಸಿಕೊಂಡಿದ್ದರು. ಈ ಅಧ್ಯಯನಗಳನ್ನು ಮುಂದಿಟ್ಟುಕೊಂಡು, ಕನ್ನಡ ಜಾನಪದ ಸಂಗ್ರಹ ಸಂಪಾದನೆಗೆ ಕೆಲವು ಮಿಷನರಿಗಳು ತೊಡಗಿದರು. ಅವರಲ್ಲಿ ಲೌಕಿಕರೂ ಇದ್ದಾರೆ. ಭಾರತೀಯ ಜಾನಪದ ಪಿತಾಮಹನೆನಿಸಿದ ಅಬ್ಬೆ ದುಬೊಲ, ಚಾರ್ಲ್ಸ್ ಇ.ಗೋವರ್, ರೆ.ಎಫ್.ಕಿಟೆಲ್, ಜೆ.ಎಫ್. ಫ್ಲೀಟ್, ಜಾನ್ ಲೇಡನ್, ಕ್ಯಾಪ್ಟನ್ ಮೆಕೆಂಜಿ, ರೆ.ಮೊಗ್ಲಿಂಗ್, ರೆ.ಎ.ಜೆ.ಓ.ಲ್ಮೆಲ್, ಮೇರಿ ಫ್ರೇರೆ ಮುಂತಾದವರು ಕನ್ನಡ ಜಾನಪದ ಕ್ಷೇತ್ರದಲ್ಲಿ ಮೊದಲು ಕೃಷಿ ಮಾಡಿದ ಪಾಶ್ಚಾತ್ಯರು.

ಅಬ್ಬೆ ದುಬೊಲ :

ಹದಿನೆಂಟನೆಯ ಶತಮಾನದ ಹೊತ್ತಿಗೇ ಕರ್ನಾಟಕದ ಸಮಗ್ರ ಜನಪದ ಜೀವನವನ್ನು ಆಮೂಲಾಗ್ರವಾಗಿ ತೆರೆದ ಕಣ್ಣುಗಳಿಂದ ದಾಖಲಿಸಿದವರೆಂದರೆ ಅಬ್ಬೆ ದುಬೊಲ(೧೭೬೫-೧೮೪೮). ಈತ ಫ್ರಾನ್ಸ್ ದೇಶಕ್ಕೆ ಸೇರಿದ ಕ್ರೈಸ್ತ ಮಿಶನರಿ. ೧೭೯೨ರಲ್ಲಿ ಈತ ಭಾರತಕ್ಕೆ ಬಂದು ಕ್ರೈಸ್ತ ಧರ್ಮದ ಪುನರ್ ವ್ಯವಸ್ಥೆಗೆಂದು ಶ್ರೀರಂಗಪಟ್ಟಣಕ್ಕೆ ಬಂದನು. ಕೇವಲ ಕ್ರೈಸ್ತ

ಮತ ಪ್ರಚಾರ ಕಾರ್ಯವಲ್ಲದೆ, ಜನಪದರ ಬದುಕಿನ ಸಾಮೀಪ್ಯ ಪಡೆದು, ಗ್ರಾಮೀಣ ಪ್ರಪಂಚದ ಆಚಾರ ವಿಚಾರಗಳನ್ನು ಅರ್ಥೈಸಿಕೊಂಡು Hindu Manners, customs and ceremonies ಎಂಬ ಬೃಹತ್ ಗ್ರಂಥ (೧೮೦೬)ವನ್ನು ತನ್ನ ಮಾತೃಭಾಷೆಯಾದ ಫ್ರೆಂಚ್‌ನಲ್ಲಿ ರಚಿಸಿದನು. ೧೮೧೬ರಲ್ಲಿ ಅದರ ಇಂಗ್ಲಿಷ್ ಅನುವಾದ ಪ್ರಕಟವಾಯಿತು.

ದುಬೋಇನ ಈ ಉದ್ಗ್ರಂಥ ಭಾರತೀಯ ವಿಶೇಷವಾಗಿ ಕರ್ನಾಟಕ ಜಾನಪದ ಜೀವನವನ್ನೊಳಗೊಂಡಿದೆ. ಜನಸಾಮಾನ್ಯರ ಬದುಕಿನ ಮಧ್ಯದಲ್ಲಿ ನಿಂತು ಸಂಗ್ರಹಿಸಿದ ಮಾಹಿತಿಗಳ ಭಂಡಾರವೇ ಇದರಲ್ಲಿರುವುದರಿಂದ ಈ ಗ್ರಂಥಕ್ಕೆ ಸಾರ್ವಕಾಲಿಕ ಮೌಲ್ಯವಿದೆ. ''ಈ ಗ್ರಂಥದ ಒಪ್ಪಾಲು ಭಾರತೀಯ ಗ್ರಂಥ ಸಮುದಾಯ ಹಾಗೂ ಲಿಖಿತ ದಾಖಲೆಗಳ ಆಧಾರದಿಂದ ರಚಿತವಾದರೆ ಮುಪ್ಪಾಲು ಇಲ್ಲಿನ ಸಮಾಜದ ಎಲ್ಲಾ ವರ್ಗಗಳ ಜನರೊಂದಿಗೆ ನಾನು ಬೆರೆತು ಅವರ ಬಾಯಿಯಿಂದ ನೇರವಾಗಿ ಸಂಗ್ರಹಿಸಿದವುಗಳಾಗಿವೆ.'' ಎನ್ನುವಲ್ಲಿ ಕೃತಿಯ ಮಹತ್ವದ ಅರಿವಾಗುತ್ತದೆ.

ಕರ್ನಾಟಕದ ಶ್ರೀರಂಗಪಟ್ಟಣ ಮತ್ತು ಹಾಸನದ ಶೆಟ್ಟಿಹಳ್ಳಿಗಳನ್ನು ತನ್ನ ಕಾರ್ಯಕ್ಷೇತ್ರದ ಮುಖ್ಯ ಕೇಂದ್ರವಾಗಿಸಿಕೊಂಡು ದುಬೋಇ ತನ್ನ ಗ್ರಂಥದಲ್ಲಿನ ಅನೇಕಾನೇಕ ಮಾಹಿತಿಗಳನ್ನು ಈ ಪ್ರದೇಶಗಳ ಸುತ್ತಲಿಂದ ಸಂಗ್ರಹಿಸಿರುವುದು ಕಂಡುಬರುತ್ತದೆ. ಭಾರತದ ಸಾಮಾಜಿಕ ಇತಿಹಾಸ ಬರೆಯಲು ಈ ಗ್ರಂಥ ಸಮೃದ್ಧ ಮೂಲ ಮಾಹಿತಿಯನ್ನು ಒದಗಿಸುತ್ತದೆ.

ಜನಪದರೇ ನಿರ್ವಹಿಸುವ ನ್ಯಾಯಾಲಯದಲ್ಲಿನ ನ್ಯಾಯ ನಿರ್ಣಯ, ಶಿಕ್ಷೆ, ಪ್ರಾಯಶ್ಚಿತ್ತ ಪದ್ಧತಿ, ಜಾತಿ ಬಹಿಷ್ಕಾರ ಹಾಗೂ ಸ್ವೀಕಾರ, ಚಾತುರ್ವರ್ಣೀಯರ ಹಾಗೂ ಅಸ್ಪೃಶ್ಯರ ಜೀವನಾವರ್ತನ ಹಾಗೂ ವಾರ್ಷಿಕಾವರ್ತನ ಆಚರಣೆಗಳು, ಹೆಣ್ಣನ್ನು ಮೇಲು ನೋಟಕ್ಕೆ ಔದಾರ್ಯದಿಂದ ಕಂಡು ಪುರಸ್ಕರಿಸುತ್ತಲೇ ಆಕೆಗೆ ಕುಟುಂಬದ ಒಳ ಹೊರಗೆ ನಿರ್ಬಂಧವನ್ನು ವಿಧಿಸುವುದು, ವೈಧವ್ಯ, ಸತಿಯಂಥ ಕೆಟ್ಟಪದ್ಧತಿಗಳನ್ನು ವೈಭವೀಕರಿಸುವುದರ ಬಗ್ಗೆ ವಿವರಣೆಗಳನ್ನು ದುಬೋಇ ತಮ್ಮ ಗ್ರಂಥದಲ್ಲಿ ಗುರುತಿಸುತ್ತಾರೆ. ಅಲ್ಲದೆ ಭೌತಿಕ ಜಾನಪದದ ಕಕ್ಷೆಯೊಳಗೆ ಬರುವ ಗುಡಿಗೋಪುರಗಳ ವಾಸ್ತು ವಿವರ, ದೈವ ಸಂಬಂಧಿ ವಸ್ತುಗಳ ವಿವರ, ದೇವಾಲಯಗಳ ಆಡಳಿತ ವ್ಯವಸ್ಥೆ, ದೇವದಾಸಿ ಪದ್ಧತಿ, ಅದರ ದುರ್ಬಳಕೆ, ದೇವಾಲಯದ ವಾಲಗದವರು, ಕೊಂಬು ಕಹಳೆಯವರು, ಹಿಂದೂ ಸ್ತ್ರೀಯರು ತಮ್ಮ ಸರ್ವಾಂಗಗಳಲ್ಲಿ ಧರಿಸುವ ಆಭರಣಗಳು, ಪೋಷಾಕುಗಳು, ಪೌರಾಣಿಕ ನಾಟಕ ವಿಶೇಷಗಳು, ಹುಟ್ಟುಸಾವುಗಳ ಮುಟ್ಟು ತಟ್ಟುಗಳು- ಹೀಗೆ ಹಿಂದೂ ಸಮಾಜದ ಸಂಪ್ರದಾಯ, ಆಚರಣೆ ಮತ್ತು ನಂಬಿಕೆಗಳ ಸವಿವರವಾದ ಜಾನಪದ ದಾಖಲೆ ಈ ಗ್ರಂಥದಲ್ಲಿ ದೊರೆಯುತ್ತದೆ.

ರೆ.ಫರ್ಡಿನೆಂಡ್ ಕಿಟೆಲ್:

೧೮೫೩ರಲ್ಲಿ ಭಾರತಕ್ಕೆ ಮಿಷನರಿಯಾಗಿ ಬಂದ ಫರ್ಡಿನೆಂಡ್ ಆರ್.ಕಿಟೆಲ್ ಕೇವಲ ಧರ್ಮ ಪ್ರಚಾರವನ್ನು ಮಾತ್ರ ಕೈಗೊಳ್ಳದೆ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗೆಗೆ ಅಪಾರ ಆಸಕ್ತಿ ವಹಿಸಿ ಅದರ ತಲಸ್ಪರ್ಶಿ ಅಧ್ಯಯನ ನಡೆಸಿದ ಮಹಾನ್ ಮೇಧಾವಿ. ಕನ್ನಡ ಜನಪದ ಸಾಹಿತ್ಯಕ್ಕೆ

ಇವರಿಂದ ಗಮನಾರ್ಹ ಸೇವೆ ಸಂದಿದೆ. ಕಿಟೆಲ್‌ರ ಬಹು ದೊಡ್ಡ ಕೊಡುಗೆಯೆಂದರೆ ಅವರ 'ಕನ್ನಡ-ಇಂಗ್ಲಿಷ್ ಶಬ್ದಕೋಶ'. ಜನಸಾಮಾನ್ಯರ ಆಡುಭಾಷೆಗೆ ಸಂಬಂಧಪಟ್ಟ ಶಬ್ದಗಳನ್ನು ಇದರಲ್ಲಿ ಕಲೆಹಾಕಿದ್ದಾರೆ. ತಮ್ಮ ಅಪೂರ್ವ ಕೃತಿಯೆನಿಸಿದ ಶಬ್ದಕೋಶದಲ್ಲಿ ರೆವರೆಂಡ್ ಕಿಟೆಲ್ ಗ್ರಂಥಸ್ಥ ಉದಾಹರಣೆಗಳನ್ನು ಕೊಡುವುದರ ಜೊತೆಗೆ ಜನಸಾಮಾನ್ಯರ ಆಡುಮಾತಿನ ಕಡೆ ಗಮನ ಹರಿಸಿದರು. ಗಾದೆಗಳನ್ನು ಸಂಗ್ರಹಿಸಿದರು.

ಕಿಟೆಲ್ ಶಬ್ದಕೋಶದ ಒಂದು ಸಾಧನೆಯೆಂದರೆ ಅದು ಕನ್ನಡದ ಹಲವಾರು ಗಾದೆಗಳನ್ನು ಒಳಗೊಂಡದ್ದು. ಶಬ್ದಾರ್ಥದ ಹಿನ್ನೆಲೆಯನ್ನು ಸ್ಪಷ್ಟಪಡಿಸಲು ಸಾವಿರಾರು ಗಾದೆಗಳನ್ನು ತಮ್ಮ ಶಬ್ದಕೋಶದಲ್ಲಿ ಅವರು ಬಳಸಿಕೊಂಡರು. ಒಟ್ಟು ೪೧೭೮ ಗಾದೆಗಳು ಈ ಕೋಶದಲ್ಲಿವೆ. ಕೋಶದ ಜೊತೆಗೆ ಜನಪದ ಸಾಹಿತ್ಯಕ್ಕೆ ಸಂದ ಮಹತ್ವದ ಕಾಣಿಕೆಯಿದು. 'ಪ್ರಾಯಶಃ ಜಗತ್ತಿನ ಬೇರಾವ ಶಬ್ದಕೋಶದಲ್ಲೂ ಇಷ್ಟೊಂದು ಗಾದೆಗಳನ್ನು ಬಳಸಿರುವ ಉದಾಹರಣೆ ಸಿಗುವುದಿಲ್ಲ.' ಇದರಲ್ಲಿ ಬಳಸಿದ ಗಾದೆಗಳನ್ನೆಲ್ಲಾ ಒಂದೆಡೆ ಕಲೆಹಾಕಿ ರಾಗೌ ಅವರು ''ಕಿಟೆಲ್ ಕೋಶದ ಗಾದೆಗಳು'' ಎಂದು ಪ್ರಕಟಿಸಿದ್ದಾರೆ. ಇದಲ್ಲದೆ ಕಿಟೆಲ್‌ರು ಬೇರೊಂದು ಸ್ವಾತಂತ್ರ್ಯಗಾದೆಗಳ ಸಂಗ್ರಹವನ್ನೂ ಕನ್ನಡಿಗರಿಗೆ ನೀಡಿದ್ದಾರೆ. ''ಸಹಸ್ರ ಗಾಥಾಮೃತ ಕಲಶ'' ಎಂಬ ಈ ಗಾದೆಗಳ ಸಂಗ್ರಹದಲ್ಲಿ ೨೦೦೦ ಗಾದೆಗಳಿವೆ.

ಜನಪದ ಗೀತೆಗಳಲ್ಲಿ 'ದುಂದುಮೆ' ಎಂಬುದೊಂದು ಪ್ರಕಾರ. ಇಂದು ದುಂದುಮೆ ಹೆಸರಿನ ಪದಗಳೇ ಕಣ್ಮರೆಯಾಗಿದ್ದು ಅದರ ಲಕ್ಷಣಕ್ಕಾಗಿ ಹುಡುಕಾಡುವಂತಿದೆ. ಕಿಟೆಲ್‌ರು ತಮ್ಮ ಸಮಕಾಲೀನದವೆಂದು ಉಲ್ಲೇಖಿಸುವ ೩೦ ಪ್ರಕಟಣೆಗಳಿದ್ದು, ಅವುಗಳಲ್ಲಿ ಏಳು ಕೃತಿಗಳು ದುಂದುಮೆಗಳಾಗಿವೆ. ಅವು: ೧) ಕಾಮ ದಹನದ ರತಿ ಪ್ರಲಾಪ ದುಂದುಮೆ, ೨) ಕೃಷ್ಣ ಲೀಲಾ ದುಂದುಮೆ, ೩) ಕೃಷ್ಣಾರ್ಜುನ ದುಂದುಮೆ, ೪) ದ್ರೌಪದಿ ಮಾನಹರಣ ದುಂದುಮೆ, ೫) ವೀರಸಂಗಯ್ಯ ದುಂದುಮೆ, ೬) ಹುಬ್ಬಳ್ಳಿ ವರ್ಣನ ದುಂದುಮೆ ಮತ್ತು ಹುಬ್ಬಳ್ಳಿ ಮರ್ಕಟ ದುಂದುಮೆ. ಕಿಟೆಲ್‌ರು ಹೇಳಿರುವ ಈ ದುಂದುಮೆ ಪದಗಳು ದೊರೆತರೆ ದುಂದುಮೆಯ ಸ್ವರೂಪದ ಬಗ್ಗೆ ಒಂದು ಕಲ್ಪನೆ ಬರಬಹುದು. ಇದೇ ೩೦ ಪ್ರಕಟಣೆಗಳ ಜಾಡಿನಲ್ಲಿ ಪಾರಿಜಾತ ಬಯಲಾಟದ ಮೂಲಕೃತಿ ಅಪರಾಳ ತಮ್ಮಣ್ಣನ ಶ್ರೀಕೃಷ್ಣ ಪಾರಿಜಾತ ಕಾವ್ಯದ ಉಲ್ಲೇಖವೂ ಇರುವುದು ಗಮನಾರ್ಹ.

ಇಂಡಿಯನ್ ಆ್ಯಂಟಿಕ್ವರಿಯಲ್ಲಿ ರೆ. ಕಿಟೆಲ್ ಕೊಡವರ ಮೂಢಾಚಾರಗಳನ್ನು ಕುರಿತು Coorg Superstitions ಎಂಬ ಲೇಖನವನ್ನು ಪ್ರಕಟಿಸಿದ್ದಾರೆ (೧೮೭೩). ಕಿಟೆಲ್‌ರು ಬಹು ಶ್ರಮದಿಂದ ಈ ಲೇಖನವನ್ನು ಪ್ರಕಟಿಸಿದ್ದಾರೆ. ಕೊಡವರ ಪಿತೃಪೂಜೆಗೂ ಭೂತಾರಾಧನೆಗೂ ಇರುವ ಸಂಬಂಧವನ್ನು ಅದರಲ್ಲಿ ಹೇಳಿದ್ದಾರೆ. ವಿಶೇಷವಾಗಿ ಅವರಿಗೆ ಪ್ರಿಯವಾದ ಭಕ್ಷ್ಯ ಭೋಜನಗಳನ್ನು, ಪಾನೀಯಗಳನ್ನು ದೇವರಿಗೆ ಎಡೆಯಿರಿಸಿ ಉಣ್ಣುವ ಹಿಂದೂಗಳ ಪರಿಪಾಠವನ್ನು ಪರೋಕ್ಷವಾಗಿ ಹೀಗಳೆದಿದ್ದಾರೆ. ಮುಂದಿನ ಸಂಪುಟದಲ್ಲಿ ಅದೇ ಲೇಖನವನ್ನು

ಲಂಬಿಸಿ, The Demons in Coorg ಎಂಬ ವಿಚಾರವಾಗಿ ಬರೆದಿದ್ದಾರೆ. ಕೊಡಗಿನಲ್ಲಿರುವ ಸು. ೨೦ಕ್ಕೂ ಹೆಚ್ಚು ಪ್ರಧಾನ ದೇವ ದೇವತೆಗಳ ಹೆಸರು, ಮಹಿಮೆ, ದೇವ-ದೆವ್ವಗಳ ಸಂಬಂಧ, ಭೂತ ಆರಾಧನಾ ಕ್ರಮ ಇತ್ಯಾದಿಗಳನ್ನು ವಿವರಿಸಿದ್ದಾರೆ. 'ಬಲಿ' ಶಬ್ದದ ವ್ಯಾಖ್ಯಾನ ವ್ಯಾಪಾರವನ್ನು ಕುರಿತು ತಮ್ಮ ವಿದ್ವತ್ತನ್ನು ಮೆರೆದಿದ್ದಾರೆ. ಅಲ್ಲದೆ ಕೊಡವರ ಅನೇಕ ವಿಶಿಷ್ಟ ಸಂಪ್ರದಾಯಗಳನ್ನು ಕೆಲವು ವಿದ್ವಾಂಸರು ಅಪಾರ್ಥ ಮಾಡಿಕೊಂಡದ್ದನ್ನು ಎತ್ತಿ ತೋರಿಸಿ ಕೊಡವರ ಸಂಸ್ಕೃತಿಯನ್ನು ಎತ್ತಿಹಿಡಿದಿದ್ದಾರೆ. ಹುಲಿ-ಮದುವೆ (Tiger wedding)ಮಾಡುವ ಸಂಪ್ರದಾಯವನ್ನು ಕುರಿತು ಸೂಕ್ತ ಸ್ಪಷ್ಟೀಕರಣ ನೀಡಿದ್ದಾರೆ. ಕೊಡವರು ನರಿ ಮಂಗಳ ಎಂದು ಕರೆಯುವ ವಾಡಿಕೆಯ ನಿಜ ಅರ್ಥ ಹುಲಿ ಉತ್ಸವ - ಹುಲಿಯನ್ನು ಕೊಂದವರ ಮೆರವಣಿಗೆ ಎಂದೇ ಹೊರತು 'ಹುಲಿಯೊಂದಿಗೆ ಮದುವೆಯಲ್ಲ' ಎಂದಿದ್ದಾರೆ. ಹಾಗೆಯೇ 'ಎತ್ತು ಮಂಗಳ' (bullock feast), ಮನೆ ಮಂಗಳ (house feast) ಇತ್ಯಾದಿಗಳನ್ನು ಕುರಿತು ವಿವರಿಸಿದ್ದಾರೆ. ಅಲ್ಲದೆ ಅದೇ ಪತ್ರಿಕೆಯಲ್ಲಿ ಕೊಡಗಿನ ಮದುವೆ (Marriage in Coorg), ಮಾಸ್ತಿ ಕಲ್ಲುಗಳು (Legends of Menhirs of Mysore) ಇವೇ ಮೊದಲಾದ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಕರ್ನಾಟಕದ ವೈಷ್ಣವದಾಸರನ್ನೂ ಕುರಿತು ಬರೆದು- ಜನಾಂಗೀಯ ಜಾನಪದಕ್ಕೆ ನಾಂದಿ ಹಾಡಿದ್ದಾರೆ. ಒಟ್ಟಾರೆ ರೆವರೆಂಡ್ ಕಿಟೆಲ್ ಕನ್ನಡ ಜಾನಪದಕ್ಕೆ ಬಹು ದೊಡ್ಡ ಸೇವೆ ಮಾಡಿದ್ದಾರೆ- ಜಾನಪದ ಮಾರ್ಗವನ್ನು ನೇರ್ಪುಗೊಳಿಸಿದ್ದಾರೆ.

ಚಾರ್ಲ್ಸ್ ಇ. ಗೋವರ್:

ಕನ್ನಡ ಜನಪದ ಗೀತೆಗಳ ಸಂಗ್ರಹಕಾರ್ಯದಲ್ಲಿ ದುಡಿದ ಮತ್ತೊಬ್ಬರೆಂದರೆ ಚಾರ್ಲ್ಸ್ ಇ. ಗೋವರ್. ೧೮೭೧ರಲ್ಲಿ ಈತ ದಕ್ಷಿಣ ಭಾರತದ ಜನಪದ ಗೀತೆಗಳು (The Folk songs of Southern India) ಎಂಬ ಸಂಕಲನವನ್ನು ಪ್ರಕಟಿಸಿದರು. ಈ ಸಂಕಲನದಲ್ಲಿ ಈತ ಕನ್ನಡ ಜನತೆಗೆ ದಕ್ಷಿಣ ಭಾರತದ ತಮಿಳು, ತೆಲುಗು, ಮಲೆಯಾಳಂ, ಬಡಗ, ಕೊಡವ ಭಾಷೆಗಳ ಜನಪದ ಗೀತೆಗಳನ್ನು ಇಂಗ್ಲಿಷ್‌ನಲ್ಲಿ ನೀಡಿದ್ದಾರೆ. ಇವರು ಸಂಗ್ರಹಿಸಿ ಕೊಟ್ಟಿರುವ ಗೀತೆಗಳು ವಾಸ್ತವದಲ್ಲಿ ದಾಸರ ಪದಗಳಾಗಿದ್ದು, ಅವು ಜನಪದ ಗೀತೆಗಳಲ್ಲ ಎಂಬ ಅಭಿಪ್ರಾಯ ಜಾನಪದ ವಿದ್ವಾಂಸರದಾಗಿದೆ. ಆದರೆ ಗೋವರ್ ನೀಡಿದ ಹಾಡುಗಳು ದಾಸರ ಪದಗಳೇ ಆದರೂ ಅವುಗಳನ್ನು ಕೆಳಕಂಡ ಆಧಾರದಿಂದ ಜನಪದ ಗೀತೆಗಳೆಂದು ಹೇಳಬಹುದು.

೧) ಅಲೆಮಾರಿ ದಾಸರು ಲಿಖಿತ ಮೂಲಗಳಿಂದ ಈ ಹಾಡುಗಳನ್ನು ಸಂಗ್ರಹಿಸಿರಲಾರರು. ಇವು ಹೆಚ್ಚಾಗಿ ಮೌಖಿಕ ಸಂಪ್ರದಾಯದಿಂದಲೇ ಬಂದವುಗಳಾಗಿರಬೇಕು.

೨) ಜನಪದ ಕಾವ್ಯಗಳ ವಿಶಿಷ್ಟ ಲಕ್ಷಣದಂತೆ ಈ ಹಾಡುಗಳು ಪ್ರದರ್ಶನದ ಸಂದರ್ಭದಲ್ಲಿ ಪುನರ್ ಸೃಷ್ಟಿಯಾಗಿ ಪ್ರಸರಣಗೊಳ್ಳುತ್ತಿದ್ದವು.

ಗೋವರ್ ಅವರ ಪ್ರಸ್ತಾವನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವರಿಗೆ ಖಂಡಿತ ಜಾನಪದದ ಬಗೆಗೆ ಸ್ಪಷ್ಟ ಪರಿಕಲ್ಪನೆಯಿತ್ತು ಎಂದು ತೋರುತ್ತದೆ. ಅವರು ನೀಡುವ,

''ಹಾಡುಗಾರರು ಒಂದು ಗೊತ್ತಾದ ವರ್ಗದವರು, ಜನರು ಅವರನ್ನು ಒಳ್ಳೆಯ ಆದರ ಗೌರವಾಭಿಮಾನಗಳಿಂದ ಬರ ಮಾಡಿಕೊಂಡು ಸತ್ಕರಿಸಿ ಅವರಿಂದ ಹಾಡು ಕೇಳಿ ಸಂತೋಷ ಪಡುತ್ತಿದ್ದರು. ಅಂತಹ ದಾಸರ ವೃತ್ತಿ ಭಿಕ್ಷಾಟನೆ. ಒಂದೇ ಸ್ಥಳದಲ್ಲಿ ನೆಲೆಯೂರಿ ನಿಲ್ಲದೆ ಊರಿಂದ ಊರಿಗೆ ಹಾಡು ಹೇಳುತ್ತಾ ತಿರುಗುತ್ತಾರೆ. (ಉಧೃತ: ಸೋಮಶೇಖರ ಇಮ್ರಾಪುರ ೧೯೭೭- ೨೩) ಎಂಬ ತಮ್ಮ ನಿರೂಪಕ ಸಮುದಾಯ ಕುರಿತ ಮಾಹಿತಿ ಜಾನಪದ ಅಧ್ಯಯನದಲ್ಲಿ ಮಹತ್ವದ್ದಾಗಿದೆ. ಹಾಡುವಾಗಿನ ಸಾಮಾಜಿಕ ಮತ್ತು ಭೌತಿಕ ಸಂದರ್ಭ, ಪ್ರದರ್ಶನದ ರೀತಿನೀತಿ, ವಿನ್ಯಾಸ, ಶ್ರೋತೃಗಳ ಪ್ರತಿಕ್ರಿಯೆ ಇವೇ ಮುಂತಾದುವನ್ನು ಗೋವರ್ ದಾಖಲಿಸಿದ್ದಾರೆ. ಜಾನಪದದ ಕಂಠಸ್ಥ ಸಂಪ್ರದಾಯದ ಸ್ವರೂಪ ಅವರಿಗೆ ತಿಳಿದಿತ್ತು. ''ಅಂಗಡಿ ಬೀದಿಗಳಲ್ಲಿ ಸಂಚರಿಸುತ್ತಾ ನಡೆವ ಜನ ಮನಸ್ಸಿನ ಭಾವ ಭಾವನೆಗಳು ವ್ಯಕ್ತಗೊಂಡಷ್ಟು ಇನ್ನಾವ ಸಂದರ್ಭದಲ್ಲೂ ಪ್ರಕಟವಾಗದು. ಈ ಹಾಡುಗಳು ಯಾವಾಗ ಹೊರ ಹೊಮ್ಮಿದವೆಂದು ಯಾರೂ ಅರಿಯರು. ಹಾಡುವ ಸಂದರ್ಭದಲ್ಲಿ ಹೊಸ ಆಲೋಚನೆಗಳು ಬಂದಂತೆ ಹೊಸ ಪದ್ಯದ ಸಾಲುಗಳು ಸೇರ್ಪಡೆಗೊಳ್ಳುತ್ತವೆ ಅಥವಾ ಹಳೆಯವು ಜಾರಿಕೊಳ್ಳುತ್ತವೆ'' ಎಂಬ ಗೋವರ್‌ರ ಮಾತಿನಿಂದ ಜನಪದ ಕಾವ್ಯದ ಸ್ವರೂಪ, ಸೃಷ್ಟಿ, ಪ್ರದರ್ಶನ, ಪ್ರಸರಣ ಮತ್ತು ಕ್ಷೇತ್ರ ಕಾರ್ಯದ ಮಹತ್ವ ತಿಳಿಯುತ್ತದೆ. ಈ ದಿಕ್ಕಿನಲ್ಲಿ ವಿವೇಚಿಸಿದವರಲ್ಲಿ ಗೋವರ್ ಮೊದಲಿಗರು.

ಗೋವರ್‌ರ 'ದಕ್ಷಿಣ ಭಾರತದ ಜನಪದಗೀತೆಗಳು' ಕೃತಿ ಎರಡು ಕಾರಣಗಳಿಗಾಗಿ ಐತಿಹಾಸಿಕ ಮಹತ್ವ ಪಡೆದಿದೆ. ೧) ಅದುವರೆಗೆ ಕಡೆಗಣಿಸಿದ್ದ ದ್ರಾವಿಡ ಭಾಷೆಗಳ ಜನಪ್ರಿಯ ಸಾಹಿತ್ಯದ ಸೊಬಗನ್ನು ಸೊಗಸನ್ನು ಅನ್ಯರಿಗೆ ಮನವರಿಕೆ ಮಾಡಿಕೊಟ್ಟದ್ದು ಮತ್ತು ೨) ಕೊಡವರ ಹಾಗೂ ಬಡಗರ ಜನಪದ ಗೀತೆಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡಿರುವುದು.

ಮೇರಿ ಫ್ರೆರೆ:

ಹಳೆಯ ದಖಿನ್ ದಿನಗಳು (Old Decan Days) ಎಂಬ ೨೪ ಜನಪದ ಕತೆಗಳ ಸಂಕಲನವನ್ನು ಮೇರಿ ಫ್ರೆರೆ ಎಂಬುವರು ೧೮೬೮ರಲ್ಲಿ ಪ್ರಕಟಿಸಿದರು. ಮೂಲತಃ ಲಿಂಗಾಯತ ಧರ್ಮಕ್ಕೆ ಸೇರಿದ ಅನ್ನ ಲಿಬೆರ್ಲಾ ಡಿಸೋಜ ಎಂಬಾಕೆ ಈ ಕತೆಗಳ ನಿರೂಪಕಿ ಎಂದೂ, ಆಕೆಯಿಂದ ತಾನು ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಈ ಕತೆಗಳನ್ನು ಸಂಗ್ರಹಿಸಿದುದಾಗಿಯೂ ಮೇರಿ ತನ್ನ ಸಂಕಲನದಲ್ಲಿ ಹೇಳಿಕೊಂಡಿದ್ದಾಳೆ. ಜನಪದ ಕಥಾ ನಿರೂಪಕಳ ಬಗ್ಗೆ ಆಕೆ ನೀಡಿರುವ ಮಾಹಿತಿ ಮಹತ್ವದ್ದಾಗಿದೆ. ಈಚಿನ ದಿನಗಳಲ್ಲಿ ವಕ್ತೃಗಳ ಬಗ್ಗೆ ನಿಖರವಾದ ಮಾಹಿತಿ ನೀಡುವುದು ವೈಜ್ಞಾನಿಕ ಅಧ್ಯಯನವೆನಿಸಿಕೊಂಡಿದೆ. ಮೇರಿ ಫ್ರೆರೆ ಅಂದೇ ಇಂಥ ಮಾಹಿತಿ ನೀಡಿ, ತನ್ನ ಸಂಕಲನಕ್ಕೆ ವೈಜ್ಞಾನಿಕ ಮೌಲ್ಯವನ್ನು ತಂದುಕೊಂಡಿದ್ದಾಳೆ. ೧೯ನೆಯ ಶತಮಾನದ ಅತ್ಯಂತ ಗಮನಾರ್ಹವೆನಿಸಿದ ಕನ್ನಡ ಜನಪದ ಕತೆಗಳ ಸಂಕಲನ ಇದಾಗಿದೆ.

ಜಾನ್ ಫೆಯ್ತ್‌ಫುಲ್ ಫ್ಲೀಟ್:

ಕನ್ನಡ ಜಾನಪದ ಕ್ಷೇತ್ರದಲ್ಲಿ ಆಸಕ್ತಿಯಿಂದ ದುಡಿದ ಪಾಶ್ಚಾತ್ಯ ವಿದ್ವಾಂಸರಲ್ಲಿ ಜಾನ್ ಫೆಯ್ತ್‌ಫುಲ್ ಫ್ಲೀಟ್ ಅವರೂ ಒಬ್ಬರು. ವಿವಿಧ ಪ್ರಕಾರಗಳಿಗೆ ಸೇರಿದ ಕನ್ನಡ ಜನಪದ

ಗೀತೆಗಳನ್ನು ಫ್ಲೀಟ್ ಸಂಗ್ರಹಿಸಿದ್ದಾರೆ. ಇಂಗ್ಲೆಂಡಿನಿಂದ ೧೮೬೭ರಲ್ಲಿ ಭಾರತಕ್ಕೆ ಅಧಿಕಾರಿಯಾಗಿ ಬಂದ ಇವರು ತಮ್ಮ ಸೇವಾವಧಿಯಲ್ಲಿ ಊರಿಂದೂರಿಗೆ ಸುತ್ತುತ್ತಿದ್ದು ಸಹಜವಾಗಿ ಕನ್ನಡ ಜನಪದ ಗೀತೆಗಳ ಕಡೆಗೆ ಆಕರ್ಷಿತರಾದರು; ಅಲ್ಲದೆ ಅನೇಕ ಶಾಲಾ ಶಿಕ್ಷಕರಿಂದ ಇವುಗಳನ್ನು ಬರೆಯಿಸಿ ಸಂಗ್ರಹಿಸಿದರು.

ಫ್ಲೀಟರು ಅನೇಕಾನೇಕ ಜನಪದ ಗೀತೆಗಳನ್ನು ಸಂಗ್ರಹಿಸಿದರಾದರೂ, ಅವುಗಳಲ್ಲಿ ಐದು ಲಾವಣಿಗಳನ್ನು 'ಇಂಡಿಯನ್ ಆ್ಯಂಟಿಕ್ವೆರಿ'ಯ ಐದು ಸಂಪುಟಗಳಲ್ಲಿ ಪ್ರಕಟಿಸಿದರು. ಸಂಗೊಳ್ಳಿ ರಾಯಣ್ಣನ ಲಾವಣಿ, ಹುಟ್ಟುವಳಿ ತೆರಿಗೆ ಲಾವಣಿ, ಹಲಗಲಿ ಬೇಡರ ಲಾವಣಿ, ಸಂಗ್ಯಾನ ಅಪರಾಧ ಲಾವಣಿ ಮತ್ತು ಕಿತ್ತೂರ ಚೆನ್ನವ್ವನ ಸೊಸೆಯ ಲಾವಣಿ ಹೀಗೆ ಕ್ರಮವಾಗಿ ಪ್ರಕಟಗೊಂಡಿರುವ ಈ ಐದೂ ಲಾವಣಿಗಳನ್ನು ಕ್ಯಾತನಹಳ್ಳಿ ರಾಮಣ್ಣನವರು ಸಂಪಾದಿಸಿ ಕೊಟ್ಟಿದ್ದಾರೆ(೧೯೭೩). ಫ್ಲೀಟರು ಸಂಗ್ರಹಿಸಿರುವ ಮತ್ತೂ ಕೆಲವು ಗೀತೆಗಳ ಬಗೆಗೆ ಡಾ. ಶ್ರೀನಿವಾಸ ಹಾವನೂರ ಶೋಧಿಸಿ ದಾಖಲಿಸಿದ್ದಾರೆ. 'ಬ್ರಿಟಿಷ್ ಲೈಬ್ರರಿ ರೆಫರೆನ್ಸ್ ಡಿವಿಜನ್'ನಲ್ಲಿ ಒಟ್ಟು ೨೮ ಗೀತೆಗಳೂ ಒಂದು ಮರಾಠಿ ಲಾವಣಿಯೂ ಹಸ್ತಪ್ರತಿಯ ರೂಪದಲ್ಲಿವೆ ಎಂದು ಉಲ್ಲೇಖಿಸಿದ್ದಾರೆ. ಒಟ್ಟು ೩೫ ಜನಪದ ಗೀತೆಗಳನ್ನು ಫ್ಲೀಟ್ ಸಂಗ್ರಹಿಸಿರುವುದಕ್ಕೆ ಆಧಾರವಿದ್ದು ಅವುಗಳಲ್ಲಿ ಕೆಲವು ಕಾಣ ಸಿಗುವುದಿಲ್ಲವೆನ್ನುತ್ತಾರೆ ಹಾವನೂರರು.

ಒಬ್ಬ ಉತ್ತಮ ಸಂಪಾದಕರಾಗಿ ಸಮರ್ಥವಾದ ರೀತಿಯಲ್ಲಿ ಪ್ರತಿಯೊಂದು ಲಾವಣಿಗೂ ವಿವರಣೆ, ವಿಶ್ಲೇಷಣೆ ಕೊಡುವುದರ ಮೂಲಕ ಅವರು ತಮ್ಮ ವಿವೇಚನೆಯನ್ನು ಮೆರೆದಿದ್ದಾರೆ. ಲಾವಣಿ ಬಗ್ಗೆ ಅವರೇ ಹೇಳಿರುವ ಈ ಮಾತುಗಳನ್ನು ಗಮನಿಸಿ! ''ಒಂದು ನಿಯಮದ ಪ್ರಕಾರ ಒಂದೇ ಸಂಖ್ಯೆಯ ಪಾದಗಳನ್ನುಳ್ಳ ನುಡಿಗಳನ್ನು ವಿಭಾಗಿಸಬಾರದು. ಹಾಡುಗಳ ಲಯ ಮಾತ್ರ ಹಾಡುವುದನ್ನು ಕೇಳಿಯೇ ತಿಳಿಯುವಂಥದು. ರೂಢಿಯಲ್ಲಿರುವ ಕನ್ನಡ ಕಾವ್ಯದ ವೈಶಿಷ್ಟ್ಯವಾದ ಅನುಪ್ರಾಸ ಅಥವಾ ದ್ವಿತೀಯಾಕ್ಷರ ಪ್ರಾಸದ ಬದಲು ಶಿಷ್ಟ ಸಾಹಿತ್ಯದ ಸೂತ್ರಗಳನ್ನು ಆಧರಿಸಿ ಅಂತ್ಯ ಪ್ರಾಸ ಬಳಕೆಯಾಗಿರುವುದು ಮತ್ತೊಂದು ಗಮನಾರ್ಹ ಅಂಶವಾಗಿದೆ''. ಫ್ಲೀಟರು ಹಾಡುಗಾರಿಕೆಯನ್ನು ಕುರಿತೂ ತಮ್ಮದೇ ಆದ ಅಭಿಪ್ರಾಯವನ್ನು ಹೇಳಿದ್ದಾರೆ: ''ರಾಗಗಳಂತೂ ಬಹಳ ಆಕರ್ಷಕವಾಗಿರುತ್ತವೆ. ಆದರೆ ಎಲ್ಲ ಸ್ಥಳೀಯ ಸಂಗೀತಗಳಂತೆ ಇದನ್ನು ಕೂಡ ಗ್ರಹಿಸಲು ಮತ್ತು ಬರವಣಿಗೆಗೆ ಅಳವಡಿಸಲು ತುಂಬ ಕಷ್ಟವಾಗುತ್ತದೆ. ಆದರೆ ಪಲ್ಲವಿ ಅಥವಾ ಹಿಮ್ಮೇಳದ ರಾಗ ಮಾತ್ರ ಮೋಹಕ, ನಿರ್ದಿಷ್ಟ ಮತ್ತು ಪ್ರಸಿದ್ಧ''.

ದಾಸರೆನ್ನುವ ಗಾಯಕರಿಂದ ಸಂಗ್ರಹಿಸಿದ ಲಾವಣಿಗಳನ್ನು ಶಾಸ್ತ್ರೀಯ ಸಂಪಾದನೆಗೆ ಒಳಪಡಿಸಿದ್ದಾಗಿ ಫ್ಲೀಟ್ ಹೇಳಿಕೊಂಡಿದ್ದಾರೆ. ಈ ಲಾವಣಿಗಳನ್ನು ಡೊಳ್ಳು ವಾದ್ಯದ ಹಿನ್ನೆಲೆಯಲ್ಲಿ ಹಾಡುತ್ತಿದ್ದರೆಂದೂ ಅವರು ತಿಳಿಸಿರುವರು. ಕನ್ನಡ ಜನಪದ ಸಾಹಿತ್ಯ ಅಂತರಾಷ್ಟ್ರೀಯ ಮಟ್ಟದಲ್ಲಿ ಪರಿಚಯಗೊಳ್ಳಲು ಜಾನ್ ಫೇಯ್ತ್‌ಫುಲ್ ಫ್ಲೀಟ್ ಕಾರಣರಾಗಿದ್ದು, ಅವರ ಸಾಹಿತ್ಯ ಪ್ರೀತಿ, ಸಂಪಾದನಾ ನಿಷ್ಠೆ, ಸಂಗ್ರಹದ ಕಳಕಳಿ ನಮಗಿನ್ನೂ

ಬರಬೇಕಾಗಿದೆ. ಫ್ಲೀಟ್ ಕನ್ನಡ ಜನಪದ ಸಾಹಿತ್ಯ ಸಂಗ್ರಹದ ಆದ್ಯ ಪಾಶ್ಚಾತ್ಯ ವಿದ್ವಾಂಸನಾಗಿ ನಿಂತುಕೊಳ್ಳುತ್ತಾರೆ.

ಲೆ.ಕ. ಮೆಕೆಂಜಿ:

ದಕ್ಷಿಣ ಭಾರತದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ ಆದಿ ವಿದೇಶೀ ವಿದ್ವಾಂಸರಲ್ಲಿ ಲೆಫ್ಟಿನೆಂಟ್ ಕರ್ನಲ್ ಮೆಕೆಂಜಿಯೂ ಒಬ್ಬರಾಗಿದ್ದಾರೆ. ಕ್ರಿ.ಶ. ೧೭೫೪ರಲ್ಲಿ ಸ್ಕಾಟ್‌ಲ್ಯಾಂಡಿನ ಲೂಯಿ ದ್ವೀಪದಲ್ಲಿ ಈತ ಜನಿಸಿದರು. ತಂದೆ ಮರ್ಡೋಕ್, ತಾಯಿ ಬಾರ್ಬರಾ. ಭಾರತಕ್ಕೆ ಬಂದಾಗ ಅವರಿಗೆ ಕೇವಲ ೨೯ ವರ್ಷ ವಯಸ್ಸು. ಟಿಪ್ಪುವಿನ ಪತನದವರೆಗೆ (೧೭೯೯) ಮೈಸೂರು ಪ್ರದೇಶದಲ್ಲಿ ದುಡಿದರು.

ಕರ್ನಾಟಕದ ಜನರ ಒಡನಾಟದಿಂದ ಅವರಿಗೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೇಲೆ ಮೋಹ ಉಂಟಾಯಿತು. ಅವುಗಳಿಗೆ ಸಂಬಂಧಿಸಿದಂತೆ ಕೆಲಸ ಮಾಡತೊಡಗಿದರು. ೧೭೯೩-೯೯ರ ಅವಧಿಯಲ್ಲಿ ಆತ ಮೈಸೂರು ಪ್ರಾಂತ್ಯವನ್ನೆಲ್ಲಾ ಸುತ್ತಾಡಿ ಭೂಪಟವನ್ನು ಸಿದ್ಧಪಡಿಸಿದ ದಾಖಲೆಯಿದೆ. ಅಲ್ಲದೆ ಕಾವ್ಯ ಶಾಸ್ತ್ರಗಳಿಗೆ ಸಂಬಂಧಿಸಿದ ೧೫೬೮ ಹಸ್ತ ಪ್ರತಿಗಳನ್ನು ಒಗ್ಗೂಡಿಸಿದ ೨೦೭೦ ಕೈಫಿಯತ್ತುಗಳನ್ನು ಬರೆಯಿಸಿದ, ೮೦೭೦ ಶಾಸನಗಳನ್ನು ಪ್ರತಿ ಮಾಡಿಸಿದ, ೭೯ ನಕ್ಷೆಗಳನ್ನು ಸಿದ್ಧಪಡಿಸಿದ್ದಲ್ಲದೆ ೨೬೭೦ ರೇಖಾ ಚಿತ್ರಗಳನ್ನು ಬರೆಯಿಸಿ, ೬೨೧೮ ವಿವಿಧ ನಾಣ್ಯಗಳನ್ನು ಸಂಗ್ರಹಿಸಿ, ೧೦೬ ಪ್ರಾಚೀನ ವಿಗ್ರಹಗಳನ್ನು ಕಲೆ ಹಾಕಿದ ಯಶಸ್ಸು ಇವರದು.

ಮೆಕೆಂಜಿ ಸಂಗ್ರಹಿಸಿದ ಕೈಫಿಯತ್ತುಗಳು ಜಾನಪದ ವಿದ್ಯಾರ್ಥಿಗಳಿಗೆ ಅತ್ಯಮೂಲ್ಯ ಆಕರಗಳಾಗಿ ಒದಗಿ ಬರುತ್ತವೆ. ಈತ ಸಂಗ್ರಹಿಸಿದ ಕೈಫಿಯತ್ತುಗಳಲ್ಲಿ ಸ್ಥಳೀಯ ಐತಿಹ್ಯಗಳಿವೆ, ಚಾರಿತ್ರಿಕ ದಾಖಲೆಗಳಿವೆ, ಪುರಾಣ ಸಂಗ್ರಹಗಳಿವೆ, ಮರಗಿಡಬಳ್ಳಿಗಳ ವಿವರಗಳಿವೆ, ನದಿ ಬೆಟ್ಟ ಗುಡ್ಡಗಳ ವರ್ಣನೆಯಿದೆ. ವಿವಿಧ ಜನಸಮುದಾಯಗಳ ದಾಖಲೆಗಳಿವೆ.

ಲೆ.ಕ. ಮೆಕೆಂಜಿಯವರು ಬರೆದ The Village Feast ಎಂಬ ಲೇಖನದಲ್ಲಿ ಬೆಂಗಳೂರು ನಗರದ ಒಡಲೊಳಗೆ ಇಂದು ಲೀನವಾಗಿರುವ ಅಕ್ಕಿತಿಮ್ಮನಹಳ್ಳಿಯಲ್ಲಿ ನಡೆದ ಗ್ರಾಮದೇವತೆಯ ಹಬ್ಬದ ವಿವರಣೆಯಿದೆ. ೧೭-೬-೧೮೭೩ರಲ್ಲಿ ಅವರು ವಿಶೇಷ ಆಹ್ವಾನಿತರಾಗಿ, ಸ್ನೇಹಿತರನ್ನೊಳಗೊಂಡು ರಾತ್ರಿಯ ಉತ್ಸವಕ್ಕೆ ಹೋಗಿದ್ದಾಗ, ತಾವು ಕಂಡ ಕೌತುಕ ಸಂಗತಿಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿ ಬರೆದಿದ್ದಾರೆ. ಮಾರಮ್ಮನ ಅದ್ಭುತ ವರ್ಣನೆಯ ಜೊತೆಗೆ ಕೆಂಡ ಹಾಯ್ದುದರ ವಿವರಣೆ ಇದರಲ್ಲಿದೆ. ಕಿರು ಹಣತೆಗಳುಳ್ಳ ತಂಬಿಟ್ಟಿನಾರತಿಯ ಮೆರವಣಿಗೆಯಲ್ಲಿ ಹೆಂಗಳೆಯರು ದನಿ ಎತ್ತಿ ಹಾಡುತ್ತಿದ್ದ ಜನಪದಗೀತೆಗಳ ಕಿನ್ನರಲೋಕದ ಸ್ವಾರಸ್ಯವನ್ನು ವಿವರಿಸಿದ್ದಾರೆ. ಕರಿಯ ಟಗರು ಹಾಗೂ ಹೆಗ್ಗೋಣಗಳನ್ನು ಮಾರಿಗೆ ಬಲಿಕೊಟ್ಟ ರುದ್ರ ರಮಣೀಯ ಚಿತ್ರಣವನ್ನು ಈ ಲೇಖನ ಕಟ್ಟಿಕೊಡುತ್ತದೆ. ಇದು ಅವರ ಜಾನಪದ ಜ್ಞಾನ ಹಾಗೂ ಜನಪದ ಸಂಸ್ಕೃತಿಯ ಪರಿಚಯವನ್ನು ಎತ್ತಿ ತೋರಿಸುತ್ತದೆ.

ಸ್ಥಳೀಯರ ನೆರವಿನಿಂದ ಅನೇಕ ಐತಿಹ್ಯ ಮತ್ತು ಸ್ಥಳ ಪುರಾಣಗಳನ್ನು ಕಲೆ ಹಾಕಿ, ಸಂಪಾದಿಸುವ ಕೆಲಸ ಮಾಡಿದ ಈತ, ತನ್ನ ೩೮ ವರ್ಷಗಳ ದೀರ್ಘಕಾಲದ ಸೇವೆಯಲ್ಲಿ

ಒಮ್ಮೆಯೂ ಸ್ವದೇಶಕ್ಕೆ ಹೋಗದೆ ವಿವಿಧ ಸಾಮಗ್ರಿಗಳನ್ನು ಕಲೆ ಹಾಕಿದ ಇವರ ಉತ್ಸಾಹ, ಶ್ರದ್ಧೆ, ಕಾಯಕ ನಿಷ್ಠೆ ಮೆಚ್ಚುವಂಥದ್ದು. ಇವರ ಸಂಗ್ರಹವು ವ್ಯಾಪಕ ಮತ್ತು ವೈವಿಧ್ಯಮಯವಾಗಿದ್ದರಿಂದ ನಾಡಿನ ಇತಿಹಾಸ ರಚನೆಗೆ ಅವು ಮೂಲ ಆಕರವಾಗಿ ಒದಗಿ ಬರುತ್ತವೆ.

ರೆ.ಡಾ. ಹರ್ಮನ್ ಎಫ್ ಮೊಗ್ಲಿಂಗ್

೧೮೧೧, ಮೇ ೨೯ರಂದು ಡೀನ ಮೊಗ್ಲಿಂಗ್ ದಂಪತಿಗಳಿಗೆ ಚೊಚ್ಚಲು ಮಗನಾಗಿ ಜನಿಸಿದ ಮೊಗ್ಲಿಂಗ್, ತನ್ನ ೨೫ನೆಯ ವಯಸ್ಸಿನಲ್ಲಿ ಟೀಬಿಂಜೆನ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಗಳಿಸಿದ ಪ್ರತಿಭಾವಂತ. ಈತ ೧೮೩೦ರಲ್ಲಿ ಭಾರತಕ್ಕೆ ಮಿಷನರಿಯಾಗಿ ಬಂದರು. ಕೊಡಗಿನಲ್ಲಿ ಬಹಳ ಕಾಲ ಇದ್ದು ಅಲ್ಲಿನ ಜನತೆಯ ಆಚಾರ-ವಿಚಾರಗಳನ್ನು ಅಭ್ಯಸಿಸಿ ಕೊಡಗಿನ ಅನುಭವ (Coorg memoris) ಎಂಬ ಕೃತಿಯನ್ನು ಬರೆದಿರುವರು.

ಕನ್ನಡ ಗಾದೆಗಳ ಸಂಕಲನಕಾರನಾಗಿ ಗಮನ ಸೆಳೆಯುವ ಈತ ಮೂರು ಸಾವಿರ ಗಾದೆಗಳ ಸರದಾರರೆನಿಸಿದ್ದಾರೆ. ೧೮೪೭ರಲ್ಲಿ ಮೊಗ್ಲಿಂಗ್ ಕನ್ನಡ ಗಾದೆಗಳ ಸಂಕಲನವನ್ನು ಪ್ರಕಟಿಸಿದರು. ಇದೇ ಅಧಿಕೃತವಾಗಿ ಕನ್ನಡದ ಮೊತ್ತ ಮೊದಲ ಗಾದೆಗಳ ಸಂಕಲನ. ಕನ್ನಡ ಜನತೆಯ, ವಿಶೇಷವಾಗಿ ಕೊಡಗಿನ ಪ್ರಾಂತ್ಯದ ಆಸುಪಾಸಿನಲ್ಲಿ ಅಂದು ಪ್ರಚಲಿತವಿದ್ದ ಗಾದೆಗಳನ್ನು ಈತ ಸಂಗ್ರಹಿಸಿಕೊಟ್ಟಿದ್ದಾರೆ. ಅಲ್ಲದೆ ತನ್ನ 'ಮಂಗಳೂರು ಸಮಾಚಾರ' ಎಂಬ ಪತ್ರಿಕೆಯ ಸುದ್ದಿ ಬಿತ್ತರದಲ್ಲಿ ಅನೇಕ ಪ್ರಸಿದ್ಧ ಗಾದೆ ಮಾತುಗಳನ್ನು ಕುರಿತಂತೆ ಜರ್ಮನ್ ಭಾಷೆಯಲ್ಲಿ ಪ್ರಮುಖ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಇವರ ಅಮೂಲ್ಯ ಜಾನಪದ ಲೇಖನಗಳ ಅನುವಾದ ಕನ್ನಡದಲ್ಲಿ ಆಗಬೇಕಾಗಿದೆ.

ಎಡ್ಗರ್ ಥರ್‍ಸ್ಟನ್

ಮದ್ರಾಸ್ ರಾಜ್ಯದ ಮ್ಯೂಸಿಯಂ ಮೇಲ್ವಿಚಾರಕರಾಗಿದ್ದ ಎಡ್ಗರ್ ಥರ್‍ಸ್ಟನ್ ಅವರು ಎಂಟು ವರ್ಷಗಳ ದೀರ್ಘ ಪರಿಶ್ರಮದಿಂದ ಪ್ರಕಟಿಸಿದ Castes and Tribes of Southern India ಎಂಬ ಏಳು ಸಂಪುಟಗಳ ಬೃಹತ್‌ಗ್ರಂಥ ಕರ್ನಾಟಕವನ್ನೊಳಗೊಂಡಂತೆ ದಕ್ಷಿಣ ಭಾರತದ ಬುಡಕಟ್ಟುಗಳ ಬಗ್ಗೆ ನಡೆಸಿದ ಅಧ್ಯಯನದ ಸಾರವಾಗಿದೆ. 1908ರಲ್ಲಿ ಪ್ರಕಟವಾದ ಈ ಸಂಪುಟಗಳಲ್ಲಿ ಬುಡಕಟ್ಟುಗಳ ಮೂಲ, ಜೀವನ ವಿಧಾನ, ಅವರ ಆಚರಣೆ ಮತ್ತು ಸಂಪ್ರದಾಯಗಳು, ಧರ್ಮ, ನಂಬಿಕೆಗಳು ದಾಖಲಾಗಿವೆ. ಈ ಸಂಪುಟಗಳಲ್ಲಿ ಆರ್ಯ ಮತ್ತು ದ್ರಾವಿಡ ಜನಾಂಗಕ್ಕೆ ಸೇರಿದ ಅನೇಕ ಬುಡಕಟ್ಟುಗಳ ವಿವರಗಳನ್ನು ಅಕಾರಾದಿಯಾಗಿ ವಿಂಗಡಿಸಿ ಕೊಟ್ಟಿದ್ದಾರೆ. ಥರ್‍ಸ್ಟನ್ ಅವರಿಗೆ ಸಹಾಯಕರಾಗಿ ಕೆಲಸ ಮಾಡಿದವರು ಮದ್ರಾಸ್ ಸರ್ಕಾರದ ಮ್ಯೂಸಿಯಂನ ಕೆ. ರಂಗಾಚಾರಿಯವರು. ದಕ್ಷಿಣ ಭಾರತದ ಜನಾಂಗ ಮತ್ತು ಬುಡಕಟ್ಟುಗಳ 7 ಸಂಪುಟಗಳ ಪೂರ್ವದಲ್ಲಿ ಅಂದರೆ 1907ರಲ್ಲಿ ಎರಡು ಸಂಪುಟಗಳಲ್ಲಿ ಪ್ರಕಟವಾದ 'Ethnographic Notes in South India' ಎನ್ನುವ ಕೃತಿ ಕೂಡ ಥರ್‍ಸ್ಟನ್ ಅವರ ಆಳವಾದ

ಅಧ್ಯಯನದ ಫಲವಾಗಿ ರೂಪುಗೊಂಡಿದೆ. ಅನೇಕ ಕಡೆ ವರದಿಗಳಲ್ಲಿ, ವಾರ್ಷಿಕಗಳಲ್ಲಿ, ಸಂಶೋಧನೆ ಪತ್ರಿಕೆಗಳಲ್ಲಿ ಪ್ರಕಟವಾದ ಮಾಹಿತಿಯನ್ನು ಥರ್ಸ್ಟನ್ ಸಂಗ್ರಹಿಸಿ ಜೊತೆಗೆ ಜಿಲ್ಲೆಯ ಅಧಿಕಾರಿಗಳು ಮತ್ತು ಖಾಸಗಿಯವರಿಂದ ಮಾಹಿತಿ ಸಂಗ್ರಹಿಸಿ ಈ ಸಂಪುಟಗಳಲ್ಲಿ ಸೇರಿಸಿದ್ದಾರೆ. ಥರ್ಸ್ಟನ್ ಅವರು ಫ್ರಾನ್ಸಿನ ಮಾನವಶಾಸ್ತ್ರ ಸಂಸ್ಥೆಯ ಸಂಪರ್ಕಾಧಿಕಾರಿಯಾಗಿಯೂ ಕೆಲಸ ಮಾಡಿದ್ದಾರೆ. ಸಿಡಿ ಆಚರಣೆ, ಬೆಂಕಿ ಹಾಯುವುದು, ದೇಹ ದಂಡಿಸುವುದು, ಪ್ರಾಣಿಬಲಿ ಮುಂತಾದ ವಿಚಾರಗಳನ್ನು ಅವರ ದಕ್ಷಿಣ ಭಾರತದ ಜನಾಂಗಿಕ ಟಿಪ್ಪಣಿಯಲ್ಲಿ ನೋಡಬಹುದಾಗಿದೆ.

ಸಮಾಪ್ತಿ:

ಕನ್ನಡ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸಿದ ಕೀರ್ತಿ ಬಾಸೆಲ್ ಮಿಷನ್ ಪ್ರೆಸ್ಸಿನದು. ಧರ್ಮ ಪ್ರಚಾರವನ್ನೇ ಮುಖ್ಯ ಗುರಿಯನ್ನಾಗಿರಿಸಿಕೊಂಡು ಸ್ಥಾಪಿತವಾದ ಬಾಸೆಲ್ ಮಿಷನ್ ಸಂಸ್ಥೆ ಕರ್ನಾಟಕದಲ್ಲಿ ಮುದ್ರಣೋದ್ಯಮಕ್ಕೆ ತೊಡಗಿ, ಕನ್ನಡದ ಜನಪದ ಗೀತೆ, ಜನಪದ ಕತೆ, ಜನಪದ ಗಾದೆ, ಪುರಾಣ, ಐತಿಹ್ಯಗಳನ್ನು ಮುದ್ರಿಸಿ ಮಹೋಪಕಾರ ಮಾಡಿದೆ. ಕನ್ನಡದ ಜೊತೆಗೆ ತುಳು ಭಾಷಾ ಸಂಸ್ಕೃತಿಗೂ ಈ ಸಂಸ್ಥೆ ಶ್ರಮಿಸಿದೆ. ೧೮೭೨ರಲ್ಲಿ ಪ್ರಕಟವಾದ ಬ್ರಿಗೆಲ್‌ರ ತುಳು ವ್ಯಾಕರಣದ ಅನುಬಂಧದಲ್ಲಿ ದೊಡ್ಡ ಪ್ರಮಾಣದ ಗಾದೆಗಳ ಸಂಗ್ರಹ ಉಪಯೋಗವಾಗಿದೆ. ಐತಿಹಾಸಿಕವಾಗಿ ಇದು ತುಳುಭಾಷೆಯ ಮೊತ್ತ ಮೊದಲ ಗಾದೆಗಳ ಸಂಗ್ರಹವೆನಿಸಿದೆ. ಅಲ್ಲದೆ ಬಾಸೆಲ್ ಮಿಷನ್ ಸಂಗ್ರಾಹಕರ ಹೆಸರಿಲ್ಲದೆ 'ಸಹಸ್ರಾರ್ಥ ತುಳುಗಾದೆಗಳು' ಎಂಬ ಸಂಕಲನವನ್ನೂ ಪ್ರಕಟಿಸಿದೆ. ರೆ.ಎ. ಮ್ಯಾನರ್ ತುಳು ಪಾಡ್ದನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಬಾಸೆಲ್ ಮಿಷನ್ ಸಂಸ್ಥೆ ಭೂತಸೇವೆ ೧೮೭೧ ಎಂಬ ಕನ್ನಡದ ಕೃತಿಯನ್ನೂ ಪ್ರಕಟಿಸಿದೆ. ರೆ.ಎ.ಸಿ. ಬರ್ನೆಲರ ಸಂಗ್ರಹದಲ್ಲಿ ಕನ್ನಡ ನಾಡಿನ ಭೂತಗಳ ಬಗ್ಗೆಯೂ ಪ್ರಸ್ತಾಪವಿದೆ.

ಒಟ್ಟಿನಲ್ಲಿ ಮತ ಪ್ರಚಾರಕ್ಕಾಗಿ ಕರ್ನಾಟಕಕ್ಕೆ ಬಂದ ಮಿಷನರಿಗಳು ಕನ್ನಡ ಜನಪದ ಕ್ಷೇತ್ರಕ್ಕೆ ಹೆಗ್ಗಾಲುವೆ ತೋಡಲು ಯತ್ನಿಸಿರುವುದು ಕಂಡು ಬರುತ್ತದೆ. ಅವರ ಈ ಪ್ರಯತ್ನಕ್ಕೆ ಚಾಲನೆಯಾಗಿ ಇಂಡಿಯನ್ ಆ್ಯಂಟಿಕ್ವರಿಯಂಥ ಪತ್ರಿಕೆ, ಬಾಸೆಲ್ ಮಿಷನ್ ಸಂಸ್ಥೆಯವರ ಮುದ್ರಣಾಲಯ ನೆರವಾಗಿ ಒದಗಿ ಬಂದಿದೆ.

ವಿ.ಎನ್. ನರಸಿಂಹಯ್ಯಂಗಾರ್

ಡಾ|| ಎಸ್.ಶಶಿಕಲಾ

ಭಾರತೀಯ ಪುರಾತತ್ವ, ಚರಿತ್ರೆ, ಸಾಹಿತ್ಯ ಧರ್ಮ, ಜಾನಪದ ಮುಂತಾದವುಗಳನ್ನು ಜಗತ್ತಿಗೆ ಪರಿಚಯಿಸುವ ಸಲುವಾಗಿ 1872ರ ಜನವರಿಯಲ್ಲಿ ಜಾಸ್ ಬರ್ಗೆಸ್ ಅವರ ಸಂಪಾದಕತ್ವದಲ್ಲಿ 'ಇಂಡಿಯನ್ ಆಂಟಿಕ್ವರಿ' ಎಂಬ ಪತ್ರಿಕೆಯು ಮುಂಬಯಿನಿಂದ ಪ್ರಕಟವಾಗಲಾರಂಭಿಸಿತು. ಈ ಪತ್ರಿಕೆಯ ಪ್ರಥಮ ಸಂಪುಟದಲ್ಲಿಯೇ 'The Bhutas of Nagara Malnad in Maisur' ಎಂದು ಇಂಗ್ಲಿಷಿನಲ್ಲಿ ಬರೆದ ಜಾನಪದ ಸಂಬಂಧಿ ಲೇಖನವೊಂದು ಪ್ರಕಟವಾಯಿತು. ಇದರ ಲೇಖಕರಾದ ಶ್ರೀ ವಿ.ಎನ್. ನರಸಿಂಹಯ್ಯಂಗಾರ್ ಅಚ್ಚ ಕನ್ನಡಿಗರು. ಕನ್ನಡ ಜಾನಪದ ಚರಿತ್ರೆಯಲ್ಲಿ ಬಹುಶಃ ಕನ್ನಡಿಗರೊಬ್ಬರು ಮೊತ್ತ ಮೊದಲಿಗೆ ಇಂಗ್ಲಿಷನಲ್ಲಿ ಬರೆದ ಲೇಖನವಿದೆಂದು ಹೇಳಬಹುದು. ಅಯ್ಯಂಗಾರರು ತಮ್ಮ ಈ ಲೇಖನದಲ್ಲಿ, ಆ ಕಾಲದಲ್ಲಿ ಮಲೆನಾಡಿನಲ್ಲಿ ರೂಢಿಯಲ್ಲಿದ್ದ ಮೌಢ್ಯ, ಅಂಧಶ್ರದ್ಧೆ, ನಂಬಿಕೆಗಳೆಲ್ಲಕ್ಕೂ ಆವತ್ತಿನ ಸಾಮಾಜಿಕ ಬದುಕಿನ ಸ್ಥಿತಿಗತಿಗಳು ಕಾರಣವಾಗಿದ್ದುದರ ಜತೆಗೆ ಸರ್ಕಾರವೂ ತಕ್ಕ ಮಟ್ಟಿಗೆ ಕಾರಣವಾಗಿದ್ದಿತೆಂಬುದನ್ನು ಸ್ಪಷ್ಟೀಕರಿಸುತ್ತಾರೆ. ಮಲೆನಾಡಿನಲ್ಲಿ ಹೆಚ್ಚಾಗಿದ್ದ ಹುಲಿಗಳ ಉಪದ್ರವಕ್ಕೆ ಭೂತಗಳ ಹಾವಳಿಯೇ ಕಾರಣವೆಂದು ನಂಬುವ ಮಲೆನಾಡಿಗರ ಮೌಢ್ಯವು ಕಾಲಕ್ರಮೇಣ, ನಾಗರೀಕತೆ ಬೆಳೆದಂತೆಲ್ಲಾ ಕಡಿಮೆಯಾಗುತ್ತದೆಂಬ ಆಶಯವನ್ನು ಕೂಡಾ ವ್ಯಕ್ತಪಡಿಸಿರುತ್ತಾರೆ.

ರಾವ್‌ಬಹದ್ದೂರ್ ಸಿ. ಹನುಮಂತೇಗೌಡ

ಡಾ. ಚಕ್ಕೆರೆ ಶಿವಶಂಕರ್

1919ರ ಜುಲೈ ತಿಂಗಳಿನಲ್ಲಿ ಹಾಸನದಲ್ಲಿ ಜರುಗಿದ 5ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಪ್ರಚಾರದಲ್ಲಿದ್ದ ಲಾವಣಿ ಒಂದನ್ನು ಅತ್ಯಂತ ಸುಶ್ರಾವ್ಯವಾಗಿ ಹಾಡಿ ಜನರನ್ನು ರಂಜಿಸಿದ ರಾವ್‌ಬಹದ್ದೂರ್ ಸಿ. ಹನುಮಂತೇಗೌಡರು ನಾಡಿನಾದ್ಯಂತ ಲಾವಣಿಗಳನ್ನು ಜನಪ್ರಿಯಗೊಳಿಸಲು ತಮ್ಮನ್ನು ಮುಡಿಪಾಗಿರಿಸಿಕೊಂಡವರು.

ರಾವ್ ಬಹದ್ದೂರ್‌ರು ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಇಂಗ್ಲಿಷ್‌ನಲ್ಲಿ country ballads ಎಂದು ಹೆಸರಾಗಿದ್ದ ಲಾವಣಿಗಳನ್ನು ಅರಿತಿದ್ದರು. ಲಾವಣಿಗಳ ಸ್ವರೂಪ, ಉದ್ದೇಶ, ಸೂತ್ರಾದಿಗಳನ್ನು ತಿಳಿದವರಾಗಿದ್ದರು. 1919ರಲ್ಲಿ ಕನ್ನಡ ಲಾವಣಿಗಳನ್ನು ಕುರಿತಾದಂತೆ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಲೇಖನವನ್ನು ಪ್ರಕಟಿಸಿದರು. ''ಆಂಗ್ಲ ಭಾಷೆಯಲ್ಲಿ country Ballads ಎಂದು ಕರೆಯುವ ಲಾವಣಿ ಪದಗಳು ಒಳ ದೇಶದ ಚರಿತ್ರಾಂಶಗಳನ್ನು, ಮಹನೀಯರ ಜೀವನ ಚರಿತ್ರೆಗಳನ್ನು, ಸಾಮಂತರಾಜರ ಯುದ್ಧ ಪ್ರಸಂಗಗಳನ್ನು ಇವೇ ಮುಂತಾದ ಇತರ ವಿಷಯಗಳನ್ನು ತಿಳಿಸುವುದರಲ್ಲಿ ಬಹು ಉಪಯೋಗಕರವಾಗಿವೆ. ಶೃಂಗಾರರಸ ಪ್ರಧಾನವಾದ ವಿಷಯಗಳನ್ನು, ನೀತಿ ಬೋಧೆಗಳನ್ನು ಬಹು ಮಟ್ಟಿಗೆ ಕೀಳು ಜಾತಿಗೆ ಸೇರಿದ ಅನೇಕರು ಹಬ್ಬ ಹುಣ್ಣಿಮೆ ಮುಂತಾದ ಉತ್ಸವಗಳ ಕಾಲದಲ್ಲಿಯೂ ವಿವಾಹ ಸಮಾರಂಭ ಗಳಲ್ಲಿಯೂ ತೇರು ಜಾತ್ರೆಗಳಲ್ಲಿಯೂ, ರಾತ್ರಿ ಪ್ರಯಾಣದಲ್ಲಿಯೂ ಹಾಡುವುದುಂಟು. ಅಕ್ಷರಸ್ಥರಲ್ಲದವರಿಗೆ ಸಾಮಾನ್ಯವಾಗಿ ಯಾವ ವಿಷಯವಾಗಲಿ ಮನದಟ್ಟಾಗುವಂತೆ ಬೋಧವಾಗುವುದಕ್ಕೆ ಲಾವಣಿಗಳನ್ನು ಬಿಟ್ಟರೆ ಬೇರೆ ಯಾವ ಉಪಾಯವೂ ಇಲ್ಲ'' ಎಂದು ವಿಶದವಾಗಿ ಗೌಡರು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ಇಲ್ಲಿ ಲಾವಣಿಕಾರರ ಜಾತಿ-ವರ್ಗ, ಲಾವಣಿ ಹಾಡುವಾಗಿನ ಸಂದರ್ಭ, ಲಾವಣಿಗಳು ಒಳಗೊಳ್ಳುವ ವಸ್ತು ವೈವಿಧ್ಯ, ಲಾವಣಿಯ ಪ್ರಯೋಜನಗಳನ್ನು ಕುರಿತು ಸೂಕ್ಷ್ಮವಾಗಿ ಪರಿಚಯಿಸಿದ್ದಾರೆ. ಅಲ್ಲದೆ, ಲಾವಣಿ ಹಾಡುವಾಗಿನ ಧಾಟಿಯ ಏರಿಳಿತಗಳನ್ನು ಸೂಚಿಸಲು ದೌಡು, ವಿಳಂಬ, ದೌಡು ಚಹಲ್, ನುಡಿ ಚಹಲ್ ಮುಂತಾದ ಲಾವಣಿ ಪಾರಿಭಾಷಿಕ ಶಬ್ದಗಳನ್ನು ಗೌಡರು ಬಳಸಿದ್ದಾರೆ. ಕರ್ನಾಟಕ ನಾಟಕ ಭೂಷಣ, ರಾವ್ ಬಹದ್ದೂರ್ ಹನುಮಂತೇಗೌಡರಿಗೆ ಸಂದ ಬಿರುದುಗಳು. ಲಾವಣಿಯನ್ನು ಕುರಿತಾದಂತೆ ಜಾನಪದ ವಲಯದಲ್ಲಿ ಈವತ್ತಿಗೂ ಜಿಜ್ಞಾಸೆಗಳು ಜೀವಂತವಾಗಿವೆ. 1919ರಷ್ಟು ಹಿಂದೆಯೇ ಹನುಮಂತೇಗೌಡರು ಲಾವಣಿಯ ಬಗ್ಗೆ ವಿಶದೀಕರಿಸಿರುವುದು ಲಾವಣಿ ಚರಿತ್ರೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿರುತ್ತದೆ.

ಎಂ.ಎಲ್. ಶ್ರೀಕಂಠೇಶಗೌಡ

ಪ್ರೊ|| ಹಿ.ಶಿ. ರಾಮಚಂದ್ರೇಗೌಡ

ಶ್ರೀಕಂಠೇಶಗೌಡರ ಜಾನಪದ ಸಾಧನೆಯನ್ನು ಕುರಿತು ದಕ್ಷಿಣ ಕರ್ನಾಟಕದ ಹಲವು ಜಾನಪದ ವಿದ್ವಾಂಸರು ಬರೆದಿದ್ದಾರೆ. ಇವರು ಮೂಲತಃ ಸಾಹಿತಿಗಳು. ತಮ್ಮ ಕೃತಿಗಳಲ್ಲಿ ಜನ ಜೀವನವನ್ನು ಸಂವೃದ್ಧವಾಗಿ ದಾಖಲಿಸಿದ್ದಾರೆ. ಜಾನಪದ ಇವರ ಕೃತಿಯ ಸಂಯೋಜಿತ ಅಂಗವಾಗಿದ್ದ ಪಕ್ಷದಲ್ಲಿ ಇವರನ್ನು ಪ್ರತ್ಯೇಕವಾಗಿ ಜಾನಪದದೊಳಗೆ ಗುರುತಿಸುವ ಅಗತ್ಯವಿರಲಿಲ್ಲ. ಜಾನಪದ ಇವರ ಕೃತಿಯಲ್ಲಿ ಉಲ್ಲೇಖ ಸ್ವರೂಪದಲ್ಲಿ ಕಂಡು ಬಂದಿದೆ. ಈ ನೆಲೆಯಲ್ಲಿ ಇವರನ್ನು ಕನ್ನಡ ಜಾನಪದ ದಾಖಲೆಯನ್ನು ಒದಗಿಸಿದ ಮೊದಲ ತಲೆಮಾರಿನ ಸಂಗ್ರಾಹಕರು ಎಂಬ ಹಿನ್ನೆಲೆಯಲ್ಲಿ ನೋಡಬಹುದು.

ಜಾನಪದ ಪರಿಕಲ್ಪನೆಯ ಹಿನ್ನೆಲೆ ಇಲ್ಲದೆ ಜಾನಪದ ಸಂಗ್ರಹ ಮಾಡಿದ ಹಲವರಿದ್ದಾರೆ. ಥರ್‌ಸ್ಟನ್, ಅಬ್ಬೆ ದುಬಾಯಿ, ಜಾರ್ಜ್ ಗ್ರಿಯರ್‌ಸನ್, ಗಿಲ್ಡವೆಲ್, ಕಿಟೆಲ್, ಅನಂತಸುಬ್ಬರಾವ್, ಹೀಗೆ ಹಲವರ ಪಟ್ಟಿಯನ್ನು ಕೊಡಬಹುದು. ಇವರು ತಮ್ಮದೇ ಆದ ಪ್ರತ್ಯೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರು. ಆದರೆ ಅವರ ಕೆಲಸ ಮತ್ತೊಂದು ಮಗ್ಗುಲಿನಲ್ಲಿ ಜಾನಪದ ಸಂಗ್ರಹವೂ ಆಗಿದೆ. ಉದಾಹರಣೆಗೆ ಕಿಟೆಲ್ ಸಂಪಾದಿಸಿದ್ದು ಕನ್ನಡ ಪದಕೋಶ. ಆ ಸಂದರ್ಭದಲ್ಲಿ ಪದ ವಿವರಣೆಗಾಗಿ ಒದಗಿಸಿದ ಗಾದೆಗಳು ಕನ್ನಡ ಗಾದೆಗಳ ಸಂಗ್ರಹ ಅಪೂರ್ವ ಸಂಪತ್ತು. ಶ್ರೀಕಂಠೇಶಗೌಡರು ತಮ್ಮ ಸಾಹಿತ್ಯ ರಚನೆಯ ಸಂದರ್ಭದಲ್ಲಿ ಈ ಕೃತಿಗಳ ಸಾವಯವ ಸಂಬಂಧದಿಂದ ಹೊರಗೆ ಗುರುತಿಸಬಹುದಾದ ಜಾನಪದ ಸಾಮಗ್ರಿಯನ್ನು ಕೊಟ್ಟಿದ್ದಾರೆ. ಇದರಿಂದ ಆ ಕಾಲದ ಜಾನಪದ ಜೀವನದ ಅನೇಕ ಪ್ರಕಾರಗಳನ್ನು ನೇರವಾಗಿ ಮತ್ತು ಹತ್ತಿರದಿಂದ ಕಂಡು ದಾಖಲಿಸಿದ್ದಾರೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು. ಜನಪದ ಕಥೆ, ಗೀತೆ, ಗಾದೆ, ಗರಡಿ, ಸಂತೆ, ಟಗರಿನ ಕಾಳಗ, ಹಬ್ಬ, ವೃತ್ತಿನಾಯಕರು, ಮನರಂಜಕರು, ಕೋಳಿ ಕಾಳಗ, ಕತ್ತಿ ವರಸೆ, ದೊಣ್ಣೆ ವರಸೆ, ಕೋಲಾಟ ಹಾಗೂ ಕಾಲ ಅಳೆಯುವ ಅಂದಿನ ರೀತಿಯ ಬಗ್ಗೆ ತಿಳಿಸಿಕೊಟ್ಟಿದ್ದಾರೆ.

ಇವರು ಕೊಡುವ ಜನಪದ ಕಥೆಗಳು ನೇರವಾಗಿ ನಮ್ಮ ಪಾರಂಪರಿಕ ಕಥೆಗಳನ್ನು ಹೋಲುವುದಿಲ್ಲ. ಜಾನಪದ ಪರಿಭಾಷೆಯಲ್ಲಿ ಅವು ಹೇಳಲ್ಪಟ್ಟಿವೆ. ಜನಪದ ಗೀತೆಗಳಲ್ಲಿ

ಕೆಲವನ್ನು ಉಲ್ಲೇಖಿಸಿ ಹೇಳಿದ್ದಾರೆ. ಇವುಗಳೊಳಗೆ ಗೌಡರ ಜನಪದ ಮನಸ್ಸು ಕೆಲಸ ಮಾಡಿದೆ. ಸಂತೆಯ ವಿವರ ಕೊಡುವಾಗ ಅದರ ಎಲ್ಲ ಆಸರೆಗಳ ಒಳಹೊಕ್ಕು ನೋಡಿದ್ದಾರೆ. ಹಾವಾಡಿಗರು, ದೊಂಬರು, ಕೋಲೆ ಬಸವರಂಥ ಜನಪದ ಮನರಂಜಕರು ಇವರ ಗಮನಕ್ಕೆ ಬಂದಿದ್ದಾರೆ. ವೃತ್ತಿ ನಾಯಕರಲ್ಲಿ ಗೊಂದಲಿಗರು, ದೋಬಿದಾಸರು, ಜೋಗಿಗಳು, ಹೆಳವರು ಮತ್ತು ಗೊರವಯ್ಯಗಳು ಸ್ಥಾನ ಪಡೆದಿದ್ದಾರೆ.

ಶ್ರೀಕಂಠೇಶಗೌಡರು ಜಾನಪದವನ್ನು ಜೀವನದ ಹೊರಗೆ ಅದನ್ನು ಸಾಮಗ್ರಿಯಾಗಿ ನೋಡಿಲ್ಲ. ಅದು ಎಲ್ಲರ ಮಧ್ಯೆ ಇರುವ ಸಹಜ ಬದುಕು ಎನ್ನುವಂತೆ ಕಂಡಿದ್ದಾರೆ. ಬದುಕು 'ಪುರಾತನ' ಮತ್ತು 'ಆಧುನಿಕ' ಎಂಬ ಎರಡು ಹೋಳುಗಳಾಗಿ ಒಡೆದುಕೊಂಡ ಇಂದಿನ ಸ್ಥಿತಿ ಅಲ್ಲಿ ಕಾಣುವುದಿಲ್ಲ. ಅಲ್ಲಿ ಇರುವುದೆಲ್ಲವೂ ಜನಪದವೇ ಆಗಿದೆ. ಆದ್ದರಿಂದಲೇ ಶ್ರೀಕಂಠೇಶಗೌಡರ ಜಾನಪದದ ಬಗ್ಗೆಯಾದ ತಿಳುವಳಿಕೆ 'ಜನಪದ ಜೀವನ' (Folklife)ವನ್ನು ಗ್ರಹಿಸಿದ ಅನುಭವವಾಗಿದೆ.

ನಡಿಕೇರಿಯಂಡ ಚಿಣ್ಣಪ್ಪ

ಡಾ. ಚಕ್ಕೆರೆ ಶಿವಶಂಕರ್

ತಮ್ಮ ತಾಯಿಯ ತವರೂರಾದ ಚೆಂಗು ನಾಡಿನ ಪಟ್ಟಮಾಡ ಕುಟುಂಬದಲ್ಲಿ ೧೮೭೫ರಂದು ಜನಿಸಿದ ಚಿಣ್ಣಪ್ಪನವರ ಮನೆತನದ ಹೆಸರು ನಡಿಕೇರಿಯಂಡ. ತಂದೆ ಐಯ್ಯಣ್ಣ: ತಾಯಿ ಪೊನ್ನವ್ವ. ಆ ಕಾಲಕ್ಕೆ ಚಿಣ್ಣಪ್ಪನವರ ತಂದೆ ತಾಯಿ ಈರ್ವರೂ ವಿದ್ಯಾವಂತರು, ಸುಶಿಕ್ಷಿತರು, ಸಂಸ್ಕೃತಿಪ್ರಿಯರು, ಸಮಾಜದಲ್ಲಿ ಗಣ್ಯರೆನಿಸಿಕೊಂಡವರು. ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಶನ್ ಪಾಸ್ ಮಾಡಿದ ಚಿಣ್ಣಪ್ಪನವರು ಹೆಚ್ಚಿನ ಓದಿಗಾಗಿ ಮಂಗಳೂರಿನ ಸರ್ಕಾರಿ ಕಾಲೇಜಿಗೆ ಸೇರಿದರಾದರೂ, ಕುಟುಂಬದ ಜವಾಬ್ದಾರಿ ಹೆಗಲಿಗೆ ಬಿದ್ದ ಅನಿವಾರ್ಯ ಕಾರಣಗಳಿಂದಾಗಿ ಓದು ಬಿಟ್ಟು ಕುಂಪಣಿ ಸರ್ಕಾರದ ಪೋಲೀಸು ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು.

ಸ್ವತಃ ಸುಶ್ರಾವ್ಯ ಹಾಡುಗಾರರು/ ಕಲಾವಿದರೂ ಆಗಿದ್ದ ಚಿಣ್ಣಪ್ಪನವರು ಮಡಿಕೇರಿಯಲ್ಲಿದ್ದ ಆಂಗ್ಲ ಅಧಿಕಾರಿ ಹಿಲ್ಸನ್ ಬ್ರೋನ್ ಅವರ ಪ್ರೇರಣೆಯಿಂದ ಕೊಡವ ಜನಾಂಗದ ಸಂಸ್ಕೃತಿ ಸಂಬಂಧಿ ಸಂಗ್ರಹಣೆಗೆ ತಮ್ಮನ್ನು ತೊಡಗಿಸಿಕೊಂಡರು. ತಲೆಮಾರುಗಳಿಂದಲೂ ಜನರ ಬಾಯಲ್ಲಿ ಉಳಿದು ಬಂದಿರುವ ಅಪೂರ್ವ ಶಾಬ್ದಿಕ ಸಂಪತ್ತನ್ನು 'ಲಿಪಿ'ಗಿಳಿಸುವ ಪ್ರಯತ್ನ ಮಾಡಿದ್ದರ ಫಲವಾಗಿ ಮೂಡಿ ಬಂದದ್ದು 'ಪಟ್ಟೋಲೆ ಪಳಮೆ'. ೧೯೨೪ರಲ್ಲಿಯೇ ಪ್ರಕಟವಾದ ಸುಮಾರು ೪೨೦ ಪುಟಗಳ ಬೃಹತ್ ಗ್ರಂಥವಾದ ಈ ಕೃತಿಯು, ನಿರ್ದಿಷ್ಟ ಪ್ರದೇಶವೊಂದಕ್ಕೆ ಸೇರಿದ ವಿಶಿಷ್ಟ ಜನಾಂಗವೊಂದರ ಸಂಸ್ಕೃತಿಯನ್ನು ಸಮಗ್ರವಾಗಿ ಪರಿಚಯಿಸುವ ಹಾಗೂ ಪರಿಪೂರ್ಣ ಜನಾಂಗೀಯ ಅಧ್ಯಯನಕ್ಕೆ ಮಾರ್ಗದರ್ಶಿಯಾದ ಮೊತ್ತಮೊದಲ ಗ್ರಂಥವಾಗಿರುತ್ತದೆ.

'ಪಟ್ಟೋಲೆ ಪಳಮೆ' ಕೃತಿಯಲ್ಲಿ ಒಟ್ಟು ಆರು ಅಧ್ಯಾಯಗಳಿವೆ. ಮೊದಲ ಅಧ್ಯಾಯವು ಕೊಡಗಿನ ಪೌರಾಣಿಕ ಮತ್ತು ರಾಜಕೀಯ ಚರಿತ್ರೆ, ಭೌಗೋಳಿಕ ಸನ್ನಿವೇಶಗಳನ್ನು ಪರಿಚಯಿಸಿದರೆ, ಎರಡನೆಯ ಅಧ್ಯಾಯವು ಕೊಡವರ ಪದ್ಧತಿ, ಆಚಾರ ವಿಚಾರಗಳನ್ನು ತಿಳಿಸಿಕೊಡುತ್ತದೆ. ಮನುಷ್ಯ ಬದುಕಿನ ಜೀವನಾವರ್ತ ಘಟ್ಟಗಳಲ್ಲಿನ ಸಂಪ್ರದಾಯಗಳು, ಆಚರಣೆಗಳ ವಿವರಗಳು ಇಲ್ಲಿವೆ. ಮೂರನೆಯ ಅಧ್ಯಾಯವು ಕೊಡವರ ಹಬ್ಬ ಹರಿದಿನಗಳನ್ನು ಪರಿಚಯಿಸುತ್ತವೆ. ನಾಲ್ಕು ಮತ್ತು ಐದನೆಯ ಅಧ್ಯಾಯದಲ್ಲಿ ಕೊಡವ ದೇವತೆಗಳನ್ನು ಕುರಿತಾದ

ಗೀತೆಗಳನ್ನು ಸವಿಸ್ತಾರವಾಗಿ ನೀಡಿದ್ದಾರೆ. ದೇವತೆಗಳನ್ನು ಕುರಿತಾದಂತೆ ಮೊದಲ ಅಧ್ಯಯನವು 'ಪಟ್ಟೋಲೆ ಪಳಮೆ' ಕೃತಿಯಲ್ಲಿ ಗೋಚರಿಸುತ್ತದೆ. ಅಧ್ಯಾಯ 6ರಲ್ಲಿ ನಾನಾ ತರಹದ ವಿಷಯಗಳು, ಮೃಗ ಪಕ್ಷಿಗಳ ಕಾಕು, ಕೇಕೆ, ಕೂಗುಗಳಿಗಿರುವ ಹೆಸರುಗಳು, ಶಬ್ದಾರ್ಥಗಳು ಮೊದಲಾದ ವಿಚಾರಗಳನ್ನು ಪ್ರಸ್ತಾಪಿಸಿರುತ್ತಾರೆ. ಅಲ್ಲದೆ, ಸುಮಾರು ೭೫೪ ಕೊಡವ ಗಾದೆಗಳು, ನಂಬಿಕೆಗಳು, ೧೮೦ ಕೊಡವ ಭಾಷಾ ಪದಗಳಿಗೆ ಕನ್ನಡದಲ್ಲಿ ಅರ್ಥ ನೀಡಿರುತ್ತಾರೆ.

'ಪಟ್ಟೋಲೆ ಪಳಮೆ' ಕೃತಿಯು ಕೊಡವ ಸಂಸ್ಕೃತಿ ವಿಶ್ವಕೋಶ. ಭಾಷಾ ತಜ್ಞರಿಗೆ, ಸಮಾಜ ಶಾಸ್ತ್ರಜ್ಞರಿಗೆ, ಜಾನಪದ ವಿದ್ವಾಂಸರುಗಳಿಗೆ ಅತ್ಯುತ್ತಮ ಆಕರ ಗ್ರಂಥ. ''ಕೊಡಗಿನ ಜನಪದ ಸಂಸ್ಕೃತಿ, ಸಮಾಜ ಜೀವನ, ಇತಿಹಾಸ ಮೊದಲಾದ ಸಂಗತಿಗಳ ಮೇಲೆ ಬೆಳಕು ಬೀರುವ ಅಮೂಲ್ಯ ಗ್ರಂಥ'' ಎಂದು ಹಾ.ಮಾ.ನಾಯಕರು ಮುಕ್ತ ಕಂಠದಿಂದ ಪ್ರಶಂಸಿಸಿರುವುದು ದಿಟ. ಜೀ.ಶಂ. ಪರಮಶಿವಯ್ಯನವರ ಅಭಿಪ್ರಾಯದಂತೆ ''ಪಟ್ಟೋಲೆ ಪಳಮೆ ನಮ್ಮ ಜಾನಪದ ಕೃತಿಗಳ ಸಾಲಿನಲ್ಲಿ ಕಾಲ ಮತ್ತು ವಸ್ತು ದೃಷ್ಟಿಯಿಂದ ಅತ್ಯಂತ ಗಮನಾರ್ಹ ಸಂಕಲನ. ವಿಷಯ ವ್ಯಾಪ್ತಿಯಲ್ಲಿ, ಅಧ್ಯಯನ ಕ್ರಮದಲ್ಲಿ ಪ್ರಾದೇಶಿಕ ಹಿನ್ನೆಲೆಯಲ್ಲಿ ಇದಕ್ಕೆ ಮಿಗಿಲಾದ ಸ್ಥಾನ ಲಕ್ಷ್ಯವಿದೆ''. ಕೊಡವರ ಜನಪದ ಗೀತೆಯಾದ ಬಾಳೋಪಾಟ್‌ನ ಲಯದಲ್ಲಿ ಭಗವದ್ಗೀತೆಯ ಸಾರಸರ್ವಸ್ವವನ್ನು 'ಭಗವಂತಂಡ ಪಾಟ್' ಎನ್ನುವ ಹೆಸರಿನಲ್ಲಿ ಕೊಡವ ಭಾಷೆಗೆ ಸಮರ್ಥವಾಗಿ ಅನುವಾದಿಸಿರುವ ನಡಿಕೇರಿಯಂಡ ಚಿಣ್ಣಪ್ಪನವರು ಕನ್ನಡ ಜಾನಪದ ಚರಿತ್ರೆಯಲ್ಲಿ ಪ್ರಾತಃ ಸ್ಮರಣೀಯರು.

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಡಾ|| ಕೆ.ಆರ್. ಸಂಧ್ಯಾರೆಡ್ಡಿ

ಜನಪದ ಸಾಹಿತ್ಯದ ಬಗ್ಗೆ ಜನಸಾಮಾನ್ಯರ, ಸಾಹಿತಿಗಳ, ವಿದ್ವಾಂಸರ ಗಮನ ಸೆಳೆದು ಅದರ ಸಂಗ್ರಹ- ಪ್ರಕಟಣೆಗೆ ಬಹುದೊಡ್ಡ ಪ್ರೇರಣೆ ನೀಡಿದ ಆದ್ಯ ಪ್ರವರ್ತಕರಲ್ಲಿ ಮಾಸ್ತಿ ಬಹು ಮುಖ್ಯರಾದವರು.

ಮಾಸ್ತಿಯವರು ಹುಟ್ಟಿದ್ದು ಕೋಲಾರ ಜಿಲ್ಲೆಯ ಮಾಲೂರು ತಾಲೂಕಿಗೆ ಸೇರಿದ ಮಾಸ್ತಿ ಎಂಬ ಹಳ್ಳಿಯಲ್ಲಿ. ಮಾಸ್ತಿಯವರ ಆರೆಂಟು ತಲೆಮಾರಿನವರು ಈ ಗ್ರಾಮದಲ್ಲಿ ಜೀವನ ನಡೆಸಿದರು. ಮಾಸ್ತಿಯವರ ಕುಟುಂಬ ಬಡತನದ ಕಾರ್ಪಣ್ಯಗಳಿಗೆ ಸಿಲುಕಿದಾಗ ಮಾಸ್ತಿಯವರ ತಾತ ಅವರನ್ನು ತಮ್ಮ ಊರಾದ ಹೊಂಗೇನಹಳ್ಳಿಗೆ ಕರೆದುಕೊಂಡು ಹೋಗಿ ಆ ಊರಿಗೆ ಹತ್ತಿರದ ಶಿವಾರಪಟ್ಟಣದಲ್ಲಿ ಶಾಲೆಗೆ ಸೇರಿಸಿದರು. ಅನಂತರ ಮಾಸ್ತಿಯವರು ಕೃಷ್ಣರಾಜಪೇಟೆಯಲ್ಲಿ ತಮ್ಮ ಓದನ್ನು ಮುಂದುವರೆಸಿದರು. ಮುಂದೆ ಅವರಿಗೆ ಗ್ರಾಮಾಂತರ ಪ್ರದೇಶಗಳ ಒಡನಾಟ ಸಾಧ್ಯವಾಗಿದ್ದು ಕೆಲಸಕ್ಕೆ ಸೇರಿದ ನಂತರವೇ. ಒಟ್ಟಿನಲ್ಲಿ ಮಾಸ್ತಿಯವರ ಬಾಲ್ಯದ ಪರಿಸರವೆಲ್ಲ ತೆಲುಗಿನ ಪ್ರಭಾವ ಅತ್ಯಧಿಕವಾಗಿರುವ ಕೋಲಾರ ಜಿಲ್ಲೆಯದು. ಮಾಸ್ತಿಯವರು ಇಲ್ಲಿ ಕಂಡುಂಡ ಜೀವನ ಹಾಗೂ ವ್ಯಕ್ತಿಗಳ ಚಿತ್ರಣ ಅವರ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿಯೂ ಪ್ರತಿಬಿಂಬಿಸಿದೆ.

ಮಾಸ್ತಿಯವರು ನೇರವಾಗಿ ಜನಪದ ಸಾಹಿತ್ಯವನ್ನು ಕುರಿತಂತೆ ಮಾಡಿದ ಬರಹಗಳ ಸಂಖ್ಯೆ ಕಡಿಮೆಯಿದ್ದರೂ ಅವು ತುಂಬ ಮಹತ್ವದ ವಿಚಾರಗಳನ್ನು ಹೇಳುವ ಪ್ರಬುದ್ಧ ಬರಹಗಳಾಗಿವೆ ಮತ್ತು ಕನ್ನಡ ಜನಪದ ಸಾಹಿತ್ಯದ ಅಧ್ಯಯನದಲ್ಲಿ ಅವುಗಳಿಗೆ ಚಾರಿತ್ರಿಕ ಮಹತ್ವವಿದೆ.

ಜನಪದ ಸಾಹಿತ್ಯದ ಬಗ್ಗೆ ಮಾಸ್ತಿಯವರ ವಿಚಾರಗಳು ತುಂಬ ವಿಸ್ತೃತವಾಗಿ ವ್ಯಕ್ತವಾಗಿರುವುದು ಅವರ 'ಕನ್ನಡ ನಾಡಿನ ಲಾವಣಿ ಸಾಹಿತ್ಯಗಳು, ಎಂಬ ಲೇಖನದಲ್ಲಿ ಇದು ೧೯೨೭ರಲ್ಲಿ ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾಯಿತು. ಬೇರೆ ಬೇರೆ ಸಂದರ್ಭಗಳಲ್ಲಿ ತಾವು ಕೇಳಿದ ವೈವಿಧ್ಯಪೂರ್ಣವಾದ ಜನಪದ ಗೀತೆಗಳನ್ನು ಪರಿಚಯಿಸುತ್ತಲೇ ಈ ಕಾವ್ಯದ ಸ್ವರೂಪ, ಭಾಷೆ, ಅದು ಪ್ರತಿಬಿಂಬಿಸುವ ಸಂಸ್ಕೃತಿ, ಶಿಷ್ಟಕಾವ್ಯದೊಂದಿಗೆ ಈ ಕಾವ್ಯದ ತುಲನೆ ಹಾಗೂ ಜನಪದ ಸಾಹಿತ್ಯವನ್ನು ಸಂಗ್ರಹಿಸಬೇಕಾದ ಅಗತ್ಯತೆಯನ್ನು ಪ್ರಸ್ತಾಪಿಸಿದ್ದಾರೆ. ಕಾಲಮಾನದ ದೃಷ್ಟಿಯಿಂದ ಇದು ಅತ್ಯಂತ ಮಹತ್ವದ ಲೇಖನ ಎಂದು ವಿದ್ವಾಂಸರು ಗುರುತಿಸಿದ್ದಾರೆ.

'' ಇಂಗ್ಲಿಷಿನ ಬ್ಯಾಲಡ್‌ಗಳನ್ನು ಓದಿ ಅವರ ಸಾಹಿತ್ಯದಲ್ಲಿ ಅದಕ್ಕೆ ಇರುವ ಪ್ರಾಶಸ್ತ್ಯವನ್ನು

ಆಂಗ್ಲೇಯ ಸಾಹಿತ್ಯದಲ್ಲಿ ಆಗತಾನೆ ಓದಿ ತಿಳಿದಿದ್ದರಿಂದ ನನಗೆ ನಮ್ಮ ಸೀಮೆಯ ಗೀತೆಗಳನ್ನು ಸಂಗ್ರಹಿಸಬೇಕೆಂದು ಒಂದು ಆಸೆ ಆ ಕಾಲದಲ್ಲಿ ತಲೆದೋರಿತ್ತು'' ಎಂದು ಈ ಲೇಖನದ ಆರಂಭದಲ್ಲಿಯೆ ಮಾಸ್ತಿಯವರು ಜನಪದ ಗೀತೆಗಳನ್ನು ಕುರಿತಂತೆ ತಮಗೆ ಆಸಕ್ತಿ ಮೊಳೆತ ವಿಚಾರವನ್ನು ಹೇಳಿಕೊಂಡಿದ್ದಾರೆ. ಅವರು ಕಾಲೇಜಿನಲ್ಲಿ ಓದುತ್ತಿರುವ ಕಾಲದಲ್ಲಿ ಒಮ್ಮೆ ಬೇಸಿಗೆಯ ರಜೆಗೆ ಅವರ ಹಳ್ಳಿಗೆ ಹೋಗಿ ಮಿತ್ರರೊಡನೆ ಕೊಳದ ಬಳಿ ಹರಟುತ್ತಾ ಕುಳಿತಾಗ ಅಲ್ಲಿಗೆ ಬಂದ ಒಬ್ಬ ಗಂಡು ಮತ್ತು ಒಬ್ಬ ಹೆಣ್ಣು ಜೋಗಿಯಿಂದ ಹಾಡಿಸಿದ ಗೀತೆಯೇ ಅವರು ಮೊತ್ತ ಮೊದಲಿಗೆ ಸಂಗ್ರಹಿಸಿದ ಗೀತೆ. ಅದೊಂದು ತೆಲುಗಿನ ಪ್ರಣಯಗೀತೆ. ಈ ಹಾಡನ್ನು ಕೇಳಿದ ಸಂದರ್ಭವನ್ನು ಮಾಸ್ತಿಯವರು ಸ್ವಾರಸ್ಯಕರವಾಗಿ ನಿರೂಪಿಸಿದ್ದಾರೆ. ಅಲ್ಲಿಂದ ಮುಂದೆ ಅವರು ಕೆಲಸಕ್ಕೆ ಸೇರಿದ ನಂತರ ಚಿಕ್ಕಮಗಳೂರು ಜಿಲ್ಲೆಯ ಆಲದೂರು ಎಂಬಲ್ಲಿ ಪ್ರವಾಸಿ ಬಂಗಲೆಯಲ್ಲಿ ತಂಗಿದ್ದಾಗ ಸುತ್ತಲ ಗ್ರಾಮಗಳ ಜನರಿಂದ ರಂಗಪ್ಪ ನಾಯಕನ ಚಾರಿತ್ರಿಕ ಲಾವಣಿ, ಮುದುಕನನ್ನು ಮದುವೆಯಾದ ಹುಡುಗಿಯ ಮನೋಗತವನ್ನು ಬಿಂಬಿಸುವ ಹಾಡು, ಕದನದಲ್ಲಿ ಮಡಿದ ನೀರುಗ ಮತ್ತು ಸಗುನ ಎಂಬ ಶೂರರನ್ನು ಕುರಿತ ಹಾಡು, ಸಂಪಿಗೆ ಮರದವ್ವ ಎಂಬ ಕೋಲಾಟದ ಪದ ಮೊದಲಾದವನ್ನು ಸಂಗ್ರಹಿಸಿದ ವಿಷಯವನ್ನು ನಿರೂಪಿಸಿದ್ದಾರೆ. ಇನ್ನೊಂದು ಸಲ ಇದೇ ಜಿಲ್ಲೆಯ ಕೊಟ್ಟಿಗೆಹರ ಎಂಬ ಊರಿನಲ್ಲಿ ಮಲೆನಾಡಿನ ಇನ್ನೂ ಕೆಲವು ಹಾಡುಗಳನ್ನು ಕೇಳಿದ ವಿಷಯ ತಿಳಿಸುತ್ತಾರೆ. ಇವುಗಳಲ್ಲಿ ಮುಖ್ಯವಾದುವು ಯುದ್ಧವರ್ಣನೆಯೇ ಪ್ರಧಾನವಾಗಿರುವ ಸುಲ್ತಾನರ ಹಾಡು ಹಾಗೂ ಯಲ್ಲಮ್ಮ ದೇವಿಯು ಒಬ್ಬ ದುಷ್ಟ ಅಣ್ಣನನ್ನು ಶಿಕ್ಷಿಸಿ ಆತನ ಒಳ್ಳೆಯ ಸಹೋದರಿಯನ್ನು ಅನುಗ್ರಹಿಸುವ ನೀತಿ ಪ್ರಧಾನ ಹಾಡು, ಮೈಸೂರು ಕಡೆ ರಾತ್ರಿಯ ಹೊತ್ತು ಸಾಲು ಸಾಲಾಗಿ ಒಂಟೆ ಹೊಡೆದುಕೊಂಡು ಹೋಗುವವರು ರಾತ್ರಿಯ ನೀರವತೆಯನ್ನು ಕಳೆಯಲು ಹೇಳಿಕೊಳ್ಳುವ ಸವಾಲ್ ಜವಾಬ್ ರೂಪದ ಹಾಡುಗಳು, ತಮ್ಮ ಮಿತ್ರರಿಂದ ಹಾಡಿಸಿದ ಹುಬ್ಬಳ್ಳಿ ಧಾರವಾಡ ಕಡೆಯ ಪ್ರಣಯ ಗೀತೆಗಳು, ಕಿನ್ನುಡಿಯ ಜೋಗಿಯೊಬ್ಬನಿಂದ ಕೇಳಿದ ಅರ್ಜುನ ಜೋಗಿಯ ಹಾಡು ಹೀಗೆ ಮಾಸ್ತಿಯವರು ಈ ಹಾಡುಗಳನ್ನು ಕೇಳಿದ ಸಂದರ್ಭ, ಆಯಾ ಹಾಡಿನ ವಸ್ತು, ಧಾಟಿ, ಅವುಗಳ ವೈಶಿಷ್ಟ್ಯವನ್ನು ಅಲ್ಲಲ್ಲಿಯೇ ಪ್ರಸ್ತಾಪಿಸಿದ್ದಾರೆ.

ಅವರು ಆಲದೂರಿನಲ್ಲಿ ಕೇಳಿದ ಸಂಪಿಗೆ ಮರದವ್ವ ಎಂಬ ಕೋಲಾಟ ಪದದ ಸಂದರ್ಭದಲ್ಲಿ ಕೋಲಾಟವನ್ನು ಕುರಿತಂತೆ ಆ ಗುಂಪಿಗೆ ಉತ್ತೇಜನ ನೀಡುತ್ತಿದ್ದ ಒಬ್ಬ ವೃದ್ಧರಿಂದ ಕೇಳಿ ತಿಳಿದ ವಿವರಗಳನ್ನು ಇಲ್ಲಿ ನಿರೂಪಿಸಿದ್ದು ಕೋಲಾಟದ ಬಗ್ಗೆ ಇಂತಹ ಅಪೂರ್ವ ಮಾಹಿತಿಯನ್ನು ಇದುವರೆಗೆ ಯಾವ ಸಂಗ್ರಹಕಾರರೂ ನೀಡಿದಂತಿಲ್ಲ.

ಈ ಲೇಖನದಲ್ಲಿ ಜನಪದ ಹಾಡುಗಳನ್ನು ಕುರಿತಂತೆ ಮಾಸ್ತಿಯವರ ವ್ಯಾಖ್ಯಾನ ಸಾಹಿತ್ಯಿಕ ಅಂಶಗಳಿಗೆ ಮಾತ್ರವೇ ಸೀಮಿತವಾಗದೆ ಆಯಾ ಹಾಡುಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿಟ್ಟು ಗ್ರಹಿಸುವ ಮತ್ತು ಇವುಗಳ ನಿರೂಪಣಾಕ್ರಮವನ್ನು ಕುರಿತ ಜಿಜ್ಞಾಸೆಯನ್ನೂ

ಒಳಗೊಂಡಿದೆ. ಇಲ್ಲಿ ಜನಪದ ಗೀತೆಗಳ ಜಾಯಮಾನವನ್ನು ಮಾಸ್ತಿಯವರು ತುಂಬ ನಿಖರವಾಗಿ ಗುರುತಿಸಿದ್ದಾರೆ.

ಜನಪದ ಗೀತೆಗಳು ವಾಗ್ರೂಪದಲ್ಲಿರುವ ಕಾರಣ ಒಮ್ಮೆ ಹೇಳಿದಾಗ ಇದ್ದ ವಿವರಗಳು ಮತ್ತೊಮ್ಮೆ ಹೇಳಿದಾಗ ವ್ಯತ್ಯಾಸವಾಗಿರುತ್ತವೆ ಎಂಬುದನ್ನು ಮಾಸ್ತಿ ಹೀಗೆ ಗುರುತಿಸಿದ್ದಾರೆ. ''.....ಈ ಹಾಡುಗಳು ಬಹುಮಟ್ಟಿಗೆ ಹಿಂದಿನ ಕಾಲದವು. ಈಗಲೂ ಅವುಗಳಲ್ಲಿ ಅಲ್ಲಲ್ಲಿ ಉಪಾಧ್ಯಾಯರು ಮಾತುಗಳನ್ನು ಸೇರಿಸಿಕೊಡುವರು. ಆಲದೂರಿನಲ್ಲಿ ಅವರಿಗೆ ಪಾಠ ಹೇಳಿಕೊಡುತ್ತಿದ್ದವನು ರಂಗಪ್ಪ ನಾಯಕನ ಹಾಡನ್ನು ಹೇಳಬೇಕಾದರೆ ನಾಟ್ಯದಲ್ಲಿ ಹೇಳುವುದಕ್ಕೂ ನಾನು ಬರೆದುಕೊಳ್ಳುವುದಕ್ಕೆಂದು ಹೇಳುವುದಕ್ಕೂ ವ್ಯತ್ಯಾಸವಾಯಿತು. ಇದೇಕೆ ಹೀಗೆ ಎಂದು ಕೇಳಿದರೆ ಆಡುವಾಗ ಅದನ್ನು ಮಾತು ಬಂದ ಹಾಗೆ ಹೇಳುತ್ತಾನೆ. ಅವರಲ್ಲಿ ಬುದ್ಧಿವಂತನಾದವನಿಗೂ ಹೀಗೆಯೇ ಬರುತ್ತವೆ. ಉಳಿದವರು ಅವನು ಹೇಳಿದಂತೆ ಕೇಳುತ್ತಾರೆ ಎಂದನು. ಈ ಶಕ್ತಿ ಜನರಲ್ಲಿ ಈಗಲೂ ಇದೆ''.

ಜನಪದ ಸಾಹಿತ್ಯದ ಸೌಂದರ್ಯ ಇರುವುದೇ ಅದನ್ನು ಮುಖತಃ ಕೇಳಿದಾಗ. ಬರವಣಿಗೆಯಲ್ಲಿ ಆ ಸೊಗಸು ಉಳಿದಿರುವುದಿಲ್ಲ ಎಂಬುದನ್ನೂ ಸಹ ಮಾಸ್ತಿಯವರು ಗಮನಿಸಿ ಹೀಗೆ ಹೇಳುತ್ತಾರೆ. ''.....ಈ ಹಾಡುಗಳು ಬರವಣಿಗೆಯಲ್ಲಿ ನಾಲ್ಕರಲ್ಲೊಂದು ಭಾಗಕ್ಕೆ ಇಳಿಯುತ್ತವೆ. ಹಾಡುವಾಗ ಇರುವ ಧಾಟಿ ಬರೆಯುವುದಕ್ಕೆಂದು ಹೇಳಿದಾಗ ಇರುವುದಿಲ್ಲ. ಆಗ ರೆಕ್ಕೆಯನ್ನು ಹರಡಿ ಹಾರುತ್ತಿರುವ ಪಕ್ಷಿಯಂತೆ ಇರುವ ಕತೆ ಬರೆಯುವಾಗ ಗರಿಮುದುರಿ ನೆಲದಲ್ಲಿ ನಿಂತ ಪಕ್ಷಿಯಂತೆ ಆಗುತ್ತದೆ.''

ಜನಪದ ಸಾಹಿತ್ಯದ ಸಂಗ್ರಹ, ಪ್ರಕಟಣೆ ಯಾಕೆ ಅಗತ್ಯ ಎಂಬುದರ ಬಗ್ಗೆ ಮಾಸ್ತಿಯವರ ಅಭಿಪ್ರಾಯ ಹೀಗಿದೆ. ''ಈಗ ನಮ್ಮ ಕಾವ್ಯ ಪ್ರಪಂಚದಲ್ಲಿ ಹೊಸಮಾರ್ಗಗಳನ್ನು ಕಂಡು ಮುಂದುವರೆಯುವ ಅಪೇಕ್ಷೆಯೂ ಶಕ್ತಿಯೂ ಜನರಲ್ಲಿ ಉಂಟಾಗುವಂತೆ ಮಾಡುವುದು ಅವಶ್ಯಕವಾಗಿದೆ. ಹೀಗೆ ಮಾಡುವುದರಲ್ಲಿ ನಮ್ಮ ದೇಶದಲ್ಲಿ ವಾಡಿಕೆಯಾಗಿರುವ ಸಾಹಿತ್ಯ, ಲಾವಣಿ ಮುಂತಾದುವನ್ನು ಸೇರಿಸಿ ಪ್ರಕಟಣೆ ಮಾಡುವುದು ಅತಿಮುಖ್ಯವಾದ ಕೆಲಸ. ಇದನ್ನು ಕೈಗೊಂಡು ಯಾರು ಧನ್ಯರಾಗುವರೊ? ಕೆಲಸವಾದರೂ ಅಷ್ಟು ಕಷ್ಟವಾದುದಲ್ಲ. ಅದನ್ನು ಮಾಡುವವರಿಗೆ ಹೆಸರುಂಟು, ಸಂತೋಷವುಂಟು.''

'ಗರತಿಯ ಹಾಡು' ಜಯಕರ್ನಾಟಕ ಗ್ರಂಥಮಾಲೆಯಲ್ಲಿ ೧೯೩೧ರಲ್ಲಿ ಪ್ರಕಟವಾಗುವ ಹೊತ್ತಿಗಾಗಲೇ ಜನಪದ ಸಾಹಿತ್ಯವನ್ನು ಕುರಿತ ಉಪನ್ಯಾಸ ಮತ್ತು ಬರಹಗಳಿಂದಾಗಿ ಮಾಸ್ತಿಯವರು ಈ ಸಂಗ್ರಹ ಅಧ್ಯಯನಗಳಿಗೆಲ್ಲಾ ಪ್ರೇರಣೆ ನೀಡಿದ ಹಿರಿಯರಾಗಿ ಮನ್ನಣೆ ಗಳಿಸಿದ್ದರು. ಗರತಿಯ ಹಾಡಿನ ಪರಿಚಯದ ಮಾತುಗಳಲ್ಲಿ ಬೇಂದ್ರೆಯವರು ಜನಪದ ಸಾಹಿತ್ಯವನ್ನು ಕುರಿತಂತೆ ವಿಜಾಪುರ ಸಾಹಿತ್ಯ ಸಮ್ಮೇಳನದಲ್ಲಿ ಮತ್ತು ಅಲ್ಲಲ್ಲಿ ಕೆಲವರು ಪ್ರಸ್ತಾಪಿಸಿದ ವಿಷಯವನ್ನು ಹೇಳಿ ಈ ಎಲ್ಲವುಗಳಿಗಿಂತ ''ಲಾವಣಿ ಸಾಹಿತ್ಯಗಳ ವಿಷಯವಾಗಿ

ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರರು ಪರಿಷತ್ಪತ್ರಿಕೆಯಲ್ಲಿ ಬರೆದ ಸೊಗಸಾದ ಲೇಖನವೇ ಮಹತ್ವದ ಬರಹ.... ಬೆಳಗಾವಿಯ ಸಮ್ಮೇಳನದಲ್ಲಿ ಮಾಸ್ತಿಯವರು ಈ ವಿಷಯ ಕುರಿತು ಮಾತಾಡಿದರು'' ಎಂದು ಉಲ್ಲೇಖಿಸಿದ್ದಾರೆ. ಈ ಕಾರಣಕ್ಕಾಗಿಯೇ ಗರತಿಯ ಹಾಡಿಗೆ 'ಆಶೀರ್ವಾದ ನುಡಿ'ಯನ್ನು ಬರೆಯುವ ಗೌರವ ಮಾಸ್ತಿಯವರಿಗೆ ಸಿಕ್ಕಿರಬೇಕು.

ಜನಪದ ಗೀತೆಗಳನ್ನು ಕುರಿತಂತೆ ಮಾಸ್ತಿಯವರ ಇನ್ನಷ್ಟು ವಿಚಾರಗಳನ್ನು 'ಕರ್ನಾಟಕದ ಜನಪದ ಸಾಹಿತ್ಯ ಮತ್ತು ಜನತೆಯ ಸಂಸ್ಕೃತಿ' ಎಂಬ ಕೃತಿಯಿಂದ ತಿಳಿಯಬಹುದು. ಇದು 1937ರಲ್ಲಿ ಮೊದಲ ಬಾರಿಗೆ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಗಿ ನಂತರ ಪುಸ್ತಕ ರೂಪದಲ್ಲಿ ಹೊರಬಂದಿತು. ಇಲ್ಲಿ ಜನಪದರ ಬದುಕಿನ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಗರತಿಯ ಹಾಡು ಸಂಕಲನದ ತ್ರಿಪದಿಗಳನ್ನು ಉಲ್ಲೇಖಿಸುತ್ತ ಈ ಕಾವ್ಯದ ಹಿರಿಮೆಯನ್ನು ಮನದಟ್ಟು ಮಾಡಿಕೊಡುವ ಪ್ರಯತ್ನ ಮಾಡಿದ್ದಾರೆ. ''.........ಪಂಡಿತ ಕಾವ್ಯ ಬಹು ಕಡಿಮೆ ರೀತಿಯದಾದಾಗ ಬರಿಯ ವೇಷವಾಗುತ್ತದೆ. ಆದರೆ ಜನತೆಯ ಕವಿತೆ ಸಹಜವಾದ ನುಡಿ. ಜನರ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲೂ ತಿಳಿಯಲಾರದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ ಎನ್ನುತ್ತಾರೆ. ಈ ಕಾವ್ಯದ ಇನ್ನೂ ಹಲವು ವೈಶಿಷ್ಟ್ಯಗಳನ್ನು ಗುರುತಿಸುವ ಗಂಭೀರ ಪ್ರಯತ್ನ ಇಲ್ಲಿದೆ. ಮೊದಲನೆಯದಾಗಿ ಇದರ ವೈವಿಧ್ಯದ ಬಗ್ಗೆ ''ಜನತೆಯ ಕಾವ್ಯವನ್ನು ನೋಡುವಾಗ ನಮಗೆ ಮೊದಲು ಕಾಣುವ ಲಕ್ಷಣ ಅದರ ವೈವಿಧ್ಯ ಚೆನ್ನಪಟ್ಟಣದ ಶ್ರೀಮಾನ್ ವಾಸುದೇವಯ್ಯನವರ ಬಾಲಬೋಧೆಯ ಕಡೆಯಲ್ಲಿ ಕೊಟ್ಟಿರುವ 'ಯಾಕಳುವೆ ಎಲೆರಂಗ' ಎಂಬ ಹಾಡಿನಿಂದ ಹೊರಟು, ಫ್ಲೀಟರು ಇಂಡಿಯನ್ ಅಂಟಿಕ್ವರಿಯಲ್ಲಿ ಪ್ರಕಟಿಸಿದ ಕಥೆಗಳನ್ನು ಮುಟ್ಟಿ, ಗೋವಿನಕಥೆ, ಶನಿಮಹಾತ್ಮೆ, ನಳಚರಿತ್ರೆಯ ಹಾದು, ಧಾರವಾಡದ ಗೆಳೆಯರು ಪ್ರಕಟಿಸಿದ ಗರತಿಯ ಹಾಡು ಜೀವನ ಸಾಂಗತ್ಯಗಳನ್ನು ಸೇರುವವರೆಗೆ ನಮಗೆ ಅನೇಕ ರೀತಿಯ ಕವಿತೆ ಕಂಡಿರುತ್ತದೆ'' ಎನ್ನುತ್ತಾರೆ.

ಈ ಕಾವ್ಯ ಆಡುಮಾತಿನಲ್ಲಿದ್ದ ಮಾತ್ರಕ್ಕೆ ಸುಲಭವಾಗಿ ಅರ್ಥವಾಗುತ್ತದೆ ಎಂದು ತಿಳಿಯುವಂತಿಲ್ಲ ಎಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ ಅವರು ಒಂದು ಉದಾಹರಣೆ ಕೊಡುತ್ತಾರೆ. 'ಪಡಿಜೋಳ ಅಳೆಯೋಣ ಬಾ' ಎಂದು ಒಬ್ಬ ರಸಿಕ ಕರೆದಾಗ ಯುವತಿಯು 'ನಿನಗಿಂತ ಚೆಲುವ ಮನೆರಾಯ' ಎನ್ನುತ್ತಾಳೆ. ಈ ಒಳರ್ಥವನ್ನು ತಿಳಿಯುವುದು ಸುಲಭವಲ್ಲ. ಹೀಗಾಗಿ ಈ ಸಾಮಾನ್ಯ ಜನರ ಸಾಮಾನ್ಯ ಕವಿತೆಯನ್ನು ಅರ್ಥಮಾಡಿಕೊಳ್ಳುವುದಕ್ಕೂ ನಾವು ಯಾಸ್ಕ ಸಾಯಣರ ಊಹೆಗಳನ್ನು ತರಬೇಕಾಗುತ್ತದೆ ಎನ್ನುತ್ತಾರೆ.

ಜನತೆಯ ಸಾಹಿತ್ಯದ ಇನ್ನೊಂದು ಪ್ರಮುಖ ಭಾಗ, ಹಬ್ಬ ಹುಣ್ಣಿಮೆ ಪ್ರಸ್ತ ಪ್ರಯೋಜನಗಳಲ್ಲಿ ಹೇಳುವ ಪದಗಳದು ಎಂದು ಹೇಳುತ್ತ ಆ ರೀತಿಯ ಪದಗಳನ್ನೂ ಇಲ್ಲಿ ಪರಿಚಯಿಸಿದ್ದಾರೆ. ಮತ್ತು ''ಮೈಸೂರು ಪ್ರಾಂತದ ಹರಿಜನರಲ್ಲಿ ಇರತಕ್ಕವೆಂದು ಶ್ರೀಮಾನ್ ಬಿ.ಎಸ್. ರಂಗಸ್ವಾಮಿಯವರು ಜಯಕರ್ನಾಟಕದಲ್ಲಿ ಪ್ರಕಟಿಸಿರುವ ಎಣ್ಣೆಶಾಸ್ತ್ರದ ಪದಗಳು

ಈ ರೀತಿಗೆ ಒಳ್ಳೆಯ ಉದಾಹರಣೆ'' ಎನ್ನುತ್ತಾ ಯಾವ ತಪೋವನದಲ್ಲಾಗಲೀ ಅರಮನೆಯಲ್ಲಾಗಲೀ ಇದಕ್ಕೆ ಮೀರಿದ ಸಂಸ್ಕೃತಿ ದೊರೆಯಲಾರದು. ಅಸಂಸ್ಕೃತರೆನ್ನಬಹುದಾದ ಜನರಲ್ಲಿ ಕಾಣುವ ಈ ಸಂಸ್ಕೃತಿಯ ಮೆರುಗನ್ನು ನೋಡಿ ಯಾರಾದರೂ ಆಶ್ಚರ್ಯಪಡಬೇಕು ಎನ್ನುತ್ತಾರೆ. ಜನರಲ್ಲಿ ಪ್ರಚಲಿತವಿರುವ ಹಾಸ್ಯದ ಹಾಡುಗಳ ಬಗ್ಗೆ, ಫ್ಲೀಟರು ಸಂಗ್ರಹಿಸಿದ ಲಾವಣಿಗಳ ಬಗ್ಗೆ, ಮಳೆರಾಜನ ಹಾಡು, ಕುಣಿಗಲ್ ಕೆರೆ, ಕೋಲಾಟದ ಪದಗಳು, ಮಡಿಕೇರಿಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರದರ್ಶಿತವಾದ ಬೊಳುಕಾಟದ ಬಗ್ಗೆಯೂ ವಿವರಿಸಿದ್ದಾರೆ.

ಈ ಪ್ರಬಂಧದಲ್ಲಿ, ಜನಪದ ಸಾಹಿತ್ಯ ಹೇಗೆ ರೂಪುಗೊಳ್ಳುತ್ತದೆ ಎಂಬ ಬಗ್ಗೆ ಮಾಸ್ತಿಯವರು ಹೇಳುವ ಮಾತುಗಳು ತುಂಬ ವಿಚಾರಪೂರ್ಣವಾಗಿವೆ. ''...........ಈ ಕೃತಿಗಳನ್ನು ಯಾರು ಯಾವಾಗ ಮಾಡಿದರು ಎಂದು ನಿರ್ಧರಿಸುವುದು ಬಹುವೇಳೆ ಸಾಧ್ಯವಿಲ್ಲ. ಉಳಿದೆಲ್ಲ ಸಾಹಿತ್ಯದಂತೆಯೇ ಈ ಸಾಹಿತ್ಯವೂ ಒಂದೊಂದು ಕಾಲದಲ್ಲಿ ಒಂದಷ್ಟು ಒಂದಿಷ್ಟು ಆಗಿರಬೇಕು. ಕೆಲವು ವೇಳೆ ಸಂಗತಿಯಿಂದ ಅದರ ಕಾಲ ಸುಮಾರು ಸ್ಪಷ್ಟವಾಗುತ್ತದೆ. ಕಟ್ಟೂತ ಕತೆಯ ಹೇಳುವ ಶಕ್ತಿ ಇವರಿಗೆ ವಾಡಿಕೆಯಿಂದ ಬಂದು ಬಿಡುತ್ತದೆ. ಹೀಗೆ ರಚಿಸಿದ ಪದ್ಯಗಳಿಗೆ ಕಾಲಕರ್ತೃಗಳನ್ನು ನಿರ್ಣಯಮಾಡಿ ಹೇಳುವುದು ಸಾಧ್ಯವೇ ಇಲ್ಲ'' ಎನ್ನುತ್ತಾರೆ.

ಜನಪದ ಕಾವ್ಯದ ಉತ್ತಮಿಕೆಯ ಬಗ್ಗೆ ಪಂಡಿತಕಾವ್ಯದ ನ್ಯೂನತೆಯ ಬಗ್ಗೆ ಇಲ್ಲಿ ಇನ್ನಷ್ಟು ಒತ್ತಿ ಹೇಳಿದ್ದಾರೆ. ''ಜನತೆಯ ಕವಿಗಳೆಂದ ಮಾತ್ರಕ್ಕೆ ಈ ಸಾಹಿತ್ಯದ ಕರ್ತೃಗಳು ಅವಿದ್ಯಾವಂತರೆಂದು ನಾವು ಭಾವಿಸಬಾರದು. ಇವರು ಪಾಂಡಿತ್ಯವನ್ನು ಬಲ್ಲವರು.........ನಿಜವಾದ ಜನತೆಯ ಕವಿತೆ ವಿಷಯವೂ ನಿಯಮವೂ ಸಹಜವಾಗಿ ಹೊಂದದ ವೇಳೆ ವಿಷಯವನ್ನಿಟ್ಟುಕೊಳ್ಳದೆ ನಿಯಮವನ್ನು ಬಿಟ್ಟು ಒಂದು ಹೆಜ್ಜೆ ಆಚೆ ನಡೆಯುತ್ತದೆ. ಪಾಂಡಿತ್ಯದ ಕವಿತೆ ನಿಯಮವನ್ನು ಬಿಡಲಾರದು. ಅದರ ಸಲುವಾಗಿ ವಿಷಯವನ್ನು ಒಂದು ಹೆಜ್ಜೆ ಅತ್ತ ಇತ್ತ ಎಳೆಯುತ್ತದೆ.''

ಈ ಕಾವ್ಯ ಸಂಗ್ರಹದ ಅವಶ್ಯಕತೆಯನ್ನು ಕುರಿತು ''........ಹತ್ತು ವರ್ಷದಿಂದೀಚೆಗೆ ಜನತೆಯ ಸಾಹಿತ್ಯ ಬಹುಮಟ್ಟಿಗೆ ಪ್ರಕಟವಾಗಿದೆ. ಇನ್ನೂ ಪ್ರಕಟವಾಗಬೇಕಾದ್ದು ತುಂಬಾ ಇರಬೇಕು. ಇದುವರೆಗೆ ಪ್ರಕಟವಾಗಿರುವ ಕೃತಿಗಳನ್ನು ಒಟ್ಟಿಗೆ ಸೇರಿಸಿ ಸಂಗ್ರಹವನ್ನು ಮಾಡುವುದು ಆಗಬೇಕಾದ ಕೆಲಸ. ಇದರಿಂದ ಕನ್ನಡ ನಾಡ ಜನತೆಯ ಬಾಳಿನಲ್ಲಿ ಎಂಥ ಕೆಲಸವಾಗಿದೆ ಎನ್ನುವುದೂ ನಮ್ಮ ಜನತೆಯ ಸಂಸ್ಕೃತಿ ಎಂಥ ಶ್ರೇಷ್ಠವಾದದ್ದೆನ್ನುವುದೂ ತಿಳಿಯುವುದು. ತನ್ನ ಶಕ್ತಿಯನ್ನು ಕುರಿತು ಕನ್ನಡವು ನಾಚಿಕೊಳ್ಳಬೇಕಾಗಿಲ್ಲ. ನಮ್ಮ ಸಂಸ್ಕೃತಿ ಕಿರಿದಲ್ಲ. ಇದರ ಜೊತೆಗೆ ಈ ಕೃತಿ ಇನ್ನು ಮೇಲೆ ಬರೆಯುವ ಕವಿಗಳಿಗೆ ದಾರಿ ತೋರಿಸುವುದು....''

ಮದ್ರಾಸ್ ವಿಶ್ವವಿದ್ಯಾಲಯವು ದಕ್ಷಿಣ ಭಾರತದ ಮುಖ್ಯ ಭಾಷೆಗಳಲ್ಲಿ ಪೌರ್ವಾತ್ಯ ಸಂಸ್ಕೃತಿ ಕುರಿತಂತೆ ಒಂದು ಉಪನ್ಯಾಸ ಸರಣಿಯನ್ನು ಏರ್ಪಡಿಸಿದಾಗ (1931) ಅದರಲ್ಲಿ ಉಪನ್ಯಾಸಗಳನ್ನು ನೀಡುವ ಗೌರವ ಮಾಸ್ತಿಯವರಿಗೆ ಸಿಕ್ಕಿತು. ಆಗ ಅವರು ಕನ್ನಡ ನಾಡಿನ

ಜನತೆಯ ಸಂಸ್ಕೃತಿ ಕುರಿತ ವಿಷಯದ ಬಗ್ಗೆ ಮಾತಾಡಲು ಆಯ್ಕೆ ಮಾಡಿಕೊಂಡರು. ಇಲ್ಲಿ ಅವರು ವಚನ ಸಾಹಿತ್ಯ, ದಾಸ ಸಾಹಿತ್ಯದ ಜೊತೆಗೆ ಜನಪದ ಸಾಹಿತ್ಯದ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದರು. ಈ ಮೂರು ಸಾಹಿತ್ಯಗಳು ಕನ್ನಡ ನಾಡಿನ ಸಂಸ್ಕೃತಿಯ ವೈಶಿಷ್ಟ್ಯವನ್ನು ಪ್ರತಿಬಿಂಬಿಸುವಂಥವು ಎಂಬ ದೃಷ್ಟಿ ಇಲ್ಲಿದೆ. ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಲ್ಲಿ ಅವರು ಜನಪದ ಲಾವಣಿ ಸಾಂಗತ್ಯಗಳು, ಊರುಗಳ ಹೆಸರುಗಳು, ಜನ ಸಾಮಾನ್ಯರ ಕಾವ್ಯಗಳು, ಗಾದೆಗಳು ಎಂಬ ವಿಷಯಗಳ ಬಗ್ಗೆ ಮಾತಾಡಿದ್ದಾರೆ. ಈ ಉಪನ್ಯಾಸಗಳನ್ನು ಮೊದಲು ಅವರು ಕನ್ನಡದಲ್ಲಿ ನೀಡಿದರು. ಅನಂತರ ಇತರ ಭಾಷೆಯ ಜನರು ಈ ಸಾಹಿತ್ಯದ ಸ್ವರೂಪವನ್ನು ಅರ್ಥಮಾಡಿಕೊಳ್ಳಲಿ ಎಂಬ ಕಾರಣಕ್ಕಾಗಿ ಮದ್ರಾಸಿನ ತ್ರಿವೇಣಿ ಎಂಬ ಇಂಗ್ಲಿಷ್ ನಿಯತಕಾಲಿಕೆಯಲ್ಲಿ Folk songs in karnataka ಎಂಬ ಲೇಖನವನ್ನು ಪ್ರಕಟಿಸಿದರು. ಇದರಲ್ಲಿ ಗರತಿಯ ಹಾಡಿನ ಕೆಲವು ತ್ರಿಪದಿಗಳನ್ನು ಇಂಗ್ಲಿಷಿಗೆ ಅನುವಾದಿಸಿರುವುದು ಮತ್ತು ಗೋವಿನ ಹಾಡನ್ನು ವಿಸ್ತಾರವಾಗಿ ಪರಿಚಯಿಸಿ ಇಡೀ ಹಾಡನ್ನು ಇಂಗ್ಲಿಷಿಗೆ ಅನುವಾದಿಸಿಕೊಟ್ಟಿರುವುದು ಗಮನಾರ್ಹ. ಗಾದೆಗಳನ್ನು ಕುರಿತು ಪ್ರಸ್ತಾಪಿಸುವಾಗ ಅವರು ಗಾದೆಗಳಿಗೆ ನೀಡಿರುವ ವ್ಯಾಖ್ಯೆ ಚೆನ್ನಾಗಿದೆ. ''ಜನಾಂಗದಲ್ಲಿ ಪ್ರಚಾರದಲ್ಲಿರುವ ತಿಳಿವು ತಕ್ಕ ಮನಸ್ಸಿನಲ್ಲಿ ಬಿದ್ದಾಗ ನಾಲ್ಕು ಮಾತಿನಲ್ಲಿ ಘನಿಸಿ ಮುತ್ತಿನಂತಾಗುತ್ತದೆ''............ ''ಹಲವರ ಭಾವ ಒಬ್ಬನ ಮಾತಿನಲ್ಲಿ ಕಂಡು ಆ ಮಾತು ಹಲವರ ಮಾತಾಗುತ್ತದೆ''. ಗಾದೆಗಳನ್ನು ಕುರಿತಂತೆ ಮಾಸ್ತಿಯವರು ಜೀವನ ಪತ್ರಿಕೆಗೆ ಬರೆದ ಲೇಖನದಲ್ಲಿ (ಸೆಪ್ಟೆಂಬರ್ 1964) ಸಾವಿರಾರು ಕಾಲ ಬಾಳಿರುವ ಜನಾಂಗಗಳಲ್ಲಿ ನೀತಿ ಕಲಿಸುವ ಗಾದೆಗಳು ಸಾವಿರಾರು ಇರಬೇಕು. ಕನ್ನಡಜನ ಇಂಥ ಒಂದು ಜನತೆ. ಆದ್ದರಿಂದ ಅವರ ನುಡಿಯಲ್ಲಿ ನೀತಿ ಬೋಧಕ ಜಾಣ್ನುಡಿ, ನಾಡುನುಡಿ ಸಾವಿರಾರು ದೊರೆಯುತ್ತವೆ ಎಂದು ಹೇಳುತ್ತ ಬದುಕಿನ ಸಂದರ್ಭಗಳಿಗೆ ಅನ್ವಯಿಸುವ ಅನೇಕ ಗಾದೆಗಳನ್ನು ಉಲ್ಲೇಖಿಸಿ ಅವುಗಳ ಸ್ವಾರಸ್ಯವನ್ನು ವಿವರಿಸಿದ್ದಾರೆ. ಬಹುತೇಕ ಎಲ್ಲ ಜನಪ್ರಿಯ ಗಾದೆಗಳ ಉಲ್ಲೇಖವೂ ಇಲ್ಲಿದೆ.

ಜಾನಪದಕ್ಕೆ ಸಂಬಂಧಿಸಿದಂತೆ ಮಾಸ್ತಿಯವರ ಗಮನವನ್ನು ಹೆಚ್ಚಾಗಿ ಸೆಳೆದ ವಿಷಯ ಸ್ಥಳನಾಮಗಳು ಮತ್ತು ಸ್ಥಳ ಐತಿಹ್ಯಗಳು. ಮಾಸ್ತಿಯವರು ತಮ್ಮ ಅಧಿಕಾರಾವಧಿಯಲ್ಲಿ ಕರ್ನಾಟಕದ ಬೇರೆ ಬೇರೆ ಊರುಗಳಲ್ಲಿ ತಿರುಗಾಡಿದರು. ಯಾವ ಊರಿಗೆ ಹೋದರೂ ಆ ಊರಿನ ವೈಶಿಷ್ಟ್ಯ, ಸ್ಥಳಕಥೆಗಳು, ವ್ಯಕ್ತಿ ಸಂಗತಿಗಳ ಬಗ್ಗೆ ಕೇಳಿ ತಿಳಿಯುವ ಕುತೂಹಲ ಮಾಸ್ತಿಯವರಲ್ಲಿತ್ತು. ಈ ದಂತ ಕಥೆಗಳು, ಸ್ಥಳಪುರಾಣಗಳು ತಮ್ಮಷ್ಟಕ್ಕೆ ಸ್ವಾರಸ್ಯಕರವಾಗಿರುವುದರ ಜೊತೆಗೆ ಈ ನಾಡಿನ ಜನರ ಸಂಸ್ಕೃತಿಯ ಪ್ರತಿಬಿಂಬವೂ ಆಗಿರುವುದನ್ನು ಮಾಸ್ತಿ ಕಂಡುಕೊಂಡರು. ಮುಂದಿನ ಅವರ ಅನೇಕ ಬರಹಗಳಲ್ಲಿ ಸಾಂದರ್ಭಿಕವಾಗಿ ಇಂತಹ ಕಥೆ, ಐತಿಹ್ಯಗಳನ್ನು ಅವರು ನಿರೂಪಿಸಿದ್ದಾರೆ. ಸದಾ ಜನರ ಮನಸ್ಸನ್ನು ಹಿರಿಯ ಸಹವಾಸದಲ್ಲಿಟ್ಟು ಅವರ ಅಂತಸ್ತನ್ನು ಹೆಚ್ಚಿಸತಕ್ಕ ಒಂದು ಸೊಗಸು ನಮ್ಮ ಸೀಮೆಯ

ಊರ ಹೆಸರುಗಳಲ್ಲಿ ಕಾಣುತ್ತದೆ ಎಂದು ಹೇಳುವ ಮಾಸ್ತಿ ಲೇಪಾಕ್ಷಿ, ಮದಲಿಂಗನ ಕಣಿವೆ, ಬಂದಳಿಕೆ, ತಿರುಗಣ, ಬಾಬಾಬುಡನಗಿರಿ, ಮಾರ್ಕಂಡೇಯ ನಗರ, ಖಾಂಡ್ಯ, ಬಸವನಗುಡಿ, ನಿಜಗಲ್‌ದುರ್ಗ, ಚಿತ್ರದುರ್ಗ....... ಮುಂತಾದ ಊರುಗಳನ್ನು ಕುರಿತು ಜನರಲ್ಲಿ ಪ್ರಚಲಿತವಿರುವ ಧಾರ್ಮಿಕ ಐತಿಹಾಸಿಕ ಕಥೆಗಳನ್ನು ಉಲ್ಲೇಖಿಸುತ್ತಾರೆ. ಊರುಗಳಿಗೆ ಪ್ರಾಕೃತಿಕವಾದ ಹೆಸರಿಡುವುದರಲ್ಲಿ ನಮ್ಮ ಜನರ ರಸಿಕತೆ, ಸೌಂದರ್ಯ ಪ್ರಜ್ಞೆ ಎಷ್ಟು ಚೆನ್ನಾಗಿದೆ ಎಂಬುದಕ್ಕಾಗಿ ಅರಳು ಮಲ್ಲಿಗೆ, ಮಲ್ಲಿಗೆವಾಳು, ಕುಡುಮಲ್ಲಿಗೆ, ಮಲ್ಲಿಗೇನಹಳ್ಳಿ, ಮಾದಲ, ಹಿಪ್ಪಲ, ಪೂನಾಡು, ಬೆಳವಲ, ಸಂಪಿಗೆ, ಕೋಗಿಲೆ ಅಂತೆಯೇ ಸಿರಿವಾಸ, ಸಿರಿಯಂಗಳ, ಸಿರಿವಂತೆ ಸಿರಿಯೂರು, ಸೊಗದವಾಣಿ ಮೊದಲಾದುವನ್ನು ಹೆಸರಿಸುತ್ತಾರೆ.

1960ರಲ್ಲಿ ಪ್ರಕಟವಾದ ಮಾಸ್ತಿಯವರ 'ನಮ್ಮ ನುಡಿ' ಭಾಷಾ ಪ್ರೇಮಿಗಳ ಕುತೂಹಲ ಮೂಡಿಸುವ ಪುಸ್ತಕವಾಗಿದ್ದರೂ ಈಗ ರೂಢಿಯಲ್ಲಿರುವ ಪದಗಳ ಮೂಲ ಅರ್ಥ, ಮೂಲರೂಪ, ಅರ್ಥ ವ್ಯತ್ಯಾಸ, ಬಳಕೆಯ ರೀತಿಗಳನ್ನು ಪರಿಚಯಿಸುವಾಗ ಜಾನಪದೀಯ ವಾದಂಥ ಸಮೃದ್ಧ ಮಾಹಿತಿಯೂ ದೊರಕುತ್ತದೆ. ಈ ದೃಷ್ಟಿಯಿಂದ ಜಾನಪದ ಅಭ್ಯಾಸಿಗಳಿಗೆ ಇದು ಉತ್ತಮ ಆಕರವಾಗಿದೆ. ಉದಾಹರಣೆಗೆ, ಕಣ್ಣಾ ಮುಚ್ಚೆ ಕಾಡೆಗೂಡೆ.........ಕಟಿಗೇ ಮುಟಿಗೇ ಕಾಳಂದೇವಿ........ಎಂಬ ಶಿಶು ಪ್ರಾಸಗಳಲ್ಲಿರುವ ಅಸ್ಪಷ್ಟ ಪದಗಳ ಮೂಲರೂಪ ಮತ್ತು ಅರ್ಥವನ್ನು ಹುಡುಕುವ ಪ್ರಯತ್ನ ಇಲ್ಲಿದೆ. ಈ ಪುಸ್ತಕದಲ್ಲಿ ಎಷ್ಟೊಂದು ಸ್ವಾರಸ್ಯಕರವಾದ ಮಾಹಿತಿಯನ್ನು ಮಾಸ್ತಿಯವರು ಸಂಗ್ರಹಿಸಿದ್ದಾರೆ ಎಂಬುದಕ್ಕೆ ಉದಾಹರಣೆಯಾಗಿ 'ಚಿಕ್ಕ ಅಡಿಗೆ', 'ಬವನಾಶಿ' ಎಂಬ ಪದಗಳನ್ನು ನೋಡಬಹುದು. ಚಿಕ್ಕ (ಅಡಿಗೆ) ಮಠಗಳಲ್ಲಿ ಸ್ವಾಮಿಗಳಿಗಾಗಿ ಬೇರೆ ಅಡಿಗೆ ಮಾಡುತ್ತಾರೆ. ಕೆಲವೇ ಜನಕ್ಕೆ ಎಂದು ಮಾಡುವುದರಿಂದ ಇದರಲ್ಲಿ ಪದಾರ್ಥ ಕೊಂಚಕೊಂಚವಾಗಿ ಇರುತ್ತವೆ. ಆದ್ದರಿಂದ ಇದನ್ನು ಚಿಕ್ಕ ಅಡಿಗೆ ಎನ್ನುತ್ತಾರೆ. ಆದರೆ ಇದು ಮೇಲಿನ ಪಂಕ್ತಿಯ ಊಟ. ಇದರಲ್ಲಿ ಸಾಮಾನ್ಯ ಊಟಕ್ಕಿಂತ ಹೆಚ್ಚು ಪದಾರ್ಥ ಇರುತ್ತದೆ. ಎಲ್ಲವೂ ಚೆನ್ನಾಗಿರುತ್ತದೆ. ಆದ್ದರಿಂದ ಚಿಕ್ಕ ಶಬ್ದ ವ್ಯಂಗ್ಯವಾಗಿ ಪರಿಣಮಿಸಿದೆ. ''ಚಿಕ್ಕ ಅಡಿಗೆಮಾಡಿಸಿ ಉಂಡು ಕಾಲ ಹಾಕುವುದು'' ಎಂದರೆ ರುಚಿರುಚಿ ಅಡಿಗೆ ಮಾಡಿಸಿಕೊಂಡು ಊಟ ಮಾಡಿ ಲೋಲುಪ್ತಿಯಿಂದ ಇರುವುದು. ಇದರಿಂದ ಚಿಕ್ಕ ಎಂದರೆ ಮಿತ ಮತ್ತು ಚೆನ್ನ ಎಂಬ ಅರ್ಥ ಬಂದಿದೆ. (ಪು. 140) ಬವನಾಶಿ:- ಸನ್ಯಾಸಿ ಭಿಕ್ಷುಕ ಆಹಾರಕ್ಕಾಗಿ ಇಟ್ಟುಕೊಳ್ಳುವ ಅಗಲ ಬಾಯ ಪಾತ್ರೆ. ಅವನ ಹತ್ತಿರ ಇರುವ ಪದಾರ್ಥಗಳಿಗೆ ವೈರಾಗ್ಯಕ್ಕೆ ಸಂಬಂಧಿಸಿದ ಹೆಸರುಗಳಿರಬೇಕು. ಇದು ಭವನಾಶಿ ಭವವನ್ನು ನಾಶಮಾಡತಕ್ಕದ್ದು. ಇದರ ಬಾಯಿ ಅಗಲವಾಗಿ ಇರುವುದರಿಂದ ಬಾಯಿ ಅಗಲವಾಗಿರುವ ದೊಡ್ಡ ಪಾತ್ರೆ ಎಲ್ಲಕ್ಕೂ ಈ ಹೆಸರು ಬಂದಿದೆ. ಅಲ್ಲಿಂದ ಎಷ್ಟು ಹಾಕಿದರೂ ತುಂಬದು ಎಂಬ ಅರ್ಥಬಂದಿದೆ. (172)

ಕೋಲೆಬಸವ, ಗಾರುಡ, ನಾಮಹಾಕುವುದು, ಪಂಗನಾಮ, ನಾಮದವರು, ಮೂರುನಾಮದವರು, ಅಡ್ಡಗಂಧದವರು ಮೊದಲಾಗಿ ತಮ್ಮ ಗಮನ ಸೆಳೆದ ಅನೇಕ ಪದಗಳು,

ನುಡಿಗಟ್ಟುಗಳನ್ನು ಪ್ರಯೋಗ ಸಹಿತವಾಗಿ ವಿವರಿಸಿದ್ದಾರೆ. ಅಲ್ಲದೆ ಸುಮಾರು 120ಕ್ಕೂ ಹೆಚ್ಚು ಜಾತಿಯ ಮರಗಳ ಹೆಸರು, ವಿವಿಧ ಮಾವುಗಳು, ಬಾಳೆಗಳು, ಸೊಪ್ಪುಗಳು, ಕಾಯಿಗಳು, ಗಡ್ಡೆಗಳು, ಹೂವುಗಳು, ಕಾಳುಗಳು, ವಿಧ ವಿಧದ ಕೋತಿ, ಹುಲಿ, ಹಕ್ಕಿ, ಮೀನು, ಹುಳು ಕೀಟಗಳು, ಮಣ್ಣಿನ ವಿಧಗಳು, ನಗರ ಗ್ರಾಮ, ಹಳ್ಳಿ ಕೊಪ್ಪಲು ಮೊದಲಾದ ವಿಂಗಡಣೆಗಳು, ನಾಣ್ಯಗಳು, ಅಳತೆಗಳು ತೆರಿಗೆಗಳು, ಸಂಬಂಧ ಸೂಚಕ ಪದಗಳು.........ಮೊದಲಾದವುಗಳ ಅಪೂರ್ವ ಸಂಗ್ರಹ ಇಲ್ಲಿದೆ.

ಉದಾಹರಣೆಗೆ ಬಾಳೆಯ ಜಾತಿಗಳು; ರಸಬಾಳೆ, ರಾಜರಸಬಾಳೆ, ಪುಟ್ಟಬಾಳೆ (ಪುಟ್ಟಸುಗಂಧಬಾಳೆ), ಮಧುರಂಗ, ಗುಜ್ಜ, ಚೀನ, ಗೂಳೂರು ಬಾಳೆ, ಜೇನುಬಾಳೆ, ರಾಜಬಾಳೆ, ಚಂದ್ರಬಾಳೆ, ಸಕಲಾತಿ ಬಾಳೆ, ಪಚ್ಚೆ ಬಾಳೆ, ಹಾವು ಬಾಳೆ, ಯೇಲಕ್ಕಿ ಅರಿಸಿನ, ಆನೆ, ಕಲ್ಯಾಣಿ, ಬೂದು, ಕಾಡು, ಮಲೆ ಬಾಳೆ ಇತ್ಯಾದಿ. ಕೋತಿಗಳಲ್ಲಿ ಜಾತಿ: ಶಿಂಗಳೀಕ, ಕರ್ಕೋಡಗ, ಕೋತಿ, ಮಂಗ, ಕೋಡಗ, ಮೂಸು, ಮುಸುವ, ಮುಸುಕು, ಕೊಂಡ ಮುಸುಕು, ಕೊಂಡ ಮುಸವ, ನೆಳ, ಅಡವಿಮನುಷ್ಯ, ಕಾಡುಪಾಪ ಇತ್ಯಾದಿ.

ಮಾಸ್ತಿಯವರು ಜನಪದ ಸಾಹಿತ್ಯವನ್ನು ಕುರಿತಂತೆ ಬರಹಗಳನ್ನು ಮಾಡಿದ ಕಾಲದಲ್ಲಿ ಜನಪದ ಸಾಹಿತ್ಯ ಎಂಬ ಶಬ್ದ ಇದ್ದರೂ ಕೂಡ ಅದು ಇನ್ನೂ ಅಧಿಕೃತತೆಯನ್ನು ಪಡೆದಿರಲಿಲ್ಲ. ಮಾಸ್ತಿಯವರು ಜನತೆಯ ಸಾಹಿತ್ಯ, ಜನತೆಯ ಕವಿತೆ ಮುಂತಾದ ಪದಗಳಿಂದ ಇದನ್ನು ಗುರುತಿಸುತ್ತಾರೆ.

ಇದೇ ರೀತಿ ಜನಪದ ಸಂಸ್ಕೃತಿ ಎಂಬುದಕ್ಕೆ ಜನತೆಯ ಸಂಸ್ಕೃತಿ ಎನ್ನುತ್ತಾರೆ. ಇಂಗ್ಲಿಷಿಗೆ ಅನುವಾದಿಸುವಾಗಲೂ ಅವರು popular culture ಎಂಬ ಪದ ಬಳಸಿರುವುದನ್ನು popular culture in karnataka ಎಂಬ ಉಪನ್ಯಾಸದ ಸಂದರ್ಭದಲ್ಲಿ ಗಮನಿಸಬಹುದು. Folk ಗೆ ಸಂವಾದಿಯಾಗಿ ಜನಪದ ಎಂಬ ಪದದ ಬಳಕೆಯಾಗತೊಡಗಿದ್ದು ನಂತರದ ಕಾಲದಲ್ಲಿಯೇ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಜಾನಪದಕ್ಕೆ ಸಂಬಂಧಿಸಿದಂತೆ ಮಾಸ್ತಿಯವರ ಕೊಡುಗೆ ಇಂದಿಗೂ ಪ್ರಸ್ತುತವಾಗಿದೆ. ತಮ್ಮ ಸಮಕಾಲೀನ ವಿದ್ವಾಂಸರು ಜನಪದ ಗೀತೆಗಳ ರಸವಿಮರ್ಶೆಗಷ್ಟೇ ಸೀಮಿತವಾಗಿದ್ದ ಸಂದರ್ಭದಲ್ಲಿ ಮಾಸ್ತಿಯವರು ಈ ಕಾವ್ಯದ ಸ್ವರೂಪ, ಪ್ರಕ್ರಿಯೆಯ ಬಗ್ಗೆ ಚಿಂತನೆ ನಡೆಸಿ ಇಂದಿನ ವಿಶ್ವವಿದ್ಯಾಲಯಗಳ ವಿದ್ವಾಂಸರು ಗುರುತಿಸುತ್ತಿರುವ ಅಂಶಗಳನ್ನು ಅಂದೇ ನಿಖರವಾಗಿ ಹೇಳಿದ್ದರು ಎಂಬುದನ್ನು ಗಮನಿಸಬೇಕು. ಮಾಸ್ತಿಯವರು ಜನಪದ ಕಾವ್ಯವನ್ನು ಮೆಚ್ಚಿಕೊಳ್ಳುವುದರಲ್ಲೂ ಒಂದು ವಿಶಿಷ್ಟತೆಯಿದೆ. ಈ ಸಾಹಿತ್ಯದ ಕರ್ತೃಗಳು ಅವಿದ್ಯಾವಂತರು, ಅನಕ್ಷರಸ್ಥರಾದರೂ ಇಷ್ಟು ಒಳ್ಳೆಯ ಕಾವ್ಯ ರಚಿಸಿದ್ದಾರಲ್ಲ ಎಂಬ ರಿಯಾಯಿತಿಯ ಮೆಚ್ಚುಗೆ ಅವರ ಸಮಕಾಲೀನರಲ್ಲಿದ್ದರೆ ಮಾಸ್ತಿಯವರು ಶಿಷ್ಟ ಸಾಹಿತ್ಯದೊಂದಿಗೆ ಜನಪದ ಸಾಹಿತ್ಯವನ್ನು ತೂಗಿ ನೋಡುತ್ತ ಅಲ್ಲಿನ ಪಾಂಡಿತ್ಯದ ದೋಷಗಳು ಹಾಗೂ ಶುಷ್ಕತೆಗಳೊಂದಿಗೆ ತುಲನೆ

ಮಾಡಿ ಜನಪದ ಸಾಹಿತ್ಯದ ಹಿರಿಮೆಯನ್ನು ಎತ್ತಿ ಹಿಡಿಯುತ್ತಾರೆ. ಕ್ಷೇತ್ರಕಾರ್ಯ ಮಾಡುವವರಿಗೆ ಇರಬೇಕಾದ ಲೋಕ ಪರಿಜ್ಞಾನ ಮಾಸ್ತಿಯವರಲ್ಲಿ ಎಷ್ಟು ತೀಕ್ಷ್ಣವಾಗಿತ್ತು ಎಂಬುದಕ್ಕೆ ಅವರು ಕನ್ನಡನಾಡಿನ ಲಾವಣಿ ಸಾಂಗತ್ಯಗಳು ಪ್ರಬಂಧದಲ್ಲಿ, ತಾವು ಕೇಳಿದ ಪ್ರತಿಯೊಂದು ಹಾಡಿನ ಬಗೆಗೆ ಕೊಡುವ ಹಿನ್ನೆಲೆಯ ಮಾಹಿತಿಯನ್ನು ಗಮನಿಸಬಹುದು. ಜಾನಪದದ ವೈಜ್ಞಾನಿಕ ಕ್ಷೇತ್ರಕಾರ್ಯದ ಇಂದಿನ ದಿನಗಳಲ್ಲಿಯೂ ಇಂತಹ ಪರಿಪೂರ್ಣತೆ ಕಾಣುವುದು ಕಷ್ಟ.

ಜಾನಪದಕ್ಕೆ ಸಂಬಂಧಿಸಿದಂತೆ ಮಾಸ್ತಿಯವರ ಬರಹಗಳು, ಸಮಾಜದ ಕೆಳವರ್ಗದ ಜನರನ್ನು ಕುರಿತಂತೆ ಮಾಸ್ತಿಯವರಿಗಿದ್ದ ಸಹಜ ಅನುಕಂಪ, ಅವರ ಬದುಕಿನ ರೀತಿ ನೀತಿಗಳ ಬಗ್ಗೆ ಪ್ರಾಮಾಣಿಕವಾದ ಗೌರವ ಮತ್ತು ಕುತೂಹಲ, ರಸಿಕತೆ ಹಾಗೂ ವಿದ್ವತ್ತು ಇವೆಲ್ಲವುಗಳ ಸಮ್ಮಿಳನದ ಫಲ ಎಂದು ಹೇಳಬಹುದು.

ಪ್ರಹ್ಲಾದ ನರೇಗಲ್ಲ

ಡಾ. ಚಕ್ಕೆರೆ ಶಿವಶಂಕರ್

ಧಾರವಾಡದಿಂದ ಪ್ರಕಟವಾಗುತ್ತಿದ್ದ ಜಯ ಕರ್ನಾಟಕ, ಮೈಸೂರಿನಿಂದ ಪ್ರಬುದ್ಧ ಕರ್ನಾಟಕ, ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಗಳು ತಮ್ಮ ಸಾಹಿತ್ಯಕ ಧೋರಣೆಯ ಜತೆಗೆ ಜನಪದ ಸಾಹಿತ್ಯ ಸಂಬಂಧ ಲೇಖನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಕಟಿಸುವುದರ ಮುಖಾಂತರ ಜಾನಪದದ ಕಡೆಗೆ ಅಸಂಖ್ಯಾತ ತರುಣ ಪದವೀಧರರು ಮತ್ತು ವಿದ್ಯಾವಂತರನ್ನು ಆಕರ್ಷಿಸಿದವು. ಜಾನಪದ ಸಂಗ್ರಹ-ಅಧ್ಯಯನಕ್ಕೆ ಹೆಚ್ಚು ಹೆಚ್ಚಾಗಿ ಪ್ರೇರೇಪಿಸಿದವು, ಪ್ರಚೋದಿಸಿದವು. ಈ ದಿಸೆಯಲ್ಲಿ ಆಲೂರು ವೆಂಕಟರಾಯರ ಸಂಪಾದಕತ್ವದಲ್ಲಿ ಬರುತ್ತಿದ್ದ 'ಜಯಕರ್ನಾಟಕ' ಮಾಸ ಪತ್ರಿಕೆಯಲ್ಲಿ 1928ರಲ್ಲಿ ಮೊತ್ತ ಮೊದಲ ಬಾರಿಗೆ 'ತ್ರಿಪದಿ' ಎಂಬ ಲೇಖನವನ್ನು ಪ್ರಹ್ಲಾದ ನರೇಗಲ್ಲ ಎಂಬುವರು ಪ್ರಕಟಿಸಿದರು. 'ಕನ್ನಡ ಜನಪದ ಗೀತ ಗಾಯತ್ರಿ' ಎಂದು ಹೆಸರಾದ ತ್ರಿಪದಿಯನ್ನು ಕುರಿತಾದ ಪ್ರಥಮ ಲೇಖನವಿದು. ತ್ರಿಪದಿ ಛಂದಸ್ಸಿನ ಬಗ್ಗೆ ವಿಸ್ತಾರವಾದ ಪೀಠಿಕೆಯನ್ನು ಒದಗಿಸಿರುವ ನರೇಗಲ್ಲರು ಉದ್ಧರಿಸಿರುವ ನಾಲ್ಕು ಗೀತೆಗಳು ಅಚ್ಚ ಕನ್ನಡ ಜನಪದ ಗೀತೆಗಳು. ''ನನಗೆ ಬೀಸುವ ಹಾಡುಗಳು ತ್ರಿಪದಿಗಳೆಂದು ತಿಳಿದ ದಿವಸವೇ ನನ್ನ ಮಗುವನ್ನು ತೊಟ್ಟಿಲಲ್ಲಿಟ್ಟು ತೂಗುವಾಗ, ನನ್ನ ತಾಯಿ ಹಾಡಿದ ಲಾಲಿ ಪದಗಳು ಕಿವಿಗೆ ಬಿದ್ದವು'' ಎಂದು ಉತ್ಸಾಹದಿಂದ ಹೇಳಿಕೊಂಡಿರುವ ನರೇಗಲ್ಲರು ಲೇಖನದಲ್ಲಿ ತ್ರಿಪದಿಗಳನ್ನು ಕುರಿತು ಸೊಗಸಾಗಿ ವ್ಯಾಖ್ಯಾನಿಸಿದ್ದಾರೆ. ಹೆಂಗಸರು ಮತ್ತು ಗಂಡಸರು ಹಾಡುವ ಜನಪದ ಗೀತೆಗಳು ತ್ರಿಪದಿಗಳೇ ಆಗಿದ್ದು, ಹಾಡುವ ಧಾಟಿಯಲ್ಲಿ ಮಾತ್ರ ವಿವಿಧತೆ ಮತ್ತು ರೂಪಾಂತರಶೀಲತೆ ಇರುವುದನ್ನು ಗುರುತಿಸಿರುವ ನರೇಗಲ್ಲರು ಓದುವಾಗ ಮೂರು ಸಾಲುಗಳುಳ್ಳ ತ್ರಿಪದಿಯು, ಹಾಡುವಾಗ ಎರಡನೆಯ ಪಾದವನ್ನು ಪುನರುಚ್ಚರಿಸಿರುವುದರಿಂದ ಹಾಡುಗಾರಿಕೆಗೆ ವಿನೂತನ ವೈಶಿಷ್ಟ್ಯ ಕೂಡಿ ಬರುತ್ತದೆಂದು ಪ್ರಸ್ತಾಪಿಸಿರುವುದು ಗಮನಾರ್ಹವಾಗಿದೆ. ಸಾಂಗತ್ಯವು ತ್ರಿಪದಿಯ ವಿಸ್ತರಣೆಯೇ ಹೌದು ಎನ್ನುವ ನರೇಗಲ್ಲರ ಅಭಿಪ್ರಾಯ ಸಮರ್ಥನೀಯವಾದುದಾಗಿದೆ.

ಬೆಟಗೇರಿ ಕೃಷ್ಣಶರ್ಮ

ಡಾ|| ಪಿ.ಕೆ. ನಾವಲಗಿ

ಬೆಟಗೇರಿ ಕೃಷ್ಣಶರ್ಮರ ಜನಪದ ಸಾಹಿತ್ಯ ಸೇವೆಯನ್ನು ಎರಡು ನೆಲೆಗಳಲ್ಲಿ ಗುರುತಿಸಿಕೊಂಡು ಅಧ್ಯಯನ ಮಾಡಬಹುದೆಂದು ತೋರುತ್ತದೆ. ಒಂದು, ಕೃಷ್ಣಶರ್ಮರ ಜನಪದ ಸಾಹಿತ್ಯದ ಪ್ರಚಾರ-ಪ್ರಸಾರ-ಸಂಗ್ರಹ-ಸಂಪಾದನೆ ಮತ್ತು ಸಂಶೋಧನೆ. ಇದನ್ನು ಶುದ್ಧ ಜಾನಪದ ಸೇವೆ ಎನ್ನಬಹುದು. ಎರಡು, ಕೃಷ್ಣಶರ್ಮರ ಸೃಷ್ಟಿಶೀಲ ಸಾಹಿತ್ಯಕೃತಿಗಳ ಮೂಲಕ ಜನಪದ ಸಾಹಿತ್ಯದ ಪುನರುಜ್ಜೀವನ. ಈ ಎರಡೂ ನೆಲೆಗಳ ಜನಪದ ಸಾಹಿತ್ಯದ ವಿಶ್ಲೇಷಣೆಗೆ ತೊಡಗುವ ಮುನ್ನ, ಬೆಟಗೇರಿ ಕೃಷ್ಣಶರ್ಮರ ಮೇಲಾದ ಜಾನಪದದ ಸಂಸ್ಕಾರ ಕುರಿತು ಅರಿತುಕೊಳ್ಳುವುದು ವಿಹಿತವಾದುದು. ಏಕೆಂದರೆ, ಬೆಟಗೇರಿಯವರ ಮೇಲಾದ ದಟ್ಟವಾದ ಜಾನಪದ ಸಂಸ್ಕಾರದ ಫಲಿತವೇ ಅವರ ಜನಪದ ಸಾಹಿತ್ಯ ಸೇವೆ ಅಥವಾ ಜನಪದ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆ.

ಗೋಕಾಕ ತಾಲ್ಲೂಕಿನ ಬೆಟಗೇರಿ ಗ್ರಾಮದಲ್ಲಿ 1900, ಏಪ್ರಿಲ್ 16 ರಂದು ಜನಿಸಿದ ಬೆಟಗೇರಿ ಕೃಷ್ಣಶರ್ಮರು 'ಆನಂದಕಂದ'ರೆಂಬ ಕಾವ್ಯನಾಮದಿಂದ ಕನ್ನಡ ಸಾರಸ್ವತ ಲೋಕದಲ್ಲಿ ಪ್ರಸಿದ್ಧರಾದ ಹಿರಿಯ ಚೇತನ.

ಬೆಟಗೇರಿಯವರ ತಾಯಿ ದಿನನಿತ್ಯ ಹೇಳುವ ಗೋಕಾವಿಯ ಅನಂತಾದ್ರೀಶರ ವೆಂಕಟೇಶ ಪಾರಿಜಾತ, ಶಿವಪಾರಿಜಾತದ ಗೀತೆಗಳು, ಜೋಗುಳ ಹಾಡುಗಳು; ಹಳ್ಳಿಯ ಮುದುಕಿ ಮಲ್ಲವ್ವನ ಮಾತುಗಾರಿಕೆ, ಗಾದೆಮಾತುಗಳು, ಕುರುಬರ ಮುದುಕಿ ಕೆಂಚವ್ವನ ಆಡು ಮಾತುಗಳು; ಕೃಷ್ಣ ಪಾರಿಜಾತ, ರಾಧಾಕೃಷ್ಣ ರೂಪಸಿಂಗ, ಸಂಗ್ಯಾಬಾಳ್ಯಾ ಮೊದಲಾದ ಬಯಲಾಟದ ಪದಗಳಿಂದ ಕೃಷ್ಣಶರ್ಮರು ಬಹಳ ಪ್ರಭಾವಿತರಾದರು. ಹಳ್ಳಿಯ ಬಯಲಾಟಗಳ ಸೊಗಡಿಗೆ ಮಾರುಹೋದರು. ಬಯಲಾಟ ಹಿಮ್ಮೇಳದಲ್ಲಿ ಸೇರಿಕೊಂಡರು. ಬಯಲಾಟದ ಹಾಡುಗಳನ್ನು ಹಾಡತೊಡಗಿದರು. ಎಳವೆಯಲ್ಲಿಯೇ ಕೃಷ್ಣಶರ್ಮರು ತುಂಬ ಚುರುಕುಬುದ್ಧಿಯವರಾದುದರಿಂದ ಪಾತ್ರಧಾರಿಗಳ ಮಾತು ತಿದ್ದಿದರು; ಹಾಡುಗಳನ್ನು ತಿದ್ದಿ ಸರಿ ಮಾಡಿದರು. ಕೆಲವು ಬಯಲಾಟ ಕಥೆಗಳನ್ನು ಅಲ್ಲಲ್ಲಿ ತಿದ್ದಿದರು. ಸುಮಾರು 18 ವರುಷಗಳವರೆಗೆ ತಮ್ಮ ತಾಯಿ ರಾಧಾಬಾಯಿ ಅವರಿಂದ ಮತ್ತು ಜಾನಪದ ಲೋಕದಿಂದ ಜನಪದ ಸಾಹಿತ್ಯ ಸಂಸ್ಕಾರ ಪಡೆದರು. ''ನನ್ನ ಚಿಕ್ಕತನದ

ಹಳ್ಳಿಯ ಜೀವನವೇ ನನ್ನನ್ನು ಜಾನಪದ ಸಾಹಿತ್ಯ ಸಿರಿಯ ಕಡೆಗೆ ಒಲಿಸಿತು'' ಎಂದು ಅವರೇ ಹೇಳಿಕೊಂಡಿದ್ದಾರೆ. ಜನಪದ ಸಾಹಿತ್ಯ ಇವರ ಬಾಲ್ಯ ಜೀವನದಲ್ಲಿ ಸಹಜವಾಗಿ ಒದಗಿಬಂದ ಸಂಸ್ಕಾರ. ಅವರೇ ಹೇಳಿಕೊಂಡಂತೆ: ''ಬಾಲ್ಯದಲ್ಲಿ ಜಾನಪದ ಸಾಹಿತ್ಯ ಸಂಗ್ರಹಿಸಿದೆ. ಆದರೆ ಆ ಸಂಗ್ರಹ ಬರೆಹದಲ್ಲಿಲ್ಲ. ಮಸ್ತಕದಲ್ಲಿ ಮಾತ್ರ ನೆಲೆ ನಿಂತಿದೆ. ಆಗಲೇ ನಾನು ಜಾನಪದ ಸಾಹಿತ್ಯ ಸಂಗ್ರಹಕಾರ್ಯವನ್ನು ಬರೆವಣಿಗೆಯಲ್ಲಿ ಕೈಕೊಂಡಿದ್ದರೆ ಎಂಥ ಅದ್ಭುತವಾದ ಕೆಲಸವಾಗಿರುತ್ತಿತ್ತು ಎಂದು ಈಗ ಪರಿತಪಿಸುವಂತಾಗುತ್ತಿದೆ'' ಜನಪದ ಸಾಹಿತ್ಯ ಬೆಟಗೇರಿ ಅವರಿಗೆ ಅತ್ಯಂತ ಪ್ರಿಯವಾದುದು, ಆಪ್ತವಾದುದು ಮತ್ತು ಆತ್ಮೀಯವಾದುದು.

ಜನಪದ ಹಳ್ಳಿಗಳಿಂದ ಮಾಯವಾಗಬಹುದು, ನಶಿಸಬಹುದು ಎಂದು ಆಗಲೇ ಅರಿತ ಕೃಷ್ಣಶರ್ಮರು, ಸಾಧ್ಯವಿರುವಷ್ಟನ್ನಾದರೂ ಉಳಿಸಬೇಕೆಂಬ ಕಳಕಳಿಯಿಂದ ಜನಪದ ಸಾಹಿತ್ಯ ಸಂಗ್ರಹಕ್ಕೆ ತೊಡಗಿದರು. ಸಂಗ್ರಹ ಎಂದರೆ ಅವರೇ ಹೇಳಿದಂತೆ ತಮ್ಮ ಮಸ್ತಿಷ್ಕದಲ್ಲಿ ತುಂಬಿಕೊಳ್ಳತೊಡಗಿದರು. ಇವರಿಗೆ ಅಗಾಧವಾದ ನೆನಪಿನ ಶಕ್ತಿಯಿತ್ತು. ನೆನಪಿನಲ್ಲಿಟ್ಟುಕೊಂಡು ಜನಪದ ಸಾಹಿತ್ಯವನ್ನು ಸಮಯ ಸಂದರ್ಭ ಬಂದಾಗ ನಿರರ್ಗಳವಾಗಿ ಮತ್ತು ಅಷ್ಟೇ ಮಾರ್ಮಿಕವಾಗಿ ಹೇಳುತ್ತಿದ್ದರು. ಜನ ತಲೆದೂಗುತ್ತಿದ್ದರು. ಜನಪದದ ವಿವಿಧ ಧಾಟಿ, ಲಯಗಳಲ್ಲಿ ಜನಪದ ಹಾಡುಗಳನ್ನು ಹಾಡಿ ಜನರನ್ನು ರಂಜಿಸುತ್ತಿದ್ದರು. 1922ರಷ್ಟು ಹಿಂದೆಯೇ ಈ ಬಗೆಯ ಜನಪದ ಸಂಗ್ರಹ-ಪ್ರಚಾರ-ಪ್ರಸಾರ ಕಾರ್ಯವನ್ನು ಉತ್ತರ ಕರ್ನಾಟಕದಲ್ಲಿ ಬೆಟಗೇರಿ ಅವರು ಸುರು ಮಾಡಿದರು. ಯಾವುದೇ ಸಭೆ ಸಮಾರಂಭ-ವಿಚಾರ ಸಂಕಿರಣಗಳಿಗೆ ಹೋದ ಸಂದರ್ಭಗಳಲ್ಲೆಲ್ಲ, ಗ್ರಾಮೀಣ ಬದುಕು-ಸಂಸ್ಕೃತಿ-ಸಾಹಿತ್ಯಗಳಿಂದ ವಿಷಯ ಸಂಗ್ರಹಿಸತೊಡಗಿದರು, ಗ್ರಹಿಸತೊಡಗಿದರು. ಗ್ರಹಿಸಿದುದನ್ನು ಬಿಡಿಸಿ ಬಿಡಿಸಿ ಗ್ರಾಮೀಣರಿಗೇ ಮತ್ತೆ ಹೇಳಿ, ಆ ಸಾಹಿತ್ಯದಲ್ಲಿ ಅವರಿಗೆ ಅಭಿರುಚಿ, ಪ್ರೀತಿ-ವಿಶ್ವಾಸ ಹುಟ್ಟುವಂತೆ ಮಾಡತೊಡಗಿದರು. ಹಳ್ಳಿಗಳಿಗೆ ಹೋದಾಗಲೆಲ್ಲ, ಅಲ್ಲಿಯ ಐತಿಹ್ಯ, ವಿಶಿಷ್ಟ ಹಬ್ಬ- ಆಚರಣೆ, ಕಥನ ಗೀತಗಳು, ದಂತಕಥೆಗಳು, ಗಾದೆಮಾತು, ನುಡಿಗಟ್ಟು, ಒಗಟು, ಒಡಪು, ದೇಶೀ ಪದಗಳು ಮುಂತಾದುವನ್ನು ಹಳ್ಳಿಗರಿಂದ ಕೇಳಿ ತಿಳಿದು ನೆನಪಿನಲ್ಲಿಟ್ಟುಕೊಳ್ಳುತ್ತಿದ್ದರು. ಹಳೆಯ ದೇವಾಲಯ, ಶಿಲ್ಪ ಅವುಗಳ ಹಿಂದಿರುವ ಐತಿಹಾಸಿಕ ಸಾಂಸ್ಕೃತಿಕ ಸತ್ಯಗಳನ್ನು ಶೋಧಿಸುತ್ತಿದ್ದರು. ಗ್ರಾಮನಾಮಗಳ ಬಗೆಗೂ ವಿಶೇಷ ಆಸಕ್ತಿ ಮತ್ತು ಕುತೂಹಲ ಹೊಂದಿದ್ದರು. ಗ್ರಾಮನಾಮಗಳ ನಿರುಕ್ತವನ್ನು ದೇಸಿಯಲ್ಲಿಯೇ ಗುರುತಿಸಬೇಕೆನ್ನುವ ಬಲವಾದ ಇಚ್ಛೆಯುಳ್ಳವರು, ಅಷ್ಟೇ ಅಲ್ಲ ಆ ನೆಲೆಯಲ್ಲಿಯೇ ಶೋಧಿಸಿ ತೋರಿಸಬಲ್ಲವರಾಗಿದ್ದರು. 'ಮಾವಿನಕೊಪ್ಪ' ಎನ್ನುವ ಹಳ್ಳಿಯ ಹೆಸರಿನ ವ್ಯುತ್ಪತ್ತಿಯನ್ನು ಕೃಷ್ಣಶರ್ಮರ ಗುರುಗಳು ಸಂಸ್ಕೃತಾಭಿಮಾನಿ ಕಾವ್ಯಾನಂದರು (ಪುಣೇಕರರು)'' ಮಾರ್ಗಣ ಕೂಪ'ವೇ 'ಮಾವಿನಕೊಪ್ಪ' ಎಂದಾಗಿದೆ ಮತ್ತು ಎಲ್ಲ ಗ್ರಾಮಗಳ ಹೆಸರುಗಳು ಮೂಲದಲ್ಲಿ ಸಂಸ್ಕೃತ ಭಾಷೆಯವೇ ಆಗಿವೆ. ಅವುಗಳ ಈಗಿನ ರೂಪಗಳು ಅಪಭ್ರಂಶ ಮಾತ್ರ ಎಂದು ಹೇಳಿದುದು ಕೃಷ್ಣಶರ್ಮರಿಗೆ ವಿಚಿತ್ರವಾಗಿ ತೋರುತ್ತದೆ. ಕನ್ನಡಿಗರ ಪ್ರದೇಶವಾಗಿದ್ದು, ಕನ್ನಡ ಭಾಷೆಯ ಸಾಮಾನ್ಯ ಜನರಿಂದಲೇ ನಿರ್ಮಿತವಾದ ಈ ಹಳ್ಳಿಗೆ

ಮೂಲದಲ್ಲಿ ಸಂಸ್ಕೃತ ಹೆಸರು ಏಕಿರಬೇಕು? ನಮ್ಮ ಸಾಮಾನ್ಯ ಜನರು ಸಂಸ್ಕೃತವನ್ನು ಬಲ್ಲವರಾಗಿದ್ದರೆ? ಇಲ್ಲವೆಂದ ಮೇಲೆ ಅವರು ತಮ್ಮ ಹಳ್ಳಿಗೆ ಕನ್ನಡದಲ್ಲಿಯೇ ಹೆಸರನ್ನು ಇರಿಸಿರಬೇಕು. ಮಾವಿನಕೊಪ್ಪ (ಮಾವಿನ+ಕೊಪ್ಪ) ಎಂಬುದು ಶುದ್ಧ ಕನ್ನಡದ ಹೆಸರು. ಮಾವಿನಗಿಡವುಳ್ಳ ಕೊಪ್ಪ ಎಂದು ಕನ್ನಡದ ಹೆಸರು ಇರಿಸಬಹುದಲ್ಲದೆ, ನಮ್ಮ ನಾಡಿಗೆ ಅಪರಿಚಿತವಾದ ಸಂಸ್ಕೃತದಲ್ಲಿ ಹೇಗೆ ಇಡತಾರೆ? 'ಕೊಪ್ಪ' ಎಂದರೆ ಬೆಳೆದ ಗ್ರಾಮ ಎಂದು ಕಿಟ್ಟೆಲ್ ನಿಘಂಟಿನಲ್ಲಿದೆ ಎಂದು ಬೆಟಗೇರಿ ಅವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದರು. ಹೀಗೆ, ಯಾವುದೇ ಗ್ರಾಮನಾಮದ ಮೂಲವನ್ನು ದೇಸಿಯಲ್ಲಿಯೇ ಶೋಧಿಸಬೇಕೆನ್ನುವುದು ಕೃಷ್ಣಶರ್ಮರ ದೇಸೀ ನಿಷ್ಠತೆ, ಅಭಿಮಾನ. ಇಂದಿನ ಹಿಂಡಲಗಾ ಮೊದಲು ಹಿಂಡಲಗಿ/ಹಿಂಡಲಗೆ ಎಂಬ ಅಚ್ಚಗನ್ನಡ ಶಬ್ದ. ಹಿಂಡಲ ಎಂದರೆ ಬಿದಿರುಮೆಳೆ. ಶಹಪುರ, ವಡಗಾಂವಿ, ಆನಗೊಳ (ಆನಗೋಳ-ಮರಾಠಿ ಪ್ರಭಾವ), ಕರಡಿಗುದ್ದಿ, ಮಾರೀಹಾಳ, ಸೂಳೆಬಾಂವಿ ಮುಂತಾದುವು ಶುದ್ಧ ಕನ್ನಡದ ಹಳ್ಳಿ ಹೆಸರುಗಳೆಂದು ಖಚಿತಪಡಿಸುತ್ತಾರೆ.

ತಮ್ಮ ಕಾಲದಲ್ಲಿ ಹಳ್ಳಿಗರಲ್ಲಿ ಚಲಾವಣೆಯಲ್ಲಿರುವ ಕೆಲವಾರು ಪದಗಳನ್ನು ಅವರು ಸಂಗ್ರಹಿಸಿದ್ದಾರೆ. ಕೆಲವನ್ನು ನೋಡಬಹುದು. ಭೋಕ್ರಾ ಪುರುಷರು (ಭೋಗಜೀವಿಗಳು) ಅಂಚೆವಾಸೆ (ಕೇರ್‌ಆಫ್) ಮುಟ್ಟಲು ಮುರುಕು (ಮುಟ್ಟಿದರೆ ಮುನಿ/ಸಂಕೋಚ) ದಮೆ (ಬೆಲ್ಲದ ಪೆಂಟಿ ಮಾಡಲು ಉಪಯೋಗಿಸುವ ಬಕೆಟ್ಟಿನಂಥ ಪಾತ್ರೆ) ಬಣಜಿಗನವರು (ವ್ಯಾಪಾರ ವರ್ಗದವರು) ತಿಳಿಮಿಟಿಯಾಗಿ (ಅಪ್ಪಕ್ಕಪ್ಪೇ) ಖಾತೇಕಿರ್ದಿ (ಲೆಕ್ಕಪತ್ರ) ಧಡೆ (ಹತ್ತುಸೇರು) ಪೀಕ್‌ಪಹಣಿ (ಬೆಳೆಯ ಅಂದಾಜು) ಪೋಲಕಾ (ಪರಕಾರ) ದೇಖರೇಕಿ(ಮೇಲ್ವಿಚಾರಣೆ), ಪೈರಣ (ಅಂಗಿ) ಯಾಸ (ವೇಷ), ಕಣಿಹಲಗೆ (ವಾದ್ಯ) ಇತ್ಯಾದಿ ಇವು ಹಳ್ಳಿಗರಲ್ಲಿ ಈಗಲೂ ರೂಢಿಯಲ್ಲಿವೆ.

ಪಡೆನುಡಿಗಳನ್ನು ಸಂಗ್ರಹಿಸುತ್ತಾರೆ; ಅವುಗಳ ಮಹತ್ವವನ್ನು ತಿಳಿಸುತ್ತಾರೆ. ಹಾಗು ಪ್ರತಿಯೊಂದು ಪಡೆನುಡಿಯ ಹಿಂದೆ ಏನಾದರೊಂದು ಕಥೆ, ಇತಿಹಾಸ ಅಡಗಿರುತ್ತದೆಂದು ನಂಬಿ ಅದನ್ನು ಶೋಧಿಸಲು ಕೃಷ್ಣಶರ್ಮರು ತೊಡಗಿದ್ದುದುಂಟು. ಸಹಸ್ರಾರು ಪಡೆನುಡಿಗಳು ಹಳ್ಳಿಗರ ನಾಲಗೆಯ ಮೇಲಿವೆ: ಅವನ್ನು ಸಂಗ್ರಹಿಸಿ ಜನಪದ ಸಾಹಿತ್ಯ ಭಂಡಾರವನ್ನು ವೃದ್ಧಿಗೊಳಿಸಬೇಕೆಂದು ಕಳಕಳಿಯುನ್ನಿತ್ತಿದ್ದಾರೆ. ಮೌಖಿಕ ಸಂಪ್ರದಾಯ (Oral Tradition)ದಲ್ಲಿರುವ ನಾಣ್ನುಡಿ, ಒಗಟು, ಒಡಪು, ಒಡಬು, ಶಿಶುಪ್ರಾಸ, ಹಾಸ್ಯಪೂರಿತ ಬಯಲಾಟದ ಪದಗಳು-ಮಾತುಗಳು, ಚತುರೋಕ್ತಿ, ಜೋಡು ಪದಗಳು, ಮಾರುಲಿ ಪದಗಳು, ಬಯ್ಗುಳ ನುಡಿಗಳು-ಮುಂತಾದುವನ್ನು ಹಳ್ಳಿಗರಿಂದ ಸಂಗ್ರಹಿಸಿದರೆ, ಜನಪದ ಭಾಷೆಯ ಸೊಗಡನ್ನು ಅರಿತುಕೊಳ್ಳಬಹುದು ಎಂದಿದ್ದಾರೆ.

ಬೆಟಗೇರಿ ಅವರು ಸಂಸ್ಕೃತಿಪ್ರಿಯರು; ಜಾನಪದದ ಕಟ್ಟಾಭಿಮಾನಿಗಳು. ಗ್ರಾಮೀಣ ಪ್ರದೇಶಗಳಲ್ಲಿರುವ ಗುಡಿಗುಂಡಾರಗಳ ಐತಿಹಾಸಿಕ ಮಹತ್ತ್ವವನ್ನು ಜನತೆಗೆ ತಿಳಿಸಬೇಕೆಂಬ ಲವಲವಿಕೆಯುಳ್ಳವರು.

ಸಂಗೊಳ್ಳಿಯ ಜನತೆಯಿಂದ ನಾಲ್ಕಾರು ಲಾವಣಿಗಳನ್ನು (ರಾಯಣ್ಣನ ಮೇಲಿನ ಲಾವಣಿಗಳು) ಸಂಗ್ರಹಿಸುತ್ತಾರೆ. ಚೆನ್ನಮ್ಮನ ನಂತರ ಕಿತ್ತೂರ ನಾಡ ಸ್ವತಂತ್ರ್ಯ ರಕ್ಷಣೆಗಾಗಿ ಪ್ರಾಣವನ್ನೇ ಬಲಿಗೊಟ್ಟ ರಾಯಣ್ಣನೆಂದರೆ ಜನರ ಎದೆಯಲ್ಲಿ ಮಿಂಚಿನ ಸಂಚಾರವಾಗುತ್ತದೆ. ಅಂಥ ಶೂರಸೇನಾನಿಯನ್ನು ಲಾವಣಿಗಳ ಮೂಲಕ ಪರಿಚಯಿಸುವುದರೊಂದಿಗೆ, ಕೇಳುಗರ ಮೈನವಿರೇಳುವಂತೆ ಕೃಷ್ಣಶರ್ಮರು ಹಾಡುತ್ತಿದ್ದರು (ಅಂದಿನ ಸಂಗೊಳ್ಳಿ ಮಲಪ್ರಭೆಯಲ್ಲಿ ಮುಳುಗಡೆಯಾಗಿದೆ).

ಬೆಟಗೇರಿ ಅವರು ಬಾಲ್ಯದಲ್ಲಿಯೇ ಹಾಡುಬಲ್ಲವರಾಗಿದ್ದುದರಿಂದ, ಇತರರ ಹಾಡುಗಳನ್ನು, ಲಾವಣಿಗಳನ್ನು, ತ್ರಿಪದಿಗಳನ್ನು ಮೂಲ ಜಾನಪದದ ಧಾಟಿಯಲ್ಲಿ ಹಾಡುತ್ತ, ಜನಪದ ಸಾಹಿತ್ಯದ ಸೌರಭವನ್ನು ಸೂಸುತ್ತಿದ್ದರು. ವಿವರಣೆ ಕೊಡುವುದರ ಮೂಲಕ, ಜನರಿಗೆ ಜನಪದ ಸಾಹಿತ್ಯದ ಮಹತ್ವವನ್ನು ತಿಳಿಸುತ್ತಿದ್ದರು. ಸ್ವತಃ ಹಾಡುಗಳನ್ನು ಬರೆದು ಹಾಡಬಲ್ಲವರೂ ಆಗಿದ್ದರು. ಅಸಹಕಾರದ ಲಾವಣಿಯನ್ನು ಬೆಟಗೇರಿ ಅವರು ಆ ಕಾಲದಲ್ಲಿ ರಚಿಸಿದರು; ಅನೇಕ ಸಲ ಹಾಡಿದರು. ಆ ಲಾವಣಿ 'ಕರ್ನಾಟಕ ಮಿತ್ರ' ಎಂಬ ಬೆಳಗಾವಿಯ ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

ಹೀಗೆ, ಜನಪದ ತ್ರಿಪದಿಗಳನ್ನು, ಲಾವಣಿ-ದುಂದುಮೆಗಳನ್ನು ಹಾಡಿ, ಅವುಗಳ ಅರ್ಥಸ್ವಾರಸ್ಯವನ್ನು ವಿವರಿಸುವುದರ ಮೂಲಕ ಜನಪದ ಸಾಹಿತ್ಯದ ಗಂಧಗಾಳಿಯನ್ನು ಎಲ್ಲೆಡೆ ಹರಡಿದವರು ಬೆಟಗೇರಿ ಕೃಷ್ಣಶರ್ಮರು.

1922ರ ಸುಮಾರಿನಲ್ಲಿ 'ಕೆರೆಗೆ ಹಾರ' ಎಂಬ ಸುಪ್ರಸಿದ್ಧ ಕಥನಗೀತವನ್ನು ಮೊಟ್ಟಮೊದಲು ಸಂಗ್ರಹಿಸಿದವರು ಬೆಟಗೇರಿ ಕೃಷ್ಣಶರ್ಮರು. ಈ ದುರಂತಮಯ ಕಥನಗೀತಕ್ಕೆ 'ಕೆರೆಗೆ ಹಾರ' ಎಂಬ ತಲೆಬರೆಹವನ್ನು ನೀಡಿದವರೂ ಅವರೇ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಬೆಟಗೇರಿಯ ಕಲ್ಲಪ್ಪ ಹೂಗಾರ ಈತನ ಹೆಂಡತಿ ಯಂಕವ್ವ ಕಲ್ಲಪ್ಪ ಹೂಗಾರ ಇವಳಿಂದ ಎರಡು ಮೂರು ಸಲ ಹಾಡಿಸಿ ಶುದ್ಧರೂಪದಲ್ಲಿ 'ಕೆರೆಗೆ ಹಾರ'- ಈ ಕೋಲಾಟದ ಹಾಡನ್ನು ಬೆಟಗೇರಿಯಲ್ಲಿಯೇ ಕಾಗದದಲ್ಲಿ ಸಂಗ್ರಹಿಸಿದರು. 1938ರಲ್ಲಿ 'ಜಯಂತಿ' ಪತ್ರಿಕೆಯಲ್ಲಿ ಪ್ರಸ್ತುತ ಹಾಡು ಪ್ರಕಟವಾಯಿತು. ಆಮೇಲೆ, ಬೆಂಗಳೂರು ಕ.ಸಾ.ಪ. ಪ್ರಕಟಿಸಿದ ದಿ.ಬಿ.ಎಂ.ಶ್ರೀ ಸಂಪಾದಕತ್ವದ 'ಕನ್ನಡ ಬಾವುಟ'ದ ಎರಡನೇ ಮುದ್ರಣ (1940)ದಲ್ಲಿ ಕೆರೆಗೆ ಹಾರ ಮುದ್ರಿತವಾಯಿತು. ಕೃಷ್ಣಶರ್ಮರು ಇದನ್ನು ಸಂಗ್ರಹಿಸಿದರು ಮಾತ್ರವಲ್ಲ, ಭಾವಪೂರ್ಣವಾಗಿ ಹೋದಲ್ಲೆಲ್ಲ ಹಾಡಿ, ಅದರ ಸೊಗಸು-ಸೌಂದರ್ಯವನ್ನು ವಿವರಿಸುತ್ತ, ಅದರಲ್ಲಿ ಅಂತರ್ಗತವಾದ ಜನಪದ ಸಂಸ್ಕೃತಿ-ಜನಪದರ ಜೀವನ ಮೌಲ್ಯಗಳನ್ನು ವಿಶ್ಲೇಷಿಸುತ್ತ 'ಕೆರೆಗೆ ಹಾರ' ಕನ್ನಡಿಗರ ಮನದಾಳದಲ್ಲಿ ಅಚ್ಚೊತ್ತುವಂತೆ ಮಾಡಿದ ಕೀರ್ತಿವಂತರು. ''ಈ ಹಾಡು ನನಗೆ ಜನಪದ ಶೈಲಿಯನ್ನು ಕಲಿಸಿತೆಂದು'' ಬೆಟಗೇರಿ ಅವರು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾರೆ. 'ಕೆರೆಗೆ ಹಾರ' ನಂತರ ಜಾನಪದ ಸಂಗ್ರಹ ಕಾರ್ಯದ ಹೆಚ್ಚಿನ ಮಹತ್ವ ನನಗೆ ತಿಳಿಯಿತಾದರೂ ಸಂಗ್ರಹಿಸಲಿಲ್ಲ, ಬರೆದಿಡಲಿಲ್ಲವೆಂದು ಕೃಷ್ಣಶರ್ಮರು ತುಂಬ ವ್ಯಥೆ ಪಟ್ಟುದುಂಟು.

1929ರಲ್ಲಿ ಬೆಳಗಾವಿಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಂಡು ಬೆಟಗೇರಿ ಅವರು ತಮ್ಮ ಮಸ್ತಿಷ್ಕದಲ್ಲಿ ಸಂಗ್ರಹಿಸಿದ್ದ ಜನಪದ ತ್ರಿಪದಿಗಳನ್ನು ಲಯಬದ್ಧವಾಗಿ ಹಾಡಿದರು. ಒಂದೇ ತ್ರಿಪದಿಯನ್ನು ಜನಪದದ ವಿವಿಧ ಧಾಟಿಗಳಲ್ಲಿ ಹೇಳಿದರು. ಹೆಣ್ಣು ಮಕ್ಕಳು ಹುಟ್ಟುವಾಗ, ಬೀಸುವಾಗ, ಲಾಲಿ ಹೇಳುವಾಗಿನ 'ಗರತಿ ಹಾಡು'ಗಳ ಸಿರಿಸೊಬಗು ಮತ್ತು ಅವುಗಳ ಅರ್ಥದ ಸಾರವನ್ನು ಸಂಗ್ರಹರೂಪದಲ್ಲಿ ಜನತೆಯ ಮುಂದೆ ಬಿಡಿಸಿ ಇಟ್ಟರು.

''ಬೆಟಗೇರಿ ಅವರು ಪರಿಷತ್ ಪತ್ರಿಕೆಯಲ್ಲಿ 'ಹಳ್ಳಿಗರ ಹಾಡುಗಳು' ಎಂಬ ಸೋದಾಹರಣವಾದ ನಿತಾಂತ ಮನೋಹರವಾದ ನಿಬಂಧವೊಂದನ್ನು ಬರೆದು ಜನಪದ ಸಾಹಿತ್ಯ ಸಂಗ್ರಹದ ಕಾರ್ಯವನ್ನು ಎತ್ತಿಹಿಡಿದರೆಂದು'' ಬೇಂದ್ರೆ ಅವರು ಗರತಿಹಾಡಿನ ಪರಿಚಯ ಭಾಗದಲ್ಲಿ ಉಲ್ಲೇಖಿಸಿದ್ದು ಗಮನಾರ್ಹ.

'ಹಳ್ಳಿಯ ಹಾಡುಗಳು' ಕುರಿತ ನಿಬಂಧದಲ್ಲಿ ಜನಪದ ತ್ರಿಪದಿಗಳಲ್ಲಿಯ ಕಾವ್ಯ ಸೌಂದರ್ಯ, ಭಾಷೆಯ ಬೆಡಗು ಮುಂತಾದುವನ್ನು ಕುರಿತು ತುಂಬ ಸೊಗಸಾಗಿ ಬರೆದಿದ್ದಾರೆ. 'ನಡೆದರ ನಡುಸಣ್ಣ ಪದುಮಜಾತಿಯ ಹೆಣ್ಣ/ ಮಾವಿನ ಹೋಳ ನಿನ ಕಣ್ಣ/ ಕಂದಮ್ಮ/ ಮಾವ ಬಂದಿಹನು ಒಳಗ್ಹೋಗ// ಇವೇ ಮುಂತಾದ 'ಗರತಿ ಹಾಡು' ಮೊದಲ್ಗೊಂಡು' ಬಡತನವು ಬಂದಾಗ ಬಡಿಬ್ಯಾಡ ಮಕ್ಕಳನು'-'ಬಂಜೆ ಬಾಗಿಲ ಮುಂದೆ ಅಂಜೂರಿ ಗಿಡಹುಟ್ಟಿ'-'ಬೇಸಿಗಿ ದಿವಸಕ್ಕ ಬೇವಿನ ಮರ ತಂಪ'-'ಕಪ್ಪು ಹೆಂಡತಿಯೆಂದು ಕಿರಿಕಿರಿ ಮಾಡಬ್ಯಾಡ'-'ಕೆಂಪು ಹೆಂಡತಿಯೆಂದು ಸಂತಸಪಡಬ್ಯಾಡ'- ಇವೇ ಮುಂತಾದ ಹಾಡುಗಳನ್ನು ಆಯ್ದುಕೊಂಡು ಬಣ್ಣಿಸುತ್ತಾರೆ. ಇವೆಲ್ಲ ತ್ರಿಪದಿಗಳು ಮುಂದೆ ಹಲಸಂಗಿ ಗೆಳೆಯರಿಂದ ಪ್ರಕಟಗೊಂಡ 'ಗರತಿಯ ಹಾಡು' ಸಂಗ್ರಹದಲ್ಲಿಯೂ ಪ್ರಾದೇಶಿಕ ಭಿನ್ನತೆಗಳೊಂದಿಗೆ ಪ್ರಕಟವಾಗಿವೆ.

'ಜನಪದ ಸಾಹಿತ್ಯ' ಎಂಬ ಪದವನ್ನು ಮೊತ್ತಮೊದಲು ಧಾರವಾಡದಲ್ಲಿ ಪ್ರಕಟವಾಗುತ್ತಿದ್ದ 'ಜಯ ಕರ್ನಾಟಕ' ಮಾಸಪತ್ರಿಕೆ ಬಳಕೆಗೆ ತಂದಿತೆಂದು ಬೆಟಗೇರಿ ಕೃಷ್ಣಶರ್ಮರು ಹೇಳುತ್ತಾರೆ. ಮುಂದೆ 1950ರ ದಶಕದಲ್ಲಿ 'ಜಯಂತಿ' ಪತ್ರಿಕೆಯಲ್ಲಿ ಜನಪದ ಸಾಹಿತ್ಯದ ಅಳಿವು-ಉಳಿವು, ನಮ್ಮ ಹಬ್ಬ ಹುಣ್ಣಿಮೆಗಳು, ಜಾನಪದ ಐತಿಹಾಸಿಕ ಕಥೆಗಳು, ನಮ್ಮ ಜಾನಪದ ನಾಟ್ಯಭೂಮಿ, ಗೊಂಬೆಯಾಟ, ಮೂಡಲಪಾಯ ಯಕ್ಷಗಾನ ಬಯಲಾಟ, ಸೂತ್ರದ ಗೊಂಬೆಯಾಟ, ಜನಪದ ನಾಟ್ಯಗೀತೆಗಳು, ಜನಪದ ಗೀತೆಗಳ ಛಂದಸ್ಸು, ಹಿಂದಿನ ಕಾಲದ ಹಳ್ಳಿಗಳು, ಕನ್ನಡ ಒಗಟುಗಳು, ಕನ್ನಡ ವಿನೋದ ವಿಲಾಸ, ಇವೇ ಮೊದಲಾದ ಮೌಲಿಕ ಲೇಖನಗಳನ್ನು ಬೆಟಗೇರಿ ಅವರು ಬರೆದರು. 'ಹೋಳಿಪದಗಳು'-'ಸೋಗುಗಳು'- ಕುರಿತೂ ಪ್ರಬಂಧಗಳನ್ನು 'ಜಯಕರ್ನಾಟಕ'ದಲ್ಲಿ ಬರೆದರು.

ಹರಪನಹಳ್ಳಿ ಜಾನಪದ ಸಮ್ಮೇಳನ (1950) ನಾಗಮಂಗಲ ಜಾನಪದ ಸಮ್ಮೇಳನ (1971) ಗಳಲ್ಲದೆ, ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ಗೋಕಾಕ, ವಿಜಾಪುರಗಳಲ್ಲಿ ಬೆಟಗೇರಿ ಅವರು ಮಾಡಿದ ಭಾಷಣಗಳು ಈಗಾಗಲೇ 'ಜಯಂತಿ'-'ಜಯಕರ್ನಾಟಕ' ಮುಂತಾದ ಪತ್ರಿಕೆಗಳಲ್ಲಿ ಬರೆದ ಜಾನಪದ ಪ್ರಬಂಧಗಳ ಸಾರರೂಪವೇ ಎಂಬುದನ್ನು ಲಕ್ಷಿಸಬೇಕು. ತಮ್ಮ ಗೃಹಿಂಕೆಗೆ

ಬಂದ ಜಾನಪದವನ್ನೆಲ್ಲ ಸಭೆ-ಸಮಾರಂಭ-ಸಮಾವೇಶ-ಸಮ್ಮೇಲನಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಕೆಲವಷ್ಟನ್ನು ಮಾತ್ರ ಪತ್ರಿಕೆಗಳಲ್ಲಿ ಲೇಖನಗಳ ಮೂಲಕ ಹಿಡಿದಿಟ್ಟಿದ್ದಾರೆ. ಬೆಟಗೇರಿ ಅವರು ಜಾನಪದ ಕುರಿತು ಬೆಟ್ಟದಷ್ಟು ಮಾತನಾಡಿದ್ದಾರೆ. ಆದರೆ ಅದೆಲ್ಲ ಗಾಳಿಯಲ್ಲಿ ತೂರಿಹೋಗಿದೆ. 1938 ರಲ್ಲಿ ಹುಟ್ಟಿಕೊಂಡ ಜಯಂತಿಯನ್ನು 1961ರವರೆಗೆ ಮುನ್ನಡೆಸಿಕೊಂಡು ಬರುತ್ತಾರೆ. ಜನಪದ ಸಾಹಿತ್ಯಕ್ಕೆ ಸಂಬಂಧಪಟ್ಟ ಕೆಲವಾರು ಲೇಖನಗಳನ್ನು, ಸಂಪಾದಕೀಯಗಳನ್ನು ಪ್ರಕಟಿಸುವುದರ ಮೂಲಕ ಜನಪದ ಸಾಹಿತ್ಯದ ಅಭಿರುಚಿಯನ್ನು ಓದುಗರಲ್ಲಿ ಈ ಪತ್ರಿಕೆ ಉಂಟುಮಾಡಿತು. ಮಾತ್ರವಲ್ಲ, ಜಾನಪದ ಕ್ಷೇತ್ರದಲ್ಲಿ ದುಡಿಯುವಂತೆ ಹಲವರಿಗೆ ಪ್ರೇರಣೆ ನೀಡಿತು. ಅನೇಕ ಜನಪದ ಸಂಗ್ರಾಹಕರು ಹುಟ್ಟಿಕೊಂಡರು. ಬಿ.ಎಸ್.ಗದ್ದಗಿಮಠ, ಮತಿಘಟ್ಟ ಕೃಷ್ಣಮೂರ್ತಿ, ಎಲ್.ಆರ್.ಹೆಗಡೆ, ಎನ್.ಆರ್.ನಾಯಕ್, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ ಮುಂತಾದವರು ಜನಪದ ಸಂಗ್ರಹಣೆಯಲ್ಲಿ ತೊಡಗಿದರು. ಇಂಥವರ ಜಾನಪದ ಸಂಗ್ರಹಗಳಿಗೆ ಸಂಶೋಧನ ಗ್ರಂಥಗಳಿಗೆ ವಿದ್ವತ್ಪೂರ್ಣವಾದ ಪೀಠಿಕೆಗಳನ್ನು ಬೆಟಗೇರಿ ಕೃಷ್ಣಶರ್ಮರು ಬರೆದಿದ್ದಾರೆ. ಮತಿಘಟ್ಟ ಕೃಷ್ಣಮೂರ್ತಿಯವರ 'ಜಾನಪದ ಗೀತೆಗಳು'-ಬೃಹತ್ ಸಂಗ್ರಹಕ್ಕೆ ವಿಸ್ತಾರವಾದ ಮತ್ತು ತಲಸ್ಪರ್ಶಿಯಾದ ಮುನ್ನುಡಿಯನ್ನು ಬರೆದಿದ್ದಾರೆ. ಅನೇಕ ಜಾನಪದ ವಿದ್ಯಾರ್ಥಿಗಳಿಗೆ, ಆಸಕ್ತರಿಗೆ, ಸಂಶೋಧಕರಿಗೆ ಬೆಟಗೇರಿ ಅವರು ಅನಧಿಕೃತ ಮಾರ್ಗದರ್ಶಕರಾಗಿದ್ದುದನ್ನು ಅಲ್ಲಗಳೆಯುವಂತಿಲ್ಲ. ಜಾನಪದ ಕಥೆ, ಐತಿಹ್ಯ, ಹಾಡು ಮುಂತಾದುವನ್ನು ಸಂಗ್ರಹಿಸಲು ಯುವಕರಿಗೆ ಸ್ಫೂರ್ತಿ ನೀಡಿದರು. ಸಾಹಿತ್ಯ-ಸಂಸ್ಕೃತಿ-ಸತ್ಯಾನ್ವೇಷಕರಿಗೆ ಸದಾ ಮಾರ್ಗದರ್ಶನ ಮಾಡುತ್ತಿದ್ದರು.

ಬೆಟಗೇರಿಯವರೆಂದರೆ ಜಾನಪದ. ಜಾನಪದವೆಂದರೆ ಬೆಟಗೇರಿ ಎನ್ನುವಷ್ಟರ ಮಟ್ಟಿಗಿನ ಅನ್ಯೋನ್ಯತೆ ಬೆಟಗೇರಿ-ಜಾನಪದದಲ್ಲಿ ಇದೆ. ಗಾಢವಾದ ಜಾನಪದದ ಅನುಭವ, ಜ್ಞಾನ ಇರುವುದರಿಂದಲೇ ಬೆಟಗೇರಿ ಅವರು ಬಹಳ ಹಿಂದೆಯೇ ''ಕನ್ನಡ ಜನಪದ ಸಾಹಿತ್ಯ ತುಂಬ ವಿಸ್ತಾರವಾದುದು. ಎಲ್ಲ ಶಾಸ್ತ್ರಗಳೂ ಇದರಲ್ಲಿ ಅಂತರ್ಗತವಾಗಿದೆ' ಎಂದು ಹೇಳಲು ಸಾಧ್ಯವಾಗಿದೆ. ಅಂತೆಯೇ 'ಜಾನಪದವು ಮಳೆ ಇದ್ದಂತೆ, ಮಾರ್ಗವು ಹೊಳೆ ಇದ್ದಂತೆ'-ಎನ್ನುವ ಬೆಟಗೇರಿ ಅವರ ಮಾತು ಅದೆಷ್ಟು ಸತ್ಯ. ಇದು ಬಿ.ಎಂ.ಶ್ರೀಯವರ 'ಜನವಾಣಿ ಬೇರು ಕವಿವಾಣಿ ಹೂ' ಎಂಬ ಮಾತನ್ನು ಜ್ಞಾಪಿಸುತ್ತದೆ. ಹೀಗೆ ಹೇಳಿದರಷ್ಟೇ ಅಲ್ಲ; ಆ ಜಾನಪದದ ಮಳೆಯಿಂದ ಮಾರ್ಗದ ಬೆಳೆ ಬೆಳೆದು ತೋರಿದ ಕವಿ ಬೆಟಗೇರಿ ಅವರು.

ಬೆಟಗೇರಿ ಅವರು ಸಂಗ್ರಹಿಸಿದ 'ಬೀಸುಕಲ್ಲಿನ ಹಾಡುಗಳು' ಪುಸ್ತಕವನ್ನು 1928ರಲ್ಲಿ ಬೆಂಗಳೂರು ಕ.ಸಾ.ಪ. ಪ್ರಕಟಿಸಿದೆ. ಹೆಸರೇ ಸೂಚಿಸುವಂತೆ, ಬೀಸುವ ಸಂದರ್ಭದಲ್ಲಿ ಹಾಡುವ ತ್ರಿಪದಿರೂಪದ ಗರತಿ ಹಾಡುಗಳು ಇದರಲ್ಲಿವೆ. ಇದು ಇವರ ಮೊದಲ ಮತ್ತು ಕೊನೆಯ ತ್ರಿಪದಿ ಸಂಗ್ರಹ. ಜಾನಪದ ತ್ರಿಪದಿಗಳನ್ನು ಸಂಗ್ರಹಿಸಿದ ಬೆಳಗಾವಿ ಜಿಲ್ಲೆಯ ಮೊಟ್ಟಮೊದಲ ಸಂಗ್ರಾಹಕರು ಬೆಟಗೇರಿಯವರೇ.

ಬೆಟಗೇರಿಯವರು ಬರೆದ 'ಕನ್ನಡ ಜಾನಪದ ಸಾಹಿತ್ಯ' - ಪುಸ್ತಕವನ್ನು 1976ರಲ್ಲಿ ಧಾರವಾಡ ಕ.ವಿ.ವಿ. ಪ್ರಕಟಿಸಿದೆ. ಕಲಬುರ್ಗಿ ಸ್ನಾತಕೋತ್ತರ ಕೇಂದ್ರದಲ್ಲಿ ಜಾನಪದ ಸಾಹಿತ್ಯವನ್ನು ಕುರಿತು ಬೆಟಗೇರಿ ಅವರು ಮಾಡಿದ ಮೂರು ಉಪನ್ಯಾಸಗಳು ಈ ಕೃತಿಯಲ್ಲಿವೆ. ಮೊದಲನೇ ಉಪನ್ಯಾಸ ಜಾನಪದ ಸಾಹಿತ್ಯದ ರೂಪ ವೈವಿಧ್ಯ, ವಿಷಯ ವ್ಯಾಪ್ತಿ ಕುರಿತಂತಿದೆ; ವಿಷಯ ವೈವಿಧ್ಯದಲ್ಲಿ ಜನಪದ-ಜಾನಪದ ಮೀಮಾಂಸೆ; ದೇಶೀಯ ಮಾರ್ಗೀಯ ಸಾಹಿತ್ಯ, ವೈಲಕ್ಷಣ್ಯಗಳು, ಗುಣವಿಶೇಷತೆ- ಈ ಸಾಹಿತ್ಯದಲ್ಲಿ ಜೀವನೇತಿಹಾಸ ಇತ್ಯಾದಿ ವಿಷಯಗಳ ದೀರ್ಘ ವಿವರಣೆಯಿದೆ. ಜಾನಪದ ಸಾಹಿತ್ಯದ ರೂಪ ವೈವಿಧ್ಯದಲ್ಲಿ ಪಡೆನುಡಿ, ಪ್ರತಿಮಾವಾಕ್ಯಗಳು, ಗಾದೆಮಾತುಗಳು, ಒಗಟು, ಒಡಪು, ಜಾನಪದ ಕಥಾಸಾಹಿತ್ಯ ಮತ್ತು ಜಾನಪದ ಪದ್ಯ ಸಾಹಿತ್ಯ-ತ್ರಿಪದಿಯ ರೂಪದರ್ಶನ, ಲಾವಣಿ ಸಾಹಿತ್ಯ ಕುರಿತು ಬರೆದಿದ್ದಾರೆ. ಎರಡನೇ ಉಪನ್ಯಾಸದಲ್ಲಿ ಜನಪದರ ಜೀವನ-ಮಾನವೀಯ ಮೌಲ್ಯಗಳು, ಜನಪದರ ಕೌಟುಂಬಿಕ ಸಾಮರಸ್ಯ ಇತ್ಯಾದಿ ವಿವರಿಸುತ್ತಾರೆ. ಮೂರನೇ ಉಪನ್ಯಾಸದಲ್ಲಿ ಜಾನಪದ ರಂಗಭೂಮಿಯನ್ನು ಕುರಿತು ಸುದೀರ್ಘವಾಗಿ ಚರ್ಚಿಸುತ್ತಾರೆ. ಪುರವಂತರ ಆಟ, ನಾಳ್‌ಪಗರಣ, ಬೀದಿಗೊಟ್ಕಿ, ದಾಸರಾಟ, ರಾಧಾನಾಟ, ರೂಪಸಿಂಗನಾಟ, ಸಂಗ್ಯಾಬಾಳ್ಯಾನಾಟ, ಶರಣರಾಟ, ಶ್ರೀಕೃಷ್ಣಪಾರಿಜಾತ, ಯಕ್ಷಗಾನ ಬಯಲಾಟ, ಗೊಂಬೆಯಾಟ ಮುಂತಾದವುಗಳ ಚರ್ಚೆಯಿದೆ. ಪುಸ್ತಕದ ಕೊನೆಯಲ್ಲಿ ಬೆಟಗೇರಿಯವರು ''ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ, ಸಂಶೋಧಿಸಿ ಅದನ್ನು ವಿಶ್ಲೇಷಣ ಮಾಡುವ ಕಾರ್ಯ ಇನ್ನೂ ಬೇಕಾದಷ್ಟಿದೆ. ಕನ್ನಡದ ಸಾಮಾನ್ಯ ಜನತೆಯ ಜೀವನಸಂಸ್ಕೃತಿ, ನಡೆವಳಿ, ನುಡಿವಳಿ, ಮನೋವಿಕಾಸ ಇವೆಲ್ಲವನ್ನೂ ತಿಳಿದುಕೊಳ್ಳಬೇಕೆನ್ನುವವರಿಗೆ ಪರಂಪರಾಗತವಾದ ಜಾನಪದ ಸಾಹಿತ್ಯವೇ ಪ್ರಮುಖ ಸಾಧನೆ''ಎಂದಿದ್ದಾರೆ. ಈ ಮಾತು ಇಂದಿಗೂ ಅರ್ಥಪೂರ್ಣವಾದುದು. ಜನಪದ ಸಾಹಿತ್ಯದ ತಮ್ಮ ಜ್ಞಾನವನ್ನು ಪ್ರಬಂಧಗಳ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಅವರ ವಿಷಯ ವಿಶ್ಲೇಷಣೆ ಮತ್ತು ಸೂಕ್ಷ್ಮ ಸಂಶೋಧನೆಯನ್ನು ಇಲ್ಲಿಯ ಪ್ರಬಂಧಗಳಲ್ಲಿ ಗುರುತಿಸಬಹುದು. ಜಾನಪದ ಬದುಕು-ಸಂಸ್ಕೃತಿ-ಸಾಹಿತ್ಯಗಳ ತಿಳಿವಳಿಕೆಯನ್ನು ಇಲ್ಲಿಯ ಪ್ರಬಂಧಗಳಲ್ಲಿ ಗುರುತಿಸಬಹುದು.

ಬೆಂಗಳೂರು ಕ.ಸಾ.ಪರಿಷತ್ತು 1981ರಲ್ಲಿ ಪ್ರಕಟಿಸಿದ ಇವರ ಇನ್ನೊಂದು ಕೃತಿ - 'ಸಾಹಿತ್ಯ ವಿಹಾರ'ದಲ್ಲಿ ಜಾನಪದಕ್ಕೆ ಸಂಬಂಧಪಟ್ಟ ಐದು ಪ್ರಬಂಧಗಳಿವೆ. ಅವು: ಜಾನಪದ ನಾಟಕ ನಡೆದು ಬಂದ ದಾರಿ; ನಮ್ಮ ಜಾನಪದ ರಂಗಭೂಮಿ, ದೊಡ್ಡಾಟಗಳು, ಜಾನಪದ ನಾಟ್ಯಗೀತೆಗಳು ಹಾಗು ಶಿಶು ಸಾಹಿತ್ಯ ಮತ್ತು ಲಾವಣಿ ಸಾಹಿತ್ಯ ಇದರಲ್ಲಿಯ ಬಹುತೇಕ ಲೇಖನಗಳು 'ಕನ್ನಡ ಜಾನಪದ ಸಾಹಿತ್ಯ' ಕೃತಿಯಲ್ಲಿ ಈಗಾಗಲೇ ಬೆಳಕು ಕಂಡಿವೆ. ಹಾಗೆಯೇ ಜಾನಪದ ಸಂಸ್ಕೃತಿ, ನಮ್ಮ ಹಬ್ಬ ಹುಣ್ಣಿವೆಗಳು: ಕಾರಹುಣ್ಣಿವೆ, ಗುಡಿಹುಣ್ಣಿವೆ ಎಂಬ ನಾಲ್ಕು ಪ್ರಬಂಧಗಳೂ ಇವೆ. ಇವೂ ಕೂಡ 'ನಮ್ಮ ಸಂಸ್ಕೃತಿ ಪರಂಪರ' ಎಂಬ ಗ್ರಂಥದಲ್ಲಿ ಹೆಚ್ಚು ಕಡಿಮೆ ಬಂದಂಥವುಗಳೇ. ಜಾನಪದಕ್ಕೆ ಸಂಬಂಧಪಟ್ಟ 'ಸಾಹಿತ್ಯ ವಿಹಾರ'ದಲ್ಲಿಯ ಲೇಖನಗಳೆಲ್ಲ

ಬೆಟಗೇರಿ ಅವರ ಬಹುಶ್ರುತತೆಗೆ ಹಿಡಿದ ಕನ್ನಡಿ. ಬೆಟಗೇರಿ ಅವರು ಜನಪದ ಸಂಗ್ರಹದ ಜೊತೆಗೆ ಅದನ್ನು ಕುರಿತು ಅಧಿಕಾರಯುತವಾಗಿ ಬರೆಯಬಲ್ಲ, ಮಾತನಾಡಬಲ್ಲ ನಿಜವಾದ ಜಾನಪದ ತಜ್ಞರು.

ಧಾರವಾಡದ ಕರ್ನಾಟಕ ಸಹಕಾರಿ ಸಾಹಿತ್ಯ ಸಂಘವು, 1955ರಲ್ಲಿ ಬೆಟಗೇರಿ ಅವರ 'ಜನಪದ ಜೀವನ' ಸಣ್ಣ ಕಥಾಸಂಕಲನ ಪ್ರಕಟಿಸಿದೆ. ಹುಳಹತ್ತಿದ ಹಳ್ಳಿ, ದೆವ್ವದ ಸಂಸಾರ, ಬೀದಿಯ ಹಾಡುಗಳು, ನಂದನೂರಿನ ಜಾತ್ರೆ- ಇವೇ ಮುಂತಾದ ಇಲ್ಲಿಯ ಏಳು ಕತೆಗಳಲ್ಲಿ ಗ್ರಾಮೀಣ ಬದುಕು-ಸಂಸ್ಕೃತಿಯ ಚಿತ್ರಣವೇ ಇದೆ.

1969ರಲ್ಲಿ, ಇವರ 'ನಮ್ಮ ಸಂಸ್ಕೃತಿ ಪರಂಪರೆ'- ಗ್ರಂಥವನ್ನು ಧಾರವಾಡ ಸಮಾಜ ಪುಸ್ತಕಾಲಯ ಪ್ರಕಟಿಸಿದೆ. ಇದು ಕನ್ನಡ ಜಾನಪದ ಸಂಸ್ಕೃತಿ ಬಗೆಗಿನ ಬೆಟಗೇರಿಯವರ ಅರಿವಿನ ಆಳ ಅಗಲಗಳನ್ನು ಪ್ರತಿಬಿಂಬಿಸುವ ಕೃತಿ. ಇದರಲ್ಲಿ ನಮ್ಮ ಸಂಸ್ಕೃತಿಯ ಕೃಷಿ ಪ್ರಾಧಾನ್ಯತೆಯನ್ನು ಸೂಚಿಸುತ್ತ, ಒಂದು ವರುಷದ ಹನ್ನೆರಡು ತಿಂಗಳುಗಳಲ್ಲಿನ ವ್ಯವಸಾಯಗಾರರ ಚಟುವಟಿಕೆಗಳು, ವಿವಿಧ ಜನಾಂಗಗಳ ಹಬ್ಬ-ಆಚರಣೆಗಳು, ಜಾನಪದ ಸಂಪ್ರದಾಯಗಳು, ಅವುಗಳಿಗೆ ನೆಲೆಯಾದ ಪೌರಾಣಿಕ ಪಾರಂಪರಿಕ ನಂಬಿಕೆಗಳ ವಿವರಣೆ ನೀಡುತ್ತಾರೆ. ಇದಲ್ಲದೆ ಕರ್ನಾಟಕದಲ್ಲಿ ವಸಂತೋತ್ಸವ, ಶಮೀಸಂಕೇತ ಮತ್ತು ನಾಡಹಬ್ಬ- ಕುರಿತ ಲೇಖನಗಳಿವೆ. ಈ ಎಲ್ಲ ಲೇಖನಗಳಿಗೆ ಜಾನಪದ ಆಚರಣೆಗಳು, ಪುರಾಣಗಳು ಮತ್ತು ಸಂಪ್ರದಾಯಗಳಿಂದ ಆಕರ ಸಾಮಗ್ರಿ ಪಡೆದುದು ಗಮನೀಯ. 'ನಮ್ಮ ಸಂಸ್ಕೃತಿ ಪರಂಪರೆ' 'ಉತ್ತರ ಕರ್ನಾಟಕದ ಜಾನಪದ ಉತ್ಸವಗಳ ಕೋಶವಾಗಿದೆ'- ಎಂದು ಆರ್.ಸಿ. ಹಿರೇಮಠರು ಹೇಳಿದುದು ಯುಕ್ತವಾಗಿದೆ.

ಆನಂದಕಂದರು ಚಿಕ್ಕಂದಿನಿಂದಲೂ ಜಾನಪದವನ್ನು ತುಂಬ ಆಸ್ಥೆಯಿಂದ ಓದುತ್ತ ಬಂದವರು. ಈ ಓದಿನಿಂದಲೂ ಅಪ್ಪಟವಾದ ದೇಶೀ ಸಂವೇದನೆಯನ್ನು ಪಡೆದುಕೊಂಡರು. ದೇಶೀ ಸಂವೇದನೆ ಇವರ ಕಾವ್ಯದಲ್ಲಿ ಒಂದು ತಂತ್ರವಾಗಿ ಮಾತ್ರ ಬಳಕೆಯಾಗುವುದಿಲ್ಲ. ಸಮಗ್ರ ಜನಪದ ಜೀವನವೇ ತದ್ರೂಪವಾಗಿ ಇವರ ಕಾವ್ಯ-ಕಥೆಗಳಲ್ಲಿ ಮೈದುಂಬಿಕೊಂಡು ನಿರೂಪಿತವಾಗಿದೆ.

ಆನಂದಕಂದರು ಧಾರವಾಡದ ಗೆಳೆಯರ ಗುಂಪಿನ ಸದಸ್ಯರಲ್ಲೊಬ್ಬರು. ಹಳ್ಳಿಯ ಹಾಡುಗಳ ಬಗೆಗೆ ಗೆಳೆಯರ ಗುಂಪಿನವರೂ ಅಭ್ಯಾಸ ನಡೆಸಿದ್ದರು. ಗರತಿಯ ಹಾಡು, ಜೀವನ ಸಂಗೀತ, ಮಲ್ಲಿಗೆ ದಂಡೆ- ಇತ್ಯಾದಿ ಜನಪದ ಸಂಗ್ರಹಗಳಲ್ಲಿಯ ಹಾಡುಗಳ ಛಂದಸ್ಸಿನ ತಳಹದಿಯ ಮೇಲೆ ಗೆಳೆಯರ ಗುಂಪಿನ ಕವಿಗಳು ಹೊಸ ಛಂದಸ್ಸನ್ನು ರೂಪಿಸಿಕೊಳ್ಳುವ ಪ್ರಯೋಗಗಳನ್ನು ನಡೆಸಿದ್ದರು. ಬೇಂದ್ರೆ, ಬೆಟಗೇರಿ ಅಂಥವರು ಜಾನಪದ ಛಂದಸ್ಸನ್ನು ಸಮೃದ್ಧವಾಗಿ, ಅರ್ಥಪೂರ್ಣವಾಗಿ ಬಳಸಿಕೊಂಡು, ತಮ್ಮ ಕವಿತೆಗಳ ಸೊಗಸನ್ನು ಹೆಚ್ಚಿಸಿಕೊಂಡರು. ಅದರಲ್ಲಿಯೂ ''ಬೆಟಗೇರಿ ಅವರ ಗ್ರಾಮೀಣ ಪರಿಸರದ ಹಿನ್ನೆಲೆಯಂತೂ ಇಂತಹ ಜಾನಪದ ಛಂದಸ್ಸಿನ ಬಳಕೆಗೆ ಪೂರಕವಾಗಿದ್ದಿತು. ಅವರ 'ನಲ್ವಾಡುಗಳು' ಇಂಥ ಜಾನಪದ ಮಾರ್ಗದಲ್ಲಿ ಮೂಡಿಬಂದ ಉತ್ಕೃಷ್ಟ ಪ್ರೇಮಗೀತಗಳಾಗಿವೆ''.

ಹಲಸಂಗಿ ಗೆಳೆಯರು

ಡಾ|| ಮೃತ್ಯುಂಜಯ ಹೊರಕೇರಿ

ಕನ್ನಡ ಸಾಹಿತ್ಯದಲ್ಲಿ ಸಾಮೂಹಿಕವಾಗಿ ಸಾಹಿತ್ಯ ಸೃಷ್ಟಿಸುವುದು ಹೊಸತೇನಲ್ಲ. ಶಿವಶರಣರು, ದಾಸರು, ನೂರೊಂದು ವಿರಕ್ತರು, ನವೋದಯ, ಪ್ರಗತಿಶೀಲ-ನವ್ಯ-ದಲಿತ ಬಂಡಾಯ ಹೀಗೆ ವಿವಿಧ ಧೋರಣೆಯ ಸಾಹಿತ್ಯ ಪಂಥಗಳು, ಒಂದೇ ಸ್ವಭಾವದವರು ಒಂದೆಡೆ ಸೇರಿ ತಮ್ಮ ಒಳತುಡಿತವನ್ನು ಹೊರಗಿಟ್ಟ ಒಂದೊಂದು ಗುಂಪುಗಳಾಗಿವೆ. ಕನ್ನಡದ ನವೋದಯ ಸಾಹಿತ್ಯದಾರಂಭ ಕಾಲಕ್ಕೂ ಅಲ್ಲಲ್ಲಿ ಸಾಹಿತ್ಯಾಸಕ್ತರ ಗುಂಪುಗಳು ಹುಟ್ಟಿಕೊಂಡವು. ಕನ್ನಡ ಭಾಷಿಕರು ಹರಿದು ಹಂಚಿ ಹೋಗಿದ್ದರೂ ಭಾವನಾತ್ಮಕವಾಗಿ ಒಂದಾಗಿ ಕನ್ನಡದಲ್ಲಿ ಹೊಸ ಸಾಹಿತ್ಯ ಸೃಷ್ಟಿಗೆ ತಾವಿದ್ದಲ್ಲಿಂದಲೇ ಹೊಳಹು ಹಾಕುತ್ತಿದ್ದರು. ಮೈಸೂರಿನಲ್ಲಿ ಬಿ.ಎಂ.ಶ್ರೀಕಂಠಯ್ಯ ಅವರ ನೇತೃತ್ವದಲ್ಲಿ ತಳಿರು ತಂಡ', ಮಂಗಳೂರು ಕಡೆಗೆ ಪಂಜೆ-ಪೈ ಜೋಡಿಯ ಮಿತ್ರಮಂಡಳಿ, ಧಾರವಾಡದತ್ತ ಬೇಂದ್ರೆಯವರ ಹಿರಿತನದಲ್ಲಿ ಗೆಳೆಯರ ಗುಂಪು ಪ್ರಮುಖವಾದವುಗಳು. ನೂತನ ಸಾಹಿತ್ಯ ಸೃಷ್ಟಿಯಲ್ಲಿ ಪ್ರಾದೇಶಿಕ ಭಾಷಾ ವೈಶಿಷ್ಟ್ಯ ಮೆರೆದ ಈ ಗುಂಪುಗಳ ಸಾಧನೆ ಅಪೂರ್ವವಾದುದು. ಇದೇ ಕಾಲಕ್ಕೆ ಗ್ರಾಮೀಣ ಪರಿಸರದಲ್ಲಿ ಹುಟ್ಟಿಕೊಂಡು ಅನುಪಮ ಸೇವೆ ಸಲ್ಲಿಸಿದ ಕೀರ್ತಿ ಹಲಸಂಗಿ ಗೆಳೆಯರ ಗುಂಪಿಗೆ ಸಲ್ಲುತ್ತದೆ. ಈ ಗುಂಪು ಧಾರವಾಡದ ಗೆಳೆಯರ ಗುಂಪಿಗೆ ಸಂಲಗ್ನ ಪಡೆದಿತ್ತೆಂದು ಹೇಳಬಹುದು.

ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಹಲಸಂಗಿ ಜಾನಪದ ವಲಯದಲ್ಲಿ ಕರ್ನಾಟಕದ ಫಿನ್‌ಲ್ಯಾಂಡ್ ಎಂದೇ ಹೆಸರಾಗಿದೆ. ಮಧುರಚೆನ್ನ ಎಂಬ ಕಾವ್ಯನಾಮದ ಮೂಲಕ ಖ್ಯಾತರಾದ ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿಯವರು 31-7-1903 ರಂದು ಜನಿಸಿದರು. ತಂದೆ ಸಿದ್ಧಲಿಂಗಪ್ಪ ತಾಯಿ ಅಂಬಕ್ಕ. ಹುಟ್ಟಿದ್ದು ತಾಯಿಯ ಸೋದರತ್ತೆ ಊರಾದ ಲೋಣಿಯಲ್ಲಿ. ಹಲಸಂಗಿಯ ಗಲಗಲಿ ಮನೆತನದವರು ದೊಡ್ಡ ಸಾಹುಕಾರರು. ಹಲವಾರು ಕಾರಣಗಳಿಂದಾಗಿ ಮಧುರಚೆನ್ನರು ಹುಟ್ಟುವ ಕಾಲಕ್ಕೆ ಆ ಮನೆ ಬಡತನಕ್ಕೀಡಾಯಿತು. ಸಿದ್ಧಲಿಂಗಪ್ಪ ತಾರುಣ್ಯದಲ್ಲಿರುವಾಗಲೇ ಕ್ಷಯರೋಗಕ್ಕೀಡಾದರು. ತಾಯಿ ಅಂಬಕ್ಕನ ಆಶ್ರಯದಲ್ಲಿಯೇ ಮಧುರಚೆನ್ನರು ಬೆಳೆದರು.

ಹೆಚ್ಚಿನ ವಿದ್ಯಾಭ್ಯಾಸದ ಬಯಕೆಯಿದ್ದರೂ ತಾಯಿಯ ಅಕ್ಕರೆಯ ಅಣತಿಯಂತೆ ಮಧುರಚೆನ್ನರು ಊರು ಬಿಡುವುದಾಗಲಿಲ್ಲ. ಆದರೂ ವಿಜಾಪುರಕ್ಕೆ ಕೆಲ ಕಾಲ ಬಂದು ಇಂಗ್ಲೀಷ್ ಕಲಿತರು. ಆ ವೇಳೆಗಾಗಲೇ ಅವರಲ್ಲಿ ಆಧ್ಯಾತ್ಮಿಕ ಸಾಹಿತ್ಯಕ ಒಲವುಗಳು ಹುಟ್ಟಿಕೊಂಡಿದ್ದವು.

ಮಧುರಚೆನ್ನರು ಹದಿಹರೆಯದಲ್ಲಿಯೇ ಸಂಸಾರಿಕರಾದರೂ ಆಧ್ಯಾತ್ಮಿಕದತ್ತ ಅವರಿಗಿರುವ ಹಂಬಲ ಕಡಿಮೆಯಾಗಲಿಲ್ಲ. ತತ್ತ್ವಾಭ್ಯಾಸವನ್ನು ಆರಂಭಿಸಿದರು. ಅಭಿವ್ಯಕ್ತಿಗೆ ಅವರು ಕಾವ್ಯ ಮಾಧ್ಯಮವನ್ನು ಹುಡುಕಿಕೊಂಡು ಆ ಮೂಲಕ ಅನುಭಾವಿ ಕವಿಗಳೆನಿಸಿದರು. ಇದರೊಂದಿಗೆ ಸಂಶೋಧನೆ-ಜಾನಪದ ಸಾಹಿತ್ಯದ ಕಡೆಗೂ ಅವರ ಗಮನ ಹರಿಯಿತು. ಸಂಸಾರ, ಸಾಹಿತ್ಯ, ಸಂಶೋಧನೆ, ಜಾನಪದ ಆಸಕ್ತಿ, ಆಧ್ಯಾತ್ಮ ಅವರ ಜೀವನದ ಗುರಿಗಳಾದವು. ಇದರೊಂದಿಗೆ ಪ್ರಮುಖವಾದ ಇನ್ನೊಂದು ಅಂಶವೆಂದರೆ ಮಧುರಚೆನ್ನರು ಸ್ನೇಹಮಯಿ ಜೀವಿಗಳಾದುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಸಾಹಿತ್ಯಕ ಸಾಂಸ್ಕೃತಿಕ ಆಧ್ಯಾತ್ಮಿಕ ಒಲವಿನ ಸ್ನೇಹಿತರ ಒಂದು ಗುಂಪನ್ನು ಕಟ್ಟಿದರು. ಅದೇ 'ಹಲಸಂಗಿ ಗೆಳೆಯರ ಗುಂಪು' ಎಂದು ಹೆಸರಾಗಿದೆ. ಈ ಗುಂಪಿಗೆ ಮಧುರಚೆನ್ನರು ನೇತಾರರು.

ಹಲಸಂಗಿ ಗೆಳೆಯರ ಗುಂಪಿನಲ್ಲಿ ಪಿ. ಧೂಲಸಾಹೇಬರಂಥ ಮುಸ್ಲಿಮರು, ಓಲೆಕಾರ ಮಧುಲಿಂಗರಂಥ ದಲಿತರು, ಕಾಪಸೆ ರೇವಪ್ಪನವರು, ಸಿಂಪಿ ಲಿಂಗಣ್ಣನವರು ಇವರಿಗೆಲ್ಲಾ ನಾಯಕರಾದ ಮಧುರಚೆನ್ನರು-ಈ ಪಂಚಪಾಂಡವರ ಗುಂಪು ಪಾಂಡವರಂತೆ ಒಟ್ಟಾಗಿ ಗಟ್ಟಿಗೊಂಡ ಸ್ನೇಹ ಬಂಧುತ್ವದ ಗುಂಪಾಗಿದೆ. ಈ ಗುಂಪಿನಲ್ಲಿ ಧೂಲಾಸಾಹೇಬರು ಹಿರಿಯರಾದರೆ ರೇವಪ್ಪನವರು ಕಿರಿಯರು. ಈ ಗುಂಪಿಗೆ ಜಾತಿಯ ಸೋಂಕಿಲ್ಲ. ವಯಸ್ಸಿನ ಹಿರಿ-ಕಿರಿಗಳೆಂಬ ಕಿರಿಕಿರಿಗಳಿಲ್ಲ. ಎಲ್ಲರೂ ಸಮಾನ ಮನಸ್ಕರು. ಎಲ್ಲರೂ ಹಳ್ಳಿಗರು. ಎಲ್ಲಾ ಜೋಳದ ರೊಟ್ಟಿ ತಿಂದವರೇ. ಈ ಗುಂಪು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಂಥ ಅದ್ಭುತ ಪವಾಡವನ್ನೆಸಗಿದೆ ಯೆಂಬುದನ್ನು ನೆನಸಿಕೊಂಡರೆ ಮೈಮನಗಳು ಪುಳಕಿತಗೊಳ್ಳುತ್ತವೆ.

ಹಲಸಂಗಿಯ ಗುಂಪು ಧಾರವಾಡದ ಗುಂಪಿನ ಗೆಳೆಯರ ಸಖ್ಯವನ್ನು ಪಡೆಯಿತು. 1923ರ ಸುಮಾರಿಗೆ ಉದಯಿಸಿದ ಈ ಎರಡೂ ಗುಂಪುಗಳು ಬೇಂದ್ರೆ- ಮಧುರಚೆನ್ನರ ಸ್ನೇಹ-ಸಂಪರ್ಕಗಳಿಂದ ಹೆಚ್ಚಿನ ಸಾಮರಸ್ಯ ಬೆಳೆಸಿಕೊಂಡವು. ಇವೆರಡು ಗುಂಪುಗಳ ಉದ್ದೇಶವನ್ನು ಹೀಗೆ ಸಂಗ್ರಹಿಸಿ ಹೇಳಲಾಗಿದೆ. '' ಕನ್ನಡ ನಾಡನ್ನು ಎಚ್ಚರಿಸುವುದು, ನಮ್ಮ ಉಜ್ವಲ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವುದು; ಸಾಹಿತ್ಯಕ್ಕೆ ನವೀನ ಚೈತನ್ಯವನ್ನು ತಂದು ಕೊಡುವುದು; ಆಧ್ಯಾತ್ಮಿಕ ಭೂಮಿಕೆಯ ಮೇಲೆ ನಾಡನ್ನು ಕಟ್ಟುವುದು; ರಾಷ್ಟ್ರಕಾರ್ಯದಲ್ಲಿಯೂ ಪಾಲುಗೊಳ್ಳುವುದು''- ಈ ಮುಂತಾದ ಉದ್ದೇಶಗಳನ್ನಿರಿಸಿಕೊಂಡು ಈ ಗುಂಪುಗಳು ಮುಂದುವರಿದವು. ಈ ಗುಂಪುಗಳಿಗೆ ಗಾಂಧಿ, ರವೀಂದ್ರನಾಥ, ಅರವಿಂದರು ಮೂಲ ಪ್ರೇರಣೆಯ ಮಹಾಪುರುಷರು.

1922ರಲ್ಲಿ ಸ್ಥಾಪಿಸಿದ ಶಾರದಾ ವಾಚನಾಲಯ ಹಲಸಂಗಿ ಗೆಳೆಯರು ಗ್ರಾಮೀಣ ಜನರ ಜ್ಞಾನಾಭಿವೃದ್ಧಿಗೆ ನೀಡಿದ ಕೊಡುಗೆಯಾಗಿದೆ. ಮೊಗ್ಗು ಎಂಬ ಕೈಬರಹದ ಸಾಪ್ತಾಹಿಕ, ವಿಶ್ವಾಮಿತ್ರ ಎಂಬ ಕೈಬರಹದ ತ್ರೈಮಾಸಿಕಗಳು ಮಧುರ ಚೆನ್ನರು ಹುಟ್ಟು ಹಾಕಿದ ಪತ್ರಿಕೆಗಳಾಗಿದ್ದು ಅವು ಹಲಸಂಗಿ ಗೆಳೆಯರಿಗೆ ಸ್ಫೂರ್ತಿಯನ್ನೊದಗಿಸಿದವು.

ಜಾನಪದ ಕ್ಷೇತ್ರಕ್ಕೆ ಹಲಸಂಗಿ ಗೆಳೆಯರು ನೀಡಿದ ಕಾಣಿಕೆ ಈಗಾಗಲೇ ನಾಡಿನಾದ್ಯಂತ ಪ್ರಚಾರಗೊಂಡಿದೆ. ಜಾನಪದ ಸಾಹಿತ್ಯಾಧ್ಯಯನ ನಡೆಸಿದವರಲ್ಲಿ ಪಾಶ್ಚಾತ್ಯ ವಿದ್ವಾಂಸರೇ ಮೊದಲಿಗರು. ಆದರೆ ಕನ್ನಡದಲ್ಲಿ ಮೊದಲಿಗರಾರು ಎಂಬುದರ ಬಗೆಗೆ ಸಾಕಷ್ಟು ಚರ್ಚೆ ನಡೆದಿದೆ. ಪಂಪನಿಗಿಂತಲೂ ಹಿಂದೆ ಕನ್ನಡದಲ್ಲಿ ಸಾಹಿತ್ಯ ಸೃಷ್ಟಿ ನಡೆದಿದೆಯಾದರೂ ಪಂಪನೇ ನಮಗೆ ಆದಿಕವಿ. ಹಾಗೆಯೇ ಹಲಸಂಗಿ ಗೆಳೆಯರಿಗಿಂತಲೂ ಮೊದಲಿಗೆ ಕನ್ನಡದಲ್ಲಿ ಜಾನಪದ ಅಧ್ಯಯನ ಆರಂಭಿಸಿದವರು ಇರಬಹುದಾದರೂ ಹಲಸಂಗಿಯ ಗೆಳೆಯರೇ ಜಾನಪದ ಸಾಹಿತ್ಯ ಸಂಗ್ರಹದಲ್ಲಿ ಆದ್ಯರೆಂಬುದನ್ನು ಯಾರೂ ಅಲ್ಲಗಳೆಯಲಿಕ್ಕಾಗದು. 1931ರಲ್ಲಿ ಪ್ರಕಟಿಸಿದ 'ಗರತಿ ಹಾಡು' ಎಂಬ ಕೃತಿಗೆ ಇರುವ ಮನ್ನಣೆ, ಪ್ರಸಿದ್ಧಿ, ಪ್ರಾತಿನಿಧಿಕತೆ ಈವರೆಗೆ ಇನ್ನೊಂದು ಕೃತಿಗೆ ಲಭಿಸಿಲ್ಲ. ಅಂಥ ಸಂಗ್ರಹಕೃತಿ ನೀಡಿದ ಹಲಸಂಗಿ ಗೆಳೆಯರ ಸಾಧನೆಯ ಹಿಂದೆ ಮಧುರಚೆನ್ನರ ನೆರವಿದೆ. ಅದೇ ಗೆಳೆಯರ ಗುಂಪಿನ ಮೂಲಕ ಹೊರಬಂದ ಸಿಂಪಿ ಲಿಂಗಣ್ಣ ಮತ್ತು ಪಿ. ಧೂಲಾ ಸಾಹೇಬರು ಸಂಗ್ರಹಿಸಿದ ಜೀವನ ಸಂಗೀತ (1933) ಕಾಪಸೆ ರೇವಪ್ಪನವರಿಂದ ಸಂಗ್ರಹಿತವಾದ ಮಲ್ಲಿಗೆ ದಂಡೆ (1935) ಕೃತಿಗಳ ಹಾಡುಗಳ ಸಂಗ್ರಹದಲ್ಲಿ ಮಧುರಚೆನ್ನರ ದುಡಿಮೆ ಇದ್ದೇ ಇದೆ. ಈ ಗೆಳೆಯರ ಗುಂಪಿನ ಮೂಲಕ ಮೇಲೆದ್ದ ಸಿಂಪಿ ಲಿಂಗಣ್ಣನವರು ಜಾನಪದ ಸಾಹಿತ್ಯವನ್ನು ವಿಮರ್ಶಿಸಿ, 'ಗರತಿಯ ಬಾಳು', 'ಜನಾಂಗ ಜೀವಾಳ' ಎಂಬ ಕೃತಿಗಳನ್ನು ಪ್ರಕಟಿಸಿದರು. ಸಿಂಪಿ ಲಿಂಗಣ್ಣನವರ ಮುಂದುವರಿಕೆಗೆ ಮಧುರಚೆನ್ನರು ಕಾರಣೀಭೂತರಾಗಿದ್ದಾರೆ. ''ಮಧುರಚೆನ್ನರು ಜನಪದ ಸಾಹಿತ್ಯದ ಭೂಮಿಯನ್ನು ಉತ್ತಿ-ಬಿತ್ತಿ ಬೆಳೆಯುವ ಕಾರ್ಯ ಮಾಡಿದರೆ ಲಿಂಗಣ್ಣನವರು ಅದನ್ನು ಕುಯ್ದು ರಾಶಿ ಮಾಡುವ ಕಾರ್ಯ ಮಾಡಿದರೆಂದು ಹೇಳಬಹುದು'' ಎಂಬ ಕಾಪಸೆಯವರ ಮಾತಿನಲ್ಲಿ ಸತ್ಯವಿದೆ. ಹಲಸಂಗಿ ಗೆಳೆಯರು ಪ್ರಕಟಿಸಿದ ಈ ಮೂರು ಕೃತಿಗಳು ಮುಂದೆ ಜಾನಪದ ಸಾಹಿತ್ಯ ಸಂಗ್ರಹ ಕಾರ್ಯಕ್ಕೆ ನಾಂದಿ ಹಾಡಿದವೆನ್ನಬಹುದು.

ಕನ್ನಡ ಜಾನಪದ ಸಾಹಿತ್ಯ ಸಂಪತ್ತು ಮತ್ತು ಸತ್ವವನ್ನರಿತಿದ್ದ ಮಧುರಚೆನ್ನರು 1923ರಲ್ಲಿ ವಿಜಾಪುರದಲ್ಲಿ ಜರುಗಿದ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಹಳ್ಳಿಯ ಹಾಡುಗಳು' ಕುರಿತು ಪ್ರಬಂಧ ಮಂಡಿಸುತ್ತ ''ಮಹಾರಾಷ್ಟ್ರದಲ್ಲಿ ಅನಂತಫಂದಿ ಮೊದಲಾದವರ ಲಾವಣಿಗಳು ಅಚ್ಚಾಗಿ ಎಷ್ಟೋ ದಿನಗಳಾದವು. ಬಂಗಾಳದ ಡಾಕಾ ಸಾಹಿತ್ಯ ಪರಿಷತ್ತು ಈ ಕೆಲಸವನ್ನು ಚೆನ್ನಾಗಿ ನೆರವೇರಿಸಿ ಗ್ರಾಮ ಸಾಹಿತ್ಯವನ್ನು ವೃದ್ಧಿಪಡಿಸಿರುವುದಂತೆ. ಆದರೆ ನಮ್ಮ ಕನ್ನಡ ನಾಡಿನಲ್ಲಿ ಇಂತಹ ಪುಸ್ತಕಗಳು ಇನ್ನೂ ಹೊರಬೀಳಲಿಲ್ಲ. ಈಗೀಗ ಕೆಲವು ಪ್ರಕಟವಾಗಿದ್ದರೂ ಅವು ಹಳ್ಳಿಯವರ ಕೃತಿಗಳಲ್ಲ; ಸುಶಿಕ್ಷಿತರು ರಚಿಸಿದಂತಿದೆ. ನಿಜವಾದ ಗ್ರಾಮ ಸಾಹಿತ್ಯವು ಇನ್ನೂ ಅಚ್ಚುಕೂಟ ಕಾಣಲಿಲ್ಲ. ಕನ್ನಡ ವಾಙ್ಮಯದಲ್ಲಿ ಇದೊಂದು ದೊಡ್ಡ ಕೊರತೆಯೇ ಸರಿ'' ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಈ ಪ್ರಬಂಧದಲ್ಲಿ ಕನ್ನಡ ನಾಡಿನ ಹಳ್ಳಿಯ ಸಾಹಿತ್ಯ, ಅವರೂ ಸೇರಿದಂತೆ ಹಲಸಂಗಿ ಗೆಳೆಯರು ಮೊದಲಿಗೆ ಅಂಥ ಸಂಗ್ರಹಗ್ಗೆದು ನಾಡ ಜನರ ಕಣ್ಣು ತೆರೆಯಿಸಿದರು.

'ಗರತಿ ಹಾಡು' ಕೃತಿಯ ನಾಲ್ವರು ಸಂಗ್ರಹಕಾರರಲ್ಲಿ ಮಧುರಚೆನ್ನರು ಒಬ್ಬರು ಮತ್ತು ಮೊದಲಿಗರು. ಅನಂತರ ಸಂಗ್ರಹಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಕಾರ್ಯ ಅವರಿಂದಾಗಿಲ್ಲವಾದರೂ ಅವರ ಗುಂಪು ಅದರಲ್ಲಿ ಮುಂದುವರಿಯಿತು. ತಾವು ಸಂಗ್ರಹಿಸಿದ ಅಪ್ರಕಟಿತ ಮೂರುನೂರು ಗಾದೆಗಳ ಬಗೆಗೆ ಹೇಳಿರುವರಾದರೂ ಅವುಗಳ ಪೈಕಿ ಕೇವಲ ಐವತ್ತೊಂದು ಮಾತ್ರ ''ಹೆಣ್ಮಕ್ಕಳ ಗಾದೆಗಳು'' ಎಂಬ ಹೆಸರಿನಲ್ಲಿ 1936ರಲ್ಲಿ ಜಯ ಕರ್ನಾಟಕದಲ್ಲಿ ಪ್ರಕಟಿಸಿದ್ದು ಉಳಿದ ಗಾದೆಗಳ ಬಗೆಗೆ ಯಾವುದೇ ವಿಚಾರವಿಲ್ಲ.

1934ರಲ್ಲಿ ಜಯ ಕರ್ನಾಟಕದಲ್ಲಿ ಪ್ರಕಟವಾದ 'ರಮ್ಯ ಜೀವನ' ಎಂಬ ಲೇಖನ ಹಲಸಂಗಿ ಲಾವಣಿಕಾರ ದಿವಂಗತ ಖಾಜಾಭಾಯಿಯವರನ್ನು ಕುರಿತು ಬರೆಯಲಾಗಿದೆ. ಹಲಸಂಗಿ ನಾಡಿನಲ್ಲಿ ಆಗಿ ಹೋದ ಇಬ್ಬರು ಲಾವಣಿಕಾರರ ರಮ್ಯಜೀವನ ಇದರಲ್ಲಿದೆ. ಹರದೇಶಿ-ನಾಗೇಶಿ ಅಥವಾ ಕಲ್ಗಿ-ತುರಾ ಲಾವಣಿ ಹಾಡುಗಳಲ್ಲಿ ಹದರಿ ಬಡೇಶಾ ಮತ್ತು ಹಲಸಂಗಿ ಖಾಜಾಭಾಯಿ ಎಂಬ ಇಬ್ಬರು ಲಾವಣಿ ಹಾಡುಗಾರರಲ್ಲಿ ಸ್ಪರ್ಧೆ ನಡೆದು ಬಡೇಶಿ ಖಾಜಾಭಾಯಿಗೆ ಸೋತು ಶಿಷ್ಯನಾಗಿ-ಸಂತನಾಗಿ ಜೀವನಮುಕ್ತಿ ಪಡೆದ ಘಟನೆಗಳನ್ನು ಮಧುರಚೆನ್ನರು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಕಾಪಸೆ ರೇವಪ್ಪನವರು ಸಂಗ್ರಹಿಸಿದ 'ಮಲ್ಲಿಗೆ ದಂಡೆ' ಎಂಬ ಜಾನಪದ ಗೀತೆಗಳ ಸಂಗ್ರಹಕ್ಕೆ ಮಧುರಚೆನ್ನರು ಮುನ್ನುಡಿ ಬರೆದಿದ್ದುದಲ್ಲದೇ ಆಯಾ ಹಾಡುಗಳ ಗುಂಪಿಗೆ ಪೂರಕವಾದ ಅಭ್ಯಾಸಪೂರ್ವ ಟಿಪ್ಪಣಿಗಳನ್ನು ಬರೆದಿದ್ದಾರೆ. ಈ ಮುನ್ನುಡಿಯ ವೈಶಿಷ್ಟ್ಯವೆಂದರೆ ಅದರಲ್ಲಿ ಕಾವ್ಯದ ಉಗಮ ಮತ್ತು ಲಕ್ಷಣ ಕುರಿತು ಚಿಂತಿಸಿದ್ದಾರೆ. ಕವಿಗಳ ಕವಿತೆ ಮತ್ತು ಕವಿಗಳಲ್ಲದವರ ಕವಿತೆಗಳ ಬಗೆಗೆ ವಿಶ್ಲೇಷಿಸಿದ್ದಾರೆ. ಶಿಷ್ಟಕವಿತೆ-ಜಾನಪದ ಕವಿತೆ ಬಗೆಗೆ ವಿಚಾರಿಸಿ ಕವಿಗಳಲ್ಲದವರು ಕಾವ್ಯ ರಚಿಸಿದ ಚಮತ್ಕೃತಿ ಬಗೆಗೆ ಬರೆದ ಈ ಮುನ್ನುಡಿಯಲ್ಲಿ ಪಾಶ್ಚಾತ್ಯರ ವಿಚಾರಗಳೂ ಸೇರಿವೆ. ಈ ಲೇಖನ ಜಾನಪದ ಕಾವ್ಯ ಮೀಮಾಂಸೆಯನ್ನು ಒಳಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದಂತೆ ಹಾಡಿನ ಪರಿಚಯ, ಸಂಪ್ರದಾಯ, ಭಾಷೆ, ಛಂದಸ್ಸು ಕುರಿತು ಟೀಕೆ ಟಿಪ್ಪಣಿಗಳಲ್ಲಿ ಸಂಶೋಧನಾತ್ಮಕ ವಿವರಣೆ ಇದೆ.

ಹೀಗೆ ಹಲಸಂಗಿ ಗೆಳೆಯರು ಜಾನಪದ ತ್ರಿಪದಿಗಳ-ಗಾದೆಗಳ ಸಂಗ್ರಹಕಾರರಾಗಿ, ಇತರರು ಸಂಗ್ರಹಿಸಿದ ಸಾಹಿತ್ಯಕ್ಕೆ ವ್ಯಾಖ್ಯಾನಕಾರರಾಗಿ ಕನ್ನಡದಲ್ಲಿ ಜಾನಪದ ಸಾಹಿತ್ಯಕ್ಕಿದ್ದ ಕೀಳರಿಮೆಯನ್ನು ಅಳಿಸಿಹಾಕಿದವರಾಗಿ ಜಾನಪದ ಸಾಹಿತ್ಯ ಸಂಗ್ರಹಕ್ಕೆ ಶ್ರೀಕಾರ ಹಾಕಿದವರಾಗಿದ್ದು ಅವರ ಪ್ರಾಮಾಣಿಕ ಸೇವೆ ಜಾನಪದ ಕ್ಷೇತ್ರಕ್ಕೆ ಸಂದಿದೆ.

ಹಲಸಂಗಿ ಎಂಬ ಗ್ರಾಮವನ್ನು ''ಹಲವು ಸಂಗಿಗಳ ಬೀಡು'' ಮಾಡಿದರೆಂಬ ವರ್ಣನೆಗೊಂಡ ಹಲಸಂಗಿ ಗೆಳೆಯರು ಸಂಶೋಧನೆ, ಭಾಷಾಶಾಸ್ತ್ರ, ಜಾನಪದ ಸಾಹಿತ್ಯ, ಶರಣ ಸಾಹಿತ್ಯ, ಅರವಿಂದ ಸಾಹಿತ್ಯ ವಿಚಾರ ಸಾಹಿತ್ಯದಲ್ಲಿ ಕೃಷಿಗೈದು ಹೋದ ಕನ್ನಡದ ಹಳ್ಳಿಯ ಹಿರಿಯ ಜೀವಗಳು ಹಳ್ಳಿಗಾಡಿನಲ್ಲಿ ಸಾಂಸ್ಕೃತಿಕ, ಸಾಹಿತ್ಯಿಕ, ಆಧ್ಯಾತ್ಮಿಕ ವಾತಾವರಣ ನಿರ್ಮಿಸಿದ ಅವರು ನಮ್ಮಲ್ಲಿ ಆದರ್ಶಗಳನ್ನು ಹಾಕಿದ್ದಾರೆ.

ಸಿಂಪಿ ಲಿಂಗಣ್ಣ

ಡಾ||ಎಂ.ಎನ್. ವಾಲಿ

ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 'ಚಡಚಣ' ಎಂಬ ದೊಡ್ಡ ಗ್ರಾಮದಲ್ಲಿ ಸಿಂಪಿ ಮನೆತನದಲ್ಲಿ ಶಿವಯೋಗಿ ಮತ್ತುಸಾವಿತ್ರಿ ಎಂಬ ದಂಪತಿಗಳ ಪುಣ್ಯೋದರದಿಂದ ದಿನಾಂಕ ೧೦ ಫೆಬ್ರವರಿ ೧೯೦೫ ರಂದು ಸಿಂಪಿ ಲಿಂಗಣ್ಣನವರು ಜನಿಸಿದರು. ಈ ಮಗುವಿಗೆ ನಾಮಕರಣದಲ್ಲಿ ಇಟ್ಟ ಹೆಸರು ಅಜ್ಜನ ಹೆಸರಾದ ನಾಗಪ್ಪ. ತನ್ನ ಪತಿಯ ಹೆಸರು ಮೊಮ್ಮಗನಿಗಿಟ್ಟ ಕಾರಣ ಆ ಹೆಸರಿನಿಂದ ಕರೆಯಲು ಅಜ್ಜಿ ದಾನವ್ವಳಿಗೆ ಮುಜುಗರ. ಈ ಕಾರಣದಿಂದಾಗಿ ಲಿಂಗಪ್ಪ ಎಂದಾಯಿತು. ಅನಂತರ ಮಧುರಚೆನ್ನರ ಆಶಯದಿಂದ ಲಿಂಗಣ್ಣ ಎಂದಾಗಿ ಅಡ್ಡಹೆಸರು ಕೂಡಿ 'ಸಿಂಪಿ ಲಿಂಗಣ್ಣ' ಎಂದು ರೂಪುಗೊಂಡಿತು. ಅದು ಕೊನೆಗೂ ಉಳಿದುಬಂದುದು 'ಸಿಂಪಿ ಲಿಂಗಣ್ಣ' ಎಂಬುದಾಗಿಯೆ.

೧೯೨೨ ರಲ್ಲಿ ಮುಲ್ಕೀ ಪರೀಕ್ಷೆಯಲ್ಲಿ ವಿಜಾಪುರ ಜಿಲ್ಲೆಗೆ ಪ್ರಥಮಸ್ಥಾನ ಪಡೆದು ಲಿಂಗಣ್ಣ ಉತ್ತೀರ್ಣರಾದರು. ಮುಂದೆ ಕಲಿಯಲು ಬಡತನ ಅಡ್ಡಿ ಮಾಡಿತ್ತು. ಅತ್ತಿಗೆ ಗುರುಬಾಯಿ ಜಾನಪದ ತ್ರಿಪದಿಗಳನ್ನು ಚೆನ್ನಾಗಿ ಹಾಡುತ್ತಿದ್ದುದರಿಂದ ಅದನ್ನು ಕೇಳಿದ ಲಿಂಗಣ್ಣನಿಗೆ ಜಾನಪದದ ಗುಂಗು ಹಿಡಿಯಿತು. ಅವರು ಈ ಮಾರ್ಗದಲ್ಲಿ ಮುನ್ನಡೆದು ಜಾನಪದ ಭೀಷ್ಮರೆನಿಸಿದರು. ಜಾನಪದವೇ ಅವರ ಉಸಿರಾಯಿತು.

ಕ್ರಿ.ಶ.೧೯೨೮ ರ ವೈಶಾಖ ಮಾಸದಲ್ಲಿ ಚಡಚಣದ ಕೇಶಟ್ಟಿ ಮನೆತನದ ಸೊಲಬವ್ವ (ಸುಲಭಾ) ಎಂಬುವರೊಡನೆ ಲಿಂಗಣ್ಣನವರ ಮದುವೆಯಾಯಿತು. ಸಿಂಪಿ ಲಿಂಗಣ್ಣನವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಜೀವನವನ್ನಾರಂಭಿಸಿ ಮೂವತ್ತೈದು ವರ್ಷ ಸೇವೆ ಸಲ್ಲಿಸಿ ೧೯೬೦ರಲ್ಲಿ ನಿವೃತ್ತರಾದರು. ಅವರಲ್ಲಿ ಅದ್ಭುತವಾದ ಸ್ಮರಣಶಕ್ತಿಯಿತ್ತು. ಜ್ಞಾನದಾಹದಿಂದ ಹಿಂದಿ, ಬಂಗಾಲಿ ಭಾಷೆಗಳ ಅಧ್ಯಯನ ಮಾಡಿದ್ದರು.

೧೯೬೦ ರಲ್ಲಿ ಅವರಿಗೆ ಆದರ್ಶ ಶಿಕ್ಷಕರೆಂದು ಡಾ|| ರಾಜೇಂದ್ರ ಪ್ರಸಾದರಿಂದ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿ ಪಡೆದ ಮೊದಲ ಕನ್ನಡಿಗರಿವರು. ನವೋದಯ ಆರಂಭದಿಂದಲೇ ಸಾಹಿತ್ಯ ಕೃಷಿಗೆ ತೊಡಗಿದ ಸಿಂಪಿ ಲಿಂಗಣ್ಣನವರು ಈ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮ ಶಕ್ತಿ ಸಾಮರ್ಥ್ಯಗಳಿಗನುಗುಣವಾಗಿ ಕಾರ್ಯ ಮಾಡಿದ್ದಾರೆ.

ಸಿಂಪಿ ಲಿಂಗಣ್ಣನವರ ಹೆಸರು ಹೊಸಗನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿ ನಿಂತಿರುವುದು ಅವರ ಜನಪದ ಸಾಹಿತ್ಯ ಕ್ಷೇತ್ರದ ಗಣನೀಯ ಸೇವೆಯಿಂದ. ಜನಪದ ಸಂಗ್ರಹ ಕಾರ್ಯದಲ್ಲಿ 'ಗರತಿಯ ಹಾಡು' ಹಲಸಂಗಿ ಗೆಳೆಯರ ಸಾಮೂಹಿಕ ಕೊಡುಗೆ. 'ಜೀವನ ಸಂಗೀತ'ವು ಪಿ. ಧೂಲಾ ಅವರೊಡಗೂಡಿ ಸಂಗ್ರಹಿಸಿ ಪ್ರಕಟಿಸಿದ ಲಾವಣಿಗಳ ಗ್ರಂಥ. ಆದರೆ 'ಉತ್ತರ ಕರ್ನಾಟಕದ ಜನಪದ ಕತೆಗಳು'ಸಿಂಪಿಯವರ ಸ್ವಂತದ ಕೊಡುಗೆ. ಈ ಮೂರೂ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ಚಿರಕಾಲ ಉಳಿಯುವಂತಹವು.

೧. ಗರತಿಯ ಹಾಡು:

ಹಲಸಂಗಿ ಗೆಳೆಯರಲ್ಲಿ ಮಧುರಚೆನ್ನ, ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ -ಇವರು ಪರಿಶ್ರಮಪಟ್ಟು ಈ ಜನಪದ ತ್ರಿಪದಿಗಳ ಸಂಕಲನವನ್ನು ೧೯೩೧ರಲ್ಲಿ ಪ್ರಕಟಿಸಿದರು. ಅನಂತರ ಈ ಕೃತಿಯ ಅನೇಕ ಆವೃತ್ತಿಗಳು ಹೊರಬಂದಿದ್ದು ಇದರ ಉಪಯುಕ್ತತೆ ಹಾಗೂ ಜನಪ್ರಿಯತೆಗೆ ನಿದರ್ಶನವಾಗಿದೆ. ಈ ಗ್ರಂಥದ ಆರಂಭದಲ್ಲಿ ಬಿ.ಎಂ.ಶ್ರೀಯವರ ಪ್ರಸ್ತಾವನೆ, ದ.ರಾ. ಬೇಂದ್ರೆಯವರ ಪರಿಚಯ, ಮಾಸ್ತಿಯವರ ಆಶೀರ್ವಾದ, ಸಿಂಪಿ ಲಿಂಗಣ್ಣನವರ ಅರಿಕೆ ಇದ್ದು ಅವೆಲ್ಲ ಜನಪದ ಸಾಹಿತ್ಯಾಭ್ಯಾಸಿಗಳಿಗೆ ಅತ್ಯುಪಯುಕ್ತವಾಗಿವೆ. ಸಿಂಪಿಯವರು ಅರಿಕೆಯಲ್ಲಿ ಗರತಿಯ ತ್ಯಾಗ ಜೀವನ, ಅವಳ ಪ್ರೇಮದ ಹೊನಲು, ಆ ಹೊನಲಿನಿಂದ ಹೊರಹೊಮ್ಮಿದ ಅಪ್ರತಿಮ ಹಾಡಿನ ಬುಗ್ಗೆ, ಅವಳ ಕೃತಜ್ಞತಾ ಭಾವ, ಆಕೆಯ ಗೆಲುವಿನ ಗುಟ್ಟು-ಮೊದಲಾದ ಸಂಗತಿಗಳನ್ನು ವಿವರಿಸಿದ್ದಾರೆ. ಹಾಡುಗಳಲ್ಲಿ ಪರಂಪರೆ, ಸ್ತುತಿ, ಬಂಧು-ಬಳಗ, ಹರಕೆ, ಬಂಜೆ, ವೈಧವ್ಯ, ಹಾಸ್ಯ, ಪೌರಾಣಿಕ, ಐತಿಹಾಸಿಕ ವರ್ಣನೆ, ಸಂವಾದ, ಪ್ರಾರ್ಥನೆ, ನೀತಿ-ಇತ್ಯಾದಿ ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಕೊನೆಯಲ್ಲಿ ಬಳಕೆ ಮಾತಿನ ಪದ ಪ್ರಯೋಗಗಳನ್ನೂ, ಶಬ್ದಕೋಶವನ್ನೂ ಕೊಡಲಾಗಿದೆ. ಈ ಸಂಗ್ರಹ ಇಂದಿಗೂ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ಇದನ್ನು ಹಲವಾರು ವಿದ್ವಾಂಸರು ಮೆಚ್ಚಿಕೊಂಡಿದ್ದಾರೆ. ಒಟ್ಟಿನಲ್ಲಿ 'ಗರತಿಯ ಹಾಡು' ಜನಪದ ಹಾಡುಗಳ ಆದ್ಯ ಸಂಗ್ರಹವಾಗಿರುವಂತೆ, ಅದ್ವಿತೀಯ ಸಂಗ್ರಹವವೂ ಆಗಿದೆ.

೨. ಜೀವನ ಸಂಗೀತ:

ಇದು 1933 ರಲ್ಲಿ ಪ್ರಕಟವಾದ ಕನ್ನಡ ಲಾವಣಿಗಳ ಸಂಗ್ರಹ. ಕೃತಿರೂಪದಲ್ಲಿ ಬಂದ ಪ್ರಥಮ ಲಾವಣಿಗಳ ಗ್ರಂಥ. ಆರಂಭದಲ್ಲಿರುವ 'ಪ್ರಾರ್ಥನೆ' ಎಂಬ ಕಿರುಲಾವಣಿ ಇಲ್ಲಿಯ ಎಲ್ಲ ಲಾವಣಿಗಳಿಗೆ 'ಸಖಿ'ಯಂತೆಯೂ, 'ನಿನ್ನ ಹೊರತು ದೇವರೇ ಇಲ್ಲ'- ಎಂಬ ಕೊನೆಯ ಲಾವಣಿ 'ಖ್ಯಾಲಿ'ಯಂತೆಯೂ ಇರುವುದು. ಪ್ರಸ್ತುತ ಗ್ರಂಥಕ್ಕೆ ಕೊಟ್ಟ 'ಜೀವನ ಸಂಗೀತ' ಎಂಬ ಹೆಸರಿನ ಔಚಿತ್ಯವನ್ನು ಕುರಿತು ಸಂಗ್ರಹಕಾರರು ಈ ರೀತಿ ಹೇಳಿದ್ದಾರೆ. ''ವಿವಿಧ ಸ್ವರಗಳನ್ನು ಉಚಿತವಾಗಿ ಬಳಸಿಕೊಂಡರೆ ಅದು ಸಂಗೀತ; ವಿವಿಧ ರಸಗಳನ್ನು ಉಚಿತವಾಗಿ ಬಳಸಿಕೊಂಡರೆ ಅದು ಜೀವನ; ಅಂತೆಯೇ ಇದು ಜೀವನ ಸಂಗೀತ.'

ಇದು ಹನ್ನೆರಡು ಶೃಂಗಾರ ಲಾವಣಿಗಳ ಸಂಗ್ರಹ. ಇವುಗಳನ್ನು ಏಳು ಜನ ಲಾವಣಿಗಾರರಿಂದ ಸಂಗ್ರಹಿಸಲಾಗಿದೆ. ಇಲ್ಲಿಯ ಎಲ್ಲ ಲಾವಣಿಗಳು ಅಪರೂಪದವು. ಇವುಗಳಲ್ಲಿ ಪ್ರಾರ್ಥನೆ, ಅಸಲಜಾತ ಹೆಣ್ಣು, ಸಂಪಿಗಿ ತೆನಿಯಂಥ ಹುಡುಗ, ಚಂದ್ರಾಣಿ, ಕರೀ ಹುಡುಗಿ, ನಿನ್ನ ಹೊರತು ದೇವರೇ ಇಲ್ಲ-ಈ ಲಾವಣಿಗಳು ಹಲಸಂಗಿಯ ಖಾಜಾ ಸಾಹೇಬ ಎಂಬುವನವು. ಈತನ ಲಾವಣಿಗಳ ಶಕ್ತಿ ಇನ್ನಿತರರಿಗಿಲ್ಲವೆನಿಸುತ್ತದೆ. 'ವತ್ಸಲಾ ಹರಣ'ವು ಕುಬ್ಬಣ್ಣನದು; 'ಗೋಕುಲಾಷ್ಟಮಿ'ಯು ಸಂಗಣ್ಣನದು; 'ಬಸರಿದ್ದೀನ್ನೆ ಸರಿನ್ನೇನಿಡೂನ'-ಇದು ಜನವಾಡ ನಾನಾ ಸಾಹೇಬನದು, 'ನಾಗರಪಂಚಮಿ'ಯು ನಾಮಣ್ಣನದು; ಕೃಷ್ಣಲೀಲೆ, ಗಿಡ್ನ ಪೋರಿ ಮತ್ತು ಭೀಷ್ಮ ಪರ್ವಗಳು ಸಿದ್ಧಿ ಶಿವಲಿಂಗನವು. 'ಅಪ್ಪೂರ ಮಾತಿದು' ಎಂಬುದು ತೇರದಾಳದ ಗೋಪಾಲ ದುರುದುಂಡಿಯಿಂದ ರಚಿತವಾದುದು. ಇಲ್ಲಿಯ ಬಹುತೇಕ ಲಾವಣಿಗಳಲ್ಲಿ ಶೃಂಗಾರದೊಡನೆ ಹಾಸ್ಯವು ಮೇಳವಿಸಿ ಬಂದಿದೆ. ಇವೆರಡೂ ಮಿತ್ರ ರಸಗಳೆಂಬುದು ಇಲ್ಲಿ ಗಮನಿಸಬೇಕಾದ ಅಂಶ. ಈ ಲಾವಣಿಗಳಲ್ಲಿಯ ವಸ್ತು ವಿನ್ಯಾಸ, ಭಾವಸಂಪತ್ತು, ಕಲ್ಪನಾಚಾತುರ್ಯ, ಪ್ರಾಸಗಳ ಹೊಂದಿಕೆ ಮೊದಲಾದ ಗುಣಗಳಿಂದ ನಮ್ಮ ಜನಪದ ಲಾವಣಿಗಳ ಸ್ವರೂಪವನ್ನು ತಿಳಿಯಲು ತುಂಬ ಸಹಾಯಕವಾಗಿದೆ. ಇದೊಂದು ಉತ್ಕೃಷ್ಟ ಲಾವಣಿಗಳ ಸಂಗ್ರಹವೆಂದು ಅನೇಕ ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ.

೩. ಉತ್ತರ ಕರ್ನಾಟಕದ ಕಥೆಗಳು:

ಇದು ಕೇಂದ್ರ ಸಾಹಿತ್ಯ ಅಕಾಡೆಮಿಯವರು ಪ್ರಕಟಿಸಿದ ಸಿಂಪಿ ಲಿಂಗಣ್ಣನವರ ಜನಪದ ಕಥಾ ಸಂಗ್ರಹ. ಸಿಂಪಿಯವರು ೧೬ ರಮ್ಯ ಕಥೆಗಳು, ೧೧ ಅತಿಮಾನುಷ ಕಥೆಗಳು, ೧೪ ವಾಸ್ತವಿಕ ಕಥೆಗಳು, ೧೦ ಬುದ್ಧಿವಂತಿಕೆಯ ಕಥೆಗಳು, ೨ ವಿವರಣಾತ್ಮಕ ಕಥೆಗಳು, ೫ ನೀತಿ ಕಥೆಗಳು, ೫ ಪ್ರಾಣಿ ಕಥೆಗಳು, ೬ ವಿನೋದ ಕಥೆಗಳು ಹೀಗೆ ೮ ವಿಭಾಗಗಳಲ್ಲಿ ಒಟ್ಟು ೬೯ ಕಥೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಇದರಲ್ಲಿ ತಾವು ಆಗಾಗ ಕೇಳಿದ ಕೆಲವು ಕತೆಗಳನ್ನು ಬರೆದು ಸೇರಿಸಿದ್ದಾರೆ. ಲೇಖಕರು ಗ್ರಂಥಾರಂಭದಲ್ಲಿ ೧೨ ಪುಟಗಳಷ್ಟು ದೀರ್ಘವಾದ ಪರಿಚಯವನ್ನು ಕೊಟ್ಟಿರುವುದು ಜನಪದ ಅಭ್ಯಾಸಿಗಳಿಗೆ ಸಹಾಯಕವಾಗಿದೆ.

ಜನಪದ ಸಾಹಿತ್ಯದಲ್ಲಿ ಸಿದ್ಧಹಸ್ತರಾದ ಸಿಂಪಿ ಲಿಂಗಣ್ಣನವರು 'ಗರತಿಯ ಹಾಡು' ಕೃತಿಯಲ್ಲಿ ಹೆಣ್ಣಿನ ಜೀವನದ ವಿವಿಧ ಮುಖಗಳನ್ನೂ ಅವರ ಬಾಳಿನ ಹಲವು ಹಂತಗಳನ್ನೂ ಸೊಗಸಾಗಿ ಮತ್ತು ಅನುಭವಪೂರ್ಣವಾಗಿ ಚಿತ್ರಿಸಿದ್ದಾರೆ. ಈ ಕೃತಿಯಲ್ಲಿ ಗರತಿಯ ಅವತಾರ, ಸಂಸಾರ ವೇದ, ಗರತಿಯ ದಾನ, ಜೀವನ ನಿಷ್ಠೆ, ಭಕ್ತಿಯ ಬೆಳಕು, ನಡೆದಾಡುವ ಭೂಮಿ, ಕಾವ್ಯ ಮಾತೆ, ಹೊಸಯುಗದ ಹೊಸ್ತಿಲು- ಹೀಗೆ ಎಂಟು ಪ್ರಕರಣಗಳಿವೆ. ಲೇಖನಗಳಲ್ಲಿ ಪ್ರತ್ಯೇಕತೆಯಿದ್ದರೂ, ಅಖಂಡತೆಯ ಸೂತ್ರವೊಂದಿದೆ. ಹಳ್ಳಿಯವರೆಂದು ಹೀಗಳೆಯುವ ನಮ್ಮ ಗರತಿಯರಲ್ಲಿ ಎಂತಹ ಸುಸಂಸ್ಕೃತ ಹೃದಯವಿದೆಯೆಂಬುದನ್ನು ಈ ಗ್ರಂಥವು ಮನಗಾಣಿಸಿಕೊಡುತ್ತದೆ. ''ಹೆಣ್ಣು ಮಕ್ಕಳ ಹಾಡು, ವಚನಗಳು, ಹೊನ್ನಮ್ಮನ ಹದಿಬದೆಯ ಧರ್ಮ- ಮೊದಲಾದವುಗಳ ರಸಪಾಕವನ್ನು ಜಗತ್ತಿನ ಮಹಾಪುರುಷರ ವಿಚಾರದ ಪಡಿಯಚ್ಚಿನಲ್ಲಿ

ಎರಕಹೊಯ್ದು ಕೆಲವು ಐತಿಹಾಸಿಕ ಸಂಗತಿಗಳ ಬಣ್ಣತೀಡಿ ಪವಿತ್ರವಾದ, ಪರಿಶುದ್ಧವಾದ, ಸುಂದರವಾದ ಗರತಿಯ ಬಾಳಪ್ರತಿಮೆಯನ್ನು ಕನ್ನಡಿಗರ ಕೈಗೆ ಕೊಟ್ಟಿದ್ದೇನೆ'' ಎಂದು ಲೇಖಕರು ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ. ಗರತಿ ಸಚ್ಚಿದಾನಂದ ಶಿಖರದಿಂದ ಇಳಿದು ತಾನು ಅಧಃ ಪತನ ಹೊಂದಿದರೂ ಲೋಕವನ್ನೆತ್ತಿ ಹಿಡಿಯ ಬಂದ ಶಕ್ತಿ. ಮಗಳು, ಹೆಂಡತಿ, ತಾಯಿ, ಅತ್ತೆ-ಇವು ಅವಳ ಉಪಸ್ವರೂಪಗಳು ಎಂದು ಗುರುತಿಸಿದ್ದಾರೆ.

'ಸಂಸಾರವೇದ'ದಲ್ಲಿ ಜನಪದ ತ್ರಿಪದಿಗಳಲ್ಲಿ ಕಂಡುಬರುವ ಹೆಣ್ಣಿನ ಸೊಗಸಾದ ಚಿತ್ರಣವಿದೆ. ಅತ್ತೆಯ ಮನೆಗೆ ಬಂದಾಗ ಅವಳು -ಗಂಡನಿಗೆ ಹೆಂಡತಿ, ಅತ್ತೆ ಮಾವಂದಿರ ಸೊಸೆ, ನಾದಿನಿ, ಭಾವ, ಮೈದುನರಿಗೆ ಅತ್ತಿಗೆ ಹೀಗೆ ಹಲವಾರು ಪಾತ್ರಗಳಲ್ಲಿ ಕಾಣಿಸಿಕೊಳ್ಳುವಳು. ಗರತಿಯ ಸಂತಾನವೇ ಅವಳ ದಾನ ಎಂಬ ವಿಚಾರವು 'ಗರತಿಯ ದಾನ' ಲೇಖನದಲ್ಲಿದೆ. ನಾಡಿನ ಪುಣ್ಯ ಜೀವಿಗಳೆಲ್ಲ ಗರತಿಯ ಮಕ್ಕಳೆಂಬ ಸತ್ಯವನ್ನು ಲೇಖಕರು ಸಾರಿದ್ದಾರೆ. ಬಡತನ, ಗೃಹಕಲಹ, ಅಮಿತ ಸಂತಾನಗಳು ನಮ್ಮ ಬಾಳಿನ ಅನಿಷ್ಟಗಳಾಗಿವೆ. ಪತಿಪುರುಷ ಸಾವಿರಕ್ಕೂ ಹೆಚ್ಚು ಎಂಬುದು ಗರತಿಯ ವಿಚಾರ. ದೇವರಲ್ಲಿ ಅವಳದು ಅಚಲ ವಿಶ್ವಾಸ; ಅಚಲ ಭಕ್ತಿ. ತಾಯಿಯನ್ನು ನಡೆದಾಡುವ ಭೂಮಿ ಎಂದು ಕರೆಯಲಾಗಿದೆ. ಗರತಿಯ ಹೃದಯದಿಂದ ಹೊರಹೊಮ್ಮಿದ ತ್ರಿಪದಿಗಳಲ್ಲಿ ಎಂತಹ ಶಕ್ತಿ ಸೌಂದರ್ಯಗಳು ಹುದುಗಿವೆಯೆಂಬುದನ್ನು ಮನಗಾಣಲು ಈ ಪುಸ್ತಕವನ್ನೊಮ್ಮೆ ಓದಲೇಬೇಕು.

೫. ಜನಾಂಗದ ಜೀವಾಳ:

ಇದು ೧೪ ಜಾನಪದ ಲೇಖನಗಳ ಸಂಗ್ರಹವಾಗಿದೆ. ಜನಪದ ಸಾಹಿತ್ಯವು ಜನಾಂಗದ ಜೀವಾಳ, ಲಾವಣಿಯ ಲಾವಣ್ಯ. ಜನಪದ ಸಾಹಿತ್ಯದಲ್ಲಿ ಕಂಡುಬರುವ ಜನಜೀವನ, ಹಳ್ಳಿ ಹಾಡುಗಳಲ್ಲಿ ದೇಶಾಭಿಮಾನ, ಮದುವೆಯ ಹಾಡುಗಳು, ಜನಪದ ಸಾಹಿತ್ಯದಲ್ಲಿ ಅದ್ಭುತ ಕಥೆಗಳು, ಬಯಲಾಟದ ಪದಗಳು, ಜನಪದ ಜೀವನದಲ್ಲಿ ಹಾಸ್ಯ, ಒಡಗತೆಗಳ ಸ್ವಾರಸ್ಯ, ಜನಪದ ಸಾಹಿತ್ಯದಲ್ಲಿ ಶಿವಾನುಭವ-ಮೊದಲಾದ ಲೇಖನಗಳು ಈ ಗ್ರಂಥದಲ್ಲಿವೆ. ಮಕ್ಕಳನ್ನಾಡಿಸುವ ಹಾಡುಗಳು ಲೇಖನದಲ್ಲಿ ಲಾಲಿ ಹಾಡುಗಳ ಪರಿಚಯವಿದೆ.

'ಮದುವೆಯ ಹಾಡುಗಳು' ಲೇಖನದಲ್ಲಿ ಹಾಡುಗಳ ಸೊಗಸನ್ನು ಉಲ್ಲೇಖಿಸುತ್ತ ನಮ್ಮ ಪೂರ್ವಜರ ಮದುವೆಯ ಸುಂದರ ಚಿತ್ರವನ್ನು ನಮ್ಮ ಮುಂದೆ ಬಿಡಿಸಿ ತೋರಿಸಿದ್ದಾರೆ. ಒಟ್ಟಿನಲ್ಲಿ ಈ ಗ್ರಂಥದಲ್ಲಿ ಕರ್ನಾಟಕದ ಜನಜೀವನ, ಸಾಹಿತ್ಯ, ಸಂಸ್ಕೃತಿಗಳ ನೈಜ ಚಿತ್ರವನ್ನು ಕಾಣುತ್ತೇವೆ. ಹಲವಾರು ತ್ರಿಪದಿಗಳ, ಒಡಪು-ಒಗಟುಗಳ, ಲೋಕೋಕ್ತಿಗಳ, ಜನಪದ ಬಳಕೆ ಮಾತುಗಳ ಉದಾಹರಣೆಗಳು ಕೃತಿಯ ಘನತೆಯನ್ನು ಹೆಚ್ಚಿಸಿವೆ.

೬. ಉತ್ತರ ಕರ್ನಾಟಕದ ಜನಪದ ಗೀತೆಗಳು:

ಈ ಕಿರುಹೊತ್ತಿಗೆಯಲ್ಲಿ ಉತ್ತರ ಕರ್ನಾಟಕದ ಜನಪದ ಗೀತೆಗಳ ಸಂಕ್ಷಿಪ್ತ ಪರಿಚಯವಿದೆ. ಉತ್ತರ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ವಿಜಾಪುರ, ಧಾರವಾಡ, ಬೆಳಗಾವಿ ಈ ಮೂರು ಜಿಲ್ಲೆಗಳ ಸಾಹಿತ್ಯ ಸತ್ವಯುತ ಹಾಗೂ ಸಾಕಷ್ಟು ಶ್ರೀಮಂತವಾಗಿದೆಯೆಂದು ಹೇಳಿದ್ದಾರೆ.

ಜನಪದ ಗೀತೆಗಳನ್ನು ಹೆಂಗಸರ ಹಾಡು, ಗಂಡಸರ ಹಾಡು ಮತ್ತು ಮಕ್ಕಳ ಹಾಡು ಎಂಬುದಾಗಿ ವಿಂಗಡಿಸಲಾಗಿದೆ. ಸಿಂಪಿಯವರು ಹಾಡುವ ಸಂದರ್ಭ, ರೀತಿ, ಬಗೆಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಜನಪದ ಸಾಹಿತ್ಯದ ಪ್ರಾಂತಭೇದಗಳನ್ನು ಪರಿಚಯಿಸುತ್ತ ಒಂದು ಶಬ್ದ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೇಗೆ ಭಿನ್ನವಾಗುತ್ತದೆಂಬುದನ್ನು ಸಾಧಾರವಾಗಿ ನಿರೂಪಿಸಿದ್ದಾರೆ. ಇವರ ಈ ವೈಜ್ಞಾನಿಕ ದೃಷ್ಟಿ ಕೃತಿಯ ಘನತೆಯನ್ನು ಹೆಚ್ಚಿಸಿದೆ. ಒಟ್ಟಿನಲ್ಲಿ ಮಕ್ಕಳಿಗೆ ಜನಪದ ಗೀತೆಗಳ ಪರಿಚಯವನ್ನು ಯಶಸ್ವಿಯಾಗಿ ಮಾಡಿಕೊಡುವ ಕೃತಿಯಿದು.

೭) ಜನಪದ ಸಾಹಿತ್ಯದಲ್ಲಿ ಕಿರಿದರೊಳೆ ಪಿರಿದರ್ಥದ ಚಲಕ:

ಜಾನಪದ ಕುರಿತು ಕರ್ನಾಟಕ ವಿಶ್ವವಿದ್ಯಾಲಯವು ಪ್ರಕಟಿಸಿದ ಉಪನ್ಯಾಸ ಗ್ರಂಥವಿದು. ಲೇಖಕರು ಒಂದು ಆದರ್ಶವನ್ನು ಹತ್ತು ಉಪ ಶೀರ್ಷಿಕೆಗಳಡಿಯಲ್ಲಿ ವಿವೇಚಿಸಿದ್ದಾರೆ. ಸಾಹಿತ್ಯವು ಜೀವನದೊಂದಿಗೆ ಕಾಣಿಸಿಕೊಂಡಿದ್ದು, ಜೀವನ ಸಾಹಿತ್ಯಗಳು ಒಂದನ್ನುಳಿದು ಇನ್ನೊಂದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ಜನಪದರು ನಿತ್ಯ ಜೀವನದಲ್ಲಿ ಆವೆಷ್ಟೋ ಶಬ್ದನಾಣ್ಯಗಳನ್ನು ನಿರ್ಮಿಸಿಕೊಂಡಿದ್ದಾರೆ. ಅವುಗಳಲ್ಲಿ ಅರ್ಥ ಸಂಪತ್ತು ಇದೆ. ತೊಳೆನೀರು, ಉಡಿದೆನೆ, ಹಿಡಿದೆನೆ, ಹಿಡಿಗಲ್ಲು, ಮೂಗುಮುರಿ, ಬೆರಳುಕಚ್ಚು, ಕಡದು, ಬಳದು, ಉಮ್ಮಿಗಿ, ಹಂಡಬಂಡ-ಮೊದಲಾದ ಶಬ್ದಗಳ ಅರ್ಥವನ್ನು ಸಿಂಪಿಯವರು ವಿವರಿಸಿದ್ದಾರೆ.

ಜನಪದ ಪಡೆನುಡಿಗಳ ಅರ್ಥ ವಿವರಿಸುವ ಕೋಶವೊಂದು ಸಿದ್ಧಪಡಿಸುವುದು ಈಗ ಅಗತ್ಯವಾಗಿದೆ. ಸಿಂಪಿ ಲಿಂಗಣ್ಣನವರ ಈ ಬಗೆಯ ಕಾರ್ಯ ಅಂಥ ಪದಕೋಶ ರಚನೆಗೆ ದಿಕ್ಸೂಚಿಯಾಗಿದೆ.

ಜನಪದ ಸಾಹಿತ್ಯದಲ್ಲಿ ಚುಟುಕುಗಳು, ನಗೆಪ್ರಸಂಗಗಳು, ತ್ರಿಪದಿಗಳ ಉಪಯುಕ್ತತೆ - ಇವುಗಳನ್ನು ವಿವರಿಸುತ್ತ ಈ ಸಾಹಿತ್ಯವೊಂದು ಅಕ್ಷಯನಿಧಿ ಎಂದಿದ್ದಾರೆ.

೮. ಕನ್ನಡ ಲಾವಣಿಗಳು:

ಈ ಪುಟ್ಟ ಪುಸ್ತಕದಲ್ಲಿ ಲಾವಣಿ ಸಾಹಿತ್ಯದ ಪರಿಚಯವಿದೆ. ಇದಕ್ಕೆ ಡಪ್ಪಿನ ಹಾಡು, ಹರದೇಶೀ-ನಾಗೇಶಿ ಹಾಡು, ಜೀ ಪದ, ಗೀ ಪದ-ಇತ್ಯಾದಿ ಹೆಸರುಗಳಿವೆ. ಲಾವಣಿ ಶಬ್ದದ ಉತ್ಪತ್ತಿ ಕುರಿತು ಹಲವು ವಿಚಾರಗಳನ್ನು ತಿಳಿಸುತ್ತ, ಅದರ ಸ್ಪಷ್ಟ ನಿರ್ಣಯಕ್ಕೆ ಬಾರದೆ, ಅದರ ಉಗಮ, ವಿಕಾಸಗಳು, ಅಧ್ಯಯನ ನಡೆಯಬೇಕಾದುದರ ಅವಶ್ಯಕತೆಯನ್ನು ಎತ್ತಿ ಹೇಳಿದ್ದಾರೆ.

ಸಮಗ್ರ ಕರ್ನಾಟಕದ ಲಾವಣಿಗಳಲ್ಲಿ ಉತ್ತರ ಕರ್ನಾಟಕದ ಲಾವಣಿಗಳು-ಛಂದಸ್ಸು, ಹಾಡಿನ ಹಿಮ್ಮೇಳ, ಬಳಸುವ ವಾದ್ಯ-ಮೊದಲಾದವುಗಳಿಂದ ಲೋಕರಂಜನೆಯ ಗುಣವನ್ನೊಳಗೊಂಡಿದ್ದು ಅವು ವಿಶಿಷ್ಟವಾಗಿವೆ. ಮೇಳ ಲಾವಣಿ, ಬಯಲು ಲಾವಣಿಗಳಿಗಿರುವ ವ್ಯತ್ಯಾಸ, ಲಾವಣಿಯ ಸ್ಥೂಲಾಂಗಗಳಾದ -ಸಖಿ, ಪ್ರಧಾನ ಕಥನ, ಖ್ಯಾಲಿ- ಇವುಗಳ ವಿವರಣೆ ಈ ಕೃತಿಯಲ್ಲಿ ಬಂದಿದೆ.

೮. ಹೆಡಿಗೆ ಜಾತ್ರೆ:

ಇದು ಹದಿನೇಳು ಬಿಡಿ ಲೇಖನಗಳ ಸಂಕಲನವಾಗಿದೆ. ಜನಪದ ಸಾಹಿತ್ಯದ ವೈವಿಧ್ಯವನ್ನು ಇಲ್ಲಿನ ಲೇಖನಗಳಲ್ಲಿ ಕಾಣಬಹುದು. ಈ ಗ್ರಂಥದ 'ಅರಿಕೆ'ಯಲ್ಲಿ ಲೇಖಕರು ''ಹೆಡಿಗೆ ಜಾತ್ರೆಯಲ್ಲಿ ಸಂಕಲನಗೊಂಡ ಲೇಖನಗಳು ಹಸಿವು ಹಿಂಗಿಸುವ ಸವಿತಿನಿಸು ಮಾತ್ರ ಆಗಿರದೆ, ಹಸಿವು ಹುಟ್ಟಿಸುವ ಶಕ್ತಿವರ್ಧಕವೂ ಆಗಿರುವವೆಂದು ನಾನೆಣಿಸಿದ್ದೇನೆ'' ಎಂದಿದ್ದಾರೆ.

'ಜನಪದ ಸಾಹಿತ್ಯದ ವೈವಿಧ್ಯ-ಸೊಗಸು'- ಲೇಖನದಲ್ಲಿ ಹಲವಾರು ಗಾದೆಗಳನ್ನು ಅಂದಿನ ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. 'ಜಾನಪದದಲ್ಲಿ ಸೌಂದರ್ಯ ಕಲ್ಪನೆ' ಈ ಲೇಖನದಲ್ಲಿ ಜಾನಪದರ ಬಾಳು ಸಾಮಾನ್ಯರಲ್ಲಿ ಅಸಾಮಾನ್ಯವಾದುದು ಎಂದು ಹೇಳಿ, ''ನಮ್ಮ ಜನಪದವೆಂದರೆ ನಿಸರ್ಗದ ಮಡಿಲಲ್ಲಿ ಮಲಗಿರುವ ಮುಗ್ಧ ಮಗು. ಭೂಮಿತಾಯಿಯ ಚೊಚ್ಚಿಲ ಸಂತಾನ. ಅದು ಕಣ್ಣು ತೆರೆದು ಚೆಲುವಿನ ರಾಶಿಯನ್ನು ಕಾಣುತ್ತದೆ. ಕಿವಿಗೊಟ್ಟು ಒಲವಿನ ದನಿಯನ್ನು ಕೇಳುತ್ತದೆ. ಅದೊಂದು ಆತ್ಮ ಜಾಗೃತಿಯ ಸಾಧನ'' ಎಂದು ಅಭಿಪ್ರಾಯಪಟ್ಟಿದ್ದಾರೆ.

ಹಬ್ಬ-ಹರಿದಿನಗಳು, ಉತ್ಸವಾಮೋದಗಳು-ನಮ್ಮ ಜನಪದರ ಸೌಂದರ್ಯ ದೃಷ್ಟಿಯನ್ನು ಎತ್ತಿ ತೋರಿಸುತ್ತವೆ. ಜನಪದಕ್ಕೆ ಹೃದಯವಂತಿಕೆಯೆ ಜೀವಾಳ ಎಂಬುದು ಲೇಖಕರ ಅಭಿಪ್ರಾಯವಾಗಿದೆ. ಜನಪದರ ಜೀವನಾನುಭವವೇ ಗೀತವಾಗಿ, ಕಥೆಯಾಗಿ, ಗಾದೆ ಒಗಟುಗಳಾಗಿ ಜನಪದ ಸಾಹಿತ್ಯವೆನಿಸಿದೆ ಎಂದಿದ್ದಾರೆ.

'ಜನಪದ ಸಾಹಿತ್ಯದಲ್ಲಿ ಔಚಿತ್ಯ' ಇದು ಗಾದೆಗಳ ವಿವರಣೆಯನ್ನೊಳಗೊಂಡ ಲೇಖನ. 'ಗಾದೆ ವೇದಕ್ಕೆ ಸಮಾನ' ಎಂದು ಹೇಳುತ್ತ ಹಲವಾರು ಗಾದೆಯ ಮಾತುಗಳನ್ನು ಉದಾಹರಿಸಿ ಅವುಗಳ ಅರ್ಥವಿವರಣೆ ಕೊಟ್ಟಿದ್ದಾರೆ. 'ಡೊಳ್ಳಿನ ಹಾಡುಗಳು' ಲೇಖನದಲ್ಲಿ ಡೊಳ್ಳಿನ ಹಾಡುಗಳ ವ್ಯಾಖ್ಯೆ ಕೊಡುತ್ತ ಕುರುಬರು-ಮಾಳಿಂಗರಾಯನ ಕಥೆ, ಗೋಲಗೇರಿ ಗೊಲ್ಲಾಳನ ಕತೆ, ಬೀರದೇವರ ಚರಿತ್ರೆ, ಶಿವಪಾರ್ವತಿಯರ ಹಾಡು, ನೀತಿಯ ಹಾಡು ಮೊದಲಾದವುಗಳನ್ನು ಹಾಡುತ್ತಾರೆಂದು ಹೇಳಿ ಇವು ಭಕ್ತಿರಸಪೂರಿತವಾಗಿರುತ್ತವೆ ಎಂದಿರುವರು. 'ಚೌಡಿಕೆಯ ಹಾಡುಗಳು'- ಬರಹದಲ್ಲಿ ಚೌಡಿಕೆ ವಾದ್ಯದ ವಿವರಣೆ ಕೊಡಲಾಗಿದೆ. ಕರ್ನಾಟಕದ ಉಚ್ಚಂಗಿ (ಜಿ.ಬಳ್ಳಾರಿ), ಚಂದ್ರಗುತ್ತಿ (ಜಿ. ಶಿವಮೊಗ್ಗ), ಹುಲಗಿ(ಜಿ. ರಾಯಚೂರ), ಸವದತ್ತಿ (ಜಿ. ಬೆಳಗಾವಿ) ಇವು ನಾಲ್ಕು ಶಕ್ತಿದೇವತೆಯ ಕೇಂದ್ರಗಳೆಂದು ತಿಳಿಸಿದ್ದಾರೆ. ಜೋಗಯ್ಯ ಜೋಗತಿಯರ ಉಡಿಗೆ-ತೊಡಿಗೆ, ಅವರ ತಲೆಯ ಮೇಲಿನ ಬಿಂದಿಗೆ ದೇವರು, ಶಾಪಗ್ರಸ್ತ ಗಂಡಸರು ಸೀರೆಯುಟ್ಟು ಮೇಳದೊಂದಿಗೆ ತಿರುಪೆ ಬೇಡಿ ಜೀವಿಸುವರು-ಇತ್ಯಾದಿ ವಿವರಗಳಿವೆ.

'ಶ್ರೀ ಕೃಷ್ಣ ಪಾರಿಜಾತ ನಾಟಕ'ಲೇಖನದಲ್ಲಿ 'ಶ್ರೀ ಕೃಷ್ಣ ಪಾರಿಜಾತ'ವು ಬಯಲಾಟಗಳಲ್ಲಿ ಚೂಡಾರತ್ನ ಎಂಬ ಅಭಿಪ್ರಾಯಪಟ್ಟಿದ್ದು, ಇದು ಹಳ್ಳಿ ಬದುಕಿನ ಪ್ರತಿಬಿಂಬ ಎಂದಿದ್ದಾರೆ.

'ಶ್ರೀ ಕೃಷ್ಣ ಪಾರಿಜಾತ' ಕಲೆ ಬೆಳೆದುಬಂದ ಇತಿಹಾಸವನ್ನು ಗುರುತಿಸಿರುವುದು ಉಪಯುಕ್ತವಾಗಿದೆ. ಈ ಲೇಖನ ಪಾರಿಜಾತದ ಹುಟ್ಟು-ಬೆಳವಣಿಗೆ, ಮರಾಠಿ ನಾಟಕಗಳ ಉದಯ-ವಿಕಾಸದ ಮೇಲೆ ಖಂಡಿತವಾಗಿ ಬೆಳಕು ಚೆಲ್ಲುತ್ತದೆ. 'ಜಾನಪದದಲ್ಲಿ ಕೊಂಕುನುಡಿ', 'ಜಾನಪದ ಚಿಕಿತ್ಸೆಗಳು', 'ಜಾನಪದದಲ್ಲಿ ಪ್ರಾಣಿಗಳ ಅನ್ಯೋಕ್ತಿಗಳು', 'ಜಾನಪದ ಜೀವನದ ಔದ್ಯಮಿಕ ಶಬ್ದಗಳು', 'ಜಾನಪದ ಕಲೆಗಳ ಪರಮಪ್ರಯೋಜನ', 'ಲೋಕ ಸಾಹಿತ್ಯದಲ್ಲಿ ಗಾಂಧೀಜಿ'- ಹೀಗೆ ಯಾವುದೇ ಲೇಖನ ಗಮನಿಸಿದರೂ ಜಾನಪದ ಸತ್ವ ಅವುಗಳಲ್ಲಿ ಎದ್ದು ಕಾಣುತ್ತದೆ. ಜನಪದ ಜೀವನ ಹಾಗೂ ಸಾಹಿತ್ಯದ ಅನೇಕ ಮುಖಗಳನ್ನು ಚಿತ್ರಿಸುವ ಸಿಂಪಿಯವರ ಈ ಕೃತಿ ಮೌಲಿಕವಾದುದು; ಅಧ್ಯಯನ ಯೋಗ್ಯವಾದುದು.

ಸಿಂಪಿಯವರ ಜಾನಪದ ಸಾಹಿತ್ಯ ಕೃತಿಗಳನ್ನುಹೊರತುಪಡಿಸಿದರೂ, ಅವರ 'ತಲೆಮಾರಿನ ಹಿಂದೆ' ಪ್ರಬಂಧ ಸಂಕಲನದಲ್ಲಿ ಜನಪದ ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ಅಧ್ಯಯನ ಮಾಡುವವರಿಗೆ ಸಾಕಷ್ಟು ಸಾಮಗ್ರಿ ಸಿಗುತ್ತದೆ. ಹಾಗೆಯೇ 'ನೂರುಗಡಿಗೆ ಒಂದು ಬಡಿಗೆ' ಎಂಬುದು ಸಿಂಪಿಯವರ ೧೧೮ ಪ್ರಬಂಧಗಳ ಸಂಕಲನ. ಸಿಂಪಿಯವರ ಈ ಬೃಹತ್ ಗ್ರಂಥವು ವಿಶ್ವಜೀವನಕೋಶದಂತಿದೆ. ಇಲ್ಲಿಯೂ ನಾವು ಜನಪದ ಸಾಹಿತ್ಯದ ವಿಚಾರಗಳನ್ನು ಗ್ರಂಥದುದ್ದಕ್ಕೂ ಕಾಣುತ್ತೇವೆ. ಹೀಗೆ ಸಿಂಪಿಯವರ ಜಾನಪದ ಕೊಡುಗೆ ಗಮನಾರ್ಹವಾದುದು.

ಸಿಂಪಿ ಲಿಂಗಣ್ಣನವರು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಶ್ರಮಿಸಿ ನೂರಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದರೂ, ಸಿಂಪಿ ಲಿಂಗಣ್ಣ ಎಂದೊಡನೆ ಅವರ ಜಾನಪದ ವ್ಯಕ್ತಿ ಚಿತ್ರ ನಮ್ಮ ಕಣ್ಣೆದುರು ನಿಲ್ಲುತ್ತದೆ. ಅದಕ್ಕೆ ಪ್ರತಿಫಲವಾಗಿ ಜಾನಪದ ಕ್ಷೇತ್ರದಲ್ಲಿ ಅವರಿಗೆ ಅನೇಕ ಸ್ಥಾನಮಾನಗಳು ದೊರಕಿದ್ದು ಅವುಗಳ ವಿವರ ಇಂತಿದೆ:

1. ಕ್ರಿ.ಶ. ೧೯೪೪ ರ ಡಿಸೆಂಬರ್ ೨೮ ರಿಂದ ೩೦ ರವರೆಗೆ ರಬಕವಿಯಲ್ಲಿ ಜರುಗಿದ ೨೮ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಜಾನಪದ ಗೋಷ್ಠಿಯ ಅಧ್ಯಕ್ಷರಾಗಿದ್ದರು.
೨. ಕ್ರಿ.ಶ. ೧೯೬೬ ರಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು.
೩. ಕ್ರಿ.ಶ. ೧೯೬೭ ರಲ್ಲಿ ಫೆಬ್ರುವರಿ ೩ ರಿಂದ ೫ ರವರೆಗೆ ಮಂಗಳೂರಿನಲ್ಲಿ ಮೈಸೂರು ವಿಶ್ವವಿದ್ಯಾಲಯದವರು ಏರ್ಪಡಿಸಿದ್ದ ಅಖಿಲ ಕರ್ನಾಟಕ ದ್ವಿತೀಯ ಜಾನಪದ ಸಮ್ಮೇಳನದ ಅಧ್ಯಕ್ಷರಾಗಿದ್ದರು.
೪. ಕ್ರಿ.ಶ. ೧೯೬೩ ರಲ್ಲಿ ಜನವರಿ ೨೩ ರಿಂದ ೨೫ ರವರೆಗೆ ಕರ್ನಾಟಕ ವಿಶ್ವವಿದ್ಯಾಲಯದವರು ನಡೆಸಿದ ಅಖಿಲ ಕರ್ನಾಟಕ ಪ್ರಥಮ ಜಾನಪದ ಸಮ್ಮೇಳನದ ಗೋಷ್ಠಿಯೊಂದರ ಅಧ್ಯಕ್ಷರಾಗಿದ್ದರು.
೫. ಕ್ರಿ.ಶ. ೧೯೬೭ ರ ಡಿಶೆಂಬರ ೧ರಿಂದ ೫ ರವರೆಗೆ ಸಾಗರದಲ್ಲಿ ಜರುಗಿದ ರಾಜ್ಯಮಟ್ಟದ ಜಾನಪದ ಸಾಹಿತ್ಯೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿದ್ದರು.

೬. ಕ್ರಿ.ಶ. ೧೯೭೯ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವು ಇಲಕಲ್ಲದಲ್ಲಿ ಏರ್ಪಡಿಸಿದ ಅಖಿಲ ಕರ್ನಾಟಕ ಆರನೆಯ ಜನಪದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

೭. ಬೆಂಗಳೂರಿನಲ್ಲಿ ದಿನಾಂಕ ೨.೧೦.೧೯೮೦ ರಂದು ಜರುಗಿದ ಕರ್ನಾಟಕ ಜಾನಪದ ಟ್ರಸ್ಟಿನ ಮೊದಲ ಹುಟ್ಟುಹಬ್ಬದಲ್ಲಿ ಹತ್ತು ಸಮಸ್ತರಲ್ಲೊಬ್ಬರಾಗಿ ಸನ್ಮಾನಿತರಾದರು.

ಸಿಂಪಿಯವರು ಅಖಿಲ ಕರ್ನಾಟಕ ಜಾನಪದ ಪರಿಷತ್ತಿನ ಅರ್ಧವಾರ್ಷಿಕ ಪತ್ರಿಕೆಯಾದ 'ಜಾನಪದ'ದ ಸಂಪಾದಕ ಮಂಡಳಿಯಲ್ಲಿ ಒಬ್ಬರಾಗಿ ಶ್ರಮಿಸಿದ್ದರು. ಶ್ರೀ ಎಚ್.ಎಲ್. ನಾಗೇಗೌಡರು ೧೯೭೭ ರಲ್ಲಿ ಪ್ರಕಟಿಸಿದ 'ಕರ್ನಾಟಕ ಜಾನಪದ ಕಲೆಗಳು' ಕೃತಿಯ ಸಂಪಾದಕ ಮಂಡಳಿಯಲ್ಲಿಯೂ ಒಬ್ಬರಾಗಿದ್ದರು. ಹೀಗೆ ಹಲವು ಬಗೆಯಾಗಿ ಜಾನಪದ ಸಾಹಿತ್ಯ, ಕಲೆ, ಸಂಸ್ಕೃತಿಗಳಿಗಾಗಿ ಶ್ರಮಿಸಿದ್ದಾರೆ. ಸಿಂಪಿ ಲಿಂಗಣ್ಣ ಅವರಿಗೆ ಹಲವು ಪ್ರಶಸ್ತಿಗಳು ದೊರೆತಿವೆ.

'ಜನಾಂಗದ ಜೀವಾಳ' ಗ್ರಂಥಕ್ಕೆ ೧೯೭೦ ರಲ್ಲಿ ಕರ್ನಾಟಕ ಸರಕಾರದಿಂದ ಬಹುಮಾನ ದೊರೆತಿದೆ. ಕ್ರಿ.ಶ. ೧೯೭೮ ರಲ್ಲಿ ಅವರಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆಯಿತು. ಶ್ರೀಯುತರ ಗಣನೀಯ ಸೇವೆಯನ್ನು ಗುರುತಿಸಿ ಗುಲಬರ್ಗ ವಿಶ್ವವಿದ್ಯಾಲಯವು ೧೯೮೯ರ ಫೆಬ್ರವರಿ ೨೬ ರಂದು ಅವರಿಗೆ 'ಗೌರವ ಡಾಕ್ಟರೇಟ್' ಪದವಿ ನೀಡಿ ಗೌರವಿಸಿತು. ೧೯೯೦ರ ಅಕ್ಟೋಬರ ೬ ರಂದು ಕನ್ನಡ ಸಾಹಿತ್ಯ ಪರಿಷತ್ತು ಅವರಿಗೆ ಗೌರವ ಸದಸ್ಯತ್ವ ನೀಡಿತು. ೧೯೯೨ರ ನವೆಂಬರ್ ೧ ರಂದು ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಲಾಯಿತು. ೧೯೯೩ರ ಫೆಬ್ರುವರಿ ೫ ರಿಂದ ೭ ರವರೆಗೆ ಕೊಪ್ಪಳದಲ್ಲಿ ಜರುಗಿದ ಜರುಗಿದ ಅಖಿಲ ಭಾರತ ೬೨ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ವಿರಾಜಮಾನರಾದರು. ಆ ಸಂದರ್ಭದಲ್ಲಿ ನಾಡಿನ ಅಸಂಖ್ಯ ಸಂಘಸಂಸ್ಥೆಗಳು ಅವರನ್ನು ಸನ್ಮಾನಿಸಿ ತಮ್ಮ ಸಂತಸವನ್ನು ವ್ಯಕ್ತಪಡಿಸಿರುತ್ತವೆ.

ಬಿ.ಎಂ.ಶ್ರೀಕಂಠಯ್ಯ (ಬಿಎಂಶ್ರೀ)

ಪ್ರೊ|| ಹಿ.ಶಿ.ರಾಮಚಂದ್ರೇಗೌಡ

ಈಗ ಕನ್ನಡನಾಡು - ನುಡಿ ಅನೇಕ ಬಗೆಯ ಬೆಳವಣಿಗೆಯನ್ನು ಕಂಡಿವೆ. ಇವತ್ತು, ಅಲ್ಪಸಂಖ್ಯಾತ- ಬಹುಸಂಖ್ಯಾತರ ರಾಜಕೀಯದಲ್ಲಿ ಕನ್ನಡ ನೆಲಕಚ್ಚುವ ಅಪಾಯಗಳು ಉಂಟಾಗುತ್ತಿವೆ. ವಿಚಾರಕ್ಕಿಂತ ಆಚಾರ, ಆಚಾರಕ್ಕಿಂತ ಅನಾಚಾರಗಳು ಜನ-ನಾಡು-ನುಡಿಯ ಸಂಘಟನೆಯನ್ನು ಧ್ವಂಸಗೊಳಿಸುತ್ತಿವೆ. ಶ್ರೀಯವರು ಬದುಕಿದ್ದಾಗ ಸಹ ಇಂಥದೇ ಪರಿಸ್ಥಿತಿಯೊಂದು ಇತ್ತು. ಆಗ ವಸಾಹತುಶಾಹಿ ಪ್ರಭುತ್ವವಿತ್ತು. ಈಗ ಪ್ರಜಾಪ್ರಭುತ್ವಶಾಹಿ ಬಳಕೆಯಲ್ಲಿದೆ. ವಸಾಹತುಶಾಹಿಯಂತೆ ಪ್ರಜಾಪ್ರಭುತ್ವವೂ ಜಾತಿ, ವರ್ಗ ಮತ್ತು ಆಡಳಿತ ಶಕ್ತಿಗಳ ವಶವಾಗಿ ಅದೂ ಹಿಂಸೆಯಾಗತೊಡಗಿದೆ. ತಿಳಿದವರಲ್ಲಿ ಕೂಡ ಪರಸ್ಪರ ಆತ್ಮೀಯವಾದ, ರಚನಾತ್ಮಕವಾದ ಚರ್ಚೆ ಸಾಧ್ಯವಾಗುತ್ತಿಲ್ಲ. ''ಅಲ್ಪ''ಗಳ ಚರ್ಚೆ ಅತಿಯಾಗಿ ಹೊಸ ನಾಡನ್ನು ಎಲ್ಲ ಜನರ ಭಾಗವಹಿಸುವಿಕೆಯ ಸಜೀವವಾದ ಕನ್ನಡ ಸಮಾಜವನ್ನು ಕಲ್ಪಿಸಿಕೊಳ್ಳುವುದೇ ಕಷ್ಟವಾಗುತ್ತಿದೆ. ಇಂಥದೇ ಪರಿಸ್ಥಿತಿಯಲ್ಲಿ ಹುಟ್ಟಿ, ಕನ್ನಡನಾಡು-ನುಡಿಗಳನ್ನು ಎಲ್ಲರ ಆಸಕ್ತಿ ಹಿತಗಳನ್ನಾಗಿ ಮಾಡಲು ಶ್ರಮಿಸಿದ, ಕನ್ನಡದ ಕಣ್ವರೆಂದು ಹೆಸರುವೆತ್ತ ಶ್ರೀಯವರು ಒಬ್ಬ ಪ್ರಾಧ್ಯಾಪಕರು; ಸಾಹಿತಿ. ಅಷ್ಟೇ ಅಲ್ಲ. ನಿಷ್ಠಾವಂತ ದೇಶಪ್ರೇಮಿ. ರಾಜಸೇವಾಸಕ್ತರೂ ಹೌದು. ಅಷ್ಟೇ ಯುಗಧರ್ಮದ ನವನವೋನ್ಮೇಷಶಾಲಿನಿ ಧರ್ಮಶೀಲ. ದೇಶ-ದೇಶಭಾಷೆ; ನಾಡು-ನಾಡುನುಡಿ; ಸಂಸ್ಕೃತಿ ಸ್ವದೇಶಿಯತೆಯ ಹೆಸರಿನಲ್ಲಿ ಜನತೆಯ ಜೀವಂತಿಕೆಗಾಗಿ ತುಡಿದ- ದುಡಿದ ಸಾಂಸ್ಕೃತಿಕ ವಕ್ತಾರ; ಜಾನಪದೀಯ.

ಶ್ರೀಯವರ ಮುಂದಾಳತ್ವದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯ ಬೆಳೆಯಿತು ಎನ್ನುವುದು ಕನ್ನಡ ಸಂಸ್ಕೃತಿಯ ಬೆಳವಣಿಗೆಯ ಸಂದರ್ಭದಲ್ಲಿ ಎರಡನೆಯ ಫಲಿತ. ಅವರ ಸ್ವದೇಶಿಯತೆಯ ಪುನರುಜ್ಜೀವನದ ಕಾರ್ಯದಲ್ಲಿ ನಾಡಿಗೆ ನಾಡೇ ತನ್ನತನದ ಬಗ್ಗೆ ಎಚ್ಚರಗೊಂಡಿತು. ತನ್ನ ಮಾತೃತ್ವದ ಶಕ್ತಿಯನ್ನು ಗುರುತಿಸಿಕೊಳ್ಳಲು ತೊಡಗಿತು. ರಚನಾತ್ಮಕವಾಗಿ ಕನ್ನಡನಾಡು ಭಾರತದ ಒಂದು ಬೀಡೂ, ಭಾಗವೂ ಆಯಿತು. ''ಭಾರತ ಜನನಿಯ ತನುಜಾತೆ'' ಎಂಬ ಭಾರತಮಾತೆಯು ಒಬ್ಬ ರಕ್ತಸಂಬಂಧಿಯಾದಳು. ಹೀಗೆ ನಾಡಿಗೆ ನಾಡು, ಬೀಡಿಗೆ ಬೀಡು ಬೆಸೆದುಕೊಳ್ಳತೊಡಗಿದವು. ವಿಶ್ವಮಾನವ ದೃಷ್ಟಿಯ ಸಂದರ್ಭದಲ್ಲೂ ಕನ್ನಡನಾಡು ತನ್ನತನದಿಂದ ಗುರುತಿಸಿಕೊಳ್ಳುವುದು

ಸಾಧ್ಯವಾಯಿತು. ''ಯಾವ ವಿಶ್ವಮಾತೆಯನ್ನು ನಾವು ಸೇವಿಸಿದರೂ ನಮ್ಮ ಮಾತೆಯನ್ನು ಮಾತ್ರ ಬಿಡುವಂತಿಲ್ಲ'' ಎಂಬ ಶ್ರೀ ಅವರ ಧೋರಣೆ ಕನ್ನಡ ಜಾನಪದೀಯತೆಯನ್ನು ಪುನರುಜ್ಜೀವಿಸಿತ್ತು.

ಜಾನಪದ ಮಾತೃತ್ವ ಶಕ್ತಿಯ ಪರಿಕರ ಮತ್ತು ಪ್ರಕ್ರಿಯೆ ಇದು. ಬೇರೆ ಊರಿನಲ್ಲಿ ಇರಲಿ, ಬೇರೆ ದೇಶದಲ್ಲಿ ಇರಲಿ, ವ್ಯಕ್ತಿ 'ತಿಟ್ಹತ್ತಿ' ಅಥವ ವಿಮಾನ ಏರಿ ಮತ್ತೆ ತನ್ನನ್ನು ನೆನೆಸಿಕೊಳ್ಳುವಂತೆ ಮಾಡುವಂಥದು. ಈ ಬಗೆಯ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ಜನ, ಇವುಗಳ ಅನ್ಯೋನ್ಯ ಸಂಬಂಧ ಮತ್ತು ಪ್ರಗತಿಯನ್ನೆ ಜಾನಪದ ಬೆಳವಣಿಗೆ ಎಂದು ಕರೆಯುತ್ತೇವೆ. ಭಾಷೆ ದೇಶೀಯವಾದುದಾಗಿರಬೇಕು. ಶಿಕ್ಷಣ ದೇಶಭಾಷೆಯಲ್ಲಿ ಇರಬೇಕು. ಸಂಸ್ಕೃತಿ ದೇಶೀಯವಾದ ಪ್ರಗತಿಯಾಗಿರಬೇಕು. ಜನ ತಮ್ಮ ನಾಡು-ನುಡಿ ಮತ್ತು ತಮ್ಮದೇ ಆದ ಸಾಂಸ್ಕೃತಿಕ ಸೃಜನಶೀಲತೆಯ ಮೂಲಕ ಪ್ರಗತಿಯನ್ನು ಕಾಣುವುದನ್ನು ಇಚ್ಛಿಸುತ್ತಿರಬೇಕು. ಇಂಥ ಕಡೆ ಜನಪದ ಮತ್ತು ಜಾನಪದವೆರಡೂ ದೇಶೀಯವಾಗಿರುತ್ತವೆ. ಜನಜೀವನವನ್ನು ಆರೋಗ್ಯವಾಗಿಡುತ್ತವೆ. ಗುರುತಿಸುವಂಥ ಸಾಮಾಜಿಕ ಬೆಳವಣಿಗೆಯನ್ನು ತೋರುತ್ತವೆ. ವಿವಿಧತೆಯಲ್ಲಿ ಒಂದು ತನ; ಒಂದು ತನದಲ್ಲಿ ಅನ್ಯೋನ್ಯವಾದ ರಚನಾತ್ಮಕ ಸಂಬಂಧ ಏರ್ಪಡುತ್ತದೆ. ದೇಶಕ್ಕೆ- ಜನಕ್ಕೆ ಒಂದು ಮಾರ್ಗ ಮತ್ತು ಗುರಿ ಸಿದ್ಧವಾಗುತ್ತದೆ. ಹೊರಗಿನ ವಸ್ತುವನ್ನೆಲ್ಲಾ ತಮ್ಮ ಸೃಷ್ಟಿಯ ಕಚ್ಚಾವಸ್ತುವನ್ನಾಗಿ ಮಾಡಿಕೊಳ್ಳುವುದು ಇಂಥ ಜನಪದಕ್ಕೆ ಸಾಧ್ಯವಾಗುತ್ತದೆ. ಇದು ಸೃಜನಶೀಲ ಜನಪದ ಮತ್ತು ಜಾನಪದದ ಕಲ್ಪನೆ.

ಶ್ರೀಯವರ ಸಾಹಿತ್ಯ-ಸಂಸ್ಕೃತಿಯ ಚಿಂತನೆಯಲ್ಲಿ ಈ ಕಲ್ಪನೆ ಎದ್ದು ಕಾಣುತ್ತದೆ. ನವೋದಯ ಕಾಲದ ಕವಿಗಳಲ್ಲಿ ಸರ್ವೇಸಾಮಾನ್ಯವಾಗಿ ಕಂಡು ಬರುವ ದೇಶಪ್ರೇಮ-ಭಾಷಾಪ್ರೇಮ-ಸ್ವದೇಶಿಯತೆಯ ಪುನರುಜ್ಜೀವನದ ತುಡಿತಗಳು ಶ್ರೀಯವರಲ್ಲೂ ಕಂಡು ಬರುತ್ತವೆ. ಆದರೆ, ಶ್ರೀಯವರ ಸಾಂಸ್ಕೃತಿಕ ಸಂಪನ್ನತೆ, ಸಾಂಸ್ಕೃತಿಕ ನಾಯಕತ್ವದ ದೊಡ್ಡತನ ಮತ್ತು ಬದುಕಿನ ಬಗ್ಗೆಯಾದ, ಆದರ್ಶಪ್ರಾಯವಾದ ಸರಳ-ಸುಂದರ ನಡವಳಿಕೆಗಳು ಶ್ರೀಯವರಲ್ಲಿಯಂತೆ ಇತರರಲ್ಲಿ ಕಂಡು ಬರುವುದಿಲ್ಲ. ಆದ್ದರಿಂದ ಅವರು ಕನ್ನಡನಾಡಿನಲ್ಲಿ ಕವಿ ಅಥವ ಸಾಹಿತಿಯಾಗಿ ಮಾತ್ರ ಗುರುತಿಸಲ್ಪಡುವುದಿಲ್ಲ. ಸಾಂಸ್ಕೃತಿಕ ಶಿಸ್ತಿನ ಜನಪದ ಪುನರ್ ನಿರ್ಮಾತೃವಾಗಿ ಕಂಡು ಬರುತ್ತಾರೆ.

ಶ್ರೀಯವರು ಬದುಕಿದ್ದ ಸಂದರ್ಭದಲ್ಲಿ ನಾಡಿನ ಯಾವುದೂ ನೆಟ್ಟಗಿರಲಿಲ್ಲ. ಕನ್ನಡನಾಡು ಪರಕೀಯರ ಹಿಡಿತದಲ್ಲಿತ್ತು. ಕನ್ನಡಿಗರು ಹೆಸರಿಗೂ ಕನ್ನಡಿಗರಾದಂತಿರಲಿಲ್ಲ. ಕನ್ನಡವನ್ನು ಮಾತಾಡುವುದು, ಪಾಠ ಹೇಳುವುದು, ಅದನ್ನು ಒಂದು ವಿಶೇಷ ವಿಷಯವಾಗಿ ಓದುವುದು ಸಹ್ಯವಾದ, ಗೌರವವಾದ ಸಂಗತಿಯಾಗಿರಲಿಲ್ಲ. ಎಲ್ಲ ಆಸಕ್ತರೂ ಒಂದು ಕಾಲನ್ನು ಕನ್ನಡನಾಡಿನಲ್ಲಿಟ್ಟು, ಇನ್ನೊಂದು ಬೇರೆಯೆ ನೆಲದಲ್ಲಿ ಊರಲು ಎತ್ತಿ ಹಿಡಿದಿದ್ದರು. ಒಂದು ಸಂದರ್ಭದಲ್ಲಿ ಕನ್ನಡ ಪ್ರಾಧ್ಯಾಪಕ ಹುದ್ದೆಗೆ ಬದಲಾಗಿ ಇಂಗ್ಲಿಷ್ ಉಪ ಪ್ರಾಧ್ಯಾಪಕ ಹುದ್ದೆಯನ್ನೆ

ಶ್ರೀಯವರು ಆಯ್ಕೆಮಾಡಿಕೊಳ್ಳಲು ಸಿದ್ಧರಾದರೆಂದರೆ ಕನ್ನಡಿಗರ ಮನಸ್ಥಿತಿ, ಕನ್ನಡ ನಾಡು-ನುಡಿಯ ಸ್ಥಿತಿಗತಿ ಎಂಥ ದುಸ್ಥಿತಿಯಲ್ಲಿತ್ತು ಎಂಬುದರ ಅರಿವಾಗುತ್ತದೆ. ಭಾರತೀಯರೆಲ್ಲ, ಭಾರತವೆಂಬ ಜೈಲಿನಲ್ಲಿ ವಾಸಮಾಡುತ್ತಿದ್ದಂತೆ, ಕನ್ನಡಿಗರು ಕೂಡ ಈ ಸಂದರ್ಭದಲ್ಲಿ ಕನ್ನಡನಾಡು ಎಂಬ ಜೈಲಿನಲ್ಲಿ ಬಂಧಿಯಾಗಿದ್ದರು.

ಇವತ್ತಿನ ನಮ್ಮ ಅಲ್ಪ ಸಂಖ್ಯಾತರು ತಮ್ಮ ತಮ್ಮ ಭಾಷಾ ಸಾಮ್ರಾಜ್ಯಕ್ಕೆ ಹೊಡೆದಾಡುತ್ತಿರುವಂತೆ ಹಿಂದೆ ಇಡೀ ದೇಶದ ಆಳರಸರು ಸಣ್ಣ-ಪುಟ್ಟ ರಾಜ್ಯಗಳನ್ನು ಉಳಿಸಿಕೊಳ್ಳಲು ಹೋರಾಡಿ ನೆಲೆಯಿಲ್ಲದ ಪರದೇಶಿಗಳಾಗಿದ್ದರು. ಇಂಥ ನೂರಾರು ಸಣ್ಣ-ಪುಟ್ಟವರ ಸಣ್ಣತನಗಳಿಂದಾಗಿ ಒಂದು ದೊಡ್ಡ ಭಾರತದೇಶ ತನ್ನ ದೇಶೀಯತೆಯನ್ನು ಕಳೆದುಕೊಂಡಿತ್ತು. 'ಅಲ್ಪರೂ', 'ಬಹುಗಳೂ' ತಮ್ಮ ತಮ್ಮ ತುಳಿತಕ್ಕೆ ತಾವೇ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬ್ರಿಟಿಷರಿಗೆ ಸಹಾಯಕರಾಗಿದ್ದರು. ಸ್ವಾತಂತ್ರ್ಯಕ್ಕಿಂತ ಹೆಚ್ಚಾಗಿ, ದೇಶೀಯತೆಗಿಂತ ಮಿಗಿಲಾಗಿ ಅವರಿಗೆ ತಂತಮ್ಮ ಕ್ಷುದ್ರ ಆರ್ಥಿಕ ಅವಕಾಶಗಳೇ ಮೇಲಾಗಿದ್ದವು. ಈ ಮಧ್ಯೆ ದೇಶೀಯತೆಯ ನಿರ್ಮಾಣದತ್ತ ಚಲನೆಗಳು ಆರಂಭವಾಗಿದ್ದವು. ಹೀಗಿದ್ದೂ ದೇಶೀಯತೆಯನ್ನು ಅದರ ಸಮಗ್ರತೆಯ ಅರ್ಥದಲ್ಲಿ ಗ್ರಹಿಸಿ, ಅದನ್ನು ಒಂದು ಹೋರಾಟದ ಶಕ್ತಿಯನ್ನಾಗಿ ಬಳಸಿಕೊಂಡವರೆಂದರೆ ಮಹಾತ್ಮಗಾಂಧೀಜಿ ಒಬ್ಬರೇ. ಅವರ ದೇಶೀಯ ಪುನರ್ ನಿರ್ಮಾಣದ ಚಿಂತನೆ ದೇಶೀಯರನ್ನು ಎಚ್ಚರಿಸಿತು. ಪರಕೀಯ ಸಂಸ್ಕೃತಿಯ ಸಾಮಗ್ರಿಗಳನ್ನು ತಿರಸ್ಕರಿಸಿತು. ಗಾಂಧೀಜಿ ಈ ಹೋರಾಟದ ನಾಯಕರಾದರು. ಅವರ ಹಿಂದೆ ಸಾವಿರಾರು ನಾಯಕರು, ಇಡೀ ದೇಶದ ಜನತೆ ಸಾಲುಗಟ್ಟಿ ನಿಂತಿತು. ಶಿಕ್ಷಣ, ಭಾಷೆ, ಸಂಸ್ಕೃತಿಗಳೆಂಗವು ಅನುಕರಣೆಯ ವಿಷಯಗಳಲ್ಲ; ಜಾನಾಂಗಿಕವಾದುವು, ದೇಶೀಯವಾದುವು ಎಂಬುದರ ಅರಿವು ಮೂಡತೊಡಗಿತು. ಹೀಗೆ ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿ ಸ್ವದೇಶಿಯತೆಯ ಚಳುವಳಿಯಾಗಿ ಪರಿಣಮಿಸಿತು. ಭಾರತೀಯರನ್ನು ಒಂದುಗೂಡಿಸುವ ಮತ್ತು ಚಳುವಳಿಯ ನೆಲೆಗಟ್ಟನ್ನು ಭದ್ರಪಡಿಸುವ ವಿಷಯ ಕೂಡ ಆಯಿತು. ತಮ್ಮದೇ ಆದ ನಡೆ-ನುಡಿ, ನಂಬಿಕೆ, ಆಚಾರ-ವಿಚಾರ, ಜೀವನ ವಿಧಾನಗಳನ್ನು ಜನ ಮತ್ತೆ ಕೈಗೆತ್ತಿಕೊಂಡರು. ಕಳೆದುಕೊಂಡಿದ್ದ ಅವುಗಳನ್ನು ಹುಡುಕಿಕೊಂಡುದಲ್ಲದೆ ಅವುಗಳ ಮೂಲಕ ಹೊಸ ಜೀವನ ವಿಧಾನವನ್ನು ಆರಂಭಿಸುವ ಬಗೆಯನ್ನು ಕೂಡ ಕಂಡುಕೊಂಡರು. ಇಂಥ ಜಾನಪದೀಯವಾದ ಚಳುವಳಿಯೆ ಭಾರತಕ್ಕೆ ಸ್ವಾತಂತ್ರ್ಯವನ್ನೂ, ಹೊಸ ಬದುಕನ್ನೂ ತರಲು ಸಾಧ್ಯವಾಯಿತು.

ಶ್ರೀಯವರ ಸಾಹಿತ್ಯ ಸೃಷ್ಟಿ ಮತ್ತು ಪ್ರಚಾರದ ನೆಲೆ- ಬೆಲೆಗಳನ್ನು ಗಮನಿಸಿ. ಅವರ ಸಾಹಿತ್ಯ ಸೃಷ್ಟಿಯಲ್ಲಿ ಕನ್ನಡದ ಸರಳ ಸಂಪನ್ನತೆ ತುಂಬಿರುತ್ತದೆ. ಹಳಗನ್ನಡ ಯುಗವನ್ನು ಇನ್ನೂ ದಾಟಿಯೇ ಇರದ ಅನೇಕರಿಗೆ ಈ ಬರಹ ಗೊಂದಲವನ್ನೂ ಅಚ್ಚರಿಯನ್ನೂ ಉಂಟು ಮಾಡುತ್ತದೆ. ತಕ್ಷಣವೇ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಒಂದು 'ಮಿಥ್' ಅನ್ನು ಒಡೆದ ಅನುಭವವಾಗುತ್ತದೆ. ಆಚಾರ ಅನಾವರಣಗೊಂಡು, ವಿಚಾರ ಅದರ ನಾಮಧೇಯವಾದಂತೆನಿಸುತ್ತದೆ. ಸಾಹಿತ್ಯ-ಭಾಷೆ-

ಸಂಸ್ಕೃತಿಗಳೆಲ್ಲ ಜಾತಿ, ಆಸ್ಥಾನಗಳ ಹಿಡಿಮುಷ್ಠಿಯಿಂದ ಒಡೆದು ಬಂದು ಎಲ್ಲರ ಬೊಗಸೆಯಲ್ಲಿ ತುಳುಕುತ್ತಿರುವ ನೀರಿನ ಅಲೆಗಳ ಪುಳಕವನ್ನು ತಂದು ಕೊಡುತ್ತದೆ. ಅಲ್ಲಿ ಕನ್ನಡವನ್ನು ಒಂದು ರಕ್ತಸಂಬಂಧಿ (Kinship) ಸಮಾಜದ ಭ್ರಾತೃತ್ವವನ್ನಾಗಿ ಕಟ್ಟುವ ಮಾನವ ಶಾಸ್ತ್ರಜ್ಞನ ಅಂತರಂಗ ಮತ್ತು ಜಾನಪದ ಚಿಂತಕನ ಬಹಿರಂಗಗಳು ತೆರೆಗಳಂತೆ ಬಿಚ್ಚಿಕೊಳ್ಳುತ್ತವೆ. ಕನ್ನಡ ಶ್ರೀಯವರ ಪಾಲಿಗೆ ಒಂದು ಭಾಷೆ ಮಾತ್ರವಲ್ಲ; ಕನ್ನಡನಾಡು ಬಹು ಸಂಖ್ಯಾತರೆಂಬ ಅಥವ ಅಲ್ಪಸಂಖ್ಯಾತರೆಂಬ ಹಕನಾತಿಗಳ ಒಡೆತನವಲ್ಲ. ಕನ್ನಡವೇ ಆಚಾರ, ಜಾತಿ-ನೀತಿ, ಮತ, ಬುಡಕಟ್ಟು, ಕೆಲಸ, ಕಟ್ಟುಕಟ್ಟಳೆ ವಿಧಿ-ಮಂತ್ರ, ಹಬ್ಬ, ಗೋತ್ರ-ಸೂತ್ರ, ಧರ್ಮ-ನಾಡು ಎಲ್ಲ. ಇಂಥ ಕನ್ನಡ ಸಮಾಜದ ಅಥವ ಜನಪದದ ಪುನರುಜ್ಜೀವನವೇ ಅವರ ಧ್ಯೇಯ. ಕನ್ನಡವನ್ನು ರಾಜಭಾಷೆಯಾಗಿ ನೋಡುವ 'ರಾಜಸೇವಾಸಕ್ತ' ಮನೋಭಾವ ಅವರಲ್ಲಿ ಕಂಡು ಬರುವುದು ನಿಜ. ಒಂದು ರೀತಿಯಲ್ಲಿ ಅದು ಅವರ ಸಂಪ್ರದಾಯ. ಮತ್ತೊಂದು ರೀತಿಯಲ್ಲಿ ಜಾಣ ಜಾನಪದೀಯನೊಬ್ಬ, ರಾಜಪ್ರಭುತ್ವವನ್ನು ಓಲೈಸುವುದರ ಮೂಲಕ ಪ್ರಜಾಸೇವೆಯನ್ನು ಗುರಿಮಾಡಿಕೊಂಡ ವಿಶಿಷ್ಟ ಬಗೆ. ಇಲ್ಲದಿದ್ದಲ್ಲಿ, ಅವರ ಬರೆಹದಲ್ಲಿ ಕನ್ನಡವನ್ನೇ ಗೋತ್ರ-ಸೂತ್ರ ಪಂಚಾಕ್ಷರಿಮಂತ್ರ ಮಾಡಿಕೊಳ್ಳುವ, ಹಳ್ಳಿಯ ಸಂಸ್ಕೃತಿ-ಸಾಹಿತ್ಯವನ್ನು ಪುನರುಜ್ಜೀವಿಸುವ, ಪ್ರೌಢ-ಸಂಸ್ಕೃತಿ-ಸಾಹಿತ್ಯಕ್ಕೆ ಬೇರು-ಸಾರವನ್ನಾಗಿ ನಿರೂಪಿಸುವ ಮಾತು ಬರುತ್ತಿರಲಿಲ್ಲ. ಕನ್ನಡನಾಡವರನ್ನು ಎಚ್ಚರಿಸುವಲ್ಲಿ ಬಳಸಬಹುದಾದ ವಿಧಾನಗಳ ಬಗ್ಗೆ ಮತ್ತು ಆ ವಿಧಾನಗಳ ರೀತಿ-ನೀತಿಗಳನ್ನು ಗಮನಿಸಿದರೆ, ಅಲ್ಲಿ ಒಬ್ಬ ಕರ್ಮಠ ಸಂಪ್ರದಾಯವಾದಿಯನ್ನೋ ರಾಜ ಸೇವಕನನ್ನೋ ನಾವು ಕಾಣಲಾರೆವು. ಜನಪದ ಸಂಸ್ಕೃತಿ ಮತ್ತು ಜನ ಜೀವನದ ಪುನರುದ್ಧಾರದ ಒಬ್ಬ ಉದಾರ ಮಾನವ ಪ್ರೇಮಿಯನ್ನು ಸಂದರ್ಶಿಸುತ್ತೇವೆ.

ಕನ್ನಡಗರ ಬಂಧುತ್ವದಲ್ಲಿ ಭೇದವನ್ನೇ ಕಾಣದ, ಒಂದು ಕುಟುಂಬದಲ್ಲಿ ಅವರನ್ನು ಕಾಣುವ ಶ್ರೀಯವರ ದೃಷ್ಟಿಗೆ ಅವರ ಬರಹಗಳಲ್ಲಿ ಅನೇಕ ಸಾಕ್ಷಿಗಳಿವೆ; ರುಜುವಾತುಗಳಿವೆ. ಭಾಷೆಯನ್ನು ಆಧರಿಸಿ ಸಾಹಿತ್ಯ ಹುಟ್ಟುವುದಿಲ್ಲ. ಬದುಕಿನ ಸೃಜನಶೀಲತೆಯ ಒಂದು ಅಂಗವಾಗಿ ಸಾಹಿತ್ಯ ಭಾಷೆಯ ಮೂಲಕ ಅವತರಿಸುತ್ತದೆ. ಈ ಹಿನ್ನೆಲೆ ಇದ್ದವನು ಸಾಹಿತ್ಯ ಸೃಷ್ಟಿಗೆ ಮೊದಲು ತನಗೆ ಸಾಮಾಜಿಕವಾಗಿಯಾಗಲೀ, ವೈಯಕ್ತಿಕವಾಗಿಯಾಗಲೀ, ಸಾಹಿತ್ಯ ಬರೆಯಬೇಕಾದ ತುರ್ತನ್ನು ಗುರುತಿಸಿಕೊಳ್ಳುತ್ತಾನೆ. ರಾಜಾಶ್ರಯ ತಪ್ಪಿ, ಸಾಂಪ್ರದಾಯಿಕವಾಗಿ ಸಾಹಿತ್ಯ ಸೃಷ್ಟಿಮಾಡಲು ಸಾಧ್ಯವಿಲ್ಲದ ಸಂದರ್ಭ ಶ್ರೀಯವರು ಬದುಕಿದ್ದ ಕಾಲಕ್ಕೆ ಉಂಟಾಗಿತ್ತು. ರಾಜಾಶ್ರಯವನ್ನು ಕಲ್ಪಿಸಿಕೊಂಡು ಕಾವ್ಯ ಬರೆದ ಮುದ್ದಣ ಕವಿಯೆ ಇದಕ್ಕೆ ಸಾಕ್ಷಿ. ಈಗ ರಾಜಾಶ್ರಯವನ್ನು ಜನ ವಹಿಸಿಕೊಳ್ಳಬೇಕಿತ್ತು. ಅಂಥ ಸಂದರ್ಭದಲ್ಲಿ ಕಾವ್ಯದ ಕಟ್ಟೇ ಬದಲಾಗುವುದು ಅನಿವಾರ್ಯವಾಗಿತ್ತು. ಕಾವ್ಯ, ಜನಪದ ಜೀವನದ ಜನರದ್ದು, ಜನ ಜೀವನವನ್ನು ಪ್ರೇಮದಿಂದ ನೋಡದೆ, ಅನುಭವಿಸದೆ ಕಾವ್ಯ ಬರೆಯುವುದು ಸಾಧ್ಯವಿರಲಿಲ್ಲ. ಸ್ವಾತಂತ್ರ್ಯ ಚಳುವಳಿ ಬೇರೆ ಮತ್ತೊಂದು ಕಡೆಯಿಂದ ಜನತೆಯೆ ಜನಾರ್ಧನ ಎಂಬ ಮೌಲ್ಯವನ್ನು ಧೃಢೀ

ಕರಿಸುತ್ತಿತ್ತು. ಆಗ ಸಾಮಾನ್ಯ ಜನ, ಅನನ್ಯ ಸಂಸ್ಕೃತಿ, ಬದುಕು-ಸಾಹಿತ್ಯ-ಸಂಗೀತ, ಕವಿಗಳ ಸಾಹಿತ್ಯ ಸೃಷ್ಟಿಯಲ್ಲಿ ಅವಿಭಾಜ್ಯ ಅಂಗಗಳಾದುವು. ಇಷ್ಟು ಶತಮಾನಗಳವರೆಗೆ ಶಿಷ್ಟರ ಗಮನಕ್ಕೆ ಬರದೆ ಇಡೀ ಜನಪದವೇ ಕವಿಯೂ, ಸಹೃದಯನೂ ಆಗಿ ಬೆಳೆದು ಬಂದ ಬಗೆ ಈ ವ್ಯಕ್ತಿನಿಷ್ಠ ಕವಿಗಳಲ್ಲಿ ಅಚ್ಚರಿಯನ್ನೂ ಬೆರಗನ್ನೂ ಉಂಟು ಮಾಡಿದವು. ಕೊನೆಗೆ, ಇವರು ಶ್ರೀ ಅವರಂಥವರ ಹೇಳಿಕೆಗಳ ಮೂಲಕ 'ಜನವಾಣಿ ಬೇರು; ಕವಿವಾಣಿ ಹೂವು' ಎಂಬ ಮೂಲಭೂತ ತಿಳುವಳಿಕೆಗೆ ತಲುಪಬೇಕಾಯಿತು. ಕವಿತ್ವ ಭಾಷೆ ಮತ್ತು ಕವಿತ್ವದ ಧಾಟಿಗಳು ಒಂದು ಸಾಹಿತ್ಯ ಸೃಷ್ಟಿ ಬೇರೆ ಬೇರೆ ಭಾಗಗಳಲ್ಲ, ಅವಿನಾಭಾವ ಸಂಬಂಧವುಳ್ಳ ಅವಿಭಾಜ್ಯ ಅಂಗಗಳು ಎಂಬುದನ್ನು ಅವರು ಚೆನ್ನಾಗಿ ಅರಿತರು. ಆದ್ದರಿಂದಲೇ ನವೋದಯ ಕವಿಗಳು ವೈಯಕ್ತಿಕ ತೆವಲುಗಳನ್ನು ಹೆಚ್ಚಾಗಿ ಹಚ್ಚಿಕೊಳ್ಳದೆ ಸಾಮಾಜಿಕ ಜವಾಬ್ದಾರಿಯ ಕಡೆಗೆ ತುಡಿದರು. ಬಡತನ-ಅಸ್ಪೃಶ್ಯತೆ-ಅನಾಗರಿಕತೆ ವೈಯಕ್ತಿಕವಾದುವುಗಳಲ್ಲವೆಂಬ ತಿಳುವಳಿಕೆಯ ಇವರು ತಮ್ಮ ಕಾಲಕೆಳಗೆ ಇದ್ದ ಆರ್ಥಿಕ-ಸಾಮಾಜಿಕ ದಾರಿದ್ರ್ಯವನ್ನು ದೊಡ್ಡದು ಮಾಡಿ ಹೇಳಲಾಗಲಿಲ್ಲವೆಂಬುದು ನನ್ನ ನಂಬಿಕೆ. ಶ್ರೀಯವರು ನಾಡು-ನುಡಿ-ಸಾಹಿತ್ಯದ ಬಗ್ಗೆ ಮನಬಿಚ್ಚಿ ಹೇಳುವಾಗಲೆಲ್ಲ ಅವರಿಗೆ ಚಳುವಳಿ ರೂಪದ ಸ್ವಾತಂತ್ರ್ಯ, ಸಂಘಟನೆ. ಸಂಸ್ಕೃತಿಯ ಸಂವರ್ಧನೆಗಳಂತೆ ವಾಸ್ತವ ಆದರ್ಶಗಳೇ ಪ್ರಮುಖವೆನಿಸಿದ್ದಂತೆ ತೋರುತ್ತದೆ.

ಈ ಮನೋಧರ್ಮ ಹಳೆಯದನ್ನೆಲ್ಲಾ ಬಾಚಿ ಮತ್ತೆ ಒಂದು ಕಡೆಗೆ ಗುಡ್ಡೆ ಹಾಕಿದಂತಾಯಿತು ಎಂದು ಹೇಳಿದಂತಾಗುವುದಿಲ್ಲ. ಸಾಮಾಜಿಕ ಅನಿಷ್ಟಗಳನ್ನು ಅಲ್ಲಗಳೆಯುತ್ತಲೆ, ಸಾಮಾಜಿಕ ಏಕತೆಯನ್ನು ಸಾಧಿಸುವುದು ಆ ಕಾಲದ ಗುರಿಯಾಗಿತ್ತು. ಸಾಮಾಜಿಕ ಅನಿಷ್ಟಗಳ ನಿರ್ನಾಮಕ್ಕೆ ಪ್ರಜಾಪ್ರಭುತ್ವ ಸರ್ಕಾರ ಒಂದು ಮಾರ್ಗವೇನೋ ಹೌದು. ಆದರೆ ಅದೇ ಎಲ್ಲವನ್ನೂ ಮಾಡಲಾರದು. ಧಾರ್ಮಿಕನಿಷ್ಠ ಭಾರತದಂಥ ದೇಶದಲ್ಲಿ ಸರ್ಕಾರಕ್ಕಿಂತ ಧಾರ್ಮಿಕ ಸಂಸ್ಥೆಗಳೇ ಪ್ರಬಲವಾದುವು. ಆ ಕಾರಣವಾಗಿಯೆ ಶ್ರೀಯವರಿಂದ ಕುವೆಂಪು ಮೊದಲಾದವರೆಲ್ಲ ಸಾಮಾಜಿಕ ಅನಿಷ್ಟಗಳನ್ನು ಸಾಂಸ್ಥಿಕ ರೂಪಗಳೆಂದೇ ತೆಗೆದುಕೊಂಡು, ಅವುಗಳು ನಡೆಯುವ ದಾರಿಯನ್ನು ಗುರುತಿಸಿ, ಸಾಂಸ್ಥಿಕವಾದ ರೀತಿಯಲ್ಲಿಯೇ ಅವುಗಳನ್ನು ಖಂಡಿಸಿದರು. ಶ್ರೀ ಕುವೆಂಪು ಅವರ ಬಹುತೇಕ ಸಾಹಿತ್ಯ ಶೈಲಿ ಮತ್ತು ಮಾರ್ಗ ಈ ತೆರನಾದುದು. ಶ್ರೀಯವರು ಸಹ ನಾಡು-ನುಡಿಯ ಪುನರುಜ್ಜೀವನದ ಸಂದರ್ಭದಲ್ಲಿ ಇದೇ ನಿಲುವನ್ನು ಹೊಂದಿದವರಾಗಿದ್ದಾರೆ. ಪುನರುಜ್ಜೀವನ ''ಬರಿಯ ಪುನರುತ್ಥಾನವಲ್ಲ, ಜೀರ್ಣೋದ್ಧಾರವಲ್ಲ, ಅನುಸರಣವಲ್ಲ, ಅನುಕರಣವಲ್ಲ, ಪುನರುಜ್ಜೀವನ ಏನೊ ಒಂದು ಬಗೆಯ ಧೈರ್ಯ ಕೂಡಿದ ವಿಚಾರ; ಹೊಸ ನಿರ್ಮಾಣ; ಮರುಹುಟ್ಟು; ಆಳವಾದ ಸಮನ್ವಯ- ಹೊಸದು, ಹಳದು, ನಮ್ಮದು-ಹೆರರದು ಎಲ್ಲವನ್ನೂ ಹೊಂದಿಕೆ ಮಾಡುವುದು'' ಶ್ರೀಯವರ ಈ ಮಾತು ಯಾವುದೇ ಹೊಸತನ್ನು ಶೂನ್ಯದಿಂದ ತೆಗೆಯಲು ಸಾಧ್ಯವಿಲ್ಲ; ಇರುವುದರಲ್ಲಿ ಇಟ್ಟುಕೊಳ್ಳುವುದು ಯಾವುದು, ಬಿಡುವುದು ಯಾವುದು ಎಂಬುದನ್ನು ಗ್ರಹಿಸುವುದು. ಅದರ ಮೇಲೆ ಬೇಕಾದ ಹೊಸತನ್ನು ಸೃಷ್ಟಿಸಿಕೊಂಡು

ಸಮಾಜದ ಸಾಂಸ್ಕೃತಿಕ ಅವಶ್ಯಕತೆಯನ್ನು ಪೂರೈಸುವುದು ಮತ್ತು ಸಮಾಜವನ್ನು ನಡೆಯಗೊಡುವುದು ಎಂದಾಗುತ್ತದೆ. ''ಹಿರಿಯರ ಮಾತೂ ಇರಲಿ, ನಾವೂ ವಿಚಾರ ಮಾಡೋಣ, ತಿಳಿದುಕೊಳ್ಳೋಣ ಎನ್ನುವುದೇ ಪುನರುಜ್ಜೀವನದ ಲಕ್ಷಣ'' ಎನ್ನುವ ಅವರ ಮಾತು ಪ್ರಗತಿಶೀಲ ಜಾನಪದ ವಿದ್ವಾಂಸನ ಚಿಂತನೆಯ ತುಣುಕುಗಳೇ ಆಗಿವೆ.

ಭಾಷೆಗಾಗಿ ಜಗಳವಾಡುವುದು, ಸಾಮಾಜಿಕ ಸ್ವಾಸ್ಥ್ಯವನ್ನು ಕೆಡಿಸಿಕೊಳ್ಳುವುದು ಅಲ್ಲ. ಒಂದು ರಾಜ್ಯದಲ್ಲಿ ನೂರು ಭಾಷೆಗಳಿರಬಹುದು. ಆ ಬಗೆಯ ನೂರು ಸಮಾಜಗಳಿರಬಹುದು. ಆದರೆ ಅವೆಲ್ಲ ಒಂದು ಸಂಸ್ಥಾನದ ಸಂಯೋಜಿತ ವ್ಯವಸ್ಥೆಯಲ್ಲಿ ಬದುಕುತ್ತಿವೆಯೆಂಬುದನ್ನು ತಿಳಿಯಬೇಕು. ಆ ಸಂಸ್ಥಾನ ಕನ್ನಡನಾಡು ಎಂದ ಮೇಲೆ ಶ್ರೀಯವರೆ ಹೇಳುವಂತೆ ''ಕನ್ನಡ ನಾಡಿನ ದೇಶ ಭಾಷೆ ಕನ್ನಡ ಎಂಬ ಆಧಾರದ ಮೇಲೆಯೇ ಕನ್ನಡ ನಾಡು ಮತ್ತೆ ಹುಟ್ಟ ಬೇಕಾಗಿದೆ.'' ಈಗ ಶ್ರೀಯವರ ಅಪೇಕ್ಷೆಯಂತೆ ಈ ನಾಡು ಹುಟ್ಟಿದೆ. ಆದರೆ ಈ ನಾಡು ಬೆಳವಣಿಗೆಯಲ್ಲಿ ಪ್ರಕ್ಷುಬ್ಧಗೊಂಡಿದೆ. ಇದಕ್ಕೆ ಕಾರಣ ಭಾಷಾಭಿಮಾನಕ್ಕಿಂತ ಹೆಚ್ಚಾಗಿ ಭಾಷೆಗೂ, ಜಾತಿಗೂ ಸಂಬಂಧವನ್ನು ಕಲ್ಪಿಸುವ ಎಗ್ಗತನ. ಕನ್ನಡಕ್ಕೆ ಜಾತಿಯೂ ಇಲ್ಲ; ಕುಲವೂ ಇಲ್ಲ. ಶ್ರೀಯವರು ಹೇಳುವಂತೆ ಕನ್ನಡನಾಡಿನಲ್ಲಿ ಕನ್ನಡವೇ ಜಾತಿ, ಕನ್ನಡವೇ ಕುಲ. ಯಾಕೆಂದರೆ ಅದು ಕನ್ನಡಿಗರ ಆತ್ಮವನ್ನು ವಿಕಾಸಗೊಳಿಸುವ ಧರ್ಮದರ್ಶಿ. ಆದ್ದರಿಂದ ಭಾಷೆಯ ಬಗ್ಗೆ ಲಘುವಾಗಿ ಆಲೋಚಿಸುವುದು ಸರಿಯಲ್ಲ. ಯಾಕೆಂದರೆ ಭಾಷೆ ಏನೋ ಒಂದು ಯಕಶ್ಚಿತ್ ಅಲ್ಲ. ಶ್ರೀಯವರು ಹೇಳುವಂತೆ, ''ಭಾಷೆ, ಅಂಗಡಿಗೆ ಹೋಗಿ ವ್ಯಾಪಾರ ಮಾಡುವುದಕ್ಕೆ ಮಾತ್ರ ಸಾಧನವಾಗಿರುವ ಪಕ್ಷದಲ್ಲಿ ಯಾವ ಅಶುದ್ಧ ಭಾಷೆಯನ್ನಾಗಲಿ ಇಟ್ಟುಕೊಂಡರೆ ಸಾಕಾಗಿದೆ; ಅಥವಾ ನಾನಾ ಭಾಷೆಗಳು ಸೇರಿರುವ ಒಂದು ಮಿಶ್ರಭಾಷೆಯನ್ನು ಬಳಸಿದರೂ ಸಾಕಾಗಿದೆ! ನಮ್ಮ ಜೀವನದ ನಿತ್ಯಗಟ್ಟಳೆಯ ವ್ಯವಹಾರಕ್ಕೆ ಇಂಥ ಭಾಷೆಯೇ ಇರಬೇಕು, ಹೀಗೆ ಇರಬೇಕು ಎಂಬ ನಿರ್ಬಂಧವೇನೂ ಇಲ್ಲ. ಕೆಲವು ಸಂದರ್ಭಗಳಲ್ಲಿ ಭಾಷೆ ತಿಳಿಯದಿದ್ದರೂ ಅಭಿನಯದಿಂದಲೇ ಕೆಲಸ ಮಾಡಿಕೊಂಡು ಹೋಗಬಹುದು. ರಾಜಭಾಷೆಯಾಗಲಿ, ರಾಷ್ಟ್ರಭಾಷೆಯಾಗಲಿ, ಮಾತೃ ಭಾಷೆಯಾಗಲಿ, ನಾವು ಬಳಸತಕ್ಕ ಯಾವ ಭಾಷೆಯೆ ಆಗಲಿ, ಪೇಟೆಗೆ ಹೋಗಿ ವ್ಯಾಪಾರ ಮಾಡುವುದಕ್ಕೆ, ಕಾಗದ ಬರೆಯುವುದಕ್ಕೆ, ಪ್ರತಿದಿನ ಕಾರ್ಯಾಚರಣೆಗೆ ಒದಗಿದರೆ ಸಾಲದು; ಭಾಷೆಯಿಂದ ಜನರ ಜೀವನ ಮೇಲ್ಪಟ್ಟು, ಅವರ ವಿಚಾರ ಶಕ್ತಿ ಹೆಚ್ಚಿ, ಅವರ ಜೀವನದಲ್ಲಿ, ಒಟ್ಟು ಜನಾಂಗದ ಜೀವನದಲ್ಲಿ ಒದಗಬಹುದಾದ ಸಮಸ್ಯೆಗಳು ಪಾರಾಗಿ, ಜನತೆಯೂ, ದೇಶವೂ ಸ್ವರ್ಗಪಥಕ್ಕೆ ಹಾರುವ ಪಕ್ಷಿಯಂತೆ ಮೇಲಕ್ಕೆ ಮೇಲಕ್ಕೆ ಹೋಗಲು ಸಾಧಕವಾಗಬೇಕು.''

ಕರ್ನಾಟಕದಲ್ಲಿ ಭಾಷಿಕವಾಗಿ ಎಲ್ಲರನ್ನೂ ಒಂದು ಮಾಡುವುದೆಂದರೆ, ಎಲ್ಲರೂ ಒಂದಾಗಲು ಅಡ್ಡಿ ಬರುವ ಭೇದಗಳನ್ನು ಒಡೆದು ಹಾಕುವುದು. ಕನ್ನಡನಾಡನ್ನು ಕನ್ನಡ ಜನಪದವಾಗಿ, ಸಮಾನವಾಗಿ ಬೆಳೆಸುವುದು. ಅದಕ್ಕಾಗಿ ಕನ್ನಡ-ಕರ್ನಾಟಕದ ಅಡಿಯಲ್ಲಿ ಒಂದಾಗುವುದು.

ಶ್ರೀಯವರೆ ಹೇಳುವಂತೆ ''ಒಗ್ಗಟ್ಟು ಬಾಯಿಮಾತಿಗೆ ಬರತಕ್ಕದ್ದಲ್ಲ. ಯಾವ ಯಾವ ಭೇದಗಳಿಂದ ಆರ್ಕ ಭೂಮಿಯಲ್ಲಿ ಒಗ್ಗಟ್ಟು ಹುಟ್ಟಲಿಲ್ಲವೋ, ಅಯಾ ಭೇದಗಳನ್ನೆಲ್ಲಾ ಸುಟ್ಟು ಬೂದಿಮಾಡಿ ನೀರಿನಲ್ಲಿ ಕಲಸಿ ಬಿಡಬೇಕು. ಆಚಾರ, ಜಾತಿ, ಮತ, ಎಲ್ಲಾ ಒಂದೇ ಆಗುವಂತೆ ಪ್ರಯತ್ನ ಮಾಡುತ್ತ ಹೋಗಬೇಕು. ಇವೆಲ್ಲಕ್ಕೂ ಮೊದಲು ಭಾಷೆ ಒಂದಾಗಬೇಕು...... ಇದು ಬಿಟ್ಟು ನರಳುತ್ತಿರುವ ದೇಶ-ಭಾಷೆಗಳನ್ನು ಗುಣಮಾಡಿ ತಲೆ ಎತ್ತಿಸಬೇಕು ಎನ್ನುವವರು ಇಂಡಿಯಾದ ಒಗ್ಗಟ್ಟಿಗೆ ಅಡ್ಡ ಬಂದು ನಿಲ್ಲುವವರು; ಅವರು ರಾಜ್ಯದ ಹಿತಚಿಂತನೆಗೆ ಮೃತ್ಯುಗಳು.''

ಕರ್ನಾಟಕದ ಜನಪದ ಮತ್ತು ಜಾನಪದ ಚಿಂತನೆಯ ಸಂದರ್ಭಕ್ಕೆ ಶ್ರೀಯವರ ಈ ಬಗೆಯ ಆಲೋಚನೆಗಳು ಉಪಯುಕ್ತವಾಗಿವೆ. ಚಿಕ್ಕಚಿಕ್ಕ ಭಾಷಾ ಅಲ್ಪ ಸಂಖ್ಯಾತ ಸಂಸ್ಕೃತಿಗಳನ್ನು ರಕ್ಷಿಸುವುದು ಸರ್ಕಾರದ, ಸಂವಿಧಾನದ ಹೊಣೆಯೇನೋ ಹೌದು. ಅವುಗಳನ್ನು ಬೆಳೆಸುವುದು, ಸರ್ಕಾರದಿಂದಾಗಲೀ, ಸಂವಿಧಾನದಂಥ ಕಾನೂನುಗಳಿಂದಾಗಲೀ ಸಾಧ್ಯವಿಲ್ಲ. ಅದು ಆ ಜನಾಂಗ ಹೊಸ ಸಮಾಜದ ಅವಶ್ಯಕತೆಗಳನ್ನು ಹುಡುಕುತ್ತಾ ಹೋಗುವುದರಿಂದ ಮಾತ್ರ ಸಾಧ್ಯವಾಗುತ್ತದೆ. ಸದಾ ಕಾಲಕ್ಕೂ ಅವರ ಸಂಸ್ಕೃತಿ ಮತ್ತು ಭಾಷೆ ಬದುಕಬೇಕಿದ್ದರೆ ವಿಶಾಲ ಜಗತ್ತಿನೊಡನೆಯೆ ನಿಕಟಸಂಬಂಧ ಅಗತ್ಯ. ಅದನ್ನು ಬಿಟ್ಟು, ಬಹು ಸಂಖ್ಯಾತರೆಂಬ ಕಾರಣಕ್ಕಾಗಲೀ, ಜಾತಿ ಎಂಬ ಕಾರಣಕ್ಕಾಗಿ ವಿರೋಧವನ್ನು ಹೆಚ್ಚು ಹೆಚ್ಚು ಸಂಪಾದಿಸುತ್ತಾ ಹೋದಂತೆ, ಆ ಸಂಸ್ಕೃತಿ ಉಸಿರು ಕಟ್ಟಿ, ಒಂದು ಪ್ರಾಕೃತ ಸಂಸ್ಕೃತಿಯಾಗಿ ಉಳಿದು ಬಿಡಬಹುದು. ಈ ಬಗ್ಗೆ ಆಯಾ ಸಂಸ್ಕೃತಿಯ ಜನಾಂಗ ಅರಿತುಕೊಳ್ಳುವುದರ ಜೊತೆಗೆ, ಮಾನವ ಶಾಸ್ತ್ರಜ್ಞರೂ, ಜಾನಪದರೂ ಹೆಚ್ಚಿನ ತಿಳುವಳಿಕೆಯನ್ನು ಒದಗಿಸಬೇಕು. ಈ ಕೆಲಸವನ್ನು ದೇಶಪ್ರೇಮ, ಭಾಷಾಪ್ರೇಮ, ಮಾನವ ಪ್ರೇಮದ ಮೇಲೆ ಶ್ರೀಯವರು ಅಪ್ರತ್ಯಕ್ಷವಾಗಿ ಮಾಡಿರುವುದರಿಂದ ನಾನು ಅವರನ್ನು ಜಾನಪದೀಯರೆಂದು ಕರೆದಿದ್ದೇನೆ. ಕನ್ನಡನಾಡಿನ ಶ್ರೇಯಸ್ಸಿನ ಬಗ್ಗೆ ಅವರು ಹೇಳಿರುವ ಒಂದು ಹೇಳಿಕೆಯಿಂದ ಅವರ ಜನಪದ ಪ್ರೇಮವನ್ನು ಮತ್ತೊಮ್ಮೆ ಶೃತಪಡಿಸುವುದರ ಮೂಲಕ ಈ ಲೇಖನ ಮುಗಿಸುತ್ತೇನೆ.

''ಕನ್ನಡ ನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂ ನಾಸ್ತಿ'' ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ.

ದ.ರಾ.ಬೇಂದ್ರೆ

ಪ್ರೊ|| ಹಿ.ಶಿ.ರಾಮಚಂದ್ರೇಗೌಡ

ನವೋದಯ ಕಾಲದ ನಾಯಕ ಕವಿಗಳೆಂದರೆ ಕುವೆಂಪು ಮತ್ತು ದ.ರಾ.ಬೇಂದ್ರೆ. ಇವರು ನೇರವಾಗಿ ಜನ ಮುಖಿ ಕವಿಗಳು. ಕುವೆಂಪು ಪ್ರಾಚೀನದಿಂದ ಬಂದು ಈ ಹೊತ್ತು ನರಳುತ್ತಿರುವ ಜಾತಿ ಜನಪದಗಳನ್ನು ಒಡೆದು ವೈಜ್ಞಾನಿಕ-ವೈಚಾರಿಕ ನೆಲೆಗಟ್ಟಿನಲ್ಲಿ ಸಮಕಾಲೀನ ಜನಪದಗಳನ್ನು ಹುಟ್ಟು ಹಾಕಲು ಹೋರಾಡಿದವರು. ಬೇಂದ್ರೆಯವರು ಪಾರಂಪರಿಕ ಮೌಲ್ಯ ಮತ್ತು ಚಿಂತನೆಗೆ ಜನಪದ ಬದುಕಿನ ಲಯ ವಿನ್ಯಾಸವನ್ನು ಒದಗಿಸಿದವರು. ಆದ್ದರಿಂದ ಈ ಇಬ್ಬರ ಒಳಗೂ ಜನಪದ ನಾಯಕ ಇದ್ದಾನೆ.

ಬೇಂದ್ರೆಯವರು ಅಕ್ಷರಗಳ ಕಾವ್ಯ ಬರೆಯುತ್ತಿದ್ದರೂ ಜೀವನದ ಒಳಗೆ ನಿಜವಾದ ಕಾವ್ಯವನ್ನು ಕಂಡವರು. ''ಜೀವನವೇ ದೇವತೆಯಾದ, ತ್ರಿಪದಿ ಛಂದದಲ್ಲಿ ಹೊರ ಹೊಮ್ಮಿದ 'ಗರತಿಯ ಹಾಡಿ'ನ ಋಷಿಗಳು ಹೆಣ್ಣು ಮಕ್ಕಳು- ನಮ್ಮ ತಾಯಿ ತಂಗಿಯರು, ಅಮ್ಮ ಅಕ್ಕಂದಿರು, ಮಡದಿ ಮಕ್ಕಳು. ಹಾಗೆ ವಿಚಾರಿಸಿ ನೋಡಿದರೆ ಅವರದೇ ನಿಜವಾದ ಕಾವ್ಯ'' (ಗ.ಹಾ :೧೯೩೧) ಎಂದರು. ''ಈ ಜನಪದ ವೇದವೇ ಎಲ್ಲ ಕನ್ನಡಿಗರಿಗೂ ಸಾಮಾನ್ಯವಾದ ತಾಯ ಮೊಲೆಹಾಲು ಎಂಬುದು ಇದನ್ನೋದಿದವರ ಅನುಭವಕ್ಕೆ ಬಾರದೆ ಇರದು. ಈ ಅನುಭವದಿಂದುಂಟಾಗುವ ಐಕ್ಯಭಾವವು ಅಂತಿಂತಹದಲ್ಲ. ಪ್ರಜಾ ಪ್ರಭುತ್ವದ ಈ ಕಾಲದಲ್ಲಿ ಜನಸಾಮಾನ್ಯದ ಹೃದಯದೊಳಗಿನ ಸುಖದ ಕನಸೆಂತಹದೆಂಬುದನ್ನು ಕಂಡುಕೊಳ್ಳಲು ಇದರಂತಹ ಬೇರೆ ಕೈಗನ್ನಡಿಯಿಲ್ಲ'' ಎಂದು ಜನಪದ ಸಾಹಿತ್ಯದ ಮೂಲಕ ಅಖಂಡ ಕರ್ನಾಟಕವನ್ನು ಗ್ರಹಿಸಿದರು.

ಜನಪದ ಸಾಹಿತ್ಯ ಬರಹದ ಸಾಹಿತ್ಯಕ್ಕೆ ಸಂಸ್ಕಾರ ಕೊಡಬಲ್ಲದು ಎಂಬ ಬೇಂದ್ರೆಯವರ ಆಲೋಚನೆ ಸಾಂಪ್ರದಾಯಿಕ ಆಲೋಚನೆಗೆ ಹೊಡೆದ ಸಡ್ಡು. ''ಸಂಸ್ಕೃತ ಇಂಗ್ಲಿಷ್ ಹಳೆಗನ್ನಡಗಳ ಪ್ರತಿಬಿಂಬವನ್ನು ತಳೆದ ಸಾಹಿತ್ಯಕ್ಕಿಂತಲೂ ಅಚ್ಚಗನ್ನಡದ ಅಚ್ಚೊತ್ತಿದ ಸಾಹಿತ್ಯದ ಆಗತ್ಯವು ಅಷ್ಟಿಷ್ಟೆಂದು ಹೇಳಬರದು'' (ಗ.ಹಾ:೧೯೩೧) ಎಂದು ಸಾಹಿತ್ಯದ ಹೊಸ ಬಗೆಯನ್ನು ಜನಪದ ಸಾಹಿತ್ಯದಲ್ಲಿ ಕಂಡರಲ್ಲ. '' ಕನ್ನಡ ಕವನ ತುಂಗೆಯ ತವರೂರು ಈ ಹಾಡುಗಳು '' (ಅದೇ) ಎಂದು ಎತ್ತರಿಸಿ ಮೆರೆಸಿದರಲ್ಲ!

ಬೇಂದ್ರೆ ಜಾನಪದವನ್ನು ಧ್ಯಾನಿಸಿದರು. ಮತ್ತೆ ಮತ್ತೆ ಜಾನಪದವನ್ನು ಮನನ ಮಾಡಿದ್ದರಿಂದ ಅವರ ಮನಸ್ಸೆಲ್ಲವೂ ಜಾನಪದವಾಗಿತ್ತು. ಉತ್ತರ ಕರ್ನಾಟಕದ ಜನಪದ ಧಾಟಿ-

ಧೋರಣೆಯನ್ನು ಅವರ ಕೃತಿಗಳಲ್ಲಿ ಮತ್ತೆ ಮತ್ತೆ ತೆರೆದು ಓದುವಂತೆ ಮಾಡಿದರು. ಉತ್ತರ ಕರ್ನಾಟಕದ ಎಲ್ಲ ಜಾನಪದ ಭಾವಗಳೂ ಕಾವ್ಯಗಳಾಗುವಂತೆ ಮಾಡಿದರು. ಉತ್ತರ ಕರ್ನಾಟಕದ ಒಬ್ಬ ಕವಿ ಹೃದಯದ ಜಾನಪದ ತಜ್ಞ ಒಮ್ಮೆ ನನಗೆ ಹೇಳಿದರು: ಬೇಂದ್ರೆಯವರ ಕೆಲವು ಕವಿತೆಗಳಿಗೆ ಅವರ ಹೆಸರನ್ನು ತೆಗೆದು ಹಾಕಿದರೆ ಉತ್ತರ ಕರ್ನಾಟಕದ ಜನಪದರ ತತ್ವ ಪದಗಳೊ, ಹಂತಿ ಪದಗಳೊ.... ಆಗಿ ಬಿಡುತ್ತವೆ ಎಂದು. ಕವಿ ಜನಗಳ ಒಳಗೆ ಮತ್ತು ಜನ ಕವಿಯ ಒಳಗೆ- ಹೀಗೆ ಅನ್ಯೋನ್ಯವಾಗಿ ವಾಸಿಸುವ ಚೋಜುಗ ಇದೆಯಲ್ಲ! ಇದಕ್ಕೆ ವ್ಯಾಖ್ಯಾನ ಕಷ್ಟ. ನಾವು ಬೇಂದ್ರೆಯವರನ್ನು ನಮ್ಮ ಜಾನಪದ ತಲೆಮಾರಿನ ಯಜಮಾನರೊಳಗೆ ಸೇರಿಸಿಕೊಳ್ಳುತ್ತೇವೆ. ಓದುಗ ಮಹಾಶಯರ ಒಪ್ಪಿಗೆ ಇರಲಿ.

ಕೆ.ವಿ. ಪುಟ್ಟಪ್ಪ (ಕುವೆಂಪು)

ಪ್ರೊ|| ಹಿ.ಶಿ. ರಾಮಚಂದ್ರೇಗೌಡ

ಕುವೆಂಪು ಅವರ ಕಾವ್ಯಸೃಷ್ಟಿಯ ಸಂದರ್ಭದಲ್ಲಿ ಕ್ರಿಯಾಶೀಲ, ಶೋಷಣಾಮುಕ್ತ, ದೇಶೀಯ ಪ್ರತಿಭೆಯಾಧಾರಿತ ಜನಪದವೊಂದು ಅರಳುವುದನ್ನು ಗಮನಿಸುತ್ತೇವೆ. ಈ ಜನಪದದ ಪರಿಭಾಷೆಗಳೆಂದರೆ 'ಸತ್ಯಂ ಶಿವಂ ಸುಂದರಂ' ಎನ್ನುವ ನೈಸರ್ಗಿಕ ಧರ್ಮ ಪ್ರಾಧಾನ್ಯತೆ ಮತ್ತು ಸಮನ್ವಯ- ಸರ್ವೋದಯ ಮತ್ತು ಪೂರ್ಣದೃಷ್ಟಿಗಳೆಂಬ ವಿಶ್ವಮಾನವ ಸಮಾನತೆಯ ಸಮಾಜವಾದಿ ಸಮಾಜದ ದರ್ಶನಗಳು. ಈ ಬಗೆಯ ಏಕರೂಪದ ಮತ್ತು ಸಮಗ್ರ ವೈಚಾರಿಕ ಚಿಂತನ ಕಾವ್ಯಸಿದ್ಧಿ ಕನ್ನಡದಲ್ಲಿ ಕುವೆಂಪು ಅವರಿಂದಲೇ ಮೊದಲು ಸಾಧ್ಯವಾಯಿತು. ಈ ಮೊದಲು ವೈಚಾರಿಕತೆ ಕಾವ್ಯದ ವಸ್ತುವಾಗುವುದನ್ನು ಕವಿಗಳೂ ವಿಮರ್ಶಕರೂ ಸಮಗ್ರವಾಗಿ ಗ್ರಹಿಸಿದ್ದಿಲ್ಲ. ವೈಚಾರಿಕತೆ ಕಾವ್ಯದ ವಸ್ತುವಾಗುವುದು ರಸಾಸ್ವಾದನೆಗೆ ಎಡವುಗಲ್ಲು ಎಂದು ಅವರು ಭಾವಿಸಿದ್ದರು. ಸಂಪ್ರದಾಯಕ್ಕೆ ತನ್ನನ್ನು ತೆತ್ತುಕೊಂಡ ಕಾವ್ಯ ಚಿಂತನೆಯೆ ಇದಕ್ಕೆ ಕಾರಣ. ಆದ್ದರಿಂದ ಕಾವ್ಯವನ್ನು ಸಮಕಾಲೀನ ವಾಸ್ತವ ಪ್ರಜ್ಞೆಯಿಂದ ದುಡಿಸಿಕೊಂಡು ಮಾನವಜೀವನದ ಸಮಗ್ರತೆ ಮತ್ತು ನಿರಂತರತೆಗಳನ್ನು ಕಾಣದ ಕುರುಡರಾದರು.

ಭಾರತದ ರಾಜಕೀಯ ಸ್ವಾತಂತ್ರ್ಯ, ಜಾತಿ, ಅಧಿಕಾರ, ಅಂತಸ್ತುಗಳಲ್ಲಿ ಪರಿಣಮಿಸಿ ಅವಸಾನದ ದಾರಿಯನ್ನು ಹಿಡಿಯತೊಡಗಿತು. ಸ್ವಾತಂತ್ರ್ಯವನ್ನು ಸಾಂಸ್ಕೃತಿಕವಾಗಿ ಗ್ರಹಿಸಿ ಅದರ ಸಫಲತೆಯನ್ನು ಕಾವ್ಯದ ಮೂಲಕ ಸರಿಯಾಗಿ ಗ್ರಹಿಸಿದವರು ಕುವೆಂಪು.

ಜನಪದ: ದೃಷ್ಟಿ-ಸೃಷ್ಟಿ

ಕುವೆಂಪು ಅವರ ಕಾವ್ಯಸೃಷ್ಟಿಯಲ್ಲಿಯ ಜಾನಪದ ದೃಷ್ಟಿ ವಸ್ತುವಾತ್ಮಕವಾದುದಲ್ಲ; ವಿಚಾರಾತ್ಮಕವಾದುದು. ಈ ವಿಚಾರವೇ ಭಾರತೀಯ ಮೂಲ ಜನಪದಗಳ ಪ್ರತಿಪಾದನೆಗೆ ತೊಡಗುತ್ತದೆ. ಕುವೆಂಪು ಅವರ ಪರಿಭಾಷೆಗಳ ಮೂಲಕ ಈ ಜನಪದಗಳು ಹೊಸ ಮತ್ತು ತಮ್ಮದೇ ಆದ ಸಾಂಸ್ಕಾರಿಕ ನೆಲೆಗಳನ್ನು ಪಡೆದುಕೊಳ್ಳುತ್ತವೆ. ಇದು ಕಾವ್ಯದಲ್ಲಿಯ ಬಿಡಿಬಿಡಿಯಾದ ಪ್ರತಿಭಟನೆ ಮತ್ತು ಅವುಗಳ ಒಟ್ಟು ಪ್ರಕ್ರಿಯಾತ್ಮಕ ಸಾಧನೆಯಿಂದ ಸಾಧ್ಯವಾಗಿದೆ. ಕುವೆಂಪು ಅವರ ಬಿಡಿಕವನಗಳ ಮತ್ತು 'ರಾಮಾಯಣ ದರ್ಶನಂ'ಗಳ ನಡುವಿನ ಅಂತರ ಇದನ್ನು ಸ್ಪಷ್ಟಪಡಿಸುತ್ತದೆ.

ಕುವೆಂಪು ಅವರ ಜನಪದ ಜಗತ್ತು ಪ್ರೇಮಮಯವಾದುದು. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳಿನ ನೆಲೆಗಳನ್ನು ಹುಡುಕುವಂಥದು. ಆ ಸಮಬಾಳನ್ನು ಹೊಸ ಮೌಲಿಕ ವ್ಯವಸ್ಥೆಯೊಡನೆ ಕಂಡರಿಸುವಂಥದು. ಸಮನ್ವಯ, ಸರ್ವೋದಯ ಮತ್ತು ಪೂರ್ವದೃಷ್ಟಿಗಳ ಆಧುನಿಕ ಜಗತ್ತಿನ ವಿಶ್ವಮಾನವತ್ವದ ಪರಿಭಾಷೆಗಳು ಈ ಆಧುನಿಕ ಆದರ್ಶ ಜನಪದವನ್ನು ಕಂಡುಕೊಳ್ಳುವತ್ತ ಮುನ್ನಡೆಯುತ್ತವೆ. ಪ್ರತಿ ಸಮಾಜವಾದಿ ಹೊಸ ಜನಪದ ಇಂಥ ಆದರ್ಶ ಆಶಾಭಾವನೆಗಳ ಮೇಲಿಂದಲೇ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತದೆ.

ಜಗತ್ತಿನ ಮತ್ತು ಭಾರತೀಯ ಸಮಾಜವಾದಿ ಚಿಂತನೆಗಳ ಹಿನ್ನೆಲೆಯಲ್ಲಿ ಭಾರತದ ಜಾತಿ ಮತ್ತು ಜನಾಂಗಿಕ (ethnic) ಜನಪದಗಳು ಪುನರ್‌ಸಂಘಟನೆಗೊಳ್ಳುತ್ತಿವೆ. ಈ ಬಗೆಯ ಭಾರತೀಯ ಪುನರುಜ್ಜೀವನ ಸ್ವಾತಂತ್ರ್ಯಪೂರ್ವದಿಂದಲೇ ಆರಂಭವಾಗಿದೆ. ಭಾರತದಾದ್ಯಂತ ವ್ಯಾಪಕ ಸುದ್ದಿಯಲ್ಲಿರುವ ದಲಿತ ಚಳುವಳಿಗಳು, ರೈತಚಳುವಳಿಗಳು ಇದಕ್ಕೆ ಸಾಕ್ಷಿ. ಅಸಮಂಜಸವಾದರೂ, ಪ್ರೋತ್ಸಾಹ ಮತ್ತು ಪ್ರೇರಣೆಯ ಆವಶ್ಯಕತೆಯ ದೃಷ್ಟಿಯಿಂದಲಾದರೂ ಸರ್ಕಾರದ ಕಡೆಯಿಂದ ಅಲ್ಪಸಂಖ್ಯಾತ, ಹಿಂದುಳಿದ ಮತ್ತು ಕಾಡು ವಾಸಿಗಳು ತಮ್ಮ ಸಾಂಸ್ಕೃತಿಕ ಗುಂಪುಗಳ ಆಧುನೀಕರಣಕ್ಕೆ ತೊಡಗಿರುವುದು ಮತ್ತೊಂದು ಜ್ವಲಂತ ಉದಾಹರಣೆಯಾಗಿದೆ.

ಗಾಂಧಿ, ನೆಹರೂ, ಜಯಪ್ರಕಾಶ್, ಮೊರಾರ್ಜಿಯವರ ಮೂಲಕ ತಮ್ಮ ಹೋರಾಟದ ತಪಶ್ಚರ್ಯೆಯನ್ನು ಶೋಷಣೆಗೆ ಒಳಪಡಿಸಿಕೊಂಡರು. ಪ್ರತಿ ಭಾರತೀಯನು ಸಾಂಸ್ಕಾರಿಕತೆಯತ್ತ ಬೆಳೆಯುವಾಗ ತೋರುವ ದೌರ್ಬಲ್ಯದಂತೆ ಇವರೂ ಸಹ ಮೇಲುವರ್ಗದ ಸಂಸ್ಕೃತಿಯ ಸೌಜನ್ಯಕ್ಕೆ ಒಳಗಾಗಿ ತಮ್ಮ ಹೋರಾಟದ ಫಲವನ್ನು ಸರಿಯಾದ ಮಾರ್ಗದಲ್ಲಿ ದರ್ಶಿಸದೆ ಹೋದರು. ವ್ಯವಸಾಯ ಪ್ರಧಾನವಾದ ಭಾರತದಲ್ಲಿ ಗೃಹ ಕೈಗಾರಿಕೆಗಳಿಂದ ಆರಂಭಮಾಡಿ ಬೃಹತ್ ಕೈಗಾರಿಕೆಗಳ ಕಡೆಗೆ ನಡೆಯದೆ ನೆಹರು ಹೊರದೇಶದಿಂದ ಬೃಹತ್ ಕೈಗಾರಿಕೀಕರಣದ ತತ್ವವನ್ನು ತಂದು ಭಾರತದ ಮೇಲೆ ಹೇರಿದ್ದು, ಮೊರಾರ್ಜಿ ತಮ್ಮ ಆಡಳಿತ ಕಾಲದಲ್ಲಿ ವ್ಯವಸಾಯಗಾರರ ಸಂಘಟನೆ ಮತ್ತು ಅವರ ಸರಿಯಾದ ಬೇಡಿಕೆಗಳನ್ನು ತಿರಸ್ಕರಿಸುವ ಮೂಲಕ ತಾವು ಭಾರತೀಯ ಜನತಾ ಚಳುವಳಿಯ ವಿರೋಧಿಗಳೆಂಬುದನ್ನು ಸಾದರಪಡಿಸಿಕೊಂಡರು. ಜಗಜೀವನರಾಂ ರಾಷ್ಟ್ರದ ಅತ್ಯುನ್ನತ ಪದವಿಯಿಂದ ವಂಚಿತವಾದುದು ಕೂಡ ಈ ಹಿನ್ನೆಲೆಯಿಂದಲೆ.

ಈ ಬಗೆಯ ಶೋಷಿತ ಮೇಲುವರ್ಗದ ಸಂಸ್ಕೃತಿಯ ಸೌಜನ್ಯದ ಬಂಡೆಯನ್ನು ತಲೆಯ ಮೇಲೆ ಹೇರಿಕೊಂಡು ಕುಗ್ಗಿ ಕುಸಿದ ಶೂದ್ರ ನಾಯಕರಲ್ಲಿ ಜಗಜೀವನರಾಂ ಮೊದಲಿಗರು. ಈ ದೇಶದಲ್ಲಿ ವ್ಯವಸ್ಥಿತವಾಗಿ ಶೋಷಣೆಯ ವ್ಯತ್ಯಾಸಗಳನ್ನು ಪ್ರತಿಪಾದಿಸುವ ಜಾತೀಯತೆಯನ್ನು, ಮೇಲ್‌ಸ್ತರದಲ್ಲಿ ಸಮ್ಮೋಹನಗೊಳಿಸುವ ಅದರದೇ ಸಂಸ್ಕೃತಿಯನ್ನು ತಮ್ಮ ಸಂಸ್ಕಾರದ ಮೇಲ್ಮೆಯನ್ನಾಗಿಯೂ ಬಳಸಿಕೊಂಡ ದ್ವಂದ್ವವೇ ಜಗಜೀವನರಾಂ ಅಂತರಪಿಶಾಚಿಯಾಗಿ ಉಳಿಯಲು ಕಾರಣವಾಯಿತೆನ್ನಬಹುದು. ಆದರೆ ಲೋಹಿಯಾ ಈ ಪರಿಸ್ಥಿತಿಯನ್ನು ಆಮೂಲಾಗ್ರವಾಗಿ ತಿಳಿದುಕೊಂಡವರಾಗಿದ್ದರು. ಅವರು ಭಾರತೀಯ ಮೇಲುವರ್ಗದ ಶೋಷಣಾಮೂಲವಾದ ಸಂಸ್ಕೃತಿಯನ್ನೂ, ಅದರ ಆಧುನಿಕ ಆದರ್ಶ ಮಾದರಿಯಾದ ನೆಹರೂ

ಅವರನ್ನೂ ಒಪ್ಪಿಕೊಂಡು ಅದರ ಬಾಯ್ಪಂಬುಲಕ್ಕೆ ಕೈ ಚಾಚುವ ಸಣ್ಣತನವನ್ನು ಮೆಟ್ಟಿ ಮೇಲೆದ್ದಿದ್ದರು. ಭಾರತೀಯ ಪ್ರಜ್ಞಾವಂತನ ಮೊದಲ ಮಾನಸಿಕ ಹೋರಾಟ ಈ ಶೋಷಣಾ ಮೂಲವಾದ ಸಂಸ್ಕೃತಿಗೆ ಪ್ರತಿಭಟನೆಯಾಗಿ ನಿಲ್ಲುವುದು ಎಂಬುದನ್ನು ಅರಿತಿದ್ದರು. ಆದ್ದರಿಂದ ಹೊಸಬದುಕು, ವ್ಯವಸ್ಥೆಗಳೆಂದರೆ ಹೊಸ ಬ್ರಾಹ್ಮಣ್ಯವನ್ನು ಸ್ವಿಕರಿಸುವುದಲ್ಲ; ಭಾರತೀಯ ಮೂಲವಾದ ಎಲ್ಲ ಜನಪದಗಳು ತಮ್ಮ ತಮ್ಮ ಜಾನಾಂಗಿಕ (ethnic) ಸಂಸ್ಕೃತಿಗಳ ಮೇಲಿಂದ ಬೆಳೆದು ನಿಲ್ಲುವುದು ಎಂಬುದನ್ನು ಅವರು ದೃಢವಾಗಿ ಪ್ರತಿಪಾದಿಸಿದರು.

ಭಾರತದಲ್ಲಿ ಸ್ವದೇಶೀ ವಿಚಾರವನ್ನು ಬೆಳೆಸಲು ಪ್ರಯತ್ನಿಸಿದವರೆಲ್ಲ ಈ ಮೂಲ ಮನೋಧರ್ಮಕ್ಕೆ ಬದ್ಧರಾಗಿದ್ದರು. ಇಂಥವರಲ್ಲಿ ಸಮಾಜವಾದಿ ಮನೋಧರ್ಮದ ಚಿಂತಕರೇ ಹೆಚ್ಚಾಗಿದ್ದರು. ಈಗ ಕೂಡ ಅವರೇ ಇಂಥ ಕೆಲಸದಲ್ಲಿ ತೊಡಗಿದ್ದಾರೆ. ಸಮಾನತೆಗೆ ಬದ್ಧವಾದ ಸಮಾಜವಾದಿ ಧೋರಣೆಯ ಮೊದಲ ಕೆಲಸವೆಂದರೆ ವ್ಯವಸ್ಥಿತ ಶೋಷಣಾ ಸಂಸ್ಕೃತಿಯ ಮೌಲ್ಯಗಳನ್ನು ಒಡೆದು ಅದರ ಅನುಕರಣೆಕಾರರಲ್ಲಿ ಗೊಂದಲವನ್ನುಂಟು ಮಾಡುವುದು. ನಂತರ ಈ ಗೊಂದಲದ ಮೂಲಕ ತಮ್ಮದೇ ಆದ ಸಾಂಸ್ಕೃತಿಕ ಸಂಘಟನೆಗೆ ಕ್ರಿಯಾಶೀಲತೆಯನ್ನು ಒದಗಿಸುವುದು. ಇವತ್ತಿನ ಸಮಾಜವಾದಿಗಳಲ್ಲಿ ಮೊದಲನೆಯ ಗುಂಪಿನ ವ್ಯಕ್ತಿಗಳೇ ಹೆಚ್ಚಾಗಿದ್ದಾರೆ. ಆದ್ದರಿಂದಲೇ ಅವರು ಅಸಂಘಟಿತರು ಎಂಬ ಹೆಸರಿಗೆ ಪಾತ್ರರಾಗಿದ್ದಾರೆ. ಆದರೆ ಇತ್ತೀಚೆಗೆ ದಲಿತ ಮತ್ತು ರೈತ ಸಂಘಟನೆಗಳ ಮೂಲಕ ಕೆಲವೇ ಕೆಲವರು ಎರಡನೆಯ ವರ್ಗದ ಸಮಾಜವಾದಿಗಳ ಕೆಲಸದಲ್ಲಿ ತೊಡಗಿದ್ದಾರೆ. ಆದರೆ ಇರುವ ಅವ್ಯವಸ್ಥಿತ ವ್ಯವಸ್ಥೆಯನ್ನು ಒಡೆಯುವುದರ ಜೊತೆಯಲ್ಲೆ ಮತ್ತೊಂದು ಸ್ವತಂತ್ರ ಪರ್ಯಾಯ ವ್ಯವಸ್ಥೆಯ ಬಗ್ಗೆ ಹೇಳುವುದು ಮತ್ತು ಮುಖ್ಯವಾಗಿ ಆ ಸಂಘಟನೆಯನ್ನು ಪಡೆಯುವ ಕಾರ್ಯವಿಧಾನಗಳನ್ನು ಸೂಚಿಸಿ ಆ ಬಗೆಯ ಹೊಸ ಸಮಾಜದ ಸೃಷ್ಟಿಗೆ ಪ್ರೇರಣೆಯಾಗುವವರು ಬಹಳ ಕಡಿಮೆ ಎಂದೇ ಹೇಳಬೇಕು.

ಯಾವ ಸಮಾಜವಾದದ ತಲೆಪಟ್ಟವನ್ನೂ ಕಟ್ಟಿಕೊಳ್ಳದೆ ಈ ಕೆಲಸವನ್ನು ಸಾಹಿತ್ಯಿಕ ನೆಲೆಯಲ್ಲಿ ನಿರ್ದೇಶಿಸಿದವರು ಮಹಾಕವಿ ಶ್ರೀ ಕುವೆಂಪು ಅವರು. ಅವರು ತಮ್ಮ ಕಾವ್ಯಕ್ಕೆ ಸ್ವೀಕರಿಸುವ ವಸ್ತು ಮತ್ತು ವಿಚಾರಗಳ ಸಿದ್ಧಿಯಲ್ಲಿ ಈ ಅಂಶವನ್ನು ಕಾಣುತ್ತೇವೆ. ಅವರು ಸ್ವೀಕರಿಸುವ ಕಾವ್ಯವಸ್ತುವೆಲ್ಲ ಕೇವಲ ಸಾಂಕೇತಿಕ. ಅದರ ಪ್ರತಿಪಾದನೆಯೇ ಅವರಿಗೆ ಮುಖ್ಯ. ಯಾಕೆಂದರೆ ಆ ಪ್ರತಿಪಾದನೆಯ ಮೂಲಕವೇ ವಸ್ತುವನ್ನು ತಲುಪುವ ಮತ್ತು ಸಹಜವಾಗಿಸುವ ಕಲೆಗಾರಿಕೆ ಅವರಲ್ಲಿದೆ. ಸಮಕಾಲೀನ ಸಮಸ್ಯೆಗಳ ಮೂಲಕ ಸಾರ್ವತ್ರಿಕ ಸತ್ಯ ಸಂಗತಿಗಳನ್ನು ಅರುಹುವ ಮತ್ತು ಮನುಷ್ಯತ್ವವನ್ನು ಮುಚ್ಚಿ ಮರೆಯುವ ಸಾಮಾಜಿಕ ಕೆಡುಕುಗಳನ್ನು ಖಂಡಿಸುವುದರ ಮೂಲಕ ವಿಶ್ವಮಾನವತ್ವದ ಕಡೆಗೆ ದಾರಿ ಮಾಡಿಕೊಡುತ್ತಾರೆ. ಅವರ 'ಬೆರಳ್‌ಗೆ ಕೊರಳ್, ಜಲಗಾರ, ಶೂದ್ರತಪಸ್ವಿ, ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ, ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು' ಕೃತಿಗಳು ಇದಕ್ಕೆ ಜ್ವಲಂತ ಸಾಕ್ಷಿಗಳಾಗಿವೆ.

ಈ ಎಲ್ಲ ಕೃತಿಗಳ ಸಿದ್ಧಿಯೆನ್ನುವಂತೆ 'ರಾಮಾಯಣದರ್ಶನಂ' ಮಹಾಕಾವ್ಯದಲ್ಲಿ ಚಿಕ್ಕಪುಟ್ಟ ಮತ್ತು ಕೆಳವರ್ಗದ ಪಾತ್ರಗಳೆಲ್ಲ ಬೆಳೆದುನಿಲ್ಲುವ ಮತ್ತು ತಮ್ಮ ಅಂತರಂಗಶುದ್ಧಿಯನ್ನು ಸಾಧಿಸಿಕೊಳ್ಳುವ ಬಗೆಯನ್ನು ಕಾಣುತ್ತೇವೆ.

ಕುವೆಂಪು ಅವರ ಆಧ್ಯಾತ್ಮ ಸಮಾಜ ಸೃಷ್ಟಿಯ ಕಲ್ಪನೆಯನ್ನು ಕೊಳಕು ಮತ್ತು ಶೋಷಣೆಯ ಧರ್ಮದ ಸ್ಥಿತಿಯಲ್ಲಿ ಭಾವಿಸಿಕೊಳ್ಳುವ ಕೆಲವರು, ಕುವೆಂಪು ಪುರೋಹಿತಶಾಹಿಯನ್ನು ವಿರೋಧಿಸುತ್ತಲೇ ಮತ್ತೆ ಪುರೋಹಿತಶಾಹಿ ಧರ್ಮದ ಕಡೆಗೆ ಮಾರ್ಗಸೂಚಿಯಾಗುತ್ತಾರೆ ಎಂದು ಹೇಳಹೊರಡುತ್ತಾರೆ. ಮನುಷ್ಯನ ಧಾರ್ಮಿಕತೆಯನ್ನು ಲೌಕಿಕ ಸಂಸ್ಕಾರದ ಸ್ಥರದಲ್ಲಿ ಅರ್ಥ ಮಾಡಿಕೊಳ್ಳುವ ದೌರ್ಬಲ್ಯದಿಂದಾಗಿ ಇಂಥ ತಪ್ಪು ಗ್ರಹಿಕೆಗಳು ತಲೆದೋರುತ್ತವೆ.

ಜನಾಂಗಗಳಿಗೆ ಬೆಳವಣಿಗೆಯ ಐತಿಹಾಸಿಕ ಘಟ್ಟಗಳಿದ್ದ ಹಾಗೆ, ಧರ್ಮಕ್ಕೂ ಇರುತ್ತವೆ. ಈ ಬಗೆಯ ಧಾರ್ಮಿಕ ಇತಿಹಾಸವನ್ನು ಏಕಮುಖಿ ವಿಕಾಸವಾದವಾಗಿ ಪ್ರತಿಪಾದಿಸುವುದೆಂದು ಇದರ ಅರ್ಥವಲ್ಲ. ಧಾರ್ಮಿಕ ಸ್ವಭಾವಗಳು ಐತಿಹಾಸಿಕವಾಗಿ ಪಲ್ಲಟಗೊಳ್ಳುವ ಸಂಗತಿಗಳು. ಆದರೆ ಭಾರತದಂಥ ಜಾತಿ ಪ್ರಧಾನವಾದ ಧರ್ಮವ್ಯವಸ್ಥೆಯಲ್ಲಿ ಕೂಡ ಇದು ಸಹಜವಾಗಿದೆ. ಅವಿದ್ಯೆ ಧಾರ್ಮಿಕ ಸ್ಥರಗಳನ್ನು ಏಕಮುಖಿ ವಿಕಾಸ ತತ್ವದಂತೆ ನಡೆಸಿದರೆ, ವಿದ್ಯಾವಂತಿಕೆ ಧಾರ್ಮಿಕ ವಿಕಾಸವನ್ನು ಐಚ್ಛಿಕವಾಗಿ ತೆಗೆದುಕೊಳ್ಳುತ್ತದೆ.

ಭಾರತದ ಧಾರ್ಮಿಕ ಸಂಘರ್ಷದ ಪರಿಸ್ಥಿತಿಯಲ್ಲಿ ಇದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಬಹುದು. ಮೇಲುವರ್ಗದ ಶೋಷಿತ ಸಂಸ್ಕೃತಿ ಭಾರತದ ಮೇಲುವರ್ಗದವರಿಗೆ ವಾಸ್ತವ ಧರ್ಮವಾದರೆ. ಮಧ್ಯಮವರ್ಗದವರಿಗೆ ಒಂದು ಪ್ರಬಲ ಅನುಕರಣೆಯಾಗಿದೆ. ಕೆಳವರ್ಗದವರಿಗೆ ಅದು ಅತ್ಯಂತ ಹಿಂಸೆಯ ಮತ್ತು ಪ್ರತಿಭಟನೆಯ ಸಂಗತಿಯಾಗಿದೆ. ಬೇರೆ ಬೇರೆ ಮಾರ್ಗಗಳ ಮೂಲಕ ಶೋಷಿತ ಸಂಸ್ಕೃತಿ ಮತ್ತಷ್ಟು ಭದ್ರವಾಗುವಂತೆ ನೋಡಿಕೊಳ್ಳುತ್ತಿರುವಾಗಲೇ ಅಥವ ಆಧುನಿಕವಾಗಿ ಕೂಡ ಅಸ್ತಿತ್ವದಲ್ಲಿರುವಂತೆ ನೋಡಿಕೊಳ್ಳುತ್ತಿರುವಾಗಲೇ ಕೆಳವರ್ಗದವರ ತೀವ್ರ ಪ್ರತಿಭಟನೆಗೆ ಒಳಗಾಗುತ್ತಿದೆ. ಈ ಪ್ರತಿಭಟನೆ ಎರಡು ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಒಂದು, ಮೇಲುವರ್ಗದ ಸಾಂಸ್ಕೃತಿಕ ಹಿತಗಳನ್ನು ಪಡೆಯುವ ಆತುರ, ರಭಸ. ಇದು ಯಾಂತ್ರೀಕೃತ ಆಧುನಿಕ ಆರ್ಥಿಕ ಸಮಾನತೆಯನ್ನು ಪಡೆಯುವ ಸ್ಥಿತಿ. ಭಾರತೀಯ ಜಾತಿ ವ್ಯವಸ್ಥೆಯ ದುರಂತಗಳನ್ನು ಸರಿಯಾಗಿ ತಿಳಿಯದ ಜನರ ಪ್ರಲೋಭಿತ ದೃಷ್ಟಿಕೋನವೇ ಇದಕ್ಕೆ ಕಾರಣ. ಶ್ರೀಮಂತನೂ, ರಾಷ್ಟ್ರೀಯ ರಾಜಕಾರಣಿಯೂ, ಒಬ್ಬ ಅತ್ಯಂತ ಜಾಣ ನವ ಬ್ರಾಹ್ಮಣ್ಯವುಳ್ಳವನೂ ಆದ ಜಗಜೀವನರಾಂ ಇಂದೂ ಜಾತಿಯ ನೆಲೆಯಲ್ಲೇ ನೋಡಲ್ಪಡುತ್ತಿದ್ದಾರೆ ಎಂಬ ವಾಸ್ತವತೆಯನ್ನು ಅರಿತೂ ಬಹತೇಕ ದಲಿತರು ಇದೇ ದಾರಿಯನ್ನು ತುಳಿಯುತ್ತಿರುವುದು ಇದಕ್ಕೆ ಸ್ಪಷ್ಟ ಉದ್ಧಾಹರಣೆ. ಇವರು ಇವತ್ತಿನ ಭಾರತೀಯ ವಿದ್ಯಾಭ್ಯಾಸದಲ್ಲಿಯ ದುರಂತಗಳನ್ನು ವಿಶ್ಲೇಷಿಸದೆ ಅದರ ಮೇಲಿಂದ ಸರ್ಕಾರಿ ನೌಕರಿಗಳನ್ನು ಪಡೆಯುವ ಮತ್ತು ಆ ಮೂಲಕ ಆರ್ಥಿಕ ಮೂಲವಾದ ಸಂಸ್ಕೃತಿಯನ್ನು ಸೃಷ್ಟಿಸಿಕೊಳ್ಳುವ ಹೋರಾಟದತ್ತ ನಡೆದಿದ್ದಾರೆ. ಭಾರತದ

ಪರಿಸ್ಥಿತಿಯಲ್ಲಿ ಈ ಬಗೆಯ ಸೌಖ್ಯ ಸಂಪಾದನೆ ಹಾವಿನ ಹೆಡೆಯ ನೆರಳಿನಲ್ಲಿಯ ಕಪ್ಪೆಯ ಸಂತೃಪ್ತಿಯಷ್ಟೆ.

ಮಧ್ಯಮವರ್ಗದಿಂದ ಬಂದ ಮತ್ತು ಭಾರತೀಯ ಶೋಷಿತ ಸಂಸ್ಕೃತಿಯ ಅಪಾಯಗಳನ್ನು ತಮ್ಮ ನಡವಳಿಕೆಗಳಿಂದಲೇ ಪರೀಕ್ಷಿಸಿಕೊಳ್ಳುತ್ತಿರುವ ಜನ ಅದರ ನೇರ ಪ್ರತಿಭಟನೆಗೆ ಸಜ್ಜಾಗುತ್ತಿದ್ದಾರೆ. ತಾವು ಓದುತ್ತಿರುವ ಮತ್ತು ಅಧಿಕಾರಿಗಳಾಗುತ್ತಿರುವ ಸ್ಥಿತಿಗಳಲ್ಲೆಲ್ಲಾ ಶೋಷಣಾ ಸಂಸ್ಕೃತಿ ತಮ್ಮನ್ನು ನುಂಗುತ್ತಿರುವ ಮತ್ತು ಗ್ರಾಮೀಣ ಬದುಕಿನ ಅತ್ಯಂತ ವಿರೋಧಿಶಕ್ತಿಯಾಗಿ ಭಾರತೀಯ ಮೂಲವಾದ ಪ್ರತಿಭೆ ಮತ್ತು ಸಂಘಟಿತ ಅಸ್ತಿತ್ವವನ್ನು ಹಾಳು ಮಾಡುತ್ತಿರುವುದನ್ನು ಗುರುತಿಸುತ್ತಿದ್ದಾರೆ. ಇವತ್ತಿನ ಹೆಚ್ಚಿನ ಮಟ್ಟದ ಸಮಾಜವಾದಿಗಳು ಈ ವರ್ಗಕ್ಕೆ ಸೇರಿದ್ದಾರೆ. ಈ ಮಧ್ಯಮವರ್ಗದ ಬಹು ಸಂಖ್ಯಾತ ಭಾರತೀಯ ಮೂಲದವರು ತಮ್ಮದೇ ಆದ ಆರ್ಥಿಕ- ಸಾಂಸ್ಕೃತಿಕ ನೆಲೆಗಳ ಮೇಲಿಂದ ಸಂಘಟಿತರಾಗುವ ತುರ್ತನ್ನು ಗುರುತಿಸಿಕೊಂಡಿದ್ದಾರೆ.

ಭಾರತೀಯ ಶೋಷಣಾ ಸಂಸ್ಕೃತಿಯ ಪ್ರತಿಭಟನೆಯ ಭಿನ್ನ ದೃಷ್ಟಿಕೋನಗಳೇ ಕುವೆಂಪು ಅವರನ್ನು ದ್ವೇಷಿಸಲೂ ಪ್ರೀತಿಸಲೂ ಕಾರಣವಾಗಿವೆ - ಎಂದು ನನ್ನ ಭಾವನೆ. ಎಲ್ಲಿಯವರೆಗೆ ಮಧ್ಯಮವರ್ಗದ ಬಹುಸಂಖ್ಯಾತರು ಮತ್ತು ದಲಿತರು ಪರಸ್ಪರ ಸಾಂಸ್ಕೃತಿಕ ನೆಲೆಗಳನ್ನು ಗುರುತಿಸಿಕೊಳ್ಳದೆ ಶೋಷಣಾ ಸಂಸ್ಕೃತಿಯ ಭರವಸೆಗಳಿಗೆ ಒಳಗಾಗುತ್ತಾರೆಯೋ ಅಲ್ಲಿಯವರೆಗೆ ಈ ಕಚ್ಚಾಟ ಉಳಿದಿರುತ್ತದೆ.

ಆದರೆ ಭಾರತೀಯ ಪರಿಸ್ಥಿತಿಯಲ್ಲಿ ಜಾತಿ ಮತ್ತು ಆ ಮೂಲವಾದ ಧರ್ಮ, ವಾಸ್ತವತೆಗಳೆಂದು ಯಾರು ಭಾವಿಸುವುದಿಲ್ಲವೋ ಅಂಥವರು ಆರ್ಥಿಕ ಕಾರಣವನ್ನೇ ಪ್ರಬಲವಾಗಿ ಪ್ರತಿಪಾದಿಸುತ್ತಾ ಬೃಹತ್ ಕೈಗಾರಿಕೀಕರಣದತ್ತ ಹೊರಟು, ಭಾರತೀಯ ಆರ್ಥಿಕತೆ ಮತ್ತು ಸಾಂಸ್ಕೃತಿಕತೆಯನ್ನು ನೆಲಸಮ ಮಾಡುತ್ತಾರೆ. ಆಗ ಮತ್ತೊಂದು ಕೈಗಾರಿಕಾ ಬಂಡಾವಾಳಷಾಹಿಗಳ ಶೋಷಣಾಮೂಲ ಸಂಸ್ಕೃತಿ ಸೃಜನೆಗೊಳ್ಳುತ್ತದೆ. ಇವತ್ತಿನ ಭಾರತದ ಮೇಲು ವರ್ಗವೇ ಮುಂದಿನ ರಾಷ್ಟ್ರೀಕೃತ ಬೃಹತ್ ಕೈಗಾರಿಕೀಕರಣದ ಯಜಮಾನ ಕೂಡ ಆಗುತ್ತದೆ. ತನ್ನ ಪ್ರತಿಭೆಯನ್ನು ಹೊಗಳಿಕೊಳ್ಳುತ್ತ ಅಂತರ್ರಾಷ್ಟ್ರೀಯವಾಗಿ ಅಧಿಕಾರಗಳನ್ನು ಗಿಟ್ಟಿಸಿಕೊಳ್ಳುತ್ತಿರುವ ಈ ವ್ಯವಸ್ಥೆ ಭಾರತದಲ್ಲಿಯ ಹೆಚ್ಚಿನ ಅವಕಾಶಗಳನ್ನು ಶೂದ್ರರಿಗೆ ಬಿಟ್ಟುಕೊಡುತ್ತದೆ ಎನ್ನುವುದು ಒಂದು ಬರೀ ನಂಬಿಕೆ.

ಲೋಹಿಯಾ ಮುಂತಾದ ಸಮಾಜವಾದಿಗಳ ತಾತ್ವಿಕ ಚಿಂತನೆಯಂತೆ ಗೃಹಕೈಗಾರಿಕೆಗಳು ಮತ್ತು ಗ್ರಾಮ ಸ್ವರಾಜ್ಯದ ಮೂಲಕ ಸಾಧ್ಯವಾಗುವ ರಾಜ್ಯವ್ಯವಸ್ಥೆ ಭಾರತದ ನಿಜವಾದ ಪ್ರಜೆಗಳಿಗೆ ಹೆಚ್ಚಿನ ಅವಕಾಶವನ್ನು ಒದಗಿಸುತ್ತದೆ. ಇಂಥ ಕಡೆ ಭಾರತೀಯ ಮೂಲವಾದ ಧರ್ಮ-ಸಂಸ್ಕೃತಿಗಳ ಪುನರುಜ್ಜೀವನ ಸಾಧ್ಯವಾಗಿ ವಾಸ್ತವತಃ ದಲಿತ ಮತ್ತು ಮಧ್ಯಮವರ್ಗದ ಜಾತಿಗಳು ಬೇರೆ ಬೇರೆಯಲ್ಲವೆಂಬ ಮನೋಭಾವ ಮೂಡಿ, ಜಾತೀಯತೆ ಅಳಿಯುತ್ತದೆ. ಈ

ಬಗೆಯಲ್ಲಿ ಜಾತೀಯತೆ ಅಳಿಯುವುದರ ಮೂಲಕ ಸಮಾನ ಆರ್ಥಿಕ ಮತ್ತು ಸಾಮಾಜಿಕ ಅವಕಾಶಗಳು ಎಲ್ಲರಿಗೂ ಮುಕ್ತವಾಗಿ ಹಂಚಲ್ಪಡುತ್ತವೆ. ಇಲ್ಲಿ ಕೆಲವಮಟ್ಟಿಗಾದರೂ ತಬ್ಬಲಿಯಾಗುವವರೆಂದರೆ ಮೇಲುವರ್ಗದ ನೆಲ- ನೆಲೆ ಇಲ್ಲದ ಜನಗಳು.

ಕುವೆಂಪು ಅವರ ಸಾಹಿತ್ಯಕ ಚಿಂತನೆಯಲ್ಲಿ ಕಾಣುವ ದರ್ಶನ ಈ ಹಿನ್ನೆಲೆಯನ್ನು ಒಳಗೊಂಡದ್ದು. ಶೂದ್ರರಿಗೆ ಪಡೆಯುವ ಆರ್ಥಿಕ ಸಮಾನತೆಯನ್ನು ಸಾಂಸ್ಕೃತಿಕವಾಗಿ ಸಮರ್ಥಿಸಿಕೊಳ್ಳುವುದಕ್ಕಾಗಿ ಅವರಿಗೆ ಮಾನವಧರ್ಮ ಅಥವ ಸಂಸ್ಕೃತಿಯೊಂದನ್ನು ಕುವೆಂಪು ರೂಪಿಸುತ್ತಾರೆ. ಇದನ್ನು ಕುವೆಂಪು ಶೂದ್ರರಿಗೆ ಪುರೋಹಿತಷಾಹಿಯನ್ನು ಹೊಸರೀತಿಯಲ್ಲಿ ಕೊಡುತ್ತಿದ್ದಾರೆ ಎಂದು ತಿಳಿದುಕೊಂಡರೆ ಅದು ಅವರ ಮೂರ್ಖತನ. ಸಂಸ್ಕೃತಿಯನ್ನು ಶೋಷಣೆಯ ಧರ್ಮವನ್ನಾಗಿ ಮಾತ್ರ ಗ್ರಹಿಸುವವರು ಇಂಥ ತಪ್ಪು ಕೆಲಸವನ್ನು ಮಾಡುತ್ತಾರೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಚಿನ್ನಮ್ಮ-ಮುಕುಂದಯ್ಯ, ಐತ-ಪೀಂಚಲು, ಗುತ್ತಿ-ತಿಮ್ಮಿ ಅನುಭವಿಸುವ ಆದರ್ಶಭೋಗಗಳು ಜಾತಿಯ ನೆಲೆಯನ್ನು ಮೀರಿ ಹೆಣ್ಣು ಗಂಡಿನ ನಡುವೆಯ ಸ್ವಚ್ಛ ಮತ್ತು ವಿಶಾಲವಾದ ಮಾನವ ಪ್ರೇಮದ ಔದಾರ್ಯಗಳನ್ನು ತೆರೆದಿಡುವ ಸಂದರ್ಭಗಳನ್ನು ಸಮೀಕ್ಷಿಸಿದರೆ ಕುವೆಂಪು ದರ್ಶಿಸುವ ಸಮಾಜ ವ್ಯವಸ್ಥೆಯ ಅರಿವು ಮೂಡುತ್ತದೆ. ಜಾತಿಗಳು ಬೇರೆಯಾದರೂ ಅನುಭವದ ಸ್ಥರ ಇಬ್ಬರಿಗೂ ಒಂದೇ ಆಗುತ್ತವೆ.

ಜನಪದ ; ಜಾನಪದ ಸೃಷ್ಟಿ

ಜಾನಪದ ಜನಸಾಮಾನ್ಯನದ್ದು. ಅವನ ಕ್ರಿಯಾಶಾಲಿತ್ವದಿಂದಲೇ ಜಾನಪದ ಪುನರುಜ್ಜೀವನಗೊಳ್ಳುವುದು. ಆದ್ದರಿಂದಲೇ ಕುವೆಂಪು ಭಾರತದ ಜನಸಾಮಾನ್ಯರೆಲ್ಲ ಭಾರತದ ಎಲ್ಲ ಅವಕಾಶಗಳಿಗೆ ಹಕ್ಕುದಾರರಾಗುವುದನ್ನು ನಿರೀಕ್ಷಿಸುತ್ತಾರೆ. ಆ ಅವಕಾಶಗಳನ್ನು ಅವರೆಂದೂ ವಸ್ತುರೂಪದಲ್ಲಿ ಪ್ರತಿಪಾದಿಸುವುದಿಲ್ಲ; ವಿಚಾರದ ರೂಪದಲ್ಲಿ ಪ್ರತಿಪಾದಿಸುತ್ತಾರೆ. ಸಾಮಾನ್ಯರ ಸಂಘಟನೆಯಾದ ಜನಪದಗಳೆಲ್ಲವೂ ತಮ್ಮದೇ ಆದ ಧೋರಣೆಗಳಿಂದ ಒಟ್ಟಿಗೇ ಬಾಳುತ್ತವೆ. ಆ ಸಂಘಟನೆ ಮುರಿದದ್ದಾದರೆ ಆ ಜನಪದವೂ ಇಲ್ಲ, ಅದರ ಸೃಷ್ಟಿಯಾದ ಜಾನಪದವೂ ಇರುವುದಿಲ್ಲ.

ನಾವು ಜಾನಪದವನ್ನು ಮೊದಲಿಗೆ ವಿಚಾರ (idea)ವಾಗಿ ಗ್ರಹಿಸಬೇಕು. ನಂತರ ಸಾಮಗ್ರಿಯಾಗಿ (material) ಅದನ್ನು ವಿಶ್ಲೇಷಿಸಬಹುದು. ಯಾವುದೇ ಸಮಾಜ, ಗುಂಪು ಅಥವ ಜನಪದಗಳ ಸೃಷ್ಟಿಕ್ರಿಯೆಗೆ ಅದರ ವಿಚಾರ (idealogy)ವೇ ಕಾರಣ. ಆದ್ದರಿಂದ ಜಾನಪದ ಒಂದು ಸೃಷ್ಟಿ ಕ್ರಿಯೆ ಎಂದು ಗ್ರಹಿಸುವವನು ಮಾತ್ರ ಅದರ ಅನಂತತೆಯನ್ನು, ಅನನ್ಯತೆಯನ್ನು ಮತ್ತು ಅವಿನಾಶಿಗುಣವನ್ನು ಗ್ರಹಿಸುತ್ತಾನೆ. ಕುವೆಂಪು ಅವರ ಕಾವ್ಯ ಕೃತಿಗಳಲ್ಲಿ ಈ ಬಗೆಯ ಮನೋಧರ್ಮ ಸುವ್ಯಕ್ತವಾಗಿದೆ. ಆದ್ದರಿಂದ ಜಾನಪದ ಬೆಳವಣಿಗೆಗೆ ಪೂರಕವಾದ ಸಮಕಾಲೀನ ಜನಪದಗಳ ಸೃಷ್ಟಿಯ ಅನಿವಾರ್ಯತೆಯನ್ನು ವೈಚಾರಿಕವಾಗಿ ಪ್ರತಿಪಾದಿಸುವ ಕುವೆಂಪು ಅವರು ಸೋಪಜ್ಞ ಜಾನಪದ ವಿದ್ವಾಂಸರಾಗುತ್ತಾರೆ.

ಬೆರಳ್‌ಗೆ ಕೊರಳ್, ಜಲಗಾರ, ಶೂದ್ರತಪಸ್ವಿಯಲ್ಲಿ ವ್ಯಕ್ತಿಗಳನ್ನು ಆದರ್ಶವಾಗಿಟ್ಟುಕೊಂಡು ವ್ಯವಸ್ಥಿತ ಶೋಷಣಾಮೂಲವಾದ ಸಮಾಜವನ್ನು ಖಂಡಿಸುತ್ತಲೆ, ಹೊಸ, ಕ್ರಿಯಾಶೀಲ ಸಮಾಜವನ್ನು ಸೃಷ್ಟಿಸುವತ್ತ ಕುವೆಂಪು ಮುನ್ನಡೆಯುತ್ತಾರೆ. ಬೆರಳ್‌ಗೆ ಕೊರಳ್‌ನ ಏಕಲವ್ಯನಾಗಲೀ, ಜಲಗಾರನಾಗಲೀ, ಜಾತೀಯ ಸ್ಥರದಲ್ಲಿ ಚಿತ್ರಿತವಾಗದೆ, ಸಮಾನತೆಗಾಗಿ ತುಡಿಯುವ ಮಾನವ ಜೀವಿಗಳಾಗಿ ರೂಪುಗೊಳ್ಳುತ್ತಾರೆ. ಇದು ಸಾಮಾಜಿಕ ಪುನರ್ ಸಂಘಟನೆಯ ನಿರಂತರ ಹೋರಾಟದ ಸಂಕೇತವಾಗುತ್ತದೆ. ಈ ಅಂಶ ಮಾನವ, ನಿಸರ್ಗದ ಕ್ರೂರತೆಗಳೊಡನೆ ಸದಾ ಹೋರಾಡುತ್ತ ಸಂಸ್ಕೃತಿಯೊಂದನ್ನು ರೂಪಿಸಿಕೊಂಡುದರ ಅನಂತ ಮತ್ತು ವಾಸ್ತವ ಕ್ರಿಯೆಯ ಸೂಚನೆಯಾಗಿ ಕಂಡುಬರುತ್ತವೆ. ಮಾನವನ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಆತನಿಗೆ ಮೊದಲು ಎದುರಾಗುವ ಸಮಸ್ಯೆ ಎಂದರೆ ಪ್ರಕೃತಿಯನ್ನು ಪಳಗಿಸಿಕೊಳ್ಳುವುದು. ಇವತ್ತಿಗೂ ಸಹ ಇದೇ ಕೆಲಸವನ್ನು ನಮ್ಮ ವಿಜ್ಞಾನಿಗಳು ಮತ್ತು ನಾವು ಮಾಡುತ್ತಿದ್ದೇವೆ. ಹೀಗೆ ದೊರೆಯುವ ಅವಕಾಶಗಳು ಜಾತಿ-ವರ್ಗ, ದೇಶ-ಭಾಷೆಯ ಭೇದವಿಲ್ಲದೆ ಎಲ್ಲ ಮಾನವರ ಮಧ್ಯೆಯೂ ಹಂಚಲ್ಪಡುತ್ತವೆ. ಏಕಲವ್ಯ ತನ್ನ ಸಾಮರ್ಥ್ಯ ಮತ್ತು ಶ್ರದ್ಧೆಯಿಂದ ಇದನ್ನು ಸಾಧಿಸುತ್ತಾನೆ. ಆದರೆ ಅವನದಲ್ಲದ ವ್ಯವಸ್ಥೆ ಅವನಿಗೆ ಕ್ರೂರವಾಗುವುದರ ಮೂಲಕ ಆತ ಅನ್ಯಾಯವಾದ ತ್ಯಾಗಕ್ಕೆ ಸಿದ್ಧನಾಗಬೇಕಾಗುತ್ತದೆ. ಆದ್ದರಿಂದ ಇದು ಎರಡು ಸಾಮಾಜಿಕ ವ್ಯವಸ್ಥೆಗಳ ಮಧ್ಯೆ ನಡೆಯುವ ಅವುಗಳ ಅಸ್ತಿತ್ವದ ಹೋರಾಟವಾಗುತ್ತದೆ. ಈ ಎರಡೂ ವ್ಯವಸ್ಥೆಗಳು ಪ್ರಕೃತಿಯನ್ನು ಪಳಗಿಸಿಕೊಂಡು ಮುಂದೆ ನಡೆಯುವುದರಲ್ಲಿ ಸಮಾನವಾದರೂ ಪರಸ್ಪರರು ಎದುರಾದಾಗ ಶೋಷಿಸುವ ಹಂತಕ್ಕೆ ಬರುತ್ತಾರೆ. ಈ ಮಾನವ ಮೂಲವಾದ ಕ್ರೂರ ಶೋಷಣೆಯನ್ನು ಪ್ರತಿಭಟಿಸುವುದರ ಮೂಲಕ ಮಾನವ ಸಮಾಜಗಳ ಸಮಾನ ಹಕ್ಕು, ಅವಕಾಶಗಳನ್ನು ಕುವೆಂಪು ಪ್ರತಿಪಾದಿಸುತ್ತಾರೆ.

ಬೆರಳ್‌ಗೆ ಕೊರಳ್‌ನಲ್ಲಿ ಸ್ಪಷ್ಟವಾಗಿ ಗೋಚರಿಸದ ಈ ಎರಡು ವಿಮುಖ ಜನಪದ ವ್ಯವಸ್ಥೆಗಳ ಪರಸ್ಪರ ಹೋಲಿಕೆ ಮತ್ತು ವ್ಯತ್ಯಾಸಗಳನ್ನು 'ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ' ಕವನ ಸಂಕಲನದಲ್ಲಿಯ ಗೊಬ್ಬರ, ರೈತನ ದೃಷ್ಟಿ ಮತ್ತು ಧ್ರಾಂ ಧ್ರೀಂ ಧ್ರೂಂ ಕವನಗಳ ಅಂತರಂಗದಲ್ಲಿ ಗುರುತಿಸಬಹುದು. ಗೊಬ್ಬರ ಮತ್ತು ರೈತನ ದೃಷ್ಟಿಯ ಬಗ್ಗೆ ಕನ್ನಡ ಸಾಹಿತ್ಯದಲ್ಲಿ ಮೊದಲು ಬರೆದವರು ಕುವೆಂಪು ಅವರೇ ಎಂದು ಹೇಳಬೇಕು. ಈ ಎರಡು ಕವನಗಳ ವಸ್ತು ಕೇವಲ ಸಾಮಗ್ರಿಗಳಲ್ಲ. ಒಂದು ಜನಪದವನ್ನು ಹತ್ತಿರದಿಂದ ಸಮೀಕ್ಷಿಸುತ್ತಿರುವ ವಿಚಾರಕ್ಕೆ ಸಂಬಂಧಿಸಿದವು. ಗೊಬ್ಬರವನ್ನು ಕುರಿತು ಕಾವ್ಯ ಬರೆಯುವುದೆಂದರೆ ಕಾವ್ಯಸ್ತ್ರೀಯನ್ನೇ ಅಂದಗೆಡಿಸಿದಂತೆ ಎಂದು ತಿಳಿದಿದ್ದ ಸಮಯದಲ್ಲಿ ಕಾವ್ಯದ ಅರ್ಥಗಳನ್ನು ವಿಸ್ತರಿಸುವುದರ ಜೊತೆಗೆ, ಕಾವ್ಯಕ್ಕೆ ಬದ್ಧವಾದ ವಸ್ತುಗಳ ಮತ್ತು ಅವುಗಳ ಅವಲಂಬಿ ಜನಪದದ ಸಹಜತೆ ಮತ್ತು ಇರುವಿನ ಅನಿವಾರ್ಯತೆಯನ್ನು ಪ್ರತಿಪಾದಿಸುವುದು ಕಂಡುಬರುತ್ತದೆ. ಈ ವಸ್ತು ಮತ್ತು ವಿಚಾರಗಳಿಗೆ ವಿರುದ್ಧವಾದ ಸಮಾಜ ವ್ಯವಸ್ಥೆಯ ವಸ್ತುವನ್ನೊಳಗೊಂಡ 'ಧ್ರಾಂ ಧ್ರೀಂ ಧ್ರೂಂ'

ಕವನದ ಮೂಲಕ 'ಗೊಬ್ಬರ' ಮತ್ತು 'ರೈತನ ದೃಷ್ಟಿ'ಯ ಕವನಗಳಲ್ಲಿಯ ವಸ್ತು ಮತ್ತು ಅನಿವಾರ್ಯತೆಯನ್ನು ಒಪ್ಪಿಕೊಳ್ಳುತ್ತಲೆ, ಅನ್ಯ ಜನಪದಗಳ ಅಸ್ತಿತ್ವವನ್ನೇ ಅಲ್ಲಗಳೆಯುವ ಅಥವ ತುಚ್ಛೀಕರಿಸುವ ಅಸಹಜ ಮತ್ತು ಅಪ್ರಾಕೃತಿಕ ಸಮಾಜ ವ್ಯವಸ್ಥೆಯೊಂದನ್ನು ಎದುರುಗೊಳ್ಳುತ್ತೇವೆ.

ಈ ಅಸಹಜತೆ ಇವತ್ತು ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ದಲಿತರು, ರೈತ ಚಳುವಳಿಯಾದರೆ ಹಳ್ಳಿಗಳಲ್ಲಿ ವಾಸಮಾಡುವ ದಲಿತರಿಗೆ ತೊಂದರೆಯಾಗುತ್ತದೆಂದು ಹೆದರುತ್ತಾರೆ. ತಾವು ಮಾತ್ರ ರೈತ ಮತ್ತು ಮೇಲುವರ್ಗದ ಜನರ ವಿರುದ್ಧ ಹೋರಾಡುವುದನ್ನು ಸಮರ್ಥಿಸಿಕೊಳ್ಳುತ್ತಾರೆ. ದೊಡ್ಡ ದುರಂತವೆಂದರೆ, ಮೇಲುವರ್ಗದ ಅಧಿಕಾರಷಾಹಿಯನ್ನು ವಿರೋಧಿಸಬೇಕಾದ ಇವರು ಅವರ ಸಹಾಯದಿಂದಲೇ ರೈತ ಸಂಘಟನೆಯನ್ನು ಮುರಿಯುವ ಸನ್ನಾಹಕ್ಕೆ ಬೆಂಬಲವಾಗುತ್ತಾರೆ.

ವಾಸ್ತವವಾಗಿ ಪ್ರತಿ ಜನಪದ ತನ್ನ ಸಮಾನ ಸಮಸ್ಯೆ ಅಥವ ಸಮಾನ ಮನೋಧರ್ಮದ ಮೇಲೆ ಒಂದುಗೂಡುವುದು ಮಾನವ ಸಹಜ ಹಕ್ಕು. ಇದನ್ನು ವಿರೋಧಿಸುವವನು ಮಾನವ ವಿರೋಧಿ. ಹಾಗೆ ವಿರೋಧಿಸುವುದು ಸಹಜವೆಂದಾದರೆ ದಲಿತರು, ಒಂದಾಗಿರುವ ಮೇಲುವರ್ಗವನ್ನು ಸಹ ಪ್ರಶ್ನಿಸುವಂತಿಲ್ಲ. ಈ ಅಭಿಪ್ರಾಯಗಳೆಲ್ಲ ಪ್ರಾಕೃತಿಕ ಸಂಘಟನಾತ್ಮಕ ಮೂಲ ಚಿಂತನೆಯ ಕೊರತೆಯಿಂದ ಬಂದಂಥವು.

ಕುವೆಂಪು ಅವರ ಕಾವ್ಯ ಚಿಂತನೆಯಲ್ಲಿ ಈ ಬಗೆಯ ಅಸಹಜ ಸಂಘಟನಾತ್ಮಕ ಚಿಂತನೆಗಳಿಲ್ಲ. ಪ್ರಾಕೃತಿಕವಾಗಿ ಮನುಷ್ಯ ಸಾಧಿಸಬಹುದಾದ, ಸಮಾನತೆಗೆ ಸಹಕಾರಿಯಾಗುವ ಸಂಘಟನೆಗಳಿಗೆ ನೆರವಾಗುವ ವಿಚಾರ-ಪ್ರತಿಪಾದನೆಗೆ ಅವಕಾಶವೀಯುತ್ತಾರೆ. ಈ ವಿಚಾರವೇ ಅವರ ಗೊಬ್ಬರ, ಧ್ರಾಂ ಧ್ರೀಂ ಧ್ರೂಂ ಕವನಗಳ ಪರಿಣಾಮಗಳಲ್ಲಿ ಕಂಡುಬರುವುದು.

ಈ ಹಿನ್ನೆಲೆಯಿಂದ ನೋಡಿದಾಗ ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲಿ ನಿಂತು, ಭಾರತೀಯ ಮೂಲವಾದ ಹೊಸ ಜಾನಾಂಗಿಕ ಜನಪದಗಳ ಸಂಘಟನೆ ಮತ್ತು ಅವುಗಳ ಕ್ರಿಯಾಶೀಲತೆಗೆ ವಸ್ತುವಾಗುವ ಕುವೆಂಪು ಅವರ ಕಾವ್ಯಚಿಂತನೆ, ತಾತ್ವಿಕ- ಕ್ರಿಯಾಶೀಲ ಜಾನಪದ ವಿಚಾರವಂತನೊಬ್ಬನನ್ನು ದರ್ಶಿಸುತ್ತದೆ.

ತೀ.ನಂ.ಶ್ರೀ ಕಂಠಯ್ಯ (ತೀ.ನಂ.ಶ್ರೀ)

ಡಾ|| ತೀ.ನಂ.ಶಂಕರನಾರಾಯಣ

ತೀ.ನಂ.ಶ್ರೀ ಅವರು ೧೯೦೬ ನವೆಂಬರ್ ೨೬ರಂದು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ತೀರ್ಥಪುರದಲ್ಲಿ ಜನಿಸಿದರು. ತಂದೆ ಶ್ಯಾನುಭೋಗ ನಂಜುಂಡಯ್ಯ. ತಾಯಿ ಭಾಗೀರಥಮ್ಮ. ಇವರ ಪ್ರಾಥಮಿಕ ವಿದ್ಯಾಭ್ಯಾಸ ತೀರ್ಥಪುರದಲ್ಲಿ, ಮಾಧ್ಯಮಿಕ ವಿದ್ಯಾಭ್ಯಾಸ ಚಿಕ್ಕನಾಯಕನಹಳ್ಳಿಯಲ್ಲಿ, ಪ್ರೌಢಶಾಲಾ ವಿದ್ಯಾಭ್ಯಾಸ ತುಮಕೂರಿನಲ್ಲಿ ನಡೆಯಿತು. ೧೯೨೨ರಲ್ಲಿ ಎಂಟ್ರೆನ್ಸ್ ಪರೀಕ್ಷೆ ಮುಗಿಸಿ, ಬಿ.ಎ. ತರಗತಿಯನ್ನು ೧೯೨೬ರಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಮುಗಿಸಿದರು. ಆರು ಸ್ವರ್ಣಪದಕಗಳನ್ನು, ಒಂದು ಬಹುಮಾನವನ್ನು ಕೂಡ ಗಳಿಸಿದರು. ೧೯೨೯ರಲ್ಲಿ ಮೈಸೂರು ಸಿವಿಲ್‌ಸರ್ವಿಸ್ ಪರೀಕ್ಷೆಯಲ್ಲಿ ಮೂರನೇ ಸ್ಥಾನ ಪಡೆದು, ರೆವಿನ್ಯೂ ಪ್ರೊಬೇಷನರ್ ಆಗಿ ನೇಮಕಗೊಂಡರು. ಆಡಳಿತದಲ್ಲಿ ಆಸಕ್ತಿ ಇಲ್ಲದಿದ್ದುದರಿಂದ ಅದನ್ನು ಬಿಟ್ಟು, ೧೯೩೦ರಲ್ಲಿ ಇಂಗ್ಲಿಷ್ ಎಂ.ಎ. ಪದವಿಯನ್ನು ಪ್ರಥಮದರ್ಜೆ, ಪ್ರಥಮ ಸ್ಥಾನದಲ್ಲಿ ಪಡೆದರು. ೧೯೩೧ರಲ್ಲಿ ಕನ್ನಡ ಎಂ.ಎ. ತರಗತಿಯಲ್ಲಿ ಪ್ರಥಮದರ್ಜೆ, ಪ್ರಥಮಸ್ಥಾನ ಪಡೆದರು. ಮೂರು ಸ್ವರ್ಣ ಪದಕಗಳನ್ನು ಪಡೆದರು. ತಮ್ಮ ಶೈಕ್ಷಣಿಕ ಜೀವನದ ಉದ್ದಕ್ಕೂ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು.

೧೯೩೦ರಿಂದ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಅವರು ೧೯೪೩ರಲ್ಲಿ ಉಪ ಪ್ರಾಧ್ಯಾಪಕರಾದರು. ೧೯೫೨ರವರೆಗೂ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಕಾರ್ಯನಿರ್ವಹಿಸಿದರು. ೧೯೪೮ ಮತ್ತು ೧೯೫೦ರಲ್ಲಿ ಕೆಲವು ಕಾಲ ದಾವಣಗೆರೆಯ ಕಾಲೇಜಿನಲ್ಲಿ ಹಾಗೂ ೧೯೫೧ರಲ್ಲಿ ಕೋಲಾರದ ಕಾಲೇಜಿನಲ್ಲಿ ಸೂಪರಿಂಟೆಂಡೆಂಟರಾಗಿದ್ದರು. ೧೯೪೮ರಿಂದ ೧೯೫೦ರವರೆಗೆ ಮೈಸೂರು ಸಂವಿಧಾನ ಪರಿಷತ್ತಿನಲ್ಲಿ ಭಾಷಾಂತರಕಾರರಾಗಿದ್ದರು. ೧೯೫೦ರಲ್ಲಿ ಭಾರತ ಸಂವಿಧಾನ ಪರಿಷತ್ತಿನ ನಿಯಮಿಸಿದ್ದ ಸಮಿತಿಯ ಸದಸ್ಯರಾಗಿದ್ದರು. ೧೯೫೨ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಆರಂಭವಾದಾಗ ಅಲ್ಲಿ ಮೊಟ್ಟಮೊದಲ ಕನ್ನಡ ಪ್ರಾಧ್ಯಾಪಕರಾಗಿಯೂ, ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡು, ೧೯೫೬ರವರೆಗೂ ಅಲ್ಲಿಯ ವಿಭಾಗವನ್ನು ಬೆಳೆಸಿದರು. ಈ ನಡುವೆ ಪೂನಾದ ಡೆಕ್ಕನ್ ಕಾಲೇಜಿನಲ್ಲಿ ನಡೆಯುತ್ತಿದ್ದ ಭಾಷಾಶಾಸ್ತ್ರದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ೧೯೫೫ ರಿಂದ ೫೬ರವರೆಗೆ ರಾಕ್‌ಫೆಲ್ಲರ್

ಫೌಂಡೇಷನ್ ನೆರವಿನಿಂದ ಅಮೆರಿಕಾದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಭಾಷಾ ವಿಜ್ಞಾನದ ಉನ್ನತ ಅಧ್ಯಯನ ಮಾಡಿ. ಅಮೆರಿಕಾ ಯುರೋಪ್ ಪ್ರವಾಸ ಮಾಡಿದರು. ೧೯೫೭ರಲ್ಲಿ ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡರು. ನಂತರ ಮಾನಸಗಂಗೋತ್ರಿಯ ಕನ್ನಡ ವಿಭಾಗಕ್ಕೆ ವರ್ಗಾವಣೆಗೊಂಡರು, ಅಲ್ಲಿಯ ವಿಭಾಗದ ಮುಖ್ಯಸ್ಥರಾಗಿ, ವಿಶ್ವವಿದ್ಯಾನಿಲಯ ಕಲಾ ನಿಕಾಯದ ಡೀನ್ ಆಗಿ ಕಾರ್ಯನಿರ್ವಹಿಸಿ ೧೯೬೦ರಲ್ಲಿ ನಿವೃತ್ತರಾದರು. ಅನಾರೋಗ್ಯದ ಕಾರಣದಿಂದಾಗಿ ೧೯೬೫ರಲ್ಲಿ ದೊರೆತಿದ್ದ ದೆಹಲಿ ವಿಶ್ವವಿದ್ಯಾನಿಲಯದ ಭಾಷಾವಿಜ್ಞಾನದ ಪ್ರಾಧ್ಯಾಪಕ ಹುದ್ದೆಯನ್ನು ಒಪ್ಪಿಕೊಳ್ಳಲು ಸಾಧ್ಯವಾಗಲಿಲ್ಲ. ೧೯೬೬ರ ಸೆಪ್ಟೆಂಬರ್ ೭ ರಂದು ಕಲ್ಕತ್ತಾದಲ್ಲಿ ನಿಧನರಾದರು.

ತೀ.ನಂ.ಶ್ರೀ ಅವರು ಕನ್ನಡ ಸಾಹಿತ್ಯದ ನವೋದಯ ಕಾಲದ ಆಚಾರ್ಯ ಪುರುಷರಲ್ಲೊಬ್ಬರು. ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದು ಹಲವಾರು ಜನ ವಿದ್ಯಾರ್ಥಿಗಳ ಮೇಲೆ ತಮ್ಮ ಪ್ರಭಾವ ಬೀರಿದ್ದು ಮಾತ್ರವಲ್ಲದೆ, ಅತ್ಯಂತ ಶ್ರೇಷ್ಠಮಟ್ಟದ ವಿದ್ವಾಂಸರಾಗಿ ತಮ್ಮ ಸಂಶೋಧನಾ ಬರಹಗಳ ಮೂಲಕ ಕನ್ನಡ ವಿದ್ವತ್ ಪ್ರಪಂಚಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಕನ್ನಡ, ಇಂಗ್ಲಿಷ್, ಸಂಸ್ಕೃತ, ಭಾಷಾವಿಜ್ಞಾನ ಈ ಕ್ಷೇತ್ರಗಳಲ್ಲಿ ಆಳ ಹಾಗೂ ವಿಸ್ತಾರವನ್ನೊಳಗೊಂಡ ಅದ್ವಿತೀಯವಾದ ವಿದ್ವತ್ತನ್ನು ಸಾಧಿಸಿದ್ದು ಮಾತ್ರವಲ್ಲದೆ ಕನ್ನಡದಲ್ಲಿ ಇಂದು ಪ್ರತ್ಯೇಕ ಅಧ್ಯಯನ ವಿಷಯಗಳಾಗುವಷ್ಟರ ಮಟ್ಟಿಗೆ ಬೆಳವಣಿಗೆ ಹೊಂದಿರುವ ಸಾಹಿತ್ಯ ವಿಮರ್ಶೆ, ಕಾವ್ಯ ಮೀಮಾಂಸೆ, ಛಂದಸ್ಸು, ಗ್ರಂಥ ಸಂಪಾದನೆ ಮೊದಲಾದ ಕ್ಷೇತ್ರಗಳಿಗೆ ಭದ್ರವಾದ ಬುನಾದಿಯನ್ನು ಹಾಕಿ, ಆ ಕ್ಷೇತ್ರಗಳಲ್ಲಿ ವಿದ್ವತ್ ಪ್ರಪಂಚವನ್ನು ಕಟ್ಟಿದರು. ಶ್ರೇಷ್ಠ ವಿದ್ವಾಂಸರಾಗಿದ್ದುದು ಮಾತ್ರವಲ್ಲದೆ ಸೂಕ್ಷ್ಮ ಸಂವೇದನೆಯುಳ್ಳ ಕವಿಯೂ ಆಗಿದ್ದುದು ಅವರ ವ್ಯಕ್ತಿತ್ವಕ್ಕೆ ಮತ್ತು ಅವರ ಬರಹಗಳಿಗೆ ವಿಶೇಷ ಮೆರಗನ್ನು ಕೊಡುವ ಅಂಶವಾಗಿದೆ. ಅವರು ಮೂಲತಃ ಕವಿಯಾದುದರಿಂದ ಛಂದಸ್ಸು, ಕಾವ್ಯ ಮೀಮಾಂಸೆ, ಸಾಹಿತ್ಯ ವಿಮರ್ಶೆ ಈ ಕ್ಷೇತ್ರಗಳಲ್ಲಿ ಕಾವ್ಯದ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ಸುಲಭವಾಗಿ ಗ್ರಹಿಸಲು ಅವರಿಗೆ ಸಾಧ್ಯವಾಯಿತು.

ಹೀಗೆ ಕನ್ನಡದ ಶಿಷ್ಟ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಸಾರ್ಥಕ ಸಾಧನೆ ಮಾಡಿರುವ ತೀ.ನಂ.ಶ್ರೀ. ಅವರು ಜಾನಪದ ಕ್ಷೇತ್ರಕ್ಕೂ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅದನು ಪರಿಶೀಲಿಸುವಾಗ ಮೊದಲಿಗೆ ಹೇಳಬೇಕಾದುದೆಂದರೆ: ಜನಪದ ಸಾಹಿತ್ಯವೆಂದರೆ ವಿದ್ವಾಂಸರು ತಿರಸ್ಕಾರದಿಂದ ಕಾಣುತ್ತಿದ್ದ ಅಂದಿನ ವರ್ಷಗಳಲ್ಲಿ ತೀ.ನಂ.ಶ್ರೀ ಅವರು ಈ ವಿಷಯದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ್ದು ಮತ್ತು ಈ ಕ್ಷೇತ್ರದಲ್ಲಿ ಕೆಲಸ ಮಾಡಿದವರಿಗೆ ಹಾಗೂ ಮಾಡುತ್ತಿದ್ದವರಿಗೆ ಹೆಚ್ಚಿನ ಪ್ರೇರೇಪಣೆ ಮತ್ತು ಪ್ರೋತ್ಸಾಹ ನೀಡಿದರು. ಅರ್ಚಕ. ಬಿ. ರಂಗಸ್ವಾಮಿ, ಗಾದೆಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಕ.ರಾ.ಕೃ ಅವರ ಬಗೆಗೆ ಪ್ರಶಂಸೆಯ ಹಾಗೂ ಪ್ರೋತ್ಸಾಹದಾಯಕ ಮಾತುಗಳನ್ನು ಬರೆದಿರುವುದನ್ನು ಇಲ್ಲಿ ಸ್ಮರಿಸಬಹುದು.

೧೯೩೩ರಲ್ಲಿ ಅರ್ಚಕ. ಬಿ. ರಂಗಸ್ವಾಮಿ ಅವರು ಪ್ರಕಟಿಸಿರುವ ಹುಟ್ಟಿದ ಹಳ್ಳಿ: ಹಳ್ಳಿಯ ಹಾಡು ಸಂಕಲನವು ಜಾನಪದದ ಮೊದಲ ಸಂಕಲನವೆನಿಸಿಕೊಂಡಿದೆ. ಈ ಮಹತ್ವದ ಸಂಕಲನದ ಬಗೆಗೆ ತೀ.ನಂ. ಶ್ರೀ ಅವರು ವಿಮರ್ಶಾತ್ಮಕ ಅಭಿಪ್ರಾಯಗಳನ್ನು ಬರೆದಿದ್ದಾರೆ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಸ್ವಭಾವತಃ ರೊಮ್ಯಾಂಟಿಕ್ ಕವಿಯಾಗಿದ್ದ ತೀ.ನಂ.ಶ್ರೀ ಅವರು ಜನಪದ ಸಾಹಿತ್ಯಕ್ಕೆ ಮಾರು ಹೋದದ್ದು ತೀರ ಸಹಜವೇ ಆಗಿದೆ. ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಜನಪದ ಸಾಹಿತ್ಯ ಸತ್ವಹೀನವಾಗಿದ್ದ ಶಿಷ್ಟ ಸಾಹಿತ್ಯಕ್ಕೆ ಹೆಚ್ಚಿನ ಜೀವಂತಿಕೆಯನ್ನು ತಂದುಕೊಟ್ಟಿತೆಂಬುದು ನಿರ್ವಿವಾದವಾದ ಸಂಗತಿಯಾಗಿದೆ. ತೀ.ನಂ.ಶ್ರೀ ಜನಪದ ಸಾಹಿತ್ಯದ ಬಗ್ಗೆ ಕೆಲಸ ಮಾಡಿದ ಕಾಲದಲ್ಲಿ ರೊಮ್ಯಾಂಟಿಕ್ ಕಾವ್ಯ ರಚನೆಯಲ್ಲಿಯೇ, ರೊಮ್ಯಾಂಟಿಕ್ ವಿಮರ್ಶಾ ರಚನೆಯೂ ನಡೆಯುತ್ತಿತ್ತು. ತೀ.ನಂ.ಶ್ರೀ ಕವಿಯಾಗಿ ಜನಪದ ಸಾಹಿತ್ಯದಿಂದ ಪ್ರಭಾವಿತರಾದದ್ದು ತೀರಾ ಕಡಿಮೆ. ಆದರೆ ಅವರು ರೊಮ್ಯಾಂಟಿಕ್ ಸಾಹಿತ್ಯ ವಿಮರ್ಶಕರಾಗಿದ್ದುದರಿಂದ ಶಿಷ್ಟ ಸಾಹಿತ್ಯ ಕೃತಿಗಳ ವಿಮರ್ಶೆಯಲ್ಲಿ ಬಳಸಿದ ವಿಮರ್ಶಾ ಮಾನದಂಡದಿಂದ ಜನಪದ ಕಾವ್ಯವನ್ನು ಅಳೆದರು. ಜನಪದ ಸಾಹಿತ್ಯದಲ್ಲಿ ತೀ.ನಂ.ಶ್ರೀ ಯವರ ಕೊಡುಗೆ ವಿಶೇಷವಾಗಿರುವುದು ಕಾವ್ಯದಲ್ಲಿ; ಕಥೆಗೆ ಸಂಬಂಧಿಸಿದಂತೆ ಸ್ವಲ್ಪಮಟ್ಟಿನ ಕಾಣಿಕೆ ಸಲ್ಲಿಸಿದ್ದಾರೆ.

ತೀ.ನಂ.ಶ್ರೀ ಯವರು ಕ್ಷೇತ್ರಕಾರ್ಯದ ಮೂಲಕ ಜನಪದ ಸಾಹಿತ್ಯವನ್ನು ಸಂಗ್ರಹಿಸಲಿಲ್ಲ. ಹೀಗಾಗಿ ಅವರು ಜನಪದ ಸಂಗ್ರಾಹಕರ ಪಟ್ಟಿಗೆ ಸೇರುವುದಿಲ್ಲ. ಆದರೆ ಕ್ಷೇತ್ರಕಾರ್ಯದಿಂದ ಸಂಗ್ರಹಿತವಾದ ಗರತಿಯ ಹಾಡು, ಹಳ್ಳಿಯ ಹಾಡುಗಳು, ನಾಡಪದಗಳು ಮತ್ತು ಇತರ ಸಂಕಲನಗಳಿಂದ ಉತ್ತಮವಾದ ತ್ರಿಪದಿಗಳನ್ನಾರಿಸಿ 'ಹೆಣ್ಣು ಮಕ್ಕಳ ಪದಗಳು' ಎಂಬ ಜನಪದ ತ್ರಿಪದಿಗಳ ಸಂಕಲನವೊಂದನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಜನಸಾಮಾನ್ಯರ ಉಪಯೋಗಕ್ಕಾಗಿ ಈ ಸಂಕಲನವನ್ನು ವಯಸ್ಕರ ಶಿಕ್ಷಣ ಸಮಿತಿ ಪ್ರಕಟಿಸಿದೆ. ಈ ಸಂಕಲನಕ್ಕೆ ತೀ.ನಂ.ಶ್ರೀ ಅವರು ಉತ್ತಮವಾದ ಪೀಠಿಕೆ ಬರೆದಿದ್ದಾರೆ. ಪೀಠಿಕೆಯಲ್ಲಿ ಜನಪದ ಗೀತೆಗಳಲ್ಲಿ ಹೆಣ್ಣುಮಕ್ಕಳು ಹಾಡುವ ಪದಗಳು ದೈವಸ್ತುತಿ, ಸಾಂಸಾರಿಕ ಸುಖ ಸಂತೋಷಗಳಂಥ ವಿಷಯಗಳಿಗೆ ಮಾತ್ರ ಸೀಮಿತವಾಗಿರುವುದನ್ನು ಗುರುತಿಸಿದ್ದಾರೆ. ಹಾಗೆಯೇ ಈ ತ್ರಿಪದಿಗಳು ರಾಗಿ ಬೀಸುವಾಗ, ತೊಟ್ಟಿಲು ತೂಗುವಾಗ ಹಾಗೂ ಕೆಲಸದ ದಣಿವಾರಿಸಿಕೊಳ್ಳುವಾಗ ರಚಿತವಾದವೆಂಬುದನ್ನು ಗುರುತಿಸಿದ್ದಾರೆ. ಈ ಸಂಕಲನದ ತ್ರಿಪದಿಗಳನ್ನು ಕೇವಲ ಓದುವುದು ಮಾತ್ರವಲ್ಲದೆ ಹಾಡಲೂ ಬೇಕಾಗಿರುವುದರಿಂದ ಹಾಡುವವರಿಗೆ ಅನುಕೂಲವಾಗಲೆಂದು ತ್ರಿಪದಿಯ ಮೂರು ಸಾಲುಗಳನ್ನು ನಾಲ್ಕು ಸಾಲುಗಳಾಗಿ ಮಾಡಿಕೊಂಡು ಹಾಡುವ ವಿಧಾನವನ್ನು ಸೂಚಿಸಿದ್ದಾರೆ. ಈ ಸಂಕಲನದ ತ್ರಿಪದಿಗಳ ಆಯ್ಕೆಯಲ್ಲಿಯೂ ತೀ.ನಂ.ಶ್ರೀ ಅವರ ಸುಸಂಸ್ಕೃತವಾದ ಅಭಿರುಚಿ ಕಂಡುಬರುತ್ತದೆ.

ತೀ.ನಂ.ಶ್ರೀ. ಅವರಿಗೆ ಜನಪದ ಸಾಹಿತ್ಯದ ಬಗ್ಗೆ ಅನುಕಂಪ ಮಾತ್ರವಲ್ಲದೆ ಗೌರವವೂ, ನಮ್ರ ಬುದ್ಧಿಯೂ ಇದ್ದಿತೆಂಬುದಕ್ಕೆ 'ಕೆರೆಗೆ ಹಾರ' ಎಂಬ ಉತ್ತರ ಕರ್ನಾಟಕದ ಕೋಲಾಟ

ಪದದ ಬಗ್ಗೆ ಅವರು ಬರೆದ ವಿಮರ್ಶೆ ಉತ್ತಮ ಸಾಕ್ಷಿಯಾಗಿದೆ. ಈ ಕಥನಗೀತೆ ತೀ.ನಂ.ಶ್ರೀ ಅವರಿಗೆ ಅತ್ಯಂತ ಪ್ರಿಯವಾಗಿದ್ದ ಹಾಡಾಗಿತ್ತು. ಈ ಹಾಡಿನ ಬಗ್ಗೆ ಅವರಿಗೆ ಅದೆಷ್ಟು ವ್ಯಾಮೋಹ ಇತ್ತೆಂದರೆ ಪ್ರಚಾರಕರ ಮಾದರಿಯಲ್ಲಿ ಇದು ಸಮಾಜದ ಎಲ್ಲಾ ವಯಸ್ಸಿನವರು ಓದಬೇಕಾದುದೆಂದು ಭಾವಿಸಿ ೧೯೪೪ರಲ್ಲಿಯೇ ಈ ಕಥನ ಕವನದ ಬಗ್ಗೆ ಒಂದು ವಿಮರ್ಶಾ ಲೇಖನವನ್ನು ಬರೆದಿದ್ದಾರೆ. ಈ ಕಥನ ಕವನದ ಎಲ್ಲಾ ಘಟಕಗಳನ್ನೂ ಪದ್ಯದ ಸಾಲುಗಳ ಸಮೇತ ಅತ್ಯಂತ ಸಮರ್ಥವಾದ ರೀತಿಯಲ್ಲಿ ರಸಧ್ವನಿ ತತ್ವಗಳ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಭಾಗೀರಥಿಯ ಬಾಳಿನಲ್ಲಿ ಗೆಳತಿಗೆ ದೊರಕಿರುವ ಅಪೂರ್ವ ಸ್ಥಾನವನ್ನು ಗುರುತಿಸಿದ್ದಾರೆ. ಈ ಕಥನ ಕವನದಲ್ಲಿ ಬರುವ ಕೆಲವು ಸಾಲುಗಳ ಪುನರಾವರ್ತನೆಯ ಸ್ವಾರಸ್ಯವನ್ನು ಒತ್ತಿ ಹೇಳಿದ್ದಾರೆ. ಅತ್ಯಂತ ಸೂಕ್ಷ್ಮವಾದ ಕಾವ್ಯಾಂಶಗಳನ್ನು ಗುರುತಿಸಿದ್ದಾರೆ. ಒಟ್ಟಾರೆ, ತೀ.ನಂ.ಶ್ರೀ ಅವರ ಈ ಲೇಖನಕ್ಕೆ ಐತಿಹಾಸಿಕ ಮಹತ್ವವಿದೆ. ಗಿರಡ್ಡಿ ಗೋವಿಂದರಾಜ ಈ ಲೇಖನಕ್ಕೆ ಪ್ರತಿಕ್ರಿಯಿಸಿ ತೀ.ನಂ.ಶ್ರೀ ಅವರ ಕೆಲವು ಅಭಿಪ್ರಾಯಗಳನ್ನು ಒಪ್ಪುತ್ತಲೇ ಕೆಲವನ್ನು ನಿರಾಕರಿಸುತ್ತಾರೆ. ಆದರೂ ಈ ಮೊದಲು ಹೇಳಿರುವ ಹಾಗೆ ತೀ.ನಂ.ಶ್ರೀ ಅವರ ಲೇಖನಕ್ಕೆ ಅದರದೇ ಆದ ಮಹತ್ವವಿದೆ.

ತೀ.ನಂ.ಶ್ರೀ ಜನಪದ ಕಾವ್ಯದ ಕ್ಷೇತ್ರದಲ್ಲಿ ಮಾತ್ರವಲ್ಲದೆ ಜನಪದ ಕಥೆಗಳ ಕ್ಷೇತ್ರದಲ್ಲಿಯೂ ಕೆಲಸ ಮಾಡಿದ್ದಾರೆ. ಈ ಕಾರ್ಯವೂ ಕೂಡ ಸಂಗ್ರಹಣೆಯಲ್ಲಲ್ಲ, ವಿಮರ್ಶೆಯಲ್ಲಿ ಮಾತ್ರ. ಸಮಾಲೋಕನದಲ್ಲಿ ಸೇರಿರುವ 'ಮಕ್ಕಳಿಗೆ ಹೇಳುವ ಕಥೆಗಳು' ಜಾನಪದ ಕ್ಷೇತ್ರಕ್ಕೆ ತೀ.ನಂ.ಶ್ರೀ ಅವರ ಪ್ರಮುಖ ಕೊಡುಗೆಯಾಗಿದೆ. ವಯಸ್ಸು ಗತಿಸಿದಂತೆಲ್ಲಾ ಮಾತಾಡುವ ಚಾಪಲ್ಯವನ್ನು ಹೆಚ್ಚಿಸಿಕೊಳ್ಳುವ ಅಜ್ಜಿಯು ಮೊಮ್ಮಕ್ಕಳ ಕುತೂಹಲವನ್ನು ತಣಿಸುವುದಕ್ಕೆ ಹೇಳುವ ಕಥೆಗಳ ಸ್ವಾರಸ್ಯವೇನೆಂಬುದನ್ನು ಈ ಲೇಖನದಲ್ಲಿ ಸರಳವಾದ ಶೈಲಿಯಲ್ಲಿ ವಿವರಿಸಿದ್ದಾರೆ. ಈ ಕಥೆಗಳನ್ನು ಮಕ್ಕಳ ಶಿಕ್ಷಣದ ಅಮೂಲ್ಯ ಸಾಧನ ಎಂದು ಪರಿಗಣಿಸಿರುವ ತೀ.ನಂ.ಶ್ರೀ ಅವರು ಅಂದಿನ ಕಾಲಕ್ಕೆ ನಶಿಸಿಹೋಗುತ್ತಿದ್ದ ಈ ಕಥೆಗಳನ್ನು ಸಂಗ್ರಹಿಸಿ, ಉಳಿಸಿಕೊಳ್ಳುವ ಹಾಗೂ ಈ ಕಥೆಗಳನ್ನು ಹೇಳುವ ಕಲೆಯನ್ನು ಬೆಳೆಸಿಕೊಳ್ಳುವ ಅಗತ್ಯವನ್ನು ಒತ್ತಿಹೇಳಿದ್ದಾರೆ. ಈ ಕಥೆಗಳು ಮಕ್ಕಳಲ್ಲಿ ಕುತೂಹಲವನ್ನು ಕೆರಳಿಸುತ್ತವೆ. ಮಕ್ಕಳ ಜ್ಞಾಪಕ ಶಕ್ತಿಯನ್ನು ವಿಕಾಸಗೊಳಿಸುತ್ತವೆ, ಮಕ್ಕಳ ಕಲ್ಪನಾ ಶಕ್ತಿಯನ್ನು ಕುದುರಿಸುತ್ತವೆ. ಸಂಭಾಷಣಾ ಚಾತುರ್ಯವನ್ನು ಬೆಳೆಸುತ್ತವೆ. ಈ ಎಲ್ಲಾ ಪ್ರಯೋಜನಗಳೂ ಈ ಕಥೆಗಳಿಂದ ಮಕ್ಕಳಿಗೆ ದೊರಕುತ್ತವೆ ಎಂಬ ಅಂಶವನ್ನೂ ತೀ.ನಂ.ಶ್ರೀ ಅವರು ಗುರುತಿಸಿದ್ದಾರೆ. ಈ ಲೇಖನದಲ್ಲಿ ವಾಸ್ತವವಾಗಿ ಜನಪದ ಕಥೆಗಳ ಉದ್ದೇಶ, ಸ್ವರೂಪ ಹಾಗೂ ಪ್ರಯೋಜನಗಳನ್ನು ಗುರುತಿಸಿರುವುದು ಸ್ಪಷ್ಟವಾಗಿ ಕಾಣಬಹುದು. ಇಷ್ಟೆಲ್ಲಾ ಉಪಯುಕ್ತ ವಿವರಗಳನ್ನೂ ಸೂಚನೆಗಳನ್ನು ಒಳಗೊಂಡಿರುವ ಈ ಪುಟ್ಟ ಲೇಖನಕ್ಕೆ ಕನ್ನಡ ಜನಪದ ಕಥೆಗಳ ಕ್ಷೇತ್ರದಲ್ಲಿ ಐತಿಹಾಸಿಕ ಕಾರಣಗಳಿಗಾಗಿ ಮುಖ್ಯವಾದ ಸ್ಥಾನವನ್ನು ಕೊಡಬೇಕಾಗುತ್ತದೆ. ಏಕೆಂದರೆ ಈ ಶತಮಾನದ ಮೊದಲನೆಯ ಆರು ದಶಕಗಳಲ್ಲಿ ಜನಪದ ಕಥೆಗಳ ಕ್ಷೇತ್ರದಲ್ಲಿ ನಡೆದಿರುವ

ಕೆಲಸ ತೀರ ಅಲ್ಪ ಪ್ರಮಾಣದಲ್ಲಿ. ಈ ವಿಶೇಷ ಹಿನ್ನೆಲೆಯಲ್ಲಿ ಪರಿಭಾವಿಸಿ ನೋಡಿದಾಗ ಈ ಲೇಖನಕ್ಕೆ ಇನ್ನೂ ಹೆಚ್ಚು ಐತಿಹಾಸಿಕ ಮಹತ್ವವನ್ನು ಕೊಡಬೇಕಾಗುತ್ತದೆ.

ಭಾರತೀಯ ಕಾವ್ಯ ಮೀಮಾಂಸೆಯ ತತ್ವಗಳನ್ನು ಸ್ಪಷ್ಟಗೊಳಿಸುವುದಕ್ಕಾಗಿ ತೀ.ನಂ.ಶ್ರೀ ಅವರು ಜನಪದ ಕಾವ್ಯವನ್ನು ಉಪಯೋಗಿಸಿಕೊಂಡಿರುವುದು ಅವರು ಜನಪದ ಸಾಹಿತ್ಯಕ್ಕೆ ಕೊಟ್ಟ ಪರಮಾವಧಿ ಗೌರವವನ್ನು ಸೂಚಿಸುವ ಅತ್ಯಂತ ಮಹತ್ವಪೂರ್ಣವಾದ ಸಂಗತಿಯಾಗಿದೆ. 'ಭಾರತೀಯ ಕಾವ್ಯಮೀಮಾಂಸೆ' ಯಂತಹ ಅತ್ಯಂತ ಶ್ರೇಷ್ಠಮಟ್ಟದ, ವಿದ್ವತ್‌ಪೂರ್ಣವಾದ ಆಚಾರ್ಯ ಕೃತಿಯಲ್ಲಿ ಸಂಸ್ಕೃತ ಲಾಕ್ಷಣಿಕರ ಕಾವ್ಯ ತತ್ವಗಳ ಸ್ಪಷ್ಟತೆಗಾಗಿ ಇಪ್ಪತ್ತೈದು ವರ್ಷಗಳ ಹಿಂದೆಯೇ, ಜನಪದ ಸಾಹಿತ್ಯ ಅನಾದರಕ್ಕೆ ಗುರಿಯಾಗಿದ್ದ ಕಾಲದಲ್ಲಿಯೇ ತೀ.ನಂ.ಶ್ರೀಯವರಂಥ ಶ್ರೇಷ್ಠ ವಿದ್ವಾಂಸರು ಜನಪದ ತ್ರಿಪದಿಗಳಿಗೆ ಈ ಕೃತಿಯಲ್ಲಿ ಸ್ಥಾನ ನೀಡಿದ್ದು ಜನಪದ ಸಾಹಿತ್ಯಕ್ಕೆ ಸಂದಿರುವ ಬಹುಮುಖ್ಯ ಗೌರವವಾಗಿದೆ. ವ್ಯಂಗ್ಯಾರ್ಥ, ಸ್ವಭಾವೋಕ್ತಿ, ವಾಚ್ಯಾರ್ಥ ಇವೇ ಮೊದಲಾದ ಪರಿಕಲ್ಪನೆಗಳಿಗೆ ಉದಾಹರಣೆಗಳನ್ನು ಜನಪದ ಸಾಹಿತ್ಯದಿಂದ ಎತ್ತಿಕೊಂಡು ವಿಶ್ಲೇಷಿಸಿರುವುದು ಗಮನಾರ್ಹ. ಇಲ್ಲಿ ಆಯ್ದುಕೊಂಡು ವಿಶ್ಲೇಷಣೆಗೆ ಒಳಪಡಿಸಿರುವ ಕ್ರಮ ಪ್ರಾಯೋಗಿಕ ವಿಮರ್ಶೆಗೆ ಅತ್ಯುತ್ತಮ ಉದಾಹರಣೆಯಾಗಿದೆ.

ಈ ಎಲ್ಲಾ ಅಂಶಗಳನ್ನೂ ಗಮನಿಸಿದಾಗ ಕನ್ನಡ ಜನಪದ ಸಾಹಿತ್ಯ ಕ್ಷೇತ್ರಕ್ಕೆ ತೀ.ನಂ.ಶ್ರೀ ಅವರ ಕೊಡುಗೆ ಹೀಗಿದೆ ಎನಿಸುತ್ತದೆ: ಜನಪದ ಸಾಹಿತ್ಯದ ಆರು ಕ್ಷೇತ್ರಗಳಲ್ಲಿ ತೀ.ನಂ.ಶ್ರೀ ಅವರ ಕೊಡುಗೆ ಜನಪದ ಕಾವ್ಯ ಮತ್ತು ಜನಪದ ಕಥೆ ಈ ಎರಡು ಕ್ಷೇತ್ರಗಳಿಗೆ ಮಾತ್ರ. ಅವರ ಈ ಕೊಡುಗೆ ಮಹತ್ವಪೂರ್ಣವಾದುದು. ಒಟ್ಟಾರೆ ತೀ.ನಂ.ಶ್ರೀ ಅವರು ಜನಪದ ಸಾಹಿತ್ಯದ ಪ್ರಚಾರಕರು, ಅಭಿಮಾನಿಗಳು, ಪ್ರೋತ್ಸಾಹಕರು, ಸಂಪಾದಕರು ಮತ್ತು ವಿಮರ್ಶಕರು ಆಗಿದ್ದರು.

ಅರ್ಚಕ ಬಿ. ರಂಗಸ್ವಾಮಿ ಭಟ್ಟ

ಡಾ|| ಹಾ.ಮಾ. ನಾಯಕ

ಅರ್ಚಕ ಬಿ. ರಂಗಸ್ವಾಮಿಯವರು ಕರ್ನಾಟಕದ ಆದ್ಯ ಜಾನಪದ ಸಂಗ್ರಾಹಕರಲ್ಲಿ ಒಬ್ಬರಾಗಿದ್ದಾರೆ. ಉತ್ತರ ಕರ್ನಾಟಕದ ಪ್ರಾತಿನಿಧಿಕ ಕೃತಿಯಾಗಿ, ಕನ್ನಡದ ಪ್ರಥಮ ಜನಪದ ಗೀತೆಗಳ ಸಂಕಲನವಾಗಿ ಹಲಸಂಗಿ ಸೋದರರು ಸಂಪಾದಿಸಿದ 'ಗರತಿಯ ಹಾಡು' 1931ರಲ್ಲಿ ಪ್ರಕಟವಾಯಿತು. ಇದೇ ಅವಧಿಯಲ್ಲಿ ದಕ್ಷಿಣ ಕರ್ನಾಟಕದಲ್ಲಿಯೂ ಜಾನಪದ ಸಂಗ್ರಹವನ್ನು ಆರಂಭಿಸಿದ ಕೀರ್ತಿ ಶ್ರೀ ರಂಗಸ್ವಾಮಿಯವರದು. 1933ರಲ್ಲಿ ಅವರ ಅಪೂರ್ವ ಕೃತಿ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ಪ್ರಕಟವಾಯಿತು. 1931 ರಿಂದ 1940ರ ಅವಧಿಯಲ್ಲಿ ಪ್ರಕಟವಾದ ಇನ್ನೂ ಕೆಲವು ಸಂಕಲನಗಳು ಗಮನಾರ್ಹವಾಗಿವೆ. ಉತ್ತರ ಕನ್ನಡ ಜಿಲ್ಲೆಯಿಂದ ವಿ.ವೆಂ. ತೊರ್ಕೆ ಅವರ 'ಹಳ್ಳಿಯ ಹಾಡುಗಳು' (೧೯೩೩), ಉತ್ತರ ಕರ್ನಾಟಕದಿಂದ ಧೂಲಾಸಾಹೇಬ ಮತ್ತು ಸಿಂಪಿ ಲಿಂಗಣ್ಣನವರ 'ಜೀವನ ಸಂಗೀತ' (1933), ಕಾಪಸೆ ರೇವಪ್ಪನವರ 'ಹಳ್ಳಿಯ ಹಾಡುಗಳು' (1938) ಬಿ.ಎನ್. ರಂಗಸ್ವಾಮಿಯವರ 'ಹಳ್ಳಿಯ ಪದಗಳು' (1940) ಮುಂತಾದ ಆ ದಶಕದ ಜಾನಪದ ಸಂಕಲನಗಳ ಸಾಲಿನಲ್ಲಿ ಅರ್ಚಕ ರಂಗಸ್ವಾಮಿಯವರ ಕೃತಿ ಹಲವು ದೃಷ್ಟಿಗಳಿಂದ ಮಹತ್ವದ ಕಾಣಿಕೆಯಾಗಿದೆ. ಕನ್ನಡ ಜಾನಪದ ಸಂಕಲನಗಳಲ್ಲಿ ಸಮಗ್ರ ಜಾನಪದ ದೃಷ್ಟಿಯನ್ನೊಳಗೊಂಡ ಈ ಏಕಮಾತ್ರ ಕೃತಿ ಕಾರಣಾಂತರದಿಂದ ಹೆಚ್ಚು ಜನಪ್ರಿಯವಾಗದೆ, ಅಜ್ಞಾತವಾಗಿಯೇ ಉಳಿದುಹೋದುದು ದುರ್ದೈವದ ವಿಷಯವೆಂದೇ ಹೇಳಬೇಕು.

ಅರ್ಚಕ ಬಿ. ರಂಗಸ್ವಾಮಿಯವರು ಜನಪದ ಸಂಸ್ಕೃತಿಯ ಬಗ್ಗೆ ವಿಶೇಷ ಆದರ ಗೌರವಗಳನ್ನು ತೋರಿ ತಮ್ಮ ಹುಟ್ಟೂರಾದ ಬಂಡಿಹೊಳೆಯ 'ಆಚಾರ ವಿಚಾರ'ಗಳನ್ನೆಲ್ಲ ಅಧ್ಯಯನ ಮಾಡಲು ತೊಡಗಿದುದರ ಫಲವಾಗಿ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ರೂಪುಗೊಂಡಿತು. 1933ರ ವೇಳೆಗೇ ನಾಗರಿಕತೆಯ ಪ್ರಭಾವದಿಂದ ನಶಿಸಿ ಹೋಗುತ್ತಿದ್ದ ಜನಪದ ಸಂಪ್ರದಾಯಗಳನ್ನೆಲ್ಲ ಸಂಗ್ರಹಿಸುವ ಪ್ರಬಲವಾದ ಪ್ರೇರಣೆಗೆ ಒಳಗಾಗಿ ತಮ್ಮ ಊರಿನಲ್ಲಿ ಪ್ರಚಲಿತವಾಗಿದ್ದ ಕತೆಗಳು, ಗೀತೆಗಳು, ಲಾವಣಿಗಳು, ಗಾದೆಗಳು, ಹಬ್ಬಹರಿದಿನಗಳು, ಜನರ ನಡೆನುಡಿಗಳು, ಯಕ್ಷಗಾನ ಬಯಲಾಟ ಮುಂತಾದ ಜನಪದ ಕಲೆಗಳು, ಕುಣಿತಗಳು ಮುಂತಾದುವನ್ನು ವಿವರವಾಗಿ ಸಂಗ್ರಹಿಸಿ ಪ್ರಕೃತ ಕೃತಿಯಲ್ಲಿ ಅಳವಡಿಸಿರುವ ಅವರು 'ಜಾನಪದ' (Folklore)ದ ವ್ಯಾಪಕ ದೃಷ್ಟಿಯ

ಪರಿಚಯವಿಲ್ಲದೆಯೂ ಎಲ್ಲ ಜಾನಪದ ಪ್ರಕಾರಗಳನ್ನೂ ಸಂಗ್ರಹಿಸಿ ಅಷ್ಟು ಹಿಂದೆಯೇ ಪ್ರಕಟಿಸಿರುವುದು ಆಶ್ಚರ್ಯದ ವಿಷಯವಾಗಿದೆ. ಈ ವ್ಯಾಪಕ ದೃಷ್ಟಿಯಿಂದ ಶ್ರೀ ರಂಗಸ್ವಾಮಿಯವರ ಕೃತಿ ನಮ್ಮ ಜಾನಪದ ಅಧ್ಯಯನದ ಮೊದಲ ಮೆಟ್ಟಿಲು ಎನ್ನಬಹುದು. ಮುಂದಿನ ಸಂಗ್ರಾಹಕರು ಈ ಕೃತಿಗೆ ಗೀತೆಗಳ ದೃಷ್ಟಿಯಿಂದ ಎಷ್ಟೋ ಋಣಿಯಾಗಿದ್ದರೂ ಇದರ ಮೇಲ್ಪಂಕ್ತಿಯನ್ನು ಅನುಸರಿಸದೆ ಕೇವಲ ಗೀತಪ್ರಕಾರಕ್ಕೆ ಅಂಟಿಕೊಂಡದ್ದರಿಂದ ಕನ್ನಡ ಜಾನಪದ ಕ್ಷೇತ್ರ ಒಂದು ದೃಷ್ಟಿಯಿಂದ ದೊಡ್ಡ ನಷ್ಟವನ್ನೇ ಅನುಭವಿಸಿತೆನ್ನಬೇಕು.

'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ಕೇವಲ ಬಂಡಿಹೊಳೆ ಒಂದರ ಹೃದಯಕ್ಕೆ ಹಿಡಿದ ಕನ್ನಡಿಯಲ್ಲ; ಸಮಗ್ರ ಬಯಲು ಸೀಮೆಯ ಹಳ್ಳಿಗಳ ಜೀವನಾಡಿಯೇ ಅಲ್ಲಿ ಮಿಡಿದಿದೆ. ಜನಜೀವನದ ವೈಖರಿ, ಪರಂಪರಾನುಗತ ಸಂಸ್ಕೃತಿಯ ಪದರುಗಳು ಆ ಒಂದು ಹಳ್ಳಿಗೆ ಮಾತ್ರ ಸೀಮಿತವಾಗದೆ ಎಲ್ಲ ಹಳ್ಳಿಗಳ ಕತೆಯೇ ಆಗಿ ಕಂಡುಬರುತ್ತದೆ. ಬಯಲುಸೀಮೆಯ ಗ್ರಾಮಾಂತರ ಸಂಸ್ಕೃತಿಯನ್ನು ತಮ್ಮ ಕೃತಿಯಲ್ಲಿ ಶ್ರೀ ರಂಗಸ್ವಾಮಿಯವರು ಭಟ್ಟಿ ಇಳಿಸಿದ್ದಾರೆ ಎನ್ನಬಹುದು.

ಜನಪದ ಸಾಹಿತ್ಯ ದೃಷ್ಟಿಯಿಂದಲೂ ಈ ಕೃತಿಗೆ ಒಂದು ಅಗ್ರಸ್ಥಾನ ಲಭ್ಯವಾಗುತ್ತದೆ. ಮುಂದಿನ ಯಾವ ಸಂಕಲನಗಳಲ್ಲೂ ಕಾಣಬರದ ವೈಜ್ಞಾನಿಕ ಸಂಗ್ರಹ ದೃಷ್ಟಿ ಇವರಲ್ಲಿ ಕಾಣಬರುತ್ತದೆ. ಹಾಡಿನ ಸಂಪ್ರದಾಯಗಳನ್ನು ಗುರುತಿಸುತ್ತಾರೆ, ಆ ಸಂಪ್ರದಾಯದ ವಿವರಗಳನ್ನು ನೀಡಿ ಆಯಾ ವಿಭಾಗದಲ್ಲಿ ಹಾಡುಗಳನ್ನು ಅಳವಡಿಸುತ್ತಾರೆ. ಹಾಡಿದವರ ಹೆಸರು, ವಿವರ ಮುಂತಾದುವನ್ನೂ ನೀಡುತ್ತಾರೆ. ಕೋಲಾಟದ ಪದಗಳು, ಮದುವೆಯ ಪದಗಳು, ದೇವರ ಪದಗಳು ಹೀಗೆ ಪ್ರಮುಖವಾದ ವಿಭಾಗಗಳಲ್ಲಿ ಸಾಕಷ್ಟು ಹಾಡುಗಳನ್ನು ಸಂಗ್ರಹಿಸಿ ನೀಡಿದ್ದಾರೆ. ಪ್ರಸಿದ್ಧ ಲಾವಣಿಗಳೆಲ್ಲ ಈ ಸಂಕಲನದಲ್ಲಿಯೇ ನಮಗೆ ಲಭ್ಯವಾಗುತ್ತವೆ. ಕನ್ನಡದಲ್ಲಿ ಜನಪ್ರಿಯವಾಗಿರುವ ಬಹುಪಾಲು ಜನಪದ ಗೀತೆಗಳು ಬೇರೆಯವರ ಹೆಸರಿನಲ್ಲಿ ಪ್ರಚಾರಗೊಂಡಿದ್ದರೂ ಅವುಗಳ ಮೂಲವೆಲ್ಲ ಈ ಕೃತಿಯಲ್ಲಿಯೇ ಇದೆ ಎಂಬುದನ್ನೂ ಗಮನಿಸಬಹುದು.

ಶ್ರೀ ರಂಗಸ್ವಾಮಿಯವರು ಐನೂರಕ್ಕೂ ಹೆಚ್ಚು ಗಾದೆಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ; ಜನಪದ ಭಾಷೆಯ ಸೊಗಸನ್ನೂ ಸವಿಯನ್ನೂ ನೇರವಾದ ಸಂಭಾಷಣೆಗಳನ್ನೇ ನೀಡಿ ಪರಿಚಯ ಮಾಡಿಕೊಟ್ಟಿದ್ದಾರೆ. ಮಕ್ಕಳ ಪದಗಳ ಆಟಗಳ ಹಿನ್ನೆಲೆಯನ್ನು ಕುರಿತು ಚರ್ಚಿಸಿದ್ದಾರೆ. ಹಳ್ಳಿಯ ನ್ಯಾಯ ತೀರ್ಮಾನದ ವೈಖರಿ, ಅಲ್ಲಿನ ಮೇಳಗಳ ಸೊಗಸು, ಉತ್ಸವಗಳ ಹಬ್ಬಗಳ ವೈಭವ, ವರ್ಷದ ಪ್ರತಿಯೊಂದು ತಿಂಗಳಿನಲ್ಲಿಯೂ ನಿಸರ್ಗದ ಬದಲಾವಣೆಯೊಡನೆ ಕಾಣಬರುವ ಬದುಕಿನ ರೀತಿ ನೀತಿಗಳು ಮುಂತಾದ ಹಳ್ಳಿಯ ಬದುಕಿನ ಸಮಸ್ತ ಮುಖಗಳನ್ನೂ ಒಂದು ಏಕಸೂತ್ರದಲ್ಲಿ ಕೋದು ಅತ್ಯಂತ ಕಲಾತ್ಮಕ ನಿರೂಪಣೆಯೊಡನೆ ಕೃತಿಯ ಸೊಗಸನ್ನು ಹೆಚ್ಚಿಸಿದ್ದಾರೆ. ಕಲಾದೃಷ್ಟಿಯಿಂದಲೂ, ಶಾಸ್ತ್ರ ದೃಷ್ಟಿಯಿಂದಲೂ ಪ್ರಮುಖವೆನಿಸುವ ಈ ಕೃತಿ ಸಂಶೋಧಕರಿಗೂ, ಜಾನಪದ ಪ್ರೇಮಿಗಳಿಗೂ ಹೆಚ್ಚು ಉಪಯುಕ್ತವೆನಿಸುವುದರಲ್ಲಿ ಸಂಶಯವಿಲ್ಲ.

ವಿಠೋಬ ವೆಂಕನಾಯಕ ತೊರ್ಕೆ

ಡಾ. ಎನ್.ಆರ್. ನಾಯಕ

ತೊರ್ಕೆಯವರು ಕೇವಲ ಕವಿಗಳಷ್ಟೇ ಅಲ್ಲ ಕನ್ನಡ 'ಜಾನಪದ'ದ ಆರಂಭಿಕ ಸಂಗ್ರಹಕಾರರೂ ಹೌದು. ಉತ್ತರ ಕನ್ನಡ ಜಾನಪದ ವಿಚಾರವಾಗಿ ಮಾತಾಡುವ ಮೊದಲು ಶ್ರೀ ವಿ.ವೆಂ. ತೊರ್ಕೆಯವರ ಹೆಸರನ್ನು ದಾಖಲಿಸಿಯೇ ನಾವು ಮುಂದುವರಿಯಬೇಕಾಗುತ್ತದೆ. ಆದರ್ಶ ಶಿಕ್ಷಕರಾಗಿ, ಅಧಿಕಾರಿಯಾಗಿ, ಸುಧಾರಣಾವಾದಿಯಾಗಿ, ಸಂಶೋಧಕರಾಗಿಯೂ ಇವರು ಪ್ರಸಿದ್ಧರು.

ತೊರ್ಕೆ ಪುರಾಣೇತಿಹಾಸ ಪ್ರಸಿದ್ಧವಾದ ಊರು. ತೊರ್ಕೆಗೆ ಹಿಂದೆ ತಾರ್ಕ್ಷ್ಯಪುರ ಎಂದು ಕರೆಯುತ್ತಿದ್ದರಂತೆ. ಅದೇ ಮುಂದೆ ತಗರ, ತಗರಪುರ, ತೊರ್ಕೆಯಾಯಿತೆಂದು ಊಹಿಸಲಾಗುತ್ತದೆ. ವಿಠೋಬ ನಾಯಕರು ದಿನಾಂಕ ೧೭-೭-೧೮೯೫ರಂದು ಜನ್ಮ ತಳೆದರು. ವಿಠೋಬ ವೆಂಕನಾಯಕರು ತಮ್ಮ ಅಡ್ಡ ಹೆಸರು ನಾಯಕಕ್ಕೆ ಬದಲಾಗಿ, ಅವರ ಕುಟುಂಬದವರು ಹೆಮ್ಮೆಯಿಂದ ಧರಿಸಿಕೊಳ್ಳುತ್ತಿದ್ದ 'ತೊರ್ಕೆ' ಎಂಬ ಹೆಸರನ್ನೇ ಶಾಶ್ವತವಾಗಿ ಬಳಸುತ್ತ ಬಂದರು.

ವಿ.ವೆಂ. ತೊರ್ಕೆಯವರು ತಮ್ಮ ಪ್ರಾಥಮಿಕ ಅಭ್ಯಾಸವನ್ನು ತೊರ್ಕೆಯಲ್ಲಿಯೇ ಮುಗಿಸಿ, ಆ ಹಂತದ ಕೊನೆಯ ಪರೀಕ್ಷೆ ಮುಲ್ಕಿಯಲ್ಲಿ ಉತ್ತಮ ದರ್ಜೆಯಲ್ಲಿ ಪಾಸಾದರು. ಅನಂತರ ಪ್ರಾಥಮಿಕ ಶಾಲೆಯ ಅಧ್ಯಾಪಕರ ಮೂರು ವರ್ಷದ ಟ್ರೇನಿಂಗನ್ನು ಧಾರವಾಡದಲ್ಲಿ ಮುಗಿಸಿದರು. ಶಾಲಾದಿನಗಳಲ್ಲಿ ಪಠ್ಯೇತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅವರು ಮುಂಚೂಣಿಯಲ್ಲಿರುತ್ತಿದ್ದರು. ಅವರ ಕಾವ್ಯ ವ್ಯವಸಾಯವೂ ಅವರ ವಿದ್ಯಾರ್ಥಿಜೀವನದಿಂದಲೇ ಆರಂಭವಾಯಿತು.

ತೊರ್ಕೆಯವರು ಪ್ರಾಥಮಿಕ ಶಿಕ್ಷಕ ತರಬೇತಿಯನ್ನು ಪಡೆದ ಮೇಲೆ, ಪ್ರಾಥಮಿಕ ಶಾಲಾಶಿಕ್ಷಕರಾಗಿ ಅತ್ಯುತ್ತಮ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸಿ, ಬಡತಿಯನ್ನು ಪಡೆದು, ಅನೇಕ ವರ್ಷಗಳವರೆಗೆ ಪ್ರಾಥಮಿಕ ಶಾಲೆಯ ಮುಖ್ಯ ಉಪಾಧ್ಯಾಯರಾಗಿ, ದಕ್ಷತೆಯಿಂದ ಆಡಳಿತ ನಿರ್ವಹಿಸಿ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿದರು. ಅನಂತರ ಕೆಲ ಕಾಲ ಶಾಲಾ ತಪಾಸಣಾಧಿಕಾರಿಗಳಾಗಿ ಪದೋನ್ನತಿ ಪಡೆದು ಸೇವೆಯಿಂದ ನಿವೃತ್ತಿ ಹೊಂದಿದರು. ನಿವೃತ್ತಿಯ ನಂತರ ಕೆಲಕಾಲ ಸ್ಕೂಲ್ ಬೋರ್ಡಿನ ಸದಸ್ಯರಾಗಿ ಸೇವೆ ಸಲ್ಲಿಸಿದರು.

ಇವರ ಧರ್ಮಪತ್ನಿ ತೊರ್ಕೆಯ ಹೊನ್ನಯ್ಯ ನಾಯಕರ ಮಗಳು ಚಂದ್ರಭಾಗಿ. ಹೆಂಡತಿಯಿಂದ ಪ್ರೇರಣೆಯನ್ನು ಪಡೆದ ವಿ.ವೆ.ತೊರ್ಕೆಯವರು, ತಮ್ಮ ಕಾವ್ಯನಾಮವನ್ನು 'ಚಂದಿಕಾನಂದ' ಎಂದಿಟ್ಟುಕೊಂಡು ತಮ್ಮ ಪತ್ನೀ ಪ್ರೇಮವನ್ನು ಪ್ರಕಟಿಸಿದ್ದಾರೆ. ಅವರದು ಸರಸ ದಾಂಪತ್ಯ. ತೊರ್ಕೆಯವರು ಬರೆದ ''ದಂಪತಿ ಸಂವಾದ'' ಕವಿತೆಯನ್ನು ''ಗಂಡಾಗಬೇಕಿತ್ತು ಹೆಣ್ಣಾಗಬೇಕಿತ್ತು ಗಂಡಾದೆ ನಾನು, ಹಿಂದಿನಾ ಜನುಮದ ಕರ್ಮವಮ್ಮಾ'' ಎಂದು ಪತಿ ಪತ್ನಿ ಇಬ್ಬರೂ ಹಾವಭಾವದೊಂದಿಗೆ ಸಂವಾದ ರೂಪದಲ್ಲಿ ಹಾಡಿ ರಂಜಿಸಿದ್ದನ್ನು ಕೇಳಿದ ಸ್ವಾತಂತ್ರ್ಯಯೋಧ ಶೆಟಗೇರಿ ಜೋಗಿ ನಾಯಕರು ಅವರ ಸಂವಾದವನ್ನು ಮುದ್ದಣ್ಣ ಮನೋರಮೆಯರ ಸಂವಾದಕ್ಕೆ ಹೋಲಿಸುತ್ತಾರೆ.

ತೊರ್ಕೆಯವರದು ದೊಡ್ಡ ಕುಟುಂಬ ; ಜನಪ್ರಿಯ ಶಿಕ್ಷಕರೂ, ಕವಿಗಳೂ, ಜನಪರ ಕಾಳಜಿಯುಳ್ಳವರೂ ಆದ ಇವರೆಡೆಗೆ ಬರಹೋಗುವ ಅತಿಥಿಗಳಿಗೆ ಕಡಿಮೆಯಿರಲಿಲ್ಲ. ತೊರ್ಕೆಯವರು ತಮ್ಮ ಸಂಕಷ್ಟದಲ್ಲೂ ಸಹ ನಸು ನಗುತ್ತಲೇ ಅತಿಥಿಗಳನ್ನು ಸತ್ಕರಿಸುವಲ್ಲಿ ಒಂದು ಬಗೆಯ ಧನ್ಯತೆಯನ್ನು ಅನುಭವಿಸುವುದನ್ನು ಮರೆಯಲಿಲ್ಲ.

ತೊರ್ಕೆಯವರು ಅಪ್ಪಟ ಕನ್ನಡಾಭಿಮಾನಿಗಳು, ದೇಶಾಭಿಮಾನಿಗಳು, ಪ್ರಗತಿಪರ ಚಿಂತಕರು. ಸಮಾಜದಲ್ಲಿ ಪರಂಪರಾಗತವಾಗಿ ಬಂದ ಮೂಢ ನಂಬಿಕೆಗಳು, ಅನಿಷ್ಟ ಸಂಪ್ರದಾಯಗಳ ವಿರುದ್ಧ ದನಿಯೆತ್ತಿದ್ದಾರೆ. ತೊರ್ಕೆಯವರು ನಾಡಿನ ಗಣ್ಯ ಸಾಹಿತಿಗಳಲ್ಲೊಬ್ಬರು. ಅವರ ಸಾಹಿತ್ಯಕ ಹರವು ಗದ್ಯ ಪದ್ಯ ಹಾಗೂ ಜಾನಪದ ಕ್ಷೇತ್ರಗಳಲ್ಲಿ ವ್ಯಾಪಿಸಿಕೊಂಡಿದೆ.

ಜಾನಪದರಲ್ಲಿ ಶಕ್ತಿಶಾಲಿಗಳನ್ನು, ''ಮುಂಗೈಸುರ್ತಳ''ರೆಂದು ಕರೆಯುವ ವಾಡಿಕೆ. ಹಿಂದೆ ಕೆಲವರು ಮುಂಗೈಗೆ ಹಣ ಕಟ್ಟಿಕೊಂಡು, ತಮ್ಮ ಮುಂಗೈ ಬಗ್ಗಿಸಲು ಶಕ್ತಿಶಾಲಿಗಳಿಗೆ ಆಹ್ವಾನ ನೀಡುತ್ತಿದ್ದರಂತೆ. ಜನಪದ ಕತೆಗಳಲ್ಲಿ ಇಂಥ ಮುಂಗೈ ಸುರ್ತಳರ ಕತೆ ಮೇಲಿಂದ ಮೇಲೆ ಬರುತ್ತದೆ. ತಮ್ಮ ತಾರುಣ್ಯದಲ್ಲಿ ವಿ.ವೆಂ. ತೊರ್ಕೆಯವರು ಮುಂಗೈ ಸುರ್ತಳರೆಂದು ಪ್ರಸಿದ್ಧಿ ಪಡೆದಿದ್ದರಂತೆ. ಜನಪದ ಆಟಗಳಲ್ಲಿಯೂ ತೊರ್ಕೆಯವರು ಪಳಗಿದವರು. 'ದಾಡ್‌ಫೀ' ಎನ್ನುವ ಇಸ್ಪೀಟ್ ಆಟದಲ್ಲಿ ಇವರಿಗೆ ಆಸಕ್ತಿ, ಬಯಲಾಟದಲ್ಲಿ ಗುಂಗು. ಆದರೆ ವೇಷಕಟ್ಟಿ ಕುಣಿದದ್ದು ಕಡಿಮೆ. ತಾಳಮದ್ದಳೆಯಲ್ಲಿ ಮಾತ್ರ ತಮ್ಮ ಸಾಭಿನಯಪೂರ್ಣ ಅರ್ಥಗಾರಿಕೆಯಿಂದ ಪ್ರಸಿದ್ಧರು. ಇವರ ಅರ್ಥಗಾರಿಕೆಗೆ ಮೆಚ್ಚಿಗೆ ಸ್ನೇಹಿತ ವಲಯದ ಒತ್ತಾಸೆಗೆ ಕಟ್ಟುಬಿದ್ದು, ಇವರೊಮ್ಮೆ 'ರಾಜಸೂಯಾಧ್ವರ' ಪ್ರಸಂಗದ, ಬೃಹದ್ರಥನ ವೇಷ ಹಾಕಿದ್ದರಂತೆ. ಅವರು ನಾಡವರು ಹಾಗೂ ಜೈನ ಸಂಬಂಧ, ಉತ್ತರ ಕನ್ನಡ ಜಿಲ್ಲೆಯ ವೀರಗಲ್ಲುಗಳು, ಕದಂಬರ ಶಾಸನ ಇತ್ಯಾದಿಗಳ ವಿಚಾರವಾಗಿ ಚಿಂತನೆ ಸಂಶೋಧನೆಗಳನ್ನು ನಡೆಸಿ, ಲೇಖನಗಳನ್ನು ಬರೆದು, ಸಭೆ ಸಮ್ಮೇಲನಗಳಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆಂದು ಹೇಳಲಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯ ಹಲವಾರು ಐತಿಹಾಸಿಕ ಸ್ಥಳಗಳಿಗೆ ಭೆಟ್ಟಿಯಿತ್ತು, ಅಲ್ಲಿಯ ವೀರಗಲ್ಲು, ಮಾಸ್ತಿಕಲ್ಲುಗಳನ್ನು ಪರಿಶೀಲಿಸಿ ಸ್ಥಳನಾಮಗಳ ವಿಚಾರವಾಗಿ ಮಾಹಿತಿ ಸಂಗ್ರಹಿಸಿ, ಅಧ್ಯಯನ ನಡೆಸಿದ್ದಾಗಿಯೂ ತಿಳಿದು ಬರುತ್ತದೆ.

ಗ್ರಾಮೀಣ ಪರಿಸರದಲ್ಲಿ ಬದುಕಿ ಬಾಳಿದ ಜನಪದ ನಿಲುವುಳ್ಳ ಸುಸಂಸ್ಕೃತ ಮನಸ್ಸಿನ ಎ.ವೆಂ. ತೋರ್ಕೆಯವರು ಹಳ್ಳಿಯ ಒಕ್ಕಲಿಗರು, ದೀನ ದಲಿತರು ಮುಂತಾದ ಕೆಳಸ್ತರದವರ ವಿಷಯವಾಗಿ ಅಪಾರ ಪ್ರೀತಿ, ವಿಶ್ವಾಸ, ಕಳಕಳಿಯುಳ್ಳವರು. ಜನಪದ ಬದುಕಿನ ಸಮಗ್ರ ಅನುಭವವುಳ್ಳವರು. ಹಳ್ಳಿಗರೊಡನಾಡಿ, ಹಾಡಿ, ಸಂತೃಪ್ತರಾದವರು. ಆದ್ದರಿಂದ ಗ್ರಾಮೀಣ ಬದುಕಿನ ಗಾಢವಾದ ಪ್ರಭಾವ ಅವರ ಮೇಲಾಗಿ, ಆ ಸಂಸ್ಕೃತಿಗೆ ತೀವ್ರವಾಗಿ ಸ್ಪಂದಿಸಿ, ತಮ್ಮ ಸಂವೇದನೆಗಳನ್ನು ಕಾವ್ಯದ ಮೂಲಕವಾಗಿ ಹೊರ ಹೊಮ್ಮಿಸುವುದರಲ್ಲಿ ಸಂತೃಪ್ತರಾಗದೆ, ಹಳ್ಳಿಯ ನಿರಕ್ಷರಿಗಳೂ, ಸುಮನಸ್ಕರೂ ಆದ ಜನಸಾಮಾನ್ಯರು ತಮ್ಮ ಸುತ್ತುಮುತ್ತಲಿನ ಬದುಕಿನ ಬಹುಮುಖಗಳಿಗೆ ಸ್ಫುರಣಗೊಂಡು, ತಮ್ಮ ಹೃದಯಾಂತರಾಳವನ್ನು ಹಾಡುಗಳಲ್ಲಿ ಹೇಗೆ ತೇಲಿ ಬಿಟ್ಟಿದ್ದಾರೆ ಎನ್ನುವುದನ್ನು ನಮಗೆ ಸಂಗ್ರಹಿಸಿಕೊಟ್ಟಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಸುಸಂಸ್ಕೃತ ಮನಸ್ಸಿನ ಹೆಂಗಳೆಯರು ಬತ್ತವನ್ನು ಮೆರೆ (ಮಿದಿ)ಯುವಾಗ ಕರೆಗೆಯ್ಯುವಾಗ, ಹಿಟ್ಟು ಬೀಸುವಾಗ, ತೊಟ್ಟಿಲು ತೂಗುವಾಗ ತಮ್ಮೆದೆಯ ಭಾರವನ್ನು ಹಗುರಗೊಳಿಸಿಕೊಳ್ಳಲು ಹಾಡುವ, ಬದುಕಿನ ದಟ್ಟವಾದ ಅನುಭವಗಳಿಂದ ಇಡಿಕಿರಿದ ಭಾವಗೀತಾತ್ಮಕ ತ್ರಿಪದಿಗಳ ಸವಿ ಸೊಗಸಿಗೆ ಮಾರು ಹೋದ ತೋರ್ಕೆಯವರು ೧೯೩೩ರಲ್ಲಿ ಅವನ್ನೆಲ್ಲ ಸಂಗ್ರಹಿಸಿ, 'ಹಳ್ಳಿಯ ಹಾಡುಗಳು' ಎಂಬ ಶೀರ್ಷಿಕೆಯಡಿಯಲ್ಲಿ ಗೋಕರ್ಣದ ನಂದಿನೀ ಮುದ್ರಣಾಲಯದಿಂದ ಮುದ್ರಿಸಿ ಪ್ರಕಟಿಸಿದರು. ಈ ಸಂಕಲನ ತೋರ್ಕೆಯವರ ಅಯ್ದನೆಯ ಪ್ರಕಟಿತ ಗ್ರಂಥ; ಉತ್ತರ ಕನ್ನಡ ಜಿಲ್ಲೆಯ ಮೊಟ್ಟಮೊದಲಿನ ಜಾನಪದ ಗೀತ ಸಂಕಲನವೆಂಬ ಅಗ್ಗಳಿಕೆಗೆ ಪಾತ್ರವಾದ ಪುಟ್ಟ ಗ್ರಂಥ.

ಕರ್ನಾಟಕದಲ್ಲಿ ಜಾನಪದ ಅಧ್ಯಯನವು ವಿಸ್ತಾರವಾಗಿ, ಶಾಸ್ತ್ರೀಯವಾಗಿ ಬೆಳೆದು, ವಿಶ್ವ ವಿದ್ಯಾಲಯ ಮಟ್ಟದಲ್ಲಿ ಒಂದು ಗಂಭೀರವಾದ ಅಧ್ಯಯನ ವಿಷಯವೂ ಆಗಿ ಬೆಳೆಯುತ್ತಿರುವ ವರ್ತಮಾನದಲ್ಲಿ ತೋರ್ಕೆಯವರ ಹಳ್ಳಿಯ ಹಾಡುಗಳು, ಜಾನಪದವನ್ನು ಶಾಸ್ತ್ರೀಯ ದೃಷ್ಟಿಯಲ್ಲಿ ಅಭ್ಯಸಿಸುವವರ ದೃಷ್ಟಿಗೆ ಚಿಕ್ಕಪುಟ್ಟ ದೋಷಗಳುಳ್ಳ ಸಂಕಲನ ಗ್ರಂಥವಾಗಿ ಗೋಚರಿಸಿದರೂ, ಈ ಕಿರುಹೊತ್ತಗೆಯಲ್ಲಿರುವ ಗುಣಾತ್ಮಕವಾದ ಅಂಶವನ್ನು ನಾವು ಕಡೆಗಣಿಸುವಂತಿಲ್ಲ.

ಕನ್ನಡ ನಾಡಿನಲ್ಲಿ ಜಾನಪದ ವಿಷಯದ ಬಗ್ಗೆ ಸರಿಯಾದ ಪರಿಕಲ್ಪನೆ ಮೂಡದಿದ್ದ ಹಾಗೂ ದೇಶೀಯ ಪಂಡಿತರಲ್ಲಿ, ಕವಿಗಳಲ್ಲಿ ಜನಪದ ಹಾಡುಗಳ ವಿಷಯದಲ್ಲಿ ಅವಜ್ಞೆ, ಕೀಳ್ಮೆಯ ಮನೋಭಾವ ತುಂಬಿದ್ದ ಕಾಲದಲ್ಲಿ 'ಹಳ್ಳಿಯ ಹಾಡುಗಳು' ಪ್ರಕಟವಾದದ್ದು. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಮೋಗ್ಲಿಂಗ್, ಚಾರ್ಲ್ಸ್ ಗೋವರ್, ಫ್ಲೀಟ್, ರೆ|| ಕಿಟಲ್ ಮುಂತಾದ ಪಾಶ್ಚಾತ್ಯ ವಿದ್ವಾಂಸರು, ಅಲ್ಲಲ್ಲಿ ಅಲ್ಪ ಸ್ವಲ್ಪ ಕನ್ನಡ ಜಾನಪದವನ್ನು ಸಂಗ್ರಹಿಸಿ, ಚಿಕ್ಕಪುಟ್ಟ ಟೀಕೆ-ಟಿಪ್ಪಣಿಗಳನ್ನು ಬರೆದದ್ದು ಹಾಗೂ ಹಲಸಂಗಿಯ ಗೆಳೆಯರು ಪ್ರಕಟಿಸಿದ 'ಗರತಿಯ ಹಾಡು' ಎಂಬ ಸೊಗಸಾದ ಜನಪದಗೀತ ಸಂಕಲನವನ್ನುಳಿದರೆ ಇನ್ನಾವ ಜನಪದ ಗೀತ ಸಂಕಲನಗಳೂ ಹೊತ್ತಗೆಯ ರೂಪದಲ್ಲಿ ಪ್ರಕಟವಾಗದ ಕಾಲವದು. ಹೀಗೆ ಕರ್ನಾಟಕದಲ್ಲಿ ಜನಪದ ಗೀತಗಳ ಸಂಗ್ರಹ ಹಾಗೂ ಪ್ರಕಟನೆಯ ಅರುಣೋದಯ ಕಾಲದಲ್ಲಿಯೇ, ಉತ್ತರ

ಕನ್ನಡ ಜಿಲ್ಲೆಯ ಹಳ್ಳಿಗಾಡಿನಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ, ಯುವ ಪ್ರಾಥಮಿಕ ಶಿಕ್ಷಕನೊಬ್ಬ ಅಕ್ಕರಿಗರಲ್ಲದ ಹೆಂಗಳೆಯರ ಹಾಡುಗಳ ನಾದಮಾಧುರ್ಯ ಹಾಗೂ ಸಾಹಿತ್ಯಕ ಸೌಂದರ್ಯಕ್ಕೆ ಮನಸೋತು ಇಂಥ ಅಮೂಲ್ಯವಾದ ಹಳ್ಳಿಯ ಹಾಡುಗಳ ಸಂಕಲನ ಗ್ರಂಥವೊಂದನ್ನು ನೀಡಿದ್ದು ಗಮನಾರ್ಹವಾಗುತ್ತದೆ. ಕನ್ನಡ ಜಾನಪದ ಇತಿಹಾಸದಲ್ಲೊಂದು ಸಣ್ಣ ದೀಪದ ಹೆಜ್ಜೆಯಾಗುತ್ತದೆ, ಉತ್ತರ ಕನ್ನಡ ಜಿಲ್ಲೆಯ ಮಟ್ಟಿಗಂತೂ ಇದೇ ಜನಪದ ಗೀತಗಳ ಪ್ರಥಮ ಸಂಕಲನವಾಗುತ್ತದೆ.

ಹಳ್ಳಿಯ ಹಾಡುಗಳು ಒಂದುನೂರಾ ಅಯ್ವತ್ತು ತ್ರಿಪದಿಗಳಿಂದ ಕೂಡಿದ, ಮೂವತ್ತೆಂಟು ಪುಟಗಳ ಚಿಕ್ಕ ಜನಪದ ಗೀತ ಸಂಕಲನ ಗ್ರಂಥ. ಹಾಡುಗಳ ಸಂಗ್ರಾಹಕ ಹಾಗೂ ಪರಿಶೋಧಕರಾದ ವಿ.ವೆಂ. ತೋರ್ಕೆಯವರು ಗ್ರಂಥದ ಮುನ್ನುಡಿಯಲ್ಲಿ, ''ಬಳ್ಳಿಯಲ್ಲಿರುವ ಕಂಪಿಡಿದ ಒಳ್ಳಲರುಗಳನ್ನು ತಿರಿದು ತಂದು ದಂಡೆ ಕಟ್ಟುವಂತೆ ಹಳ್ಳಿಯ ಹೆಂಗಳೆಯರು ಕನ್ನಡಮ್ಮನ ನುಡಿಗಳನ್ನು ಆರಿಸಿ ಹೆಣೆದು, ಅಚ್ಚು ಮೆಚ್ಚಾಗಿ ಹಾಡುತ್ತಿರುವುದನ್ನು ಆಲಿಸಿದೆ. ಈ ಹಾಡುಗಳನ್ನು ಕೂಡಿಸಿ, ಕನ್ನಡಿಗರ ಮುಂದಿಡುವುದಕ್ಕೆ ಹವಣಿಸಿದೆ......... ನನ್ನ ಹಳ್ಳಿಯ ಅಕ್ಕತಂಗಿಯರು, ಹಾಡುವ ಹಾಡುಗಳಲ್ಲಿಯ ಕೆಲವು ತೊಡಕಿನ ನುಡಿಗಳನ್ನು ಬದಿಗಿರಿಸಿ, ಕೈಯಿಂದ ನಾಲ್ಕು ನುಡಿಗಳನ್ನು ಬದಲಾಗಿರಿಸಿ ಈ ಹೊತ್ತಗೆಯಲ್ಲಿರುವ ರೂಪಕ್ಕೆ ತಂದು ಕನ್ನಡಮ್ಮನಿಗೆ ಅರ್ಪಿಸಿದ್ದೇನೆ'' (ಹಳ್ಳಿಯ ಹಾಡುಗಳು. ಪು. I-II) ಎನ್ನುತ್ತಾರೆ. ಹೀಗೆ ಜಾನಪದವನ್ನು ತಿದ್ದಿ ಸಂಸ್ಕರಿಸುವುದನ್ನು ಹೆಚ್ಚಿನ ಜಾನಪದ ವಿದ್ವಾಂಸರು ವಿರೋಧಿಸುತ್ತಾರೆ. ಸಂಗ್ರಾಹಕರು ಜಾನಪದವನ್ನು ಅದರ ತಾಜಾ ಸ್ವರೂಪದಲ್ಲಿ ಸಂಗ್ರಹಿಸಬೇಕೆ ವಿನಃ ಅದಕ್ಕೆ ವ್ಯತಿರಿಕ್ತವಾಗಿ, ತಮ್ಮ ತಿದ್ದುಪಡಿಯನ್ನು ಸೇರಿಸುವುದು ಸರಿಯಲ್ಲ ಎಂದು ಪ್ರಶ್ನಿಸುತ್ತಾರೆ. ಈ ದೃಷ್ಟಿಯಿಂದ ತೋರ್ಕೆಯವರ ತಿದ್ದುಪಡಿಯನ್ನು ನಾವು ಮೆಚ್ಚದಿರಬಹುದು. ಆದರೆ ಜಾನಪದವೆಂದರೆ ಕೊಳೆ, ಅಶುದ್ಧವೆಂದು ಮೂಗು ಮುರಿಯುತ್ತಿದ್ದ ಹಾಗೂ ಇಂದಿನಂತೆ ಜಾನಪದ ವಿಷಯದಲ್ಲಿ ವೈಜ್ಞಾನಿಕ ದೃಷ್ಟಿ ಮೂಡದ ಆ ಕಾಲದ ತಿದ್ದುಪಡಿಯನ್ನು ನಾವು ಅಲ್ಲಗಳೆಯಲಾಗದು. ಹೆಚ್ಚಿನೆಡೆಯಲ್ಲಿ ಸಂಗ್ರಾಹಕರು ಹಾಡಿನ ಮೂಲ ಧಾಟಿ-ಧೋರಣೆ, ಪದಗಳ ಲಯ ವಿನ್ಯಾಸಗಳಿಗೆ ಚ್ಯುತಿ ಬರದ ಹಾಗೆ, ದೇಶೀಯ ನುಡಿಗಟ್ಟು, ವಿಶಿಷ್ಟ ಶಬ್ದ ಪ್ರಯೋಗಗಳು ಕೈತಪ್ಪಿ ಹೋಗದ ಹಾಗೆ ಕಾಳಜಿ ವಹಿಸಿದ್ದಾರೆ.

ಈ ಸಂಗ್ರಹದಲ್ಲಿ ದಾಂಪತ್ಯ ಜೀವನದ ಸರಸ, ವಿರಸ, ಮುತ್ತೈದೆತನದ ಹಿರಿಮೆ ಗರಿಮೆ, ವಿಧವೆಯ ಬದುಕಿನ ಕಳಾಹೀನತೆ, ಮಕ್ಕಳಾಡುವಂಗಳದ ಸೊಗಸು, ಬಂಜೆಯ ಬದುಕಿನ ಬರಡುತನ, ಎರಡು ಹೆಂಡಿರ ಗಂಡನ ಪಡಪಾಟ, ತಾಯಿಯಿದ್ದ ತವರಿನ ಸಾರವಂತಿಕೆ, ಅತ್ತೆ ಸೊಸೆ, ಅತ್ತಿಗೆ ನಾದಿನಿಯರಲ್ಲಿ ತೊಟ್ಟಿಕ್ಕುವ ಮೈಮನಸ್ಸು, ಸಹೋದರ ಸಹೋದರಿಯರಲ್ಲಿಯ ಅಚ್ಚಳಿಯದ ಪ್ರೀತಿ ವಾತ್ಸಲ್ಯ, ಅತ್ತಿಗೆ ಮೈದುನರ ಅವ್ಯಾಜ ಪ್ರೇಮ ಮುಂತಾದವುಗಳನ್ನು ಹೊರಗೆಡಹುವ ಅನೇಕ ಹಾಡುಗಳಿವೆ. ಬದುಕಿನ ಉನ್ನತ ಮೌಲ್ಯಗಳನ್ನು ಎತ್ತಿ ಹಿಡಿಯುವ ಹಿತನುಡಿಗಳಿವೆ. ಬಾಳಿನ ಸುಮಾರ್ಗವನ್ನು ನಿರ್ದೇಶಿಸುವ ನೀತಿ ವಚನಗಳಿವೆ. ಬದುಕಿನಲ್ಲಿ ಶ್ರದ್ಧೆ ಭಕ್ತಿಯನ್ನು ಉದ್ದೀಪಿಸುವ ಗೀತಗಳಿವೆ.

ಬೇಕಲ ರಾಮನಾಯಕ

ಶಿವಾನಂದ ಬೇಕಲ್

ಜಾನಪದ ಸಂಗ್ರಾಹಕ, ಸಂಶೋಧಕರಾಗಿ ಕನ್ನಡ ಸಾರಸ್ವತ ಲೋಕವನ್ನುಸಮೃದ್ಧಗೊಳಿಸಿದ ಆದ್ಯ ಪ್ರವರ್ತಕರಲ್ಲಿ ಬೇಕಲ ರಾಮನಾಯಕರು ಒಬ್ಬರು. ತಮ್ಮ ಜನ್ಮಸ್ಥಳ ನಾಮವನ್ನು ತಮ್ಮ ಹೆಸರಿನೊಂದಿಗೆ ಜೋಡಿಸಿಕೊಂಡ ರಾಮನಾಯಕರು ಅಖಿಲ ಕರ್ನಾಟಕ ಮಟ್ಟದಲ್ಲಿ 'ಬೇಕಲ' ವನ್ನು ಪರಿಚಯಿಸಿದ ಮೊದಲಿಗರು. ರಾಮಕ್ಷತ್ರಿಯ ಮನೆತನದ ಸಿದ್ಧಯ್ಯನಾಯಕ ಹಾಗೂ ಮಂಜಮ್ಮ ದಂಪತಿಗಳ ಸುಪುತ್ರರಾಗಿ ಅಕ್ಟೋಬರ್ ೨೬, ೧೯೦೨ ರಲ್ಲಿ ಬೇಕಲದಲ್ಲಿ ಜನಿಸಿದ ರಾಮನಾಯಕರು, ಬೇಕಲ ಪರಿಸರದ ಐತಿಹಾಸಿಕ ಹಾಗೂ ಜಾನಪದ ಹಿನ್ನೆಲೆಯನ್ನು ಮೈಗೂಡಿಸಿಕೊಂಡು ಬಂದವರು. ಪ್ರಾರಂಭಿಕ ವಿದ್ಯಾಭ್ಯಾಸವನ್ನು ಮಂಗಳೂರಿನ ಗಣಪತಿ ಶಾಲೆಯಲ್ಲಿ ಮುಗಿಸಿದ ರಾಮನಾಯಕರು ೧೯೧೬ ರಲ್ಲಿ ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾದರು. ಮುಂದೆ ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಜೂನಿಯರ್ ಇಂಟರ್‌ಮೀಡಿಯಟ್ ಪ್ರಾಪ್ತವಾಯಿತು. ೧೯೨೩ ರಲ್ಲಿ ಇಂಟರ್‌ಮೀಡಿಯಟ್ ಓದಿನ ನಂತರ ರಾಮನಾಯಕರು ತಮಗೆ ಪ್ರಿಯವಾದ ಅಧ್ಯಾಪಕ ವೃತ್ತಿಯನ್ನು ಆರಿಸಿಕೊಂಡರು. ಗ್ರಂಥಪಾಲಕರಾಗಿಯೂ ತಮ್ಮ ಕಾಯಕವನ್ನು ನಿರ್ವಹಿಸಿದರು.

ಇಕ್ಕೇರಿ, ಕೆಳದಿ, ಬಿದನೂರು ಸಂಸ್ಥಾನದ ನಾಯಕರ ಆಳ್ವಿಕೆಯ ಕಾಲದಲ್ಲಿ ಅವರೊಂದಿಗೆ ದಂಡಾಳುಗಳಾಗಿ ಬೇಕಲ ಮುಂತಾದ ಪ್ರದೇಶಗಳಿಗೆ ಆಗಮಿಸಿದ ಯೋಧ ಜನಾಂಗಗಳಲ್ಲಿ 'ರಾಮ ಕ್ಷತ್ರಿಯರು' ಪ್ರಮುಖರು. ರಾಮನಾಯಕರ ಜಾನಪದ ಮತ್ತು ಚಾರಿತ್ರಿಕ ಸಂಶೋಧನಾ ವ್ಯಕ್ತಿತ್ವದ ಹಿಂದೆ, ಈ 'ರಾಮಕ್ಷತ್ರಿಯ' ಜನಾಂಗೀಯ ಪ್ರೇರಣೆಯೊಂದನ್ನು ನಾವು ಗುರುತಿಸಬಹುದಾಗಿದೆ. ಈ ಪ್ರದೇಶದ ಅಳಿದುಳಿದ ಕನ್ನಡಿಗರ ಜೀವಂತೇತಿಹಾಸವನ್ನು ಐತಿಹ್ಯಗಳ ರೂಪದಲ್ಲಿ, ಲೇಖನಗಳ ರೂಪದಲ್ಲಿ ಸಂಗ್ರಹಿಸಿದ್ದಲ್ಲದೆ, ಜಾನಪದ ಸಂಶೋಧಕರಾಗಿ, ಬಳಕೆಯ ಆಡುನುಡಿ, ನುಡಿಗಟ್ಟು, ಗ್ರಾಮ್ಯ ಭಾಷೆಯ ಉದ್ಧಾರಕರಾಗಿ ಬೇಕಲ ರಾಮನಾಯಕರು ಮಾಡಿದ ಸಾಹಿತ್ಯಿಕ ಸೇವೆ ಅಸಾಮಾನ್ಯ, ಅನುಪಮ. ಜನಪದ ಗೀತೆಗಳ ಸಂಗ್ರಹ ಮತ್ತು ಸಂಶೋಧನೆಯಲ್ಲಿ ಒಬ್ಬಂಟಿಗರಾಗಿ ಕ್ಷೇತ್ರ ಕಾರ್ಯ ನಿರ್ವಹಿಸಿ ಯಶಸ್ವಿಯಾದವರು ನಾಯಕರು.

ರಾಮನಾಯಕರ 'ರಾಮಕ್ಷತ್ರಿಯ ಕುಲೋತ್ಪತ್ತಿ' ಎಂಬ ಪುಟ್ಟಗ್ರಂಥ ಸಾಮಾಜಿಕ ಸಂಶೋಧನಾ ಕೃತಿ ಎಂಬ ನೆಲೆಯಲ್ಲಿ ಅತ್ಯಂತ ಪ್ರಶಸ್ತವಾದ ಪುಸ್ತಕ. 'ರಾಮಕ್ಷತ್ರಿಯ'

ಜನಾಂಗದವರ ಬಗೆಗೆ ವಿಶ್ಲೇಷಣಾತ್ಮಕ ವಿವರ ಒದಗಿಸುವ ಈ ಗ್ರಂಥದ ಅನುಪಸ್ಥಿತಿಯಲ್ಲಿ, ಒಂದು ಜನಾಂಗದವರ ಮೂಲ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಿಚಯ ಹಾಗೂ ಆಕರ ವಿಷಯಗಳ ಕುರಿತಂತೆ ಜಿಜ್ಞಾಸುಗಳು ಅವಜ್ಞೆಗೆ ಒಳಪಡುವ ಸಂಭವವಿತ್ತು. ಅದೇ ರೀತಿಯಲ್ಲಿ ರಾಮನಾಯಕರು ಬರೆದ ಇತರ ಐತಿಹ್ಯ ಕಥೆಗಳು ರೋಚಕ ನಿರೂಪಣೆಯಿಂದ ವಾಚಕರ ಮನಮುಟ್ಟುತ್ತವೆ. ಐತಿಹ್ಯದ ಸಣ್ಣಪುಟ್ಟ ವಿಷಯಗಳನ್ನು ಓದುಗರ ಮನದಟ್ಟು ಮಾಡುವ, ರಂಜನೀಯ ಶೈಲಿಯಲ್ಲಿ ಜಾನಪದ ವೃತ್ತಾಂತವನ್ನು ಜನಮನದ ಸರಳ ಭಾಷೆಯಲ್ಲಿ ಅರುಹುವ ಕಲೆಗಾರಿಕೆಗೆ ರಾಮನಾಯಕರು ಸಿದ್ಧಹಸ್ತರು ಎಂಬುದಕ್ಕೆ 'ಶಿವಪ್ಪನಾಯಕ ಕೋಂಟೆ ಹಿಡ್ದಾಂಗ' ಎಂಬ ಕಥೆಯೇ ಸಾಕ್ಷಿ.

ಜಾನಪದ ನುಡಿಗಟ್ಟು ಮತ್ತು ವಿಶಿಷ್ಟ ಪದಗಳ ಬಳಕೆ ರಾಮನಾಯಕರ ಪ್ರತಿಯೊಂದು ಕೃತಿಯಲ್ಲೂ ಹಾಸುಹೊಕ್ಕಾಗಿ ಬೆಸೆದುಕೊಂಡಿರುವುದು ಒಂದೆಡೆಯಾದರೆ, ಜಾನಪದ ಗೀತೆ, ಆಚರಣೆ, ಹಾದುಹಸೆಗಳ ಸಂಗ್ರಹಕಾರರಾಗಿ ಅವರು ವಿಶಿಷ್ಟ ಸ್ಥಾನ ಪಡೆಯುತ್ತಾರೆ. ಹಳಬರ ಮುಖದಿಂದ ಹೇಳಿಸಿ ಕೇಳಿಕೊಂಡು ಅಚ್ಚುಕಟ್ಟಾಗಿ ಅವುಗಳನ್ನು ಬರೆದು ಅಚ್ಚು ಹಾಕಿಸಿ ನಮ್ಮ ಮುಂದಿಟ್ಟಿರುವ ರಾಮನಾಯಕರು ಜನಪದಕ್ಕೆ ನೀಡಿರುವ ಕೊಡುಗೆ ಅನನ್ಯ, ಅಪಾರ. ಅವರ ಪ್ರಕಟಿತ ಸಂಗ್ರಹಗಳಲ್ಲಿ 'ಸುಬ್ಬಪ್ಪಹಾಡು', 'ತುಂಬೆಹಾಡು', 'ಗಿಂಡಿ ಪೂಜೆ', 'ಜುಟ್ಟಿನಲ್ಲಿ ಗಂಗೆ', 'ತುಳುವಾಲ ಬಲಿಯೇಂದ್ರ', 'ಕೌಲಿ ಹಾಡು, 'ಕದಿರುಹಬ್ಬದ ಹಾಡು','ಬೆನಕನ ಪದ್ಯ', 'ಅಕ್ಷತೆ ತಳಿಯುವ ನುಡಿಗಟ್ಟು', 'ದೇವರ ಹಾಡು' ಮುಂತಾದವು ಪ್ರಮುಖವಾದುವು. ಈ ಆಚರಣೆಗಳಲ್ಲಿ ಹೆಚ್ಚಿನವು ರಾಮಕ್ಷತ್ರಿಯ ಜನಾಂಗದಲ್ಲಿ ಇಂದಿಗೂ ಹಾಸುಹೊಕ್ಕಾಗಿ ನಡವಳಿಕೆಯಾಗಿ ಉಳಿದಿರುವುದನ್ನು ನಾವು ಕಾಣುತ್ತೇವೆ. ಹಳೆಯದೆಂದು ಹೀಗಳೆಯದೆ, ಹೊಸತಿನ ಜತೆ ಬೆಸೆದುಕೊಂಡು ಇಂದಿಗೂ 'ರಾಮಕ್ಷತ್ರಿಯ' ಜನಾಂಗ ಈ ಪದ್ಧತಿ ಆಚರಣೆಗಳನ್ನು ನಡೆಸಿಕೊಂಡು ಬಂದಿದೆ.

'ರಾಮ ಕ್ಷತ್ರಿಯ' ಜನಾಂಗದಲ್ಲಿ ಯಕ್ಷಗಾನದ ತಾಳಮದ್ದಳೆ ವಿಶಿಷ್ಟ ಕಲೆಯಾಗಿ ನಡೆದುಬಂದಿದ್ದು, ಡಾ. ಕೋಟ ಶಿವರಾಮ ಕಾರಂತರು ಒಂದೆಡೆ, ಯಕ್ಷಗಾನದ ಆದ್ಯ ಪ್ರವರ್ತಕರು 'ರಾಮ ಕ್ಷತ್ರಿಯ' ಜನಾಂಗದವರೆ ಎಂದು ಉಲ್ಲೇಖಿಸಿದ್ದುಂಟು.

ಕನ್ನಡ ನಾಡಗುಡಿಯನ್ನು ಕಾಯ್ದ ರಾಮಕ್ಷತ್ರಿಯರು ಕನ್ನಡ ನಾಡ ನುಡಿಯನ್ನೂ ಕಾಯ್ದವರು. ಕೆಳದಿ ನಾಯಕರ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ದಂಡಾಳುಗಳಾಗಿ ಬಂದ ಇವರು ಕನ್ನಡ ತಾಯಿಯ ರಕ್ಷಣೆಗಾಗಿ ಕೆಚ್ಚೆದೆಯಿಂದ ಹೋರಾಡಿದವರು. ಈ ಜನಾಂಗದವರಲ್ಲಿ ಮನೆ ಮಾತಾದ 'ಸತ್ಯ ಪರೀಕ್ಷೆ' ಎಂಬ ಕಥನ ಕಾವ್ಯ, ಬೇಕಲ ರಾಮನಾಯಕರ ಪ್ರಮುಖ ಸಂಗ್ರಹಗಳಲ್ಲಿ ಒಂದು. ಇಂದಿಗೂ ರಾಮಕ್ಷತ್ರಿಯರಲ್ಲಿ ನಡೆದು ಬರುತ್ತಿರುವ ರೀತಿ ರಿವಾಜುಗಳಲ್ಲಿ ಕದಿರುಹಬ್ಬ ಒಂದು. ಇಂಥ ಹಬ್ಬ ಹುಣ್ಣಿಮೆಗಳಲ್ಲಿ ಬಳಸಲಾಗುವ ಪದ್ಯಗಳನ್ನು ಬೇಕಲ ರಾಮನಾಯಕರು ಸಂಗ್ರಹಿಸಿ ಮಹದುಪಕಾರ ಮಾಡಿದ್ದಾರೆ.

'ರಾಮ ಕ್ಷತ್ರಿಯ'ರಲ್ಲಿ ಜನಜನಿತವಾದ ತುಂಬೆ ಹಾಡು ಅನೇಕ ಕಥನ ಕವನಗಳನ್ನು ನಿರೂಪಿಸುವ ಜಾನಪದ ಪ್ರಕಾರವಾಗಿ ಬೆಳೆದು ಬಂದಿದೆ. ಬೇಕಲ ರಾಮನಾಯಕರು ಇಂಥ ಅನೇಕ ತುಂಬೆಹಾಡುಗಳನ್ನು ಕಲೆಹಾಕಿ ಕನ್ನಡ ಜನಪದ ಸಂಪತ್ತನ್ನು ಸಮೃದ್ಧಗೊಳಿಸಿದ್ದಾರೆ.

ಭತ್ತ ಕುಟ್ಟುವ, ರಾಗಿ ಬೀಸುವ, ಅಕ್ಷತೆ ತಳೆಯುವ, ಹಬ್ಬಹರಿದಿನಗಳಲ್ಲಿ, ಮದುವೆ ಮುಂಜಿಗಳಲ್ಲಿ ಹಾಡಲಾಗುವ ಅನೇಕ ಜಾನಪದ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿರುವ ಶ್ರೇಯಸ್ಸು ಬೇಕಲ ರಾಮನಾಯಕರಿಗೆ ಸಲ್ಲುತ್ತದೆ. ತಾವು ಸಂಗ್ರಹಿಸಿದ ಪ್ರತಿಯೊಂದು ಹಾಡಿಗೂ ಸೂಕ್ತ ಹಿನ್ನೆಲೆ ವಿವರಣೆಗಳನ್ನು ನೀಡಿ, ಆಡುಭಾಷೆಯ ಅರ್ಥಗಳನ್ನು ದಾಖಲಿಸಿ, ಕನ್ನಡ ಪದಕೋಶವನ್ನು ಸಮೃದ್ಧಗೊಳಿಸಿದ ರಾಮನಾಯಕರು ಧನ್ಯರು.

ದೇವುಡು ನರಸಿಂಹ ಶಾಸ್ತ್ರಿ (ದೇವುಡು)

ಡಾ. ಚಕ್ಕೆರೆ ಶಿವಶಂಕರ್

ಮೈಸೂರು ಅರಸರ ರಾಜಪುರೋಹಿತರ ವಂಶದಲ್ಲಿ ೧೮೯೬ರ ಡಿಸೆಂಬರ್ ೨೦ ರಂದು ಜನಿಸಿದ ದೇವುಡು ನರಸಿಂಹ ಶಾಸ್ತ್ರಿಗಳ ತಂದೆ ಕೃಷ್ಣಶಾಸ್ತ್ರಿ, ತಾಯಿ ಸುಬ್ಬಮ್ಮ. ದೇವುಡು ಎಂದರೆ ತೆಲುಗಿನಲ್ಲಿ ದೇವರು ಎಂದರ್ಥ. ಎಳವೆಯಿಂದಲೂ ಬಲು ಪ್ರತಿಭಾವಂತರಾದ ದೇವುಡು ಬಾಲ್ಯ ಕಾಲದ ಹೊತ್ತಿಗೆ ಛಂದಸ್ಸು-ವ್ಯಾಕರಣಗಳನ್ನು ಕರತಲಾಮಲಕ ಮಾಡಿಕೊಂಡಿದ್ದುದಲ್ಲದೆ, ಭಾರತ, ಭಾಗವತ, ರಾಮಾಯಣ, ಬ್ರಹ್ಮಾಂಡ ಪುರಾಣಗಳನ್ನು ಚೆನ್ನಾಗಿ ಓದಿ ಅರಗಿಸಿಕೊಂಡಿದ್ದರು. ಮುಂದೆ ಉನ್ನತ ವಿದ್ಯಾಭ್ಯಾಸದ ಹೊತ್ತಿಗೆ, ಭಾರತೀಯ ತತ್ವಶಾಸ್ತ್ರಜ್ಞರೆಂದು ಹೆಸರಾದ ಡಾ:ಸರ್ವಪಳ್ಳಿ ರಾಧಾಕೃಷ್ಣನ್ ಅವರ ಗರಡಿಯಲ್ಲಿ ತರಬೇತಾದ ದೇವುಡು, ಭಾರತೀಯ ತತ್ವಶಾಸ್ತ್ರ, ವೈದಿಕ ದರ್ಶನಗಳ ಅಸಾಧಾರಣ ತಿಳುವಳಿಕೆಯೊಂದಿಗೆ ಇಂಗ್ಲಿಷ್ ಶಿಕ್ಷಣಕ್ಕೂ ತಮ್ಮನ್ನು ಒಡ್ಡಿಕೊಂಡರು. ದೇವುಡು ಅವರದು ಬಹುಮುಖ ಪ್ರತಿಭೆ. ಪತ್ರಿಕಾ ಸಂಪಾದಕರಾಗಿ, ರಂಗಭೂಮಿ, ಚಲನಚಿತ್ರ ನಟರಾಗಿ, ಸೃಜನಶೀಲ ಕಾದಂಬರಿಕಾರರಾಗಿ, ಉತ್ತಮ ಭಾಷಣಕಾರರಾಗಿ, ಸಂಸ್ಕೃತಿ ಚಿಂತಕರಾಗಿ, ದಾರ್ಶನಿಕರಾಗಿ ಬಾಳಿದ ಧೀಮಂತ ವ್ಯಕ್ತಿತ್ವ ಅವರದು.

ಮಹಾಕ್ಷತ್ರಿಯ, ಮಹಾಬ್ರಾಹ್ಮಣ, ಮಹಾದರ್ಶನ, ಮಯೂರ ಮೊದಲಾದ ಉತ್ಕೃಷ್ಟ ಕಾದಂಬರಿಗಳ ಲೇಖಕರಾದ ದೇವುಡು ಯಾವತ್ತಿಗೂ ಜಾನಪದ ಕ್ಷೇತ್ರದಲ್ಲಿ ಕೈಯಾಡಿಸಿದವರಲ್ಲ. ಆದರೆ, ಕಳೆದ ಶತಮಾನದ ಮೂರನೆಯ ದಶಕದಲ್ಲಿ ಕರ್ನಾಟಕ ಸಂಸ್ಕೃತಿಯ ಮೂಲನೆಲೆಯನ್ನು ಶೋಧಿಸುವ ಪ್ರಕ್ರಿಯೆಯನ್ನು ದೇವುಡು ಅವರಂತಹ ಜಿಜ್ಞಾಸುಗಳು ಕೈಗೊಂಡರು. ಫಲವಾಗಿ ಮೂಡಿಬಂದದ್ದು ೧೯೩೫ರಲ್ಲಿ ಪ್ರಕಟವಾದ ಅವರ 'ಕರ್ನಾಟಕ ಸಂಸ್ಕೃತಿ' ಕೃತಿ. ಆರ್ಷೇಯ ಸಂಸ್ಕೃತಿಯನ್ನೇ ಈ ನಾಡಿನ ಸಂಸ್ಕೃತಿ ಎಂದು ಬಲವಾಗಿ ಪ್ರತಿಪಾದಿಸ ಹೊರಟಿದ್ದ ಸಂದರ್ಭದಲ್ಲಿ ಪಂಡಿತಪಾಮರರನ್ನು ಒಳಗೊಂಡ ಈ ನಾಡಿನಲ್ಲಿ ಸಂಸ್ಕೃತಿಗೆ ಸಂಬಂಧಿಸಿದಂತೆ, ಪಂಡಿತ ಸಂಸ್ಕೃತಿ-ಪಾಮರ ಸಂಸ್ಕೃತಿ ಎಂದು ಭೇದ ಎಣಿಸುವುದು ಸರಿಯಲ್ಲ. ಕರ್ನಾಟಕ ಸಂಸ್ಕೃತಿಯನ್ನು ಅಖಂಡವಾಗಿ ವಿಚಾರ ಮಾಡುವುದು ಸರಿಯಾದ ಕ್ರಮ ಎಂಬುದು ದೇವುಡು ಪ್ರತಿಪಾದನೆ. ''ಈ ದೇಶದಲ್ಲಿ ಜೈಮಿನಿ, ರಾಜಶೇಖರಗಳಂಥ ಪ್ರೌಢ ಗ್ರಂಥಗಳನ್ನು ಈ ಕೊನೆಯಿಂದ ಆ

ಕೊನೆಯವರೆಗೆ ಕಂಠಪಾಠ ಮಾಡಿರುವ ನಿರಕ್ಷರಿಗಳಿದ್ದಾರೆ. ಚುಟಿಕೆ ಹೊಡೆಯುವಷ್ಟರಲ್ಲಿ ಹಾಡು-ಲಾವಣಿಗಳನ್ನು ಕಟ್ಟಬಲ್ಲ ಪಾಮರರಿದ್ದಾರೆ. ಸಾವಿರಾರು ನುಡಿಯ ಹಾಡುಗಳು ಇಪ್ಪತ್ತು ಮೂವತ್ತನ್ನು ನಿರಾಯಾಸವಾಗಿ ಚಾಚೂ ತಪ್ಪಿಲ್ಲದೆ ಇತರರ ಸಹಾಯವಿಲ್ಲದೆ ಬಾಯಲ್ಲಿ ಹೇಳುವ 'ಹೆಣ್ಣು ಹೆಂಗಸ'ರಿದ್ದಾರೆ. ಹೆಸರಾದ ಡಾಕ್ಟರ್‌ಗಳು ಕೈಬಿಟ್ಟ ವ್ಯಾಧಿಗಳನ್ನು 'ಘಟಿಕಾ ಮಂತ್ರ ಮೂಲಿಕೆ'ಗಳಿಂದ ಗುಣಪಡಿಸಬಲ್ಲ ಅಜ್ಞರಿದ್ದಾರೆ. ಇವರೆಲ್ಲರನ್ನು ಒಳಗೊಂಡಿರುವ ಜನಾಂಗದಲ್ಲಿ ಪಂಡಿತ ಸಂಸ್ಕೃತಿ, ಪಾಮರ ಸಂಸ್ಕೃತಿ, ಮೇಲಿನವರ ಸಂಸ್ಕೃತಿ, ಕೆಳಗಿನವರ ಸಂಸ್ಕೃತಿ ಎಂದು ವಿಭಾಗ ಮಾಡುವುದು ಸರಿಯಲ್ಲ'' ಎನ್ನುವ ಆರೋಗ್ಯಪೂರ್ಣ ನೆಲೆಯಲ್ಲಿ ತಮ್ಮ ಸಂಸ್ಕೃತಿ ಚಿಂತನೆ ಹರಿಯಬಿಟ್ಟಿರುವ ದೇವುಡು ಜಾನಪದದ ವ್ಯಾಪ್ತಿ ಮತ್ತು ವೈವಿಧ್ಯತೆಯ ಎಡೆಗಳಿಗೆ, ಜಾನಪದ ವಿದ್ವಾಂಸರ ಗಮನ ಸೆಳೆಯುತ್ತಾರೆ. ಈ ಹಿನ್ನಲೆಯಲ್ಲಿ ದೇವುಡು ಅವರ 'ಕರ್ನಾಟಕ ಸಂಸ್ಕೃತಿ' ಕೃತಿಗೆ ಹೆಚ್ಚಿನ ಮಹತ್ವ ಪ್ರಾಪ್ತಿಸಿದೆ.

ಜಾನಪದ ಎನ್ನುವುದನ್ನು ಸಂಸ್ಕೃತಿಯ ಅರ್ಥದಲ್ಲಿ ಬಳಸಿರುವ ದೇವುಡು ''ನಾಗರೀಕ ಜನಾಂಗದ ಅಪಂಡಿತ ಕುಲಗಳಲ್ಲಿ ಕಾಣಬರುವ ಪರಂಪರಾ ಪ್ರಾಪ್ತವಾದ ತಿಳಿವು, ಅರಿವು, ಅದೇ ಜನತೆಯ ಸಂಸ್ಕೃತಿ. ನಮ್ಮ ಜನಾಂಗದಲ್ಲಿರುವ ನಾನಾ ಕುಲಗಳು, ಆಚಾರ ವ್ಯವಹಾರಗಳು, ಹಾಡು, ಕತೆ, ಗಾದೆಗಳು, ಆಟ ಪಾಟ ಊಟ ಮೊದಲಾದುವು ವಿಶೇಷ ಪದ್ಧತಿಗಳು -ಇವುಗಳಲ್ಲಿ ಅಡಗಿ ಕುಳಿತಿರುವ ಸಂಸ್ಕೃತಿಯನ್ನು ಈಚೆಗೆ ಹಿಡಿದೆಳೆದು ಪ್ರದರ್ಶಿಸುವ ಉದ್ದೇಶದಿಂದ ಇವುಗಳನ್ನೆಲ್ಲ ವಿಮರ್ಶೆ ಮಾಡುತ್ತ, ಸಾಧ್ಯವಾದ ಮಟ್ಟಿಗೂ ಸಾಧಾರಣವಾಗಿ ವಿವೇಚಿಸುತ್ತ ಮುಂದುವರಿಯುವೆವು' ಎನ್ನುವಲ್ಲಿ ದೇವುಡು ಜಾನಪದದ ಆಳ-ಅಗಲಗಳನ್ನು ಅರಿಯಲು ನಡೆಸಿರುವ ಪ್ರಯತ್ನ ಗೋಚರಿಸುತ್ತದೆ.

ಸ್ವತಃ ಜಾನಪದ ಸಂಗ್ರಾಹಕರಲ್ಲದ ದೇವುಡು ತಮ್ಮ ಸಂಸ್ಕೃತಿ ಚಿಂತನೆಯ ಅರ್ಥಯಿಸುವಿಕೆಗೆ, ಆ ಕಾಲದ ಹೊತ್ತಿಗೆ ಪ್ರಕಟವಾಗಿದ್ದ ಅಲ್ಪಸ್ವಲ್ಪ ಜಾನಪದ ಸರಕನ್ನೇ ಬಳಸಿಕೊಂಡಿರುವ ಇಂಡಿಯನ್ ಅಂಟಿಕ್ವರಿ, ಜಯಕರ್ನಾಟಕ, ಪ್ರಬುದ್ಧ ಕರ್ನಾಟಕದಂತಹ ಪತ್ರಿಕೆಗಳಲ್ಲಿ ಪ್ರಕಟವಾದ ಜಾನಪದ ಸಂಬಂಧಿ ಲೇಖನಗಳು, ಅರ್ಚಕ ರಂಗಸ್ವಾಮಿ ಭಟ್ಟರ ಹುಟ್ಟಿದ ಹಳ್ಳಿ; ಹಳ್ಳಿಯ ಹಾಡು ಕೃತಿ, ಮಾಸ್ತಿ, ಬೆಟಗೇರಿಯವರ ಜಾನಪದೀಯ ಬರಹಗಳು, ಹಲಸಂಗಿ ಗೆಳೆಯರ ಗರತಿಯ ಹಾಡು, ಮಲ್ಲಿಗೆ ದಂಡೆ, ಜೀವನ ಸಂಗೀತ ಮುಂತಾದ ಕೃತಿಗಳನ್ನು ಗಮನಿಸಿ, ಅವುಗಳಲ್ಲಿನ ಜಾನಪದ ಸಾಮಗ್ರಿಯನ್ನು ತಮ್ಮ ವೈಚಾರಿಕತೆಯ ಒರೆಗಲ್ಲಿಗೆ ಹಚ್ಚಿದ್ದಾರೆ. ಪರಿಣಾಮವಾಗಿ ಜಾನಪದದ ಸರಿಯಾದ ಜಾಡು ಹಿಡಿದು ಅದರ ಹಾದಿಯಗುಂಟ ಸಾಗಿರುವುದು ಕಂಡು ಬರುತ್ತದೆ.

ಜಾನಪದದ ಬಗೆಗಿನ ಆಧುನಿಕ ದೃಷ್ಟಿಕೋನ ಮತ್ತು ಸೈದ್ಧಾಂತಿಕ ಅಧ್ಯಯನವು ಪ್ರಾರಂಭವಾಗಿರುವುದೇ ಇತ್ತೀಚಿನ ದಶಕಗಳಲ್ಲಿ. ಅಂತಹುದರಲ್ಲಿ ದೇವುಡು ಅವರು ೧೯೩೦ರಷ್ಟು ಹಿಂದೆಯೇ ಜಾನಪದವನ್ನು ಕಂಡಿರುವ ಮತ್ತು ಕಂಡರಿಸಿರುವ ರೀತಿ

ದೂರದರ್ಶಿತ್ವವುಳ್ಳ ಚಿಂತಕನಿಗೆ ಮಾತ್ರವೇ ಸಾಧ್ಯವಾಗುವಂಥದ್ದು. Folklore ಎಂಬ ಪದವನ್ನು ಬಳಸುವುದರ ಜತೆಗೆ, ಜಾನಪದ ಸಂಬಂಧಿ ವಿಚಾರಗಳನ್ನು ವಿಶ್ಲೇಷಿಸಿರುವ ಬಗೆ, ಜಾನಪದವನ್ನು ಸಂಸ್ಕೃತಿಯ ಅಳತೆಗೋಲಾಗಿ ನಿರ್ವಚಿಸಿರುವುದು, ಇವೆಲ್ಲವನ್ನು ಪರಿಭಾವಿಸಿದಾಗ ದೇವುಡು ಅವರಿಗೆ ಕನ್ನಡ ಜಾನಪದ ಚರಿತ್ರೆಯಲ್ಲಿ ಗಣ್ಯ ಸ್ಥಾನವಿದೆ ಎಂಬುದಂತೂ ದಿಟ.

ಎಸ್.ವಿ. ರಂಗಣ್ಣ

ಡಾ. ಚಕ್ಕೆರೆ ಶಿವಶಂಕರ್

1935ರಲ್ಲಿ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾದ 'ಹಳ್ಳಿಯ ಹಾಡುಗಳು' ಲೇಖನದ ಕರ್ತೃ ಶ್ರೀ ಎಸ್.ವಿ. ರಂಗಣ್ಣನವರು. ಕನ್ನಡ ಸಾಹಿತ್ಯದ ಮೇರು ವಿಮರ್ಶಕರಲ್ಲಿ ಒಬ್ಬರಾದ ರಂಗಣ್ಣನವರು ಜನಪದ ಬದುಕಿಗೆ ಹತ್ತಿರದ ಅನೇಕ ತ್ರಿಪದಿಗಳನ್ನು ಸಂಗ್ರಹಿಸಿ, ಅವುಗಳ ಮೂಲರೂಪ ಮತ್ತು ಧಾಟಿಗಳನ್ನು ಕಿಂಚಿತ್ತು ಬದಲಿಸದೆ, ಅವುಗಳನ್ನೆಲ್ಲ ಯಥಾವತ್ತಾಗಿ ಪ್ರಕಟಿಸಿರುವುದು ನಿಜಕ್ಕೂ ಸ್ತುತ್ಯಾರ್ಹವಾದುದು. ಅನಂತರದ ದಿನಗಳಲ್ಲಿ 'ಕೋಲ್ ಕೋಲ್ ಕೂಡಿ ಬರಲಿ' ಎಂಬ ಅತ್ಯುತ್ತಮವಾದ ಜನಪದ ಕೋಲುಪದಗಳ ಗೀತ ಸಂಗ್ರಹವನ್ನು ಕನ್ನಡ ಜಾನಪದ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿರುತ್ತಾರೆ.

ಪಿ. ಧೂಲಾ ಸಾಹೇಬ

ಡಾ|| ಸಿ.ಕೆ. ನಾವಲಗಿ

ಕರ್ನಾಟಕದ ಮೊದಲ ತಲೆಮಾರಿನ ಜನಪದ ಸಾಹಿತ್ಯ ಸಂಗ್ರಾಹಕರಲ್ಲಿ ಪಿ. ಧೂಲಾ ಸಾಹೇಬರು ಒಬ್ಬ ಮಹತ್ವದ ವ್ಯಕ್ತಿ-ವ್ಯಕ್ತಿತ್ವ. ತತ್ವ ಚಿಂತನಶೀಲರಾದ ಇವರು ವಿಜಾಪುರ ಜಿಲ್ಲೆಯ ಹಲಸಂಗಿ ಗ್ರಾಮದಲ್ಲಿ ೧೯೦೧ರಲ್ಲಿ ಜನಿಸಿದರು. ಪಟೇಲ (ಪಾಟೀಲ) ಧೂಲಾಸಾಹೇಬ ಎಂಬುದು ಇವರ ಪ್ರೀತಿಯ ಪೂರ್ಣಹೆಸರು. ಕಾಸೀಮ ಸಾಹೇಬ ಹುಸೇನಖಾನ ಧೂಲಾ ಎಂಬುದು ಇವರ ನಿಜನಾಮ. ಇವರ ಮನೆತನದವರು ಆದಿಲ್‌ಶಾಹಿಯ ಕಾಲದಿಂದ ಹಲಸಂಗಿ ಗೌಡರಾದುದರಿಂದ ಇವರನ್ನು ಪಟೇಲ/ ಪಾಟೀಲರೆಂದು ಕರೆಯುವ ರೂಢಿ.

ಧೂಲಾಸಾಹೇಬರು ಶಾಲೆಯಲ್ಲಿ ಓದಿದ್ದು ಕೇವಲ ಮೂರನೇ ಈಯತ್ತೆ. ಆದರೆ, ಮುಲ್ಕೀ ಪರೀಕ್ಷೆ ಪಾಸು ಮಾಡಿಕೊಂಡ ಇವರು ಇಂಗ್ಲೀಷ್ ಕಲಿಯಲು ಯತ್ನಿಸಿದರಾದರೂ ಬಡತನದ ಕಾರಣದಿಂದ ಪರ ಊರಿಗೆ ಹೋಗಿ ಕಲಿಯಲಾಗಲಿಲ್ಲ. ಆದರೆ ಹಲಸಂಗಿ ಗೆಳೆಯರು ಆಗಲೇ ಸುರು ಮಾಡಿದ 'ಮೊಗ್ಗು' ಎಂಬ ಕೈ ಬರೆಹ ಪತ್ರಿಕೆಯ ಲೇಖಕರಲ್ಲಿ ಇವರೂ ಒಬ್ಬರಾದರು. ಬಹಳ ಮಹತ್ವದ ಸಂಗತಿಯೆಂದರೆ - ''ಆ ಪತ್ರಿಕೆಗೆ ಇವರು 'ಲಾವಣಿ'ಗಳನ್ನು ಸಂಗ್ರಹಿಸಿ ಕಳಿಸತೊಡಗಿದರು. ಜತೆಗೆ ಕಂದಪದ್ಯಗಳನ್ನು ಬರೆದರು.'' ಹಳ್ಳಿಯಲ್ಲಿ ಜನಿಸಿದವರಾದುದರಿಂದ ಗ್ರಾಮೀಣರ 'ಲಾವಣಿ'ಗೆ ಆಕರ್ಷಿತರಾಗಿ, ಅವನ್ನೇ ಸಂಗ್ರಹಿಸಿದ್ದು ಸಹಜ. ೧೯೨೩ರಲ್ಲಿ ವಿಜಾಪುರದಲ್ಲಿ ಜರುಗಿದ ೯ನೇ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಮಧುರಚೆನ್ನರು ಬೀಸುವ ಕಲ್ಲಿನ ಹಾಡುಗಳು ಮತ್ತು ಶ್ರೀ ಪಿ.ಧೂಲಾ ಅವರು 'ಲಾವಣಿಗಳ ಲಾವಣ್ಯ' ಎಂಬ ಪ್ರಬಂಧ ಓದಿದರು. ಕನ್ನಡನಾಡಿನ ಎಲ್ಲೆಡೆಗಳಿಂದ ಸಮ್ಮೇಲನಕ್ಕೆ ಆಗಮಿಸಿದ್ದ ರಸಿಕರಲ್ಲಿ ಈ ಪ್ರಬಂಧಗಳು ಜನಪದ ಸಾಹಿತ್ಯದ ಬಗೆಗೆ ಸದಭಿರುಚಿ ಕುದುರಿಸಿ ಮುಂದಿನ ಸಂಗ್ರಹ ಮತ್ತು ವಿಮರ್ಶಾ ಕಾರ್ಯಕ್ಕೆ ನಾಂದಿ ಹಾಡಿದವು'' ಎಂಬ ಮಾತುಗಳು ಪರಿಶೀಲನಾರ್ಹವಾದುವು.

ಪಿ. ಧೂಲಾಸಾಹೇಬರ ಅತ್ಯಂತ ಮಹತ್ವದ ಜನಪದ ಕೃತಿಯೆಂದರೆ ''ಜೀವನ ಸಂಗೀತ''ವೆಂಬ ಸಂಪಾದಿತ ಕೃತಿ. ಕನ್ನಡ ಜನಪದ ಲಾವಣಿ ಸಾಹಿತ್ಯಕ್ಕೆ ಮಹತ್ವದ, ಮೌಲ್ಯಾತ್ಮಕ ಕೊಡುಗೆಯಾಗಿ ಇಂದಿಗೂ ಈ ಕೃತಿ ನಿಂತಿದೆ. ಜನಪದ ಲಾವಣಿ ಕವಿಗಳ ಕಾವ್ಯ ಪ್ರತಿಭೆಗೆ ಉತ್ತಮ ಉದಾಹರಣೆ ಪ್ರಸ್ತುತ ಸಂಕಲನ. ಹಲಸಂಗಿಯ ಖಾಜಾಸಾಹೇಬ, ಶ್ರೀ ಸಂಗೂ, ಶ್ರೀ

ಕುಬ್ಬಣ್ಣಾ, ಸಿದ್ದೂ ಶಿವಲಿಂಗ. ಶ್ರೀ ಗೋಪಾಳ ದುರದುಂಡಿ, ಶ್ರೀ ನಾನಾ-ನ್ಯಾಮಣ್ಣಾ ಈ ಮೂಲ ಜನಪದ ಕವಿಗಳ ಹಾಡುಗಳನ್ನು ಅವರ ಸಂಬಂಧಿಗಳು, ಅಂದರೆ ಪಿ. ಧೂಲಾ ಮತ್ತು ಸಿಂಪಿ ಲಿಂಗಣ್ಣನವರ ಗೆಳೆಯರು ಬರೆದುಕೊಟ್ಟಿದ್ದಾರೆ. ಅವನ್ನೆಲ್ಲ ಸಂಗ್ರಹಿಸಿ ಸಂಪಾದಿಸಿ, 'ಜೀವನ ಸಂಗೀತ' (೧೯೩೭) ಎಂಬ ಹೆಸರಿನಲ್ಲಿ ಮೊಟ್ಟಮೊದಲು ಪ್ರಕಟಿಸಿದವರು ಈ ಇಬ್ಬರು ಹಲಸಂಗಿ ಗೆಳೆಯರು. ಸಂಗ್ರಹದ ಪರಿಚಯ ಭಾಗದಲ್ಲಿ ಲಾವಣಿ ಹಾಡುಗಾರರ ಪದ್ಧತಿ, ಅವರಲ್ಲಿಯ ಪಂಗಡ ಮುಂತಾದ ವಿವರಗಳನ್ನು ಅತ್ಯಂತ ಸಂಕ್ಷಿಪ್ತವಾಗಿ ಚರ್ಚಿಸುತ್ತಾರೆ. ಲಾವಣಿಯ ಸ್ವರೂಪ ವಿವರ ಕೂಡ ಸಂಕ್ಷಿಪ್ತವಾಗಿ ಕೊಟ್ಟಿದ್ದಾರೆ. ಕೆಲವರು ಲಾವಣಿಕಾರರ ಅತ್ಯಲ್ಪ ಪರಿಚಯ ಕೂಡ ಮಾಡಿದ್ದಾರೆ. ಲಾವಣಿಗಳಲ್ಲಿಯ ಶಕ್ತಿಯನ್ನೂ ಕೂಡ ಕಾವ್ಯದ ಹಿನ್ನೆಲೆಯಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸುತ್ತಾರೆ.

ಇಲ್ಲಿ ದಾಖಲಾದ ಲಾವಣಿಯ ವಿಷಯ ಆದರ ವಿವಿಧಾಂಗಗಳನ್ನು ಕುರಿತು ವಿಶೇಷವಾಗಿ ಬರೆಯುವವರಿಗೆ ಈಗಲೂ ಮೂಲ ಆಕರವಾಗಿದೆಯೆಂದರೆ ಅತ್ಯುಕ್ತಿಯಲ್ಲ. ಸಂಗ್ರಹದ ಪರಿಚಯದಲ್ಲಿ ''ಏಳು ಮಂದಿ ಲಾವಣಿಕಾರರ ಮಿಗಿಲಾದ ಹನ್ನೆರಡು ಲಾವಣಿಗಳನ್ನು ನಾಡಿಗರ ಇದಿರಿಗೆ ಇಟ್ಟಿದ್ದೇವೆ. ಅಲ್ಲದೆ ಎರಡು ಚಿಕ್ಕ ಲಾವಣಿಗಳುಂಟು. ಅವುಗಳನ್ನು ಇಡಿಯ ಸಂಗ್ರಹದ ಮೊದಲಿಗೊಂದು, ಕೊನೆಗೊಂದು ಸೇರಿಸಿದ್ದೇವೆ'' ಎಂದಿದ್ದಾರೆ. ಹಾಗೆಯೇ ನೀತಿಸಾರ ಲಾವಣಿ, ತತ್ತ್ವಸಾರಲಾವಣಿ ಮತ್ತು ಕಥಾಸಾರ ಲಾವಣಿಗಳನ್ನು ಉಲ್ಲೇಖಿಸುತ್ತಾರೆ. ಇದರಲ್ಲಿ ಖಾಜಾಭಾಯಿಯವರ ಶೃಂಗಾರ ಲಾವಣಿಗಳೇ ಹೆಚ್ಚು. ಅವೆಲ್ಲ ಮಾರ್ಮಿಕವಾಗಿವೆ. ಕುಬ್ಬಣ್ಣನವರ ಕಥೆಗಾರಿಕೆಯ ಔಚಿತ್ಯವನ್ನು, ಸಿದ್ದು ಶಿವಲಿಂಗ ಕವಿಯ ಭಾವಗಂಗೆಯ ಗಂಭೀರಗತಿಯನ್ನು, ಗೋಪಾಳ-ದುರದುಂಡಿಯವರ ವಿಡಂಬನೆಯ ತೀಕ್ಷ್ಣ ಟೀಕೆಯನ್ನು, ನಾನಾ ಮತ್ತು ನ್ಯಾಮಣ್ಣನವರ ಹಾಡಿನ ಚಮತ್ಕಾರ, ಹಾಸ್ಯ; ಖಾಜಾಬಾಯಿಯವರ ಗಂಡು ಹೆಚ್ಚು, ಹೆಣ್ಣು ಹೆಚ್ಚೆಂಬ ವಾದವನ್ನು ಇಲ್ಲಿಯ ಲಾವಣಿಗಳಲ್ಲಿ, ಸಂಗ್ರಹಕಾರರು ಗುರುತಿಸಿದ್ದು ಅರ್ಥಪೂರ್ಣವಾಗಿದೆ. ''ವಿವಿಧ ಸ್ವರಗಳನ್ನು ಉಚಿತವಾಗಿ ಬಳಸಿಕೊಂಡರೆ ಅದು ಸಂಗೀತ; ವಿವಿಧ ರಸಗಳನ್ನು ಉಚಿತವಾಗಿ ಉಪಯೋಗಿಸಿಕೊಂಡರೆ ಅದು ಜೀವನ; ಅಂತೇ ಇದು ''ಜೀವನ ಸಂಗೀತ''ವೆಂದು ತಮ್ಮ ಸಂಗ್ರಹ ಕೃತಿಯ ಔಚಿತ್ಯವನ್ನು ತಿಳಿಯಪಡಿಸುತ್ತಾರೆ. ಪ್ರಸ್ತುತ ಸಂಗ್ರಹ ರೂಪುಗೊಂಡ ಬಗೆಯನ್ನೂ ಸಂಗ್ರಹಕಾರರು ವಿವರಿಸುತ್ತಾರೆ. ಇದಕ್ಕೆ ಇಬ್ಬರು ಸಂಗ್ರಾಹಕರಿದ್ದರೂ ಪಿ. ಧೂಲಾ ಸಾಹೇಬರು ಲಾವಣಿಗಳ ಜೊತೆಗೆ ಹೆಚ್ಚು ಸಂಬಂಧ ಇರಿಸಿಕೊಂಡವರೆಂದು ತೋರುತ್ತದೆ. ಕೆಲವು ಕಾಲ ಲಾವಣಿ ಹಾಡುಗಾರ ರಾಬ ಓಲೆಕಾರ-ರಾಮಚಂದ್ರಪ್ಪನೊಂದಿಗೆ ನಿಕಟ ಸಂಪರ್ಕ ಇರಿಸಿಕೊಂಡು ಆವನೊಂದಿಗೆ ಅಲೆದಾಡಿದ್ದಾರೆ.

ಇವರ ಸಂಬಂಧ ಅನೇಕ ಲಾವಣಿ ರಚನೆಕಾರರ, ಲಾವಣಿ ಹಾಡುಗಾರರ ಜೊತೆಗಿತ್ತು. ಲಾವಣಿಕಾರರ ಜೊತೆಯಲ್ಲಿ ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತಿದ್ದರು.

ಈ ಜನಪದ ಸಂಗ್ರಹ ಅತ್ಯುತ್ತಮವಾಗಿದ್ದೂ ಇಂದಿಗೂ ತನ್ನತನವನ್ನು ಉಳಿಸಿಕೊಂಡುದು ಗಮನೀಯ. ಶೃಂಗಾರವೇ ಇಲ್ಲಿಯ ಲಾವಣಿಗಳ ಜೀವಜೀವಾಳ. 'ಅಸಲ ಜಾತಹೆಣ್ಣು, ಸಂಪಿಗಿ

ತೆನಿಯಂಥ ಹುಡುಗ, ವತ್ಸಲಾ ಹರಣ, ಚಂದ್ರುಣಿ, ಕೃಷ್ಣಲೀಲೆ, ಗಿಡ್ಡಪೋರಿ ಈ ಹೆಸರುಗಳೇ ಅವುಗಳ ಭಾವವನ್ನು ನಿನದಿಸುತ್ತವೆ. ಶೃಂಗಾರ- ಹಾಸ್ಯಗಳೆರಡೂ ಮುಖ್ಯ ರಸವಾಗಿ ಪ್ರವಹಿಸಿವೆ. ಜಾನಪದ ನುಡಿ-ನುಡಿಗಟ್ಟು-ನಾಣ್ನುಡಿ, ಬೈಗುಳಗಳೆಲ್ಲ ಇಲ್ಲಿಯ ಲಾವಣಿಗಳಲ್ಲಿ ಲಲ್ಲೆಯಾಡಿವೆ. ಲಾವಣಿಗೆ ಶೋಭೆಯನ್ನುಂಟು ಮಾಡುವ ಕಾವ್ಯದ ವಿಲಕ್ಷಣ ಅಲಂಕಾರಗಳಿಗೂ ಇಲ್ಲಿ ಕೊರತೆಯಿಲ್ಲ. ಅಲಂಕಾರಗಳೆಲ್ಲ ಜನಪದ ಕವಿಯ ನೂತನ ಸೃಷ್ಟಿಯೇ. ದೇಶೀ ನಿಷ್ಠವಾದ ಉಪಮೆ, ರೂಪಕ ದೃಷ್ಟಾಂತಗಳಂತೆ, ಅಂತ್ಯಪ್ರಾಸವೂ ಸೇರಿ ಲಾವಣಿಯ ಭಾವ-ಭಾಷೆ-ಬೆಡಗುಗಳು ರಸೋದ್ರೇಕವನ್ನುಂಟು ಮಾಡುತ್ತವೆ. ಲಾವಣಿಕಾರನ ಪುರಾಣಪ್ರಜ್ಞೆ, ಹಿಂದಿನ ಕತೆಗಳ ಪರಿಚಯ, ಲಾವಣಿಯ ನಾಟಕೀಯ ಗುಣ, ಛಂದೋಶಿಲ್ಪ, ಸಂಗೀತಶಿಲ್ಪ, ಸಾಹಿತ್ಯ ಶಿಲ್ಪ, ಆಧ್ಯಾತ್ಮ ವಿಚಾರ ಇತ್ಯಾದಿಗಳಿಂದ 'ಜೀವನ ಸಂಗೀತ' ಅತ್ಯಂತ ಸೊಗಸಾದ ಸಂಗ್ರಹ ಎಂಬುದರಲ್ಲಿ ಎರಡಿಲ್ಲ. ಇಲ್ಲಿಯ ಎಲ್ಲ ಲಾವಣಿಗಳಲ್ಲಿಯು ಕಲ್ಪನಾಶಕ್ತಿ, ಭಾವಸಂಪತ್ತು, ಲಯ-ಪ್ರಾಸಾದಿಗಳು, ಜನಪದ ಗತಿ ಗತ್ತು, ದನಿ ಬನಿಗಳು ತುಂಬ ಆಕರ್ಷಕವಾದುವು. ಒಮ್ಮೆ ಕಿವಿಗೆ ಬಿದ್ದರೆ ಸಾಕು, ನಾಲಗೆಯ ಮೇಲೆ ನಿಂತು ಬಿಡುವ ಪರಿಣಾಮ ಈ ಲಾವಣಿಗಳಿಗಿದೆ. ವೈವಿಧ್ಯಪೂರ್ಣ ವಿಶಿಷ್ಟ ಲಾವಣಿಗಳಿವು. ಪ್ರಥಮ ದರ್ಜೆಯ ಲಾವಣಿ ಸಂಗ್ರಹ ಕೃತಿಯಿದು. ''ಕನ್ನಡ ಸಾಹಿತ್ಯದಲ್ಲಿ ಮಹಮ್ಮದೀಯ ಕವಿಗಳು ದೊರೆಯುವುದು ದುರ್ಲಭ. ಪಿ. ಧೂಲಾಸಾಹೇಬರು ನವೋದಯ ಕಾಲದ ಪ್ರಥಮ ಮಹಮ್ಮದೀಯ ಕವಿಗಳು. ಇವರ 'ವೀರಪಥಿಕ'- ಕವನ ಸಂಗ್ರಹವಾದರೆ 'ಜೀವನ ಸಂಗೀತ' ಜನಪದ ಲಾವಣಿ ಸಂಗ್ರಹ.

ಸಿಂಪಿ ಲಿಂಗಣ್ಣನವರಿಂದ ಎರಡನೇ ಮುದ್ರಣಗೊಂಡ ಪ್ರಸ್ತುತ ಪುಸ್ತಕದಲ್ಲಿ ಕೆಲವೊಂದು ಲಾವಣಿಗಳನ್ನು ಅನುಬಂಧದಲ್ಲಿ ಸೇರಿಸಲಾಗಿದೆ. ಕೊನೆಯಲ್ಲಿ ಕಠಿಣ ಶಬ್ದಾರ್ಥ ಕೂಡ ಕೊಟ್ಟಿದ್ದಾರೆ. ಈ ಅನುಬಂಧದಲ್ಲಿರುವ 'ತುಂಟ ತುಂಟರಿಗಿ ಗಂಟು ಬಿದ್ದರ', ಅಪಸ್ವರ ಗಾಯಕ, 'ಅಕಳ ಲಾವಣಿ, 'ವೀರಭದ್ರದೇವರ ಘನ್ನ' ಈ ನಾಲ್ಕು ಲಾವಣಿಗಳಲ್ಲಿಯೂ ಜೀವನ ಸಂಗೀತದ ನಾದವು ನಿನದಿಸುವುದನ್ನು ವಾಚಕರು ಗಮನಿಸಬಹುದು. ಈ ಲಾವಣಿಗಳು ಚಡಚಣ ಹಾಗು ಅದರ ನೆರೆಹಳ್ಳಿಯಲ್ಲಿ ರಚಿತವಾದಂಥವು. ಇದನ್ನು ಸಂಗ್ರಾಹಕರು ಬಹಳ ಕಷ್ಟಪಟ್ಟು ಸಂಗ್ರಹಿಸಿದ್ದಾರೆ. ಆದರೆ, 'ಗಣಪತಿ ಘನ್ನ'ವೊಂದು ಸಿಗಲೇ ಇಲ್ಲ. ಅದ ಸಿಕ್ಕಿದ್ದರೆ 'ವೀರಭದ್ರ ಘನ್ನಕ್ಕೆ ಸರಿದೊರೆಯಾದ ತೋಡಿಯ ಕಲ್ಪನೆ ಸ್ಪಷ್ಟವಾಗುತ್ತಿತ್ತು' ಎಂದು ಸಂಗ್ರಾಹಕರು ವಿಷಾದಿಸುತ್ತಾರೆ. ಇದು ಸಂಗ್ರಾಹಕರಿಗಿರುವ ಜನಪದ ಸಾಹಿತ್ಯದ ಬಗೆಗಿನ ಪ್ರೀತಿಯನ್ನು, ಕಳಕಳಿಯನ್ನು ವ್ಯಕ್ತಪಡಿಸುತ್ತದೆ.

ಧೂಲಾ ಸಾಹೇಬರು ತಾಯಿತ-ತಂತ್ರಗಳ ಗೀಳೂ ಅಂಟಿಸಿಕೊಂಡಿದ್ದರು. ಆಯುರ್ವೇದ ಔಷಧೋಪಚಾರಗಳ ಪರಿಚಯವನ್ನು ಕೆಲಮಟ್ಟಿಗೆ ಮಾಡಿಕೊಂಡಿದ್ದರೆಂದು ಡಾ| ಕಾಪಸೆ ಹೇಳುತ್ತಾರೆ. ಇದನ್ನು ನೋಡಿದರೆ. ಇವರು ನಾಟಿವೈದ್ಯರಾಗಿದ್ದರೆಂದು ತೋರುತ್ತದೆ.

ಏನೇ ಆದರೂ 'ಜೀವನ ಸಂಗೀತ'- ಜನಪದ ಕೃತಿಯ ಮೂಲಕವೇ ಪಿ. ಧೂಲಾ ಅವರ ಹೆಸರು ಇಂದಿಗೂ ಉಳಿದು ಬಂದಿದೆ. ಅತ್ಯಂತ ಸುಲಭವಾಗಿ, ಲಾವಣಿಗಳಲ್ಲಿಯ

ತತ್ತ್ವಚಿಂತನೆಯನ್ನು ಅರ್ಥೈಸಿಕೊಳ್ಳುವ, ಸರಳ ಸುಂದರ, ಲಾಲಿತ್ಯಪೂರ್ಣ ನಿರೂಪಣೆ, ಭಾವೈಕ್ಯತೆಯ ಅರಿವನ್ನುಂಟು ಮಾಡುವ ಲಾವಣಿಯ ಕಥನ ಕ್ರಮದಿಂದೊಡಗೂಡಿದ 'ಜೀವನ ಸಂಗೀತ'ವನ್ನು ಜಾನಪದ ಲೋಕಕ್ಕೆ ನೀಡಿದ ದಿ.ಪಿ. ಧೂಲಾ ಅವಿಸ್ಮರಣೀಯರು.

ಮುಸ್ಲಿಂ ಜಾನಪದ ತಜ್ಞರಲ್ಲಿ ಧೂಲಾಸಾಹೇಬರೇ ಪ್ರಥಮರು ಹಾಗೂ ಲಾವಣಿ ಸಂಗ್ರಾಹಕರಲ್ಲಿ ಮೊದಲಿಗರು. ಇದು ಇವರ ಅಗ್ಗಳಿಕೆಯ ಹೆಗ್ಗುರುತು.

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಡಾ|| ಸಿ.ಜಿ. ವೆಂಕಟಯ್ಯ

ಗೊರೂರರು ಹುಟ್ಟಿದ್ದು 'ಗ್ರಾಮ' ಕೇಂದ್ರದಲ್ಲಾದರೆ ಬೆಳೆದದ್ದು 'ಗಾಂಧಿ' ಕೇಂದ್ರದಲ್ಲಿ. ಗಾಂಧೀಜಿಯವರ ಜೀವನ ಚಿಂತನೆ ಮತ್ತು ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟವೇ ಗೊರೂರರನ್ನು ಬೆಳೆಸಿವೆ. ಅವರು ಪಾಠಶಾಲೆಯ ನಿರ್ಬಂಧದಲ್ಲಿ ಕಲಿತವರಲ್ಲ, ಪದವಿಯ ನಿರ್ಬಂಧಕ್ಕೆ ಒಳಗಾದವರಲ್ಲ; ಗಾಂಧೀಜಿಯವರ ರೀತಿಯ ಹೋರಾಟದ ಜೊತೆಗೆ ವಿದ್ಯೆಯನ್ನು; ವೃತ್ತಿಯನ್ನು ಕಲಿತವರು,. ಅವರ ವಿದ್ಯೆ ಗಾಂಧಿ ವಿದ್ಯೆ.ಅವರ ಶಿಕ್ಷಣ ಜೀವನದ ಶಿಕ್ಷಣ. ಅವರ ವೃತ್ತಿ ಜೀವನ ವೃತ್ತಿ. ಜೀವನ ವೃತ್ತಿ ಆಳುವ, ಅಧಿಕಾರ ಮಾಡುವ ವೃತ್ತಿಯಲ್ಲ. ಗೊರೂರರನ್ನು ಒಟ್ಟಾಗಿ ಚಿತ್ರಿಸಿದ, ರೂಪಿಸಿದ ಮಾರ್ಗ ಗಾಂಧೀ ಚಿಂತನೆ. ಅವರ ಸಾಹಿತ್ಯ ಕೂಡ ಒಟ್ಟಾಗಿ ಗಾಂಧಿ ಚಿಂತನೆಯ ಪುನರ್ ಸೃಷ್ಟಿ. ಗಾಂಧೀಜಿಯವರ ಸ್ವದೇಶೀಯತೆಯಲ್ಲಿ, ಗ್ರಾಮ ಸ್ವರಾಜ್ಯ ಮತ್ತು ಗ್ರಾಮ ಪುನರುಜ್ಜೀವನದಲ್ಲಿ ತಮ್ಮ ಮತ್ತು ದೇಶದ ಬದುಕನ್ನು ಕಂಡು ಚಿತ್ರಿಸಿದರು.

ಗೊರೂರರ ಸಾಹಿತ್ಯಿಕ ಚಿಂತನೆಗೆ ಹೊರಟಾಗ ಅವರ ಸಾಹಿತ್ಯದಲ್ಲಿ ಸಾಂಸ್ಕೃತಿಕ ಮುಖ ಮತ್ತು ವಿವರಗಳು ಮೇಲೆ ಬಂದು ಸಾಹಿತ್ಯ ಎರಡನೆ ಹಂತಕ್ಕೆ ಚಲಿಸುತ್ತದೆ. ಆದುದರಿಂದಲೇ ಗೊರೂರರು ಸಂಸ್ಕೃತಿ ಬದ್ಧ ಬರಹಗಾರರು. ಒಬ್ಬ ಜನಪದ ಕವಿಯ ಹಾಗೆ ಸಮಾಜ ಮತ್ತು ಜನರನ್ನು ನೇರವಾಗಿ ಉದ್ದೇಶಿಸಿಕೊಂಡು ಮತ್ತು ಹತ್ತಿರದಲ್ಲಿಟ್ಟುಕೊಂಡು ಅವರು ಬರೆಯತ್ತಾರೆ. ಗಾಂಧೀಜಿಯವರು ಜನಸಾಮಾನ್ಯರ ಜೊತೆಗೆ ಹತ್ತಿರದ ಸಹಚರ್ಯ ಇಟ್ಟುಕೊಂಡು ಜೀವಿಸಿದ್ದು, ಬರೆದದ್ದು, ಗೊರೂರರ ಚಿಂತನೆ ಮತ್ತು ಬರವಣಿಗೆಗೆ ರಾಜಮಾರ್ಗವನ್ನು ಹಾಕಿಕೊಟ್ಟಿದೆ. ಆದ ಕಾರಣ ನಾವು ಗೊರೂರರನ್ನು ಸಾಹಿತಿ ಮತ್ತು ಗಾಂಧೀಜೀವನ ಚಿಂತಕ ಎಂದು ನೋಡುವಾಗ ಅವರೊಬ್ಬ ಸಮಾಜ ವಿಜ್ಞಾನಿ ಎಂದು ಕೂಡ ನೋಡಬೇಕಾಗುತ್ತದೆ. ಅವರಲ್ಲಿ ಒಬ್ಬ Ethnograhper ಮತ್ತು Ethnologist ಇದ್ದಾನೆ. ಈತ ಬೇರಾರು ಅಲ್ಲದೆ ನಮ್ಮ ಜಾನಪದ ವಿದ್ವಾಂಸನೆ ಆಗಿದ್ದಾನೆ.

ಈ ದೃಷ್ಟಿಯಿಂದ ಗೊರೂರರನ್ನು ಒಬ್ಬ ಸಾಹಿತಿ ಎಂದು ನೋಡುವುದರ ಜೊತೆಗೆ ಒಂದು ಸಾಂಸ್ಕೃತಿಕ ಕೇಂದ್ರದಲ್ಲಿ (cultural centre) ಸಿದ್ಧಿಯಾದ ಪೂರ್ಣ ವ್ಯಕ್ತಿತ್ವ ಎಂದು ನೋಡಲಾಗಿದೆ. ಒಳವಿವರಗಳು ಇದನ್ನು ಮತ್ತೂ ಸಮರ್ಥಿಸುತ್ತಾ ಹೋಗುತ್ತವೆ. ಒಬ್ಬ ಸಾಹಿತಿಯ ಬದುಕು ಮತ್ತು ಬರಹವನ್ನು ಒಟ್ಟಾಗಿ ನೋಡುವ ನೋಟವೂ ಇದಾಗುತ್ತದೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ನಮ್ಮ ಮಧ್ಯೆ ಇದ್ದ ನಮ್ಮದೇ ಆದ ಒಂದು ಸಾಂಸ್ಕೃತಿಕ ಮಾದರಿ. ಅವರು ಗೊರೂರು ಎಂಬ ಸ್ಥಳದಲ್ಲಿ ಇದ್ದುಕೊಂಡು ರಾಮಸ್ವಾಮಿ ಮತ್ತು ಅಯ್ಯಂಗಾರರಾಗಿ ಇತರ ಸ್ಥಳೀಯ ಸಾಂಸ್ಕೃತಿಕ ಆಶಯಗಳೊಡನೆ: ವ್ಯಕ್ತಿ ಆಶಯ, ವಸ್ತು ಆಶಯ ಮತ್ತು ಸಂದರ್ಭಾಶಯಗಳ ಒಡನಾಟ ಮಾಡಿ ಸೃಷ್ಟಿಯಾಗಿದ್ದಾರೆ. ಆದ್ದರಿಂದಲೇ ಅವರು ಬಹುತೇಕವಾಗಿ ಗೊರೂರರು ಎಂದೇ ಕರೆಯಲ್ಪಡುತ್ತಾರೆ. ಅವರು ಗೊರೂರಿನೊಡನೆ ಹೇಗೆ ಒಡನಾಟ (interact) ಮಾಡುತ್ತಾರೆ ಎಂಬುದನ್ನು ಗೊರೂರರು ಮತ್ತು ಅವರ ಮಾನವೀಯ ಸಂಬಂಧಗಳನ್ನು ತಿಳಿದರೆ ವ್ಯಕ್ತವಾಗುತ್ತದೆ.

ಸಾಂಪ್ರದಾಯಿಕ ಬದುಕು ಮತ್ತು ಜಾತಿಯ ದೃಷ್ಟಿಯಿಂದ ಈ ವೈರುಧ್ಯಗಳು ಸೃಷ್ಟಿಯಾದುವಲ್ಲ; ಬಿಡುಗಡೆಯಾಗಿ ಸೃಷ್ಟಿಯಾದುವು. ಗೊರೂರು ರಾಮಸ್ವಾಮಿ ಅಯ್ಯಂಗಾರರ ಮುಕ್ತ ಮನಸ್ಸು ಮತ್ತು ತೆರೆದ ಹೃದಯ ಅರ್ಥವಾಗುವುದು ಇಲ್ಲಿ. ಅವರು ಅಯ್ಯಂಗಾರ್ ಸಾಂಪ್ರದಾಯಿಕ ಬಟ್ಟೆ ತೊಟ್ಟುಕೊಂಡೆ ಇಷ್ಟೆಲ್ಲ ಹೇಳಿದರು, ಎಂಬ ಆಪಾದನೆಯನ್ನು ಮುಂದಿಡಬಹುದು. ಅವರ ಮಾತಿಗೆ ಅವರು ಗುರುತಿಸಿಕೊಂಡ ಜಾತಿ ಕಠಿಣ ಆಚರಣೆ ಆಗಿರಲಿಲ್ಲ. ಒಂದು ಗುರುತು, ಅನನ್ಯತೆ (identity)ಯಾಗಿತ್ತು. ಈ ಕಾರಣವಾಗಿಯೆ ಅವರು ತಮ್ಮೊಳಗೆ ಬಿಡುಗಡೆ ಪಡೆಯುತ್ತಾ ಹಳ್ಳಿಯನ್ನು, ಭಾರತವನ್ನು ಬಿಡುಗಡೆ ಮಾಡಹೊರಟರು.

ಗೊರೂರರಿಗೆ ಒಂದು ನಿರ್ದಿಷ್ಟ ಕೇಂದ್ರದಲ್ಲಿ ನಿಂತು ಅದನ್ನು ಸಮರ್ಥಿಸಿಕೊಂಡು ಮಾತನಾಡುವ ಅವಶ್ಯಕತೆ ಇತ್ತು. ಅದು ಆ ಸಂದರ್ಭದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯೂ ಆಗಿತ್ತು. ಭಾರತದ ನಾಯಕರೆಲ್ಲ ಭಾರತದ ಕೇಂದ್ರಬಿಂದುವಿನಲ್ಲಿ ನಿಂತು, ಅದರ ಸಮರ್ಥನೆ ಮತ್ತು ಬಿಡುಗಡೆಗಾಗಿ ಪ್ರಯತ್ನಿಸುತ್ತಿದ್ದು, ಆ ಮೂಲಕ ತಮ್ಮನ್ನೂ ದೇಶವನ್ನೂ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಕಾಲದಲ್ಲಿ ಗೊರೂರರು ಕೂಡ ಹಳ್ಳಿಯ ದತ್ತಾಂಶದಲ್ಲಿ ನಿಂತು ಮಾತನಾಡುವುದು ಅನಿವಾರ್ಯವೆ ಆಗಿತ್ತು. ಆ ಕಾರಣಕ್ಕಾಗಿಯೇ ರಾಮಸ್ವಾಮಿ ಅಯ್ಯಂಗಾರರು ನಿರ್ದಿಷ್ಟವಾಗಿಯೆ ಗೊರೂರರು ಆಗಬೇಕಾಯಿತು. ಬಹುಶಃ ಈ ಕೇಂದ್ರ ಇಲ್ಲದಿರುತ್ತಿದ್ದರೆ ಅವರ ಬದುಕಿಗೆ, ಬರವಣಿಗೆಗೆ ಒಂದು ನೆಲೆ-ಬೆಲೆ ಸಿಗುತ್ತಿರಲಿಲ್ಲವೇನೋ ಎನಿಸುತ್ತದೆ. ಆದ್ದರಿಂದ ಗೊರೂರರು ತಮ್ಮನ್ನು ಕಳೆದುಕೊಳ್ಳದೆ ಬೇರೆಯವರು ಕಳೆದುಹೋಗದ ಹಾಗೆ ನೋಡಿಕೊಳ್ಳುವ ಕಾರಣಕ್ಕಾಗಿ ರಾಷ್ಟ್ರವಾದಿ, ಗಾಂಧಿವಾದಿ ಹಾಗೂ ಗ್ರಾಮವಾದಿ ಆದರು.

ಗೊರೂರರ ಕೃತಿಗಳು ಒಂದು ಕಾಲದ ಜೀವನ ವಿಧಾನ ಹಾಗೂ ಅಲ್ಲಿಯ ಪರಿಸರವನ್ನು ಕಟ್ಟಿಕೊಡುವ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ದಾಖಲೆಗಳು. ಜಗತ್ತಿನ ಸಂಸ್ಕೃತಿಯ ಒಂದು ಉತ್ತಮ ಭಾಗ ಹೇಮಾವತಿ ನದಿ ತೀರದ ಗೊರೂರಿನಲ್ಲಿ ದಾಖಲುಗೊಂಡಿದೆ.

ಜಾನಪದ ಕೃತಿಗಳು

ಜಾನಪದವೆಂದರೆ ಜನಪದ ಸಾಹಿತ್ಯ, ಹಾಡು, ಲಾವಣಿಗಳು, ಕಥೆಗಳು ಎಂದಿಷ್ಟೇ ಎಂಬ ಭಾವನೆ ಒಂದು ಕಾಲದಲ್ಲಿತ್ತು. ಆದರೆ ಜನಪದ ಸಾಹಿತ್ಯದ ಆಚೆಗೂ ಜನಜೀವನದ

ರೀತಿನೀತಿಗಳೆಲ್ಲವೂ ಜಾನಪದವೆಂಬ ಅರಿವನ್ನುಂಟು ಮಾಡಿಕೊಟ್ಟವರು ಗೊರೂರರು. ಹೇಮಾವತಿ ತೀರದ ಜನಪದ ಜೀವನದ ವಿವಿಧ ವಿಧಾನಗಳನ್ನು ಸ್ವಾನುಭವದಿಂದಲೂ ಸಹೃದಯತೆಯಿಂದಲೂ ಚಿತ್ರಿಸುವುದರ ಮೂಲಕ, ಆ ಬದುಕಿನ ಪರಿಚಯ ಮಾಡಿಕೊಟ್ಟಿದ್ದಾರೆ. ಗ್ರಾಮೀಣ ಬದುಕು ಮತ್ತು ಗ್ರಾಮೀಣ ಜನರೇ ಗೊರೂರರ ಬರವಣಿಗೆಗೆ ಸ್ಫೂರ್ತಿ ಮತ್ತು ಪ್ರೇರಣೆ. ಗ್ರಾಮೀಣ ಬದುಕನ್ನು ಗೊರೂರರ ಹಾಗೆ ಅರ್ಥ ಮಾಡಿಕೊಂಡವರು, ಅರ್ಥ ಮಾಡಿಕೊಂಡ ಭಾವನೆಗಳಿಗೆ ರೂಪುಕೊಟ್ಟವರು ತೀರ ಕಡಿಮೆ.

ಸಂಪೂರ್ಣ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಗೊರೂರರು ಪ್ರಕಟಿಸಿರುವ ಕೃತಿಗಳು ಮೂರು: 1. ಹಳ್ಳಿಯ ಹಾಡುಗಳು 2. ಹಳ್ಳಿ ಬಾಳು 3. ಜನಪದ ಜೀವನ ಮತ್ತುದರ್ಶನ. ಅವರ ಜಾನಪದ ಕೃತಿಗಳು ವಿವಿಧ ಸಾಂಸ್ಕೃತಿಕ ಮಾದರಿಗಳನ್ನು ಒಂದುಗೂಡಿಸುವುದರಲ್ಲಿ, ರಾಷ್ಟ್ರಪ್ರಜ್ಞೆಯನ್ನು ಕುದುರಿಸುವುದರಲ್ಲಿ; ಜನಾಂಗ, ಜನಾಂಗಗಳ ಪರಸ್ಪರ ತಿಳುವಳಿಕೆಗಳನ್ನು ಹೆಚ್ಚಿಸುವುದರಲ್ಲಿ ಪ್ರತ್ಯಕ್ಷವಾಗಿ ಭಾಗಿಯಾಗುತ್ತವೆ. ಅವರ ಜಾನಪದ ಕೃತಿಗಳು ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗಿರುವ ಗೌರವಯುತವಾದ ಸ್ಥಾನವನ್ನು ಪರಿಚಯ ಮಾಡಿಕೊಡುತ್ತವೆ. ಹೆಣ್ಣು, ತಾಯಿ, ಅಕ್ಕ, ತಂಗಿ, ಅತ್ತಿಗೆ, ನಾದಿನಿ,ಹೆಂಡತಿ, ಸೂಳೆ, ವಿಧವೆ, ಬಂಜೆ ಹೀಗೆ ಬದುಕಿನ ವಿವಿಧ ಸ್ತರಗಳಲ್ಲಿ ತನ್ನ ಕಾರ್ಯನಿರ್ವಹಿಸಬೇಕಾಗುತ್ತದೆ ಎಂಬುದನ್ನು ಗೊರೂರರು ಉದಾಹರಣೆ ಸಹಿತ ಪರಿಚಯಿಸಿದ್ದಾರೆ. ಆದರೆ ಜಾನಪದವನ್ನು, ಜನಪದರ ಬದುಕನ್ನು, ಕೇವಲ ಭಾವುಕ ನೆಲೆಯಲ್ಲಿ ಮಮಕಾರದಲ್ಲಿ ವಿಶ್ಲೇಷಣೆ ಮಾಡುವವರು ಹೇಗೆ ಎಡವಬಲ್ಲರೆಂಬುದು ತುಂಬಾ ಕುತೂಹಲಕಾರಿಯಾದುದು.

ಗೊರೂರರಿಗೆ ಜನಪದರ ಬಗ್ಗೆ ಜನಪದ ಸಾಹಿತ್ಯದ ಬಗ್ಗೆ ಅಪಾರ ಅಭಿಮಾನ. ಆದ್ದರಿಂದಲೇ ಅವರು ತಮ್ಮ ಸುತ್ತಿನ ಗ್ರಾಮೀಣ ಬದುಕನ್ನು ಪ್ರೇಮಾದರಗಳಿಂದ ಸ್ಫೂರ್ತಿ, ಸಹಾನುಭೂತಿಗಳಿಂದ ರಮ್ಯವಾಗಿ, ರಸವತ್ತಾಗಿ ಚಿತ್ರಿಸಿಕೊಟ್ಟಿದ್ದಾರೆ. ದುಡಿಯುವ ರೈತನ ಬಗ್ಗೆ ಅಪಾರ ವಿಶ್ವಾಸ. ಆದ್ದರಿಂದಲೇ ತಮ್ಮ 'ಹಳ್ಳಿಯ ಹಾಡುಗಳು' ಕೃತಿಯಲ್ಲಿ ಹೀಗೆ ಹೇಳಿದ್ದಾರೆ: ''ನಮ್ಮ ದೇಶದ ಬೆನ್ನುಮೂಳೆಯಂತಿರುವ, ನಮ್ಮ ಕಟ್ಟಡದ ಅಡಿಗಲ್ಲಿನಂತೆ ಇರುವ ನಮ್ಮ ರೈತ ಸ್ವಾಭಾವಿಕವಾಗಿ ಸುಸಂಸ್ಕೃತನಾದವನು. ಅವನ ಹೃದಯವು ವಿಶಾಲವೂ ಕೋಮಲವೂ ಆದುದು. ಅವನಿಗೆ ಸ್ವಲ್ಪ ಸಹಾನುಭೂತಿ, ಸ್ವಲ್ಪ ಸ್ನೇಹ, ಸ್ವಲ್ಪ ಸಮಾನತೆ ಇವು ಸಿಕ್ಕಿದರೆ ಸಾಕು, ಅವನು ಇತರ ದೇಶದ ರೈತರಿಗೆ ಸಮಾನನಾಗುವುದು ಸರಿಯೆ. ಎಲ್ಲವನ್ನು ಮೆಟ್ಟಿ ನಿಲ್ಲುವ ಶಕ್ತಿ ಅವನಿಗೆ ಬರುವುದು'' ಎಂದಿದ್ದಾರೆ.

ದುಡಿಮೆಗೂ ಜನಪದ ಸಾಹಿತ್ಯಕ್ಕೂ ಇರುವ ಗಾಢ ಸಂಬಂಧದ ಹಿನ್ನೆಲೆಯಲ್ಲಿ ಪರಿಶೀಲಿಸುವುದಾದರೆ, ಗೊರೂರರ ಜಾನಪದ ಕೃತಿಗಳಲ್ಲಿ ಗ್ರಾಮೀಣ ಜನರ ಸಾಧಾರಣ ನೋವು, ನಲಿವುಗಳನ್ನು ಸ್ನೇಹ-ಸಲಿಗೆಗಳನ್ನು, ಭಕ್ತಿ -ಶಕ್ತಿಗಳನ್ನುಕುರಿತು ಹೇಳಲಾಗಿದೆಯೆ ಹೊರತು,

ತಮ್ಮ ಮೈಮುರಿಯುವ ದುಡಿಮೆಯ ಕಷ್ಟದದುರು, ಏನನ್ನೂ ದುಡಿಯದೆ ಬದುಕುವ ಆಳು ವರ್ಗದ ಸುಖಗಳ ವ್ಯತ್ಯಾಸದ ಬಗ್ಗೆ ಚಿಂತನೆ ಇಲ್ಲದಿರುವುದು ಗಮನಾರ್ಹ ಸಂಗತಿಯಾಗಿದೆ.

ಗೊರೂರರ ಕೃತಿಗಳಲ್ಲಿ ಜನಪದರ ಬದುಕಿನ ರೀತಿಯ ಬಗ್ಗೆ ವ್ಯಕ್ತವಾಗಿರುವ ಪ್ರತಿಭಟನೆಯು ಗೌಣವಾಗುತ್ತದೆ. ಆದರೆ ಈ ಸಂಗತಿಗೆ ಹಿನ್ನೆಲೆಯಾಗಿ ಸಾಮಾಜಿಕ ವಾತಾವರಣವನ್ನು ಪರಿಶೀಲಿಸುವುದು ಹೆಚ್ಚು ಸೂಕ್ತ ಎನ್ನಿಸುತ್ತದೆ. ''ಜನಪದರು ಆಲೋಚನಾ ಕ್ರಮವನ್ನು ಒದಗಿಸುವ ವಿದ್ಯೆಯಿಂದ ವಂಚಿತರಾಗಿದ್ದು ತಮ್ಮ ಕುಂದು ಕೊರತೆಗಳನ್ನು ಒಟ್ಟಿಗೆ ಸೇರಿ ಚರ್ಚಿಸಿ ಆ ಮೂಲಕ ತೀರ್ಮಾನಕ್ಕೆ ಬರಲು ಸಮಯವಿಲ್ಲದ ವಾತಾವರಣದಲ್ಲಿ ಈ ಸಾಹಿತ್ಯ ಸೃಷ್ಟಿ ಮಾಡಿದ್ದರಿಂದ ಅನ್ಯಾಯದ ವಿರುದ್ಧ ಪ್ರತಿಭಟಿಸಿ, ಶೋಷಿತ ಸಮುದಾಯಕ್ಕೆ ನ್ಯಾಯ ದೊರಕಿಸಲಾಗಲಿಲ್ಲ. ಆದರೆ ಗೊರೂರರು ಈ ದಿಕ್ಕಿನಲ್ಲಿಯೂ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ''- ಎಂಬುದಕ್ಕೆ ಅವರ ಕೃತಿಗಳಲ್ಲಿ ನಿದರ್ಶನ ದೊರೆಯುತ್ತದೆ. ಇವುಗಳಲ್ಲಿ ಮುಖ್ಯವಾಗಿ ಕುರಿತಿಮ್ಮ, ಕಾಸೆಗಿಡ್ನ, ಗಂಡುಬೀರ ಹೊಸಬಿ, ಗುಳ್ಳ, ಮಾಧು ಲಕ್ಷ್ಮಿ, ತಿರುಮಲಮ್ಮ, ಊರ್ವಶಿಯ ಸೀತಾಲಕ್ಷ್ಮಿ, ಹೇಮಾವತಿಯ ದಲಿತರ ಚೆನ್ನಿ ಇವರೆಲ್ಲರೂ ಬಂಡವಾಳಶಾಹಿ ವಿರುದ್ಧ, ಆಳುವ ವರ್ಗದ ವಿರುದ್ಧ, ಅನಿಷ್ಟ ಸಂಪ್ರದಾಯಗಳ ವಿರುದ್ಧ ಪುರುಷ ಪ್ರಧಾನ ಸಮಾಜದ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಈ ದೃಷ್ಟಿಯಲ್ಲಿ ಗೊರೂರರು ಜನಪದ ಜೀವನಕ್ಕೆ ಹೊಸ ಆಯಾಮವನ್ನು ತೋರಿಸಿದರು. ಜಾತಿ-ಧರ್ಮ-ವೃತ್ತಿ, ಸಂಪ್ರದಾಯಗಳು, ಮೂಢನಂಬಿಕೆಗಳು, ಬೆಳೆಯುತ್ತಿರುವ ಜನಪದ ಸಮಾಜಕ್ಕೆ ಅಡ್ಡಗಾಲಾಗುವುದನ್ನು ಗೊರೂರರು ಗುರುತಿಸಿದ್ದಾರೆ ಹಾಗೂ ಅವುಗಳ ಸುಧಾರಣೆಗಾಗಿ ಹಂಬಲಿಸಿದ್ದಾರೆ.

ಸ್ವಾತಂತ್ರ್ಯ ಪೂರ್ವದ ವೇಳೆಗೇ ''ಆಧುನಿಕ ಜಾನಪದ ವಿಜ್ಞಾನ''ಯಲ್ಲಿ ಕಂಡುಬರುವ ಹಲವು ಸಂಗತಿಗಳು ಗೊರೂರರಲ್ಲಿ ಕಂಡುಬಂದಿರುವುದು ಗಮನಾರ್ಹ ಅಂಶವಾಗಿದೆ. ಹಳ್ಳಿಯ ಹಾಡುಗಳನ್ನು ಸಂಗ್ರಹಿಸುವ ಕಾಲದಲ್ಲಿ ಅವರು ಸ್ಪಷ್ಟಪಡಿಸಿದ ಅಂಶಗಳೆಂದರೆ, ಸಂಗ್ರಹಿಸಿದ ಪ್ರದೇಶ, ಹಾಡಿರುವವರು ಪುರುಷರೋ, ಸ್ತ್ರೀಯರೋ, ಗಾಯಕರೋ, ಹಿರಿಯ ತಲೆಮಾರಿನವರೋ ಎಂಬೆಲ್ಲ ಅಂಶಗಳನ್ನು ಪ್ರಸ್ತಾಪಿಸಿರುವುದು ಅವರ ಶಾಸ್ತ್ರೀಯ ದೃಷ್ಟಿಗೆ ಉತ್ತಮ ನಿದರ್ಶನವಾಗಿದೆ. ಕ್ಷೇತ್ರ ಕಾರ್ಯಕರ್ತನಿಗೆ ಇರಬೇಕಾದ ಮೂಲಭೂತ ಗುಣಗಳನ್ನು ಕುರಿತು ಗೊರೂರರು ಹೀಗೆ ಹೇಳಿದ್ದಾರೆ:

''ಹಳ್ಳಿಯ ಹಾಡುಗಳನ್ನು ಸಂಗ್ರಹಿಸಲು ಹೊರಡುವವರಿಗೆ ಸ್ಥಳ ಪುರಾಣಗಳೂ ಕಟ್ಟು ಕಥೆಗಳೂ ರೈತರಲ್ಲಿ ಬಳಕೆಯಲ್ಲಿರುವ ಎಲ್ಲಾ ಮಾತುಗಳೂ ಚೆನ್ನಾಗಿ ಗೊತ್ತಿರಬೇಕು. ಸಂಗ್ರಹಿತ ಸಾಹಿತ್ಯದ ಬಗ್ಗೆ ಹೇಳುತ್ತಾ: ''ರೈತರ ಬಾಯಿಂದ ಪದಗಳನ್ನು ಕೇಳದಿದ್ದರೆ ಹಾಡುಗಳ ಸರಿಯಾದ ರೂಪವು ತಿಳಿಯಲು ತೊಡಕಾಗುತ್ತದೆ. ಈ ಕಾರಣದಿಂದ ನಮಗೆ ಅರ್ಥವಾಗಲಿಲ್ಲವೆಂದು

ನಾವು ಹಾಡುಗಳನ್ನು, ಈ ಸಾಹಿತ್ಯ ತಿದ್ದುವುದೂ ಕೂಡ ನಮಗೆ ಅಪಾಯಕರವಾದುದು. ಆದ್ದರಿಂದ ನಾವು ಅರ್ಥವಾಗಲಿ ಆಗದಿರಲಿ ಹಾಡುಗಳನ್ನು ಅವು ದೊರೆತಂತೆಯೇ ಪ್ರಕಟಿಸಿದ್ದೇವೆ'' ಎನ್ನುತ್ತಾರೆ.

ಗೊರೂರರು ಆಡಿರುವ ಈ ಮಾತುಗಳು, ಎಲ್ಲ ಕಾಲದ, ಎಲ್ಲ ದೇಶದ ಜಾನಪದ ಸಂಗ್ರಾಹಕರಿಗೂ ಅನ್ವಯಿಸುವಂಥದ್ದು. ಅಲ್ಲದೆ ಹಳ್ಳಿ ಹಾಡುಗಳು ಸಂಶೋಧಕನ ದೃಷ್ಟಿಯಿಂದ ಎಷ್ಟು ಗಣ್ಯವಾದುದು (authentic) ಎಂಬುದು ಮನವರಿಕೆಯಾಗುತ್ತದೆ.

ಒಟ್ಟಿನಲ್ಲಿ ಗೊರೂರರ ಜಾನಪದ ಕೃತಿಗಳು ಹಳ್ಳಿಯ ಬದುಕಿನ ವಾಸ್ತವ ಚಿತ್ರಣಗಳನ್ನು ಕೊಡುವುದರ ಜೊತೆಗೆ ಆ ಬದುಕನ್ನು ಪೂರ್ಣವಾಗಿ ಪರಿಚಯಿಸುತ್ತವೆ. ಇಂದಿನ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಸ್ಥಿತ್ಯಂತರಗಳ ಜೊತೆ ಜೊತೆಯಲ್ಲಿಯೆ ಅವನ್ನು ಮೆಟ್ಟಿ ನಿಲ್ಲುವ ಗ್ರಾಮೀಣ ಜನರ ಉದಾರತನ, ವಿಶಾಲ ಮನೋಭಾವವನ್ನು ತೆರೆದು ತೋರಿಸಿದ್ದಾರೆ. ಗೊರೂರಿನ ಹಬ್ಬ, ಹರಿದಿನಗಳು, ರಥೋತ್ಸವ, ತೆಪ್ಪೋತ್ಸವ, ಸಮೇರಾಯ, ಸೀತೆದಂಡು, ಹರಿಕಥೆ, ಬಯಲಾಟ, ಸೂತ್ರದ ಗೊಂಬೆ, ತೊಗಲು ಗೊಂಬೆಯಾಟ ಮುಂತಾದವುಗಳ ಮೂಲಕ ಗ್ರಾಮ ಸಂಸ್ಕೃತಿಯನ್ನು ಕಟ್ಟಿಕೊಡುವುದರಲ್ಲಿ ಗೊರೂರರಿಗೆ ಹೆಚ್ಚಿನ ಆಸಕ್ತಿ ಇದೆ. ಗ್ರಾಮೀಣ ಜನರ ದೈವಭಕ್ತಿ, ಸಾಹಿತ್ಯ, ಸಂಸಾರಪ್ರೇಮ, ನಿಸ್ವಾರ್ಥ ದುಡಿಮೆಗಳನ್ನು ಪರಿಚಯಿಸುವ ಮೂಲಕ ಸಾಂಸ್ಕೃತಿಕ ಪರಂಪರೆಗೆ ಚಾಲನೆ ಇತ್ತಿದ್ದಾರೆ. ಹೀಗೆ ಜನಪದ ಜೀವನ ಹಾಗೂ ಜನಪದ ಸಾಹಿತ್ಯ ಇವೆರಡರ ಪರಸ್ಪರ ಪೂರಕ ಸಂಬಂಧವನ್ನು ಗೊರೂರರ ಜಾನಪದ ಕೃತಿಗಳಲ್ಲಿ ಕಾಣಬಹುದು.

ಜನಪದ ಸಾಹಿತ್ಯ ಸಂಬಂಧಿಯಾದ ಕೃತಿಗಳ ಸಂಖ್ಯೆಯಿಂದ ಗೊರೂರರ ಜಾನಪದ ಸಾಧನೆ ಮತ್ತು ಸಿದ್ಧಿಯನ್ನು ತಿಳಿಯಲಾಗುವುದಿಲ್ಲ. ಅವು ಏನಿದ್ದರೂ ಒಂದು ಕಾಲಘಟ್ಟದ, ಒಂದು ಮಾದರಿಯ ಸಾಮಗ್ರಿಯನ್ನು ಕೆಲವು ಜನಪದ ಸಂಪ್ರದಾಯದ ವಿವರಗಳನ್ನು ಒಳಗೊಂಡವು. ಗೊರೂರರ ಜಾನಪದ ಸಂಪತ್ತು ಇರುವುದು ಅವರು ಕಂಡುಕೊಂಡಿರುವ ಮತ್ತು ಕಂಡರಿಸಿರುವ ಜೀವನ ವಿಧಾನದಲ್ಲಿ. 'ಬೈಲಹಳ್ಳಿ ಸರ್ವೆ' ಎಂಬ ಅವರ ಕೃತಿಯಷ್ಟೆ ಸಾಕು; ಜಾನಪದ ಅವರ ಕೃತಿಯ ಮೂಲದ್ರವ್ಯವಾಗಿದೆ ಎಂಬುದನ್ನು ಸ್ಪಷ್ಟಪಡಿಸಲು. ಅವರ ಕತೆ, ಕಾದಂಬರಿ, ಪ್ರಬಂಧ ಹಾಗೂ ಅನುವಾದಗಳು- ಈ ಎಲ್ಲ ಕೃತಿಗಳ ಹಿಂದೆ ಒಂದು ಜನಪದ ಮನಸ್ಸು ಕೆಲಸ ಮಾಡಿದೆ. ಇದು ಎರಡು ರೀತಿಯಿಂದ ಸಿದ್ಧಿಸಿದ್ದು;

(1) ಭಾರತೀಯ ಸಂಪ್ರದಾಯಬದ್ಧ ಸಮಾಜದ ಜೀವನ ಪರಂಪರೆಯಿಂದ ಅವರಿಗೆ ಜನದತ್ತವಾಗಿ ಬಂದಿದೆ.

(2) ನಮ್ಮ ಜೀವನ ವಿಧಾನವನ್ನು ಅನ್ಯ ಸಂಸ್ಕೃತಿಗಳ ಅದರಲ್ಲೂ ಪಾಶ್ಚಾತ್ಯ ಸಂಸ್ಕೃತಿಯ ಜೊತೆಗೆ ಹೋಲಿಸಿ ನೋಡುವುದರಿಂದ ಅವರಿಗೆ ಜಾನಪದ ಜ್ಞಾನದ ಆಳ, ಅಗಲ ಮತ್ತು ಅದರ ಅನಿವಾರ್ಯತೆ ಅರ್ಥವಾಗಿದೆ.

ಕಳೆದು ಹೋಗುತ್ತಿರುವ ಸಾಮೂಹಿಕ ಜವಾಬ್ದಾರಿ, ಅವರನ್ನು ಮತ್ತೂ ದಿಕ್ಕುಗೆಡಿಸಿದೆ. ಅದು ನಿಜವಾದ ಒಬ್ಬ ಜಾನಪದ ಚಿಂತಕನ ಕಳಕಳಿಯೆ ಆಗಿದೆ. ಜನಪದದ ನಂತರ, ವ್ಯಕ್ತಿ; ಮನೆಗಿಂತ ದೇಶ ಮುಖ್ಯ. ದೇಶವೆಂದರೆ ಎಲ್ಲರೂ ಅದನ್ನು ಹಂಚಿಕೊಳ್ಳುವುದಲ್ಲ, ಅದಕ್ಕಾಗಿ ಎಲ್ಲರೂ ದುಡಿಯುವುದು ಎಂದು ಹೇಳುತ್ತಾರೆ. ಜನ-ಜಾನಪದ ಉಳಿದರೆ ದೇಶ ಉಳಿಯುತ್ತದೆ. ದೇಶ ಉಳಿದರೆ ಜನ ಉಳಿಯುತ್ತಾರೆ ಎಂಬ ತತ್ವವನ್ನು ಅವರು ನಮ್ಮ ಗಮನಕ್ಕೆ ತರುತ್ತಾರೆ. ಒಂದಾಗುವುದೇ ಜನಪದದ ಗುರಿ. ಒಡೆದು ಹೋಗುವುದೇ ವ್ಯಕ್ತಿ ಅಥವಾ ನವನಾಗರೀಕತೆಯ ಗುಣ ಎಂಬುದನ್ನು ಅವರು ತಿಳಿಸಿ ಹೇಳುತ್ತಾರೆ.

ಒಂದು ಸಂಸ್ಕೃತಿಯ ಯಜಮಾನ ಬದುಕನ್ನು ಬದುಕಿದ ಅವರಿಗೆ ಅದೇ ಗಂಭೀರ ಯಜಮಾನಿಕೆಯಿಂದ ಸಮಕಾಲೀನ ಪರಿಸ್ಥಿತಿಗೂ, ನಮ್ಮದೇ ಆ ಸಂಸ್ಕೃತಿ ಮತ್ತು ಜೀವನ ವಿಧಾನವನ್ನು ಬಳಸಿಕೊಳ್ಳಬೇಕೆಂಬ ಸುಧಾಕರನ ಕಳಕಳಿ ಅವರಲ್ಲಿ ಮೂಡುತ್ತದೆ. ಅವರು ಪಶ್ಚಿಮದ ಬದುಕನ್ನು ಭ್ರಮೆ ಎಂದು ಕರೆಯುವುದನ್ನು ಒಪ್ಪದೇ ಹೋಗಬಹುದು. ಆದರೆ ಭಾರತದ ಸಂದರ್ಭದಲ್ಲಿ ಆ ಬದುಕು ಇನ್ನೂ ಒಂದು ಆಕರ್ಷಣೆ ಮಾತ್ರವಾಗಿದೆ ಎಂಬುದನ್ನು ಯಾವ ಚಿಂತಕನೂ ಅಲ್ಲಗಳೆಯಲಾರ. ಹೀಗೆ ಜಾನಪದೀಯವಾಗಿ ಆಲೋಚನೆ ಮಾಡುವುದರಿಂದಲೇ ಅವರಲ್ಲಿ ಹಳ್ಳಿಯ ಬದುಕಿಗೆ ಸಂಬಂಧಿಸಿದ ಬರವಣಿಗೆಯಲ್ಲಿ ಗಟ್ಟಿಯಾದ ಮೂಲದ್ರವ್ಯವಿದೆ. ಅವರ ನಗರ ಬದುಕಿಗೆ ಸಂಬಂಧಿಸಿದ ಕಥೆಗಳಲ್ಲಿ ಹಳ್ಳಿಯ ಬದುಕಿಗೆ ಸಂಬಂಧಿಸಿದ ಕತೆಗಳಲ್ಲಿನಂತೆ ಮೂರ್ತವಾದ ಪರಿಸರವಿಲ್ಲ ಎಂಬುದನ್ನು ಗಮನಿಸಬೇಕು.

ಗೊರೂರರು ಒಬ್ಬ ಜಾನಪದೀಯನಾಗಿರುವುದರಿಂದಲೇ ಜೀವನ ಮೌಲ್ಯಗಳನ್ನು ಹೊರಗಿನಿಂದ ಕಡ ತರುವುದಿಲ್ಲ. ತಮ್ಮ ಸಮಾಜದಲ್ಲೇ ಇರುವಂಥ ಹಳೆಯ ಮೌಲ್ಯಗಳಿಗೆ ಹೊಸ ಅರ್ಥವನ್ನು ಕೊಟ್ಟು, ಹೊಸ ಸಂದರ್ಭಕ್ಕೆ ಸೂಕ್ತವಾಗುವ ಹಾಗೆ ಮಾಡುತ್ತಾರೆ. ಇಂದಿಗೆ ಆ ಮೌಲ್ಯಗಳು ಬಳಕೆಗೆ ಬರುವುದಿಲ್ಲ ಎಂದರೆ ಅವುಗಳನ್ನು ತಿರಸ್ಕರಿಸಲು ಅವರು ಹಿಂದೆ ಮುಂದೆ ನೋಡುವುದಿಲ್ಲ. ಭಾರತದ ಯಾವುದೇ ಸಂಪ್ರದಾಯ, ಜೀವನಕ್ಕೆ ಲವಲವಿಕೆಯನ್ನು ಕೊಡದಿದ್ದರೆ ಅವುಗಳನ್ನು ಬಿಟ್ಟು ಜೀವನಕ್ಕೆ ಶಕ್ತಿ ಕೊಡುವಂಥವುಗಳನ್ನು ಮಾತ್ರ ಉಳಿಸಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿಯೇ ಅವರು 'ಸಂಪ್ರದಾಯ ಸರ್ವಸ್ವ ಅಂಥ ನಾನು ನಂಬಲಿಲ್ಲ. ಕೆಲವು ಆಚಾರ ವಿಚಾರಗಳು ನಮಗೆ ಶಕ್ತಿ ಕೊಡುತ್ತವೆ' ಎನ್ನುತ್ತಾರೆ. ಬದುಕಿನ ಮೂಲ ನೆಲೆ ಲವಲವಿಕೆ ಮತ್ತು ಒಂದಾಗುವಿಕೆ ಎಂಬುದನ್ನು ಜನಜಾತಿಗಳ ಮಧ್ಯದ ಹೊಸ ಸಂಬಂಧಗಳಿಂದ ತಿಳಿಸಿಕೊಡುತ್ತಾರೆ. ಸಂಗೀತದಂಥ ಸಾಂಪ್ರದಾಯಿಕ ಮೌಲ್ಯವನ್ನು ಹೊಸ ಜೀವನ ಮೌಲ್ಯವನ್ನಾಗಿ ಬಳಸುತ್ತಾರೆ. ಅನಗತ್ಯವಾದವುಗಳ ಪರಿಹಾರ ಮತ್ತು ಅಗತ್ಯವಾದವುಗಳ ಸ್ವೀಕಾರ ನಿರಂತರವಾಗಿ ಸಂಸ್ಕೃತಿಯಲ್ಲಿ ನಡೆಯುವ ಪ್ರಕ್ರಿಯೆ ಎಂಬುದನ್ನು ನಮಗೆ ಮನದಟ್ಟು ಮಾಡುತ್ತಾರೆ. ಇಲ್ಲಿ ಅವರ ಜಾನಪದ ಸ್ಥಿತಿ ಮತ್ತು ಬದಲಾವಣೆಗಳನ್ನು ಹೇಳುತ್ತಿರುವುದು ಸ್ಪಷ್ಟವಾಗುತ್ತದೆ. ತಮ್ಮ ಬರವಣಿಗೆಯೊಳಗೆ ಮದ್ಯಪಾನ ಮತ್ತು ಧೂಮಪಾನದ ಬಗ್ಗೆ

ಹೇಳುವುದು ತಾನೊಬ್ಬ ಉಪದೇಶಕ ಎಂಬ ಅರ್ಥದಲ್ಲಿ ಅಲ್ಲ. ಅವು ಬದುಕಿಗೆ ಹೊರಗಿನವು. ಬದುಕಿಗೆ ಅವುಗಳ ಅಗತ್ಯವಿಲ್ಲ. ಅವುಗಳಿಲ್ಲದಿದ್ದರೂ ನಡೆಯುತ್ತದೆ ಎಂಬ ಕಾರಣಕ್ಕೆ. ಜೀವನಕ್ಕೆ ಬೇಕಾದ ಸಾಮಗ್ರಿಗಳಲ್ಲಿ ಬದುಕಿಗೆ ಒಳಗಾಗುವುದು ಯಾವುದು? ಹೊರಗಿನದು ಯಾವುದು? ಎಂಬುದನ್ನು ಗುರುತಿಸಬಲ್ಲರು. ಇದು ಜನಪದರನ್ನು ಪ್ರೀತಿಸುವ ಜಾನಪದವನ್ನು ಮಾರ್ಗದರ್ಶನ ಮಾಡುವ ಆಲೋಚನೆ. ಹಳ್ಳಿಯ ಸಾಂಸ್ಕೃತಿಕ ಬದುಕಿನ ಒಬ್ಬ ವಕ್ತಾರನಾಗಿ ಮಾತನಾಡಿದರೆ, ತಾಯಿಯ ಎದೆಹಾಲು ಕುಡಿದು ನಮ್ಮ ಮಕ್ಕಳು ಬೆಳೆಯಬೇಕು ಎಂದರೆ, ಅದನ್ನು ಯಾರೂ ನಿರಾಕರಿಸಲಾರರು.

ಗೊರೂರರ ಇಡೀ ಸಾಹಿತ್ಯಕ ಜೀವನ, ಬದುಕು, ಜಾನಪದ ಜೀವನ ಮತ್ತು ಜಾನಪದವನ್ನು ಪುನರ್ ಸೃಷ್ಟಿಸಿ ಕೊಡುವ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ.

ಡಾ. ಎಸ್.ಕೆ. ಕರೀಂಖಾನ್

ಡಾ|| ಕೆ.ಆರ್. ಸಂಧ್ಯಾರೆಡ್ಡಿ

ಜನಪದ ಗೀತೆಗಳ ಗಾಯನ ಹಾಗೂ ಸಂಗ್ರಹದಿಂದ 40-50ರ ದಶಕಗಳಲ್ಲಿ ಮನೆ ಮನೆಯ ಮಾತಾಗಿದ್ದ ಎಸ್.ಕೆ. ಕರೀಂಖಾನ್ ಅವರು ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ೧೯೦೪ರಲ್ಲಿ ಜನಿಸಿದರು. ಹಾಸನದಲ್ಲಿ 5ನೇ ಫಾರಂವರೆಗೆ ವಿದ್ಯಾಭ್ಯಾಸ ಮಾಡಿದ ಕರೀಂಖಾನರ ಮೇಲೆ ಅವರ ಗುರು ಆಚಂಗಿ ನಾರಾಯಣಶಾಸ್ತ್ರಿಗಳು ಅಪಾರ ಪ್ರಭಾವ ಬೀರಿದರು. ಈ ಗುರುಗಳೇ ಕರೀಂಖಾನರನ್ನು ಸಾಹಿತ್ಯಸೇವೆಗೆ ಪ್ರೇರೇಪಿಸಿದವರು. ಗುರುವಿನ ಮೆಚ್ಚಿನ ಶಿಷ್ಯರಾಗಿ ಬೆಳೆದ ಕರೀಂಖಾನ್ ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಅಪಾರ ಪಾಂಡಿತ್ಯ ಗಳಿಸಿದರು.

ಕರೀಂಖಾನರು ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗಲೇ ಜನಪದ ಗೀತೆಗಳತ್ತ ಆಕರ್ಷಿತರಾದರು. ಈ ಆಸಕ್ತಿಗೆ ಕಾರಣವಾದ ಸಂದರ್ಭ ಹೀಗಿದೆ : ಹಿತ್ತಾಳೆ, ತಾಮ್ರ ಪಾತ್ರೆಗಳ ತಯಾರಿಕೆಗೆ ಪ್ರಸಿದ್ಧವಾಗಿದ್ದ ಶ್ರವಣಬೆಳಗೊಳದಿಂದ ಪಾತ್ರೆ ಪರಡಿಗಳನ್ನು ಗಾಡಿಗಳಲ್ಲಿ ಹೇರಿಕೊಂಡು ಊರೂರು ತಿರುಗುತ್ತ ಮಾರಾಟ ಮಾಡುತ್ತಿದ್ದ ವ್ಯಾಪಾರಿಗಳು ಸಕಲೇಶಪುರಕ್ಕೆ ಬಂದಾಗ, ಅವರ ಸರಕುಗಳನ್ನು ಇಳಿಸಿಕೊಳ್ಳುವುದಕ್ಕೆ ಕರೀಂಖಾನರ ಮನೆಯ ಮುಂದಿನ ಕೋಣೆಯನ್ನು ಬಿಟ್ಟುಕೊಡಲಾಗುತ್ತಿತ್ತು. ಸುತ್ತಲಿನ ಹಳ್ಳಿಗಳನ್ನು ತಿರುಗಿ ಬಂದ ವ್ಯಾಪಾರಿಗಳು ರಾತ್ರಿ ಹೊತ್ತು ಮನೆಯ ಮುಂದೆ ಗಾಡಿಗಳನ್ನು ನಿಲ್ಲಿಸಿಕೊಂಡು ಬಯಲಿನಲ್ಲಿಯೇ ಅಡುಗೆ ಮಾಡಿ ಉಂಡನಂತರ ಜನಪದ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿಕೊಳ್ಳುತ್ತಿದ್ದರು. ಹೀಗೆ ಜನಪದ ಗೀತೆಗಳನ್ನು ಹತ್ತಿರದಿಂದ ಕೇಳುವ ಅವಕಾಶ ಕರೀಂಖಾನರಿಗೆ ದೊರೆಯಿತು. ಜನಪದ ಗೀತೆಗಳ ನಾದ ಸೌಂದರ್ಯಕ್ಕೆ, ಭಾವ ಸೌಂದರ್ಯಕ್ಕೆ ಕರೀಂಖಾನರು ಮಾರುಹೋದರು. ಮೊದಲೇ ಶಾಸ್ತ್ರೀಯ ಸಂಗೀತದ ಪರಿಚಯವೂ ಇದ್ದ ಕರೀಂಖಾನರಿಗೆ ''ಶಾಸ್ತ್ರೀಯ ಸಂಗೀತದ ಕೃತಿಗಳೆಲ್ಲವೂ ಭಗವಂತನ ಒಲುಮೆಯನ್ನು ಬೇಡುವಂಥವು, ಅಲ್ಲಿನ ರಾಗಗಳಲ್ಲಿ ದೀನ ಭಾವವೇ ಪ್ರಧಾನ. ರಾಧಾಕೃಷ್ಣ ಪ್ರೇಮವನ್ನು ಕುರಿತಂತಹ ಶೃಂಗಾರ ರಸದ ಕೃತಿಗಳಲ್ಲಿಯೂ ದೈನ್ಯ ಭಾವವೇ ಇದೆ. ಆದರೆ ಜನಪದ ಗೀತೆಗಳಲ್ಲಿ ಉತ್ಸಾಹ ಮತ್ತು ಸ್ಫೂರ್ತಿ, ಲವಲವಿಕೆಗಳಿವೆ. ಅದರ ವೇಗ, ಉತ್ಸಾಹಗಳು ಸ್ಫೂರ್ತಿದಾಯಕವಾದುವು'' ಅನ್ನಿಸಿತು. ಆದ್ದರಿಂದಲೇ ಮುಂದೆ ಕರೀಂಖಾನರು ಕಾಂಗ್ರೆಸ್ ಚಳುವಳಿ, ಕರ್ನಾಟಕದ ಏಕೀಕರಣ, ಚುನಾವಣೆ ಮೊದಲಾದ

ಸಂದರ್ಭಗಳಲ್ಲಿ ಜನಪದ ಗೀತೆಗಳನ್ನು ಪ್ರಚಾರ ಮಾಧ್ಯಮವಾಗಿ ಬಳಸಿಕೊಂಡರು. ಅವರು ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಕರ್ನಾಟಕದಾದ್ಯಂತ ಬಹಳಷ್ಟು ಸಲ ಕಾಲ್ನಡಿಗೆಯಲ್ಲೇ ಸಂಚಾರ ಮಾಡುತ್ತಿದ್ದರಿಂದಾಗಿ ಬೇರೆ ಬೇರೆ ಪ್ರದೇಶಗಳ ಜನಪದ ಗೀತೆಗಳನ್ನು ಕಲಿಯುವ, ದಾಖಲಿಸುವ ಅವಕಾಶವೂ ಅನಾಯಾಸವಾಗಿಯೇ ಸಿಕ್ಕಿತು. ಜನಪದ ಗೀತೆಗಳ ಸಂಗ್ರಹ ಮತ್ತು ಹಾಡುಗಾರಿಕೆ ಅವರ ಹವ್ಯಾಸ ಹಾಗೂ ಜೀವನೋಪಾಯವೂ ಆಯಿತು. ಜನಪದ ಗೀತೆಗಳನ್ನು ಭಾವತುಂಬಿ ಹಾಡುವ ಕಲೆ ಕರೀಂಖಾನರಿಗೆ ಸಿದ್ಧಿಸಿತ್ತು. ಹಳ್ಳಿಯ ಬಯಲಿನಲ್ಲಿ ಯಾವುದಾದರೊಂದು ಮರದ ಕೆಳಗೆ ನಿಂತು ಅವರು ಜನಪದ ಗೀತೆಗಳನ್ನು ಹಾಡಲು ಪ್ರಾರಂಭಿಸುತ್ತಿದ್ದರು. ಹಾಡಿನಿಂದ ಆಕರ್ಷಿತರಾದ ಜನ ಇವರ ಸುತ್ತ ಜಮಾಯಿಸುತ್ತಿದ್ದರು. ಹಾಡಿದ್ದು ಮುಗಿದ ನಂತರ ಕಾಂಗ್ರೆಸ್ ಸದಸ್ಯತ್ವದ ಫಾರಂಗಳನ್ನು ಜನಕ್ಕೆ ಹಂಚುತ್ತ ಸದಸ್ಯತ್ವ ಮಾಡಿಸುತ್ತಿದ್ದರು. ಕರೀಂಖಾನರ ಹಾಡಿಗೆ ಆ ಕಾಲದ ಪಂಡಿತ ಪಾಮರರೆಲ್ಲ ಮಾರು ಹೋಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ವಸಂತ ಮಹೋತ್ಸವ ಸಂದರ್ಭದಲ್ಲಿ ಕರೀಂಖಾನರು ಜನಪದ ಗೀತೆಗಳನ್ನು ಹಾಡಿ ವೇದಿಕೆಯಿಂದ ಕೆಳಗಿಳಿದು ಬರುತ್ತಿದ್ದಂತೆ, ಮಾಸ್ತಿಯವರು, 'ನೀವು ಇನ್ನೊಂದೆರಡು ನಿಮಿಷ ಹಾಡಿದ್ದರೆ ನಾನು ಅತ್ತೇ ಬಿಡುತ್ತಿದ್ದೆ' ಎಂದು ಹೇಳಿದರಂತೆ. ಕರೀಂಖಾನರು ಹೆಣ್ಣೊಪ್ಪಿಸುವ ಹಾಡುಗಳನ್ನು ಹಾಡುವಾಗ ಸಭೆಯಲ್ಲಿದ್ದ ಎಲ್ಲ ಹೆಣ್ಣು ಮಕ್ಕಳೂ ಅತ್ತು ಬಿಡುತ್ತಿದ್ದರಂತೆ. ಸ್ವಾತಂತ್ರ್ಯ ಸಂಗ್ರಾಮ ಕಾಲದ ಕಾಂಗ್ರೆಸ್ಸಿನ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದ ಸಂದರ್ಭದಲ್ಲಿ ಅಲ್ಲಿದ್ದ ಜೊತೆಯ ಚಳುವಳಿಗಾರರೆಲ್ಲ ಕರೀಂಖಾನ್ ಅವರಿಗೆ ಹಾಡಿಗಾಗಿ ಮುಗಿಬೀಳುತ್ತಿದ್ದರಂತೆ. ಹೀಗೆ ಕರೀಂಖಾನರಿಂದಾಗಿ ಜನಪದ ಗೀತೆಗಳು ಹೆಚ್ಚು ಪ್ರಚಾರ ಪಡೆದವು. ಅವುಗಳ ಸಾಹಿತ್ಯ, ಮಾಧುರ್ಯ ಜನಸಾಮಾನ್ಯರಿಗೂ ಪರಿಚಯವಾಯಿತು.

ಕರೀಂಖಾನರು ಜನಪದ ಗೀತೆಗಳ ಸಂಗ್ರಹಗಳನ್ನು ಪ್ರಕಟಿಸಿದ ಕಾಲಕ್ಕೆ ಜಾನಪದದ ಇತರೆಲ್ಲ ಪ್ರಕಾರಗಳಿಗಿಂತ ಗೀತೆಗಳ ಪ್ರಕಾರವೇ ಸಂಗ್ರಾಹಕರನ್ನು ಮುಖ್ಯವಾಗಿ ಆಕರ್ಷಿಸಿತ್ತು. ಜನಪದ ಗೀತೆಗಳ ಸುಮಾರು ಒಂಬತ್ತು ಚಿಕ್ಕ ಚಿಕ್ಕ ಸಂಗ್ರಹಗಳನ್ನು ಕರೀಂಖಾನರು 50-60ರ ದಶಕಗಳಲ್ಲಿ ಪ್ರಕಟಿಸಿದರು. ಅವರ ಸಂಗ್ರಹಗಳಲ್ಲಿ ವ್ಯವಸ್ಥಿತವಾದ ವರ್ಗೀಕರಣವೇನು ಇಲ್ಲ. ಆಯಾ ಹಾಡಿನ ವಸ್ತುವಿಗೆ ತಕ್ಕಂತೆ ಅವರೇ ಶೀರ್ಷಿಕೆಗಳನ್ನು ಕೊಟ್ಟಿದ್ದಾರೆ. ತವರು, ಬಳೆಗಾರ, ಹರಕೆ, ಜೋಗುಳ, ಕಾವಲಿಯ ಹಾಡು (ಅತ್ತಿಗೆ ನಾದಿನಿಯರ ವಿರಸದ ಹಾಡು), ಕಹಿ ಬಾಳು(ಪಾಂಡವರ ಕಷ್ಟಗಳನ್ನು ಕುರಿತದ್ದು), ಹಗರಣ, ಬಾರುನಾ (ಪ್ರಿಯಕರನನ್ನು ಕರೆಯುವ ಗೀತೆ), ಗೋಳಿನ ಗಂಡ (ಹಾಸ್ಯ ಪ್ರಧಾನ) ಮೊದಲಾದ ಶೀರ್ಷಿಕೆಗಳನ್ನು ಗಮನಿಸಬಹುದು. ಹಾಸನ ಜಿಲ್ಲೆಯ ಅನೇಕ ಪ್ರಾದೇಶಿಕ ವಿವರಗಳು ಈ ಗೀತೆಗಳಲ್ಲಿ ಮೈಗೂಡಿ ಅವುಗಳ ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಸ್ಪಷ್ಟಪಡಿಸುತ್ತವೆ. ಹಾಸನಾಂಬೆಯ ಉಲ್ಲೇಖ, ಹಾಗಲವಾಡಿ, ಮೇಗಲಪುರ, ಚುಂಚನಗಿರಿ, ಗೊರವೂರು, ಹೇಮಾವತಿ ನದಿ, ಮೊದಲಾದವುಗಳ ಪ್ರಸಕ್ತಿಯಿಂದಾಗಿ ಇವು ಹಾಸನ ಜಿಲ್ಲೆಯಲ್ಲಿಯೇ ಸಂಗ್ರಹಿತವಾದುವು ಎಂಬುದು ಸ್ಪಷ್ಟವಾಗುತ್ತದೆ.

ಗೀತೆಗಳ ಸಂಗ್ರಹಾನುಭವವನ್ನೂ ಕರೀಂಖಾನರು ಕೆಲವು ಸಂದರ್ಶನಗಳಲ್ಲಿ ಹಂಚಿಕೊಂಡಿದ್ದಾರೆ. ಜನರಿಗೆ ಜನಪದ ಸಾಹಿತ್ಯದ ಬಗ್ಗೆ ಕೀಳರಿಮೆ ಇದೆ. ಆದ್ದರಿಂದ ಅದನ್ನು ವಿದ್ಯಾವಂತರ ಎದುರು ಹಾಡಲು ನಾಚಿಕೊಳ್ಳುತ್ತಾರೆ. ಜನಪದ ಸಾಹಿತ್ಯವನ್ನು ಚೆನ್ನಾಗಿ ಕಾಪಾಡಿಕೊಂಡು ಬಂದಿರುವವರು ಮಹಿಳೆಯರು. ಗಂಡಸರೆದುರು ಹಾಡಲು ಅವರು ನಾಚಿಕೊಳ್ಳುತ್ತಾರೆ, ಮುಜುಗರ ಮಾಡಿಕೊಳ್ಳುತ್ತಾರೆ. ಅವರಿಗೆ ಮನವರಿಕೆ ಮಾಡಿಕೊಟ್ಟು ಸಂಗ್ರಹಿಸಬೇಕಾಗುತ್ತದೆ ಎಂದು ಹೇಳಿದ್ದಾರೆ. ಧ್ವನಿಮುದ್ರಣ ಯಂತ್ರ ಸೌಕರ್ಯವಾಗಲಿ, ರಸ್ತೆ ಸಾರಿಗೆ ವ್ಯವಸ್ಥೆಯಾಗಲೀ ಇಲ್ಲದ ಕಾಲದಲ್ಲಿ ಗೀತೆಗಳನ್ನು ಸಂಗ್ರಹಿಸಿದ ಕರೀಂಖಾನರು ಈ ಸಂಬಂಧವಾಗಿ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದರೂ ಸಹ ತಮ್ಮ ಶ್ರದ್ಧೆಯನ್ನು ಕಳೆದುಕೊಳ್ಳಲಿಲ್ಲ. ಜನಪದ ಗೀತೆಗಳ ಸಂಗ್ರಹಕ್ಕೆ ಕರೀಂಖಾನರು ಹೆಸರು ಗಳಿಸಿದ ನಂತರ ಪ್ರಕಾಶಕರು ಕರೀಂಖಾನರ ಹೆಸರು ಹಾಕಿ ಅವರದೇ ಸಂಗ್ರಹಗಳನ್ನು ಪ್ರಕಟಿಸಿದರೂ ಅದಕ್ಕೆ ಕೊಡಬೇಕಾದ ರಾಯಧನವನ್ನು ಕೊಡದೆ ಕರೀಂಖಾನರನ್ನು ಬಹಳ ವಂಚಿಸಿದರು. ನನಗೆ ಜನಪದ ಸಾಹಿತ್ಯ ಅನ್ನ ಕೊಡ್ತಾ ಇತ್ತು. ಸಣ್ಣಸಣ್ಣ ಹೊತ್ತಿಗೆಗಳನ್ನು ನಾನೇ ಮುದ್ರಣ ಮಾಡಿ ಅಲ್ಲಲ್ಲಿ ಹಾಡಿ ಮಾರಾಟ ಮಾಡ್ತ ಇದ್ದೆ. ಎಂಟಾಣೆಗೊಂದು ಪುಸ್ತಕದಂತೆ ತಿಪಟೂರಿನ ಒಬ್ಬ ಪ್ರಕಾಶಕ ಎರಡು ಸಾವಿರ ರೂ ಪುಸ್ತಕ ತಗೊಂಡು ಅಷ್ಟು ದುಡ್ಡನ್ನು ತಿಂದು ಅದನ್ನೇ ಸ್ವಂತ ಹೆಸರಿನಲ್ಲಿ ಪ್ರಕಟಿಸಿಕೊಂಡ. ನನ್ನ ಸಂಗ್ರಹ ನನ್ನ ಮೇಲೇ ಧಾಳಿಗಿಳೀತು. ಕೋರ್ಟು ಕಛೇರಿ ಅಲೆಯೋ ಸಾಮರ್ಥ್ಯ ನನಗಿರಲಿಲ್ಲ.........ಎಂದು ತಮಗಾದ ಅನ್ಯಾಯವನ್ನು ಹೇಳಿಕೊಂಡಿದ್ದಾರೆ. (ಕಸ್ತೂರಿ : ಏಪ್ರಿಲ್ 2001)

ಕರೀಂಖಾನರು ನಾಟಕ, ಕಾದಂಬರಿ ಮೊದಲಾದ ಪ್ರಕಾರಗಳಲ್ಲಿಯೂ ಸಾಹಿತ್ಯ ರಚನೆ ಮಾಡಿದ್ದಾರೆ. ಸಿನಿಮಾಗಳಿಗಾಗಿ ಚಿತ್ರಗೀತೆ, ಚಿತ್ರ ಸಾಹಿತ್ಯ ರಚಿಸಿದ್ದಾರೆ. ಅಲ್ಲಿಯೂ ಸಹ ಅವರು ಜಾನಪದದ ಭಾಷೆ, ಸತ್ವ, ಆಶಯಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. 'ಸ್ವರ್ಣಗೌರಿ' ಚಿತ್ರಕಥೆಯನ್ನು ಅವರು ಜನಪದ ಕಥೆಯೊಂದರ ಆಧಾರದ ಮೇಲೆ ರಚಿಸಿದರು. ಅವರ 'ಮಹಾಪ್ರಭು ಮಾಗಡಿ ಕೆಂಪೇಗೌಡ' ಎಂಬ ನಾಟಕದ ವೈಶಿಷ್ಟ್ಯವೆಂದರೆ ಈ ನಾಟಕದ ಹಳ್ಳಿಯ ದಂಪತಿಗಳ ಸಂಭಾಷಣೆ ಹಾಗೂ ಹಾಡುಗಳಿಗೆ ಇಡಿ ಇಡಿಯಾಗಿ ಜನಪದ ಗೀತೆಗಳನ್ನು ಹಾಗೂ ಗೀತೆಗಳ ಸಾಲುಗಳನ್ನು ಬಳಸಿಕೊಂಡಿರುವುದು.

1987ರಲ್ಲಿ ಕರೀಂಖಾನರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಆಯ್ಕೆಯಾದರು. 87ರಿಂದ 90ರವರೆಗಿನ ತಮ್ಮ ಅಧಿಕಾರಾವಧಿಯಲ್ಲಿ ಅವರು ಎಂದಿನಂತೆ ನಿಸ್ಪೃಹ ಸೇವೆ ಸಲ್ಲಿಸಿದರು. ಅವರ ಅವಧಿಯಲ್ಲಿ ಅಕಾಡೆಮಿಗೆ ಸರ್ಕಾರದಿಂದ ಮೊದಲಿಗಿಂತ ಹೆಚ್ಚಿನ ಹಣ ಬಿಡುಗಡೆಯಾಯಿತು. ಪ್ರದರ್ಶಕ ಕಲೆಗಳ ವಿಷಯಕ್ಕೆ ಹೆಚ್ಚಿನ ಗಮನ ನೀಡಿದ ಕರೀಂಖಾನರು ಕಲೆಗಳ ಹಾಗೂ ಪ್ರದರ್ಶನಗಳ ವಿಡಿಯೋ ಚಿತ್ರೀಕರಣ ಮಾಡಲು ಯೋಜನೆ ರೂಪಿಸಿದರು. ಅವರ ಅವಧಿಯಲ್ಲಿ ನಡೆದ ಬಹು ಮುಖ್ಯ ಕೆಲಸವೆಂದರೆ ಅದುವರೆಗೆ

ಅಜ್ಞಾತವಾಗಿದ್ದ ಗಿರಿಜನರ ಸಂಸ್ಕೃತಿಯ ಅಧ್ಯಯನ ಹಾಗೂ ಅವರ ಕಲೆಗಳ ದಾಖಲಾತಿ. ಗಿರಿಜನರನ್ನು ಹಾಗೇ ಅವರ ಪರಿಸರದಲ್ಲಿಯೇ ಚಿತ್ರೀಕರಿಸುವ ವಿಶೇಷ ಯೋಜನೆ ಯಶಸ್ವಿಯಾಯಿತು. ವಿಶೇಷ ಗಿರಿಜನ ಪ್ರಶಸ್ತಿ ನೀಡುವುದನ್ನು ಅವರು ಆರಂಭಿಸಿದರು. ವಿಚಾರ ಸಂಕಿರಣ ಹಾಗೂ ಕಮ್ಮಟಗಳ ಜೊತೆಗೆ ಯಕ್ಷಗಾನದ ಬಣ್ಣಗಾರಿಕೆ ಹಾಗೂ ಕಲಾ ಪ್ರದರ್ಶನದ ದಾಖಲಾತಿ, ಗಡಿನಾಡು ಪ್ರದೇಶಗಳಲ್ಲಿ ಜಾನಪದ ಮೇಳಗಳ ವ್ಯವಸ್ಥೆ, ಇವು ಕರೀಂಖಾನರ ಅವಧಿಯ ವಿಶಿಷ್ಟ ಕೆಲಸಗಳು, ಅವರ ಕಾಲದಲ್ಲಿ ಆರಂಭವಾದ ಬುಡಕಟ್ಟು ಜನಾಂಗಗಳ ಅಧ್ಯಯನ ಇಂದು ಜಾನಪದ ಅಧ್ಯಯನದಲ್ಲಿ ಒಂದು ಪ್ರತ್ಯೇಕ ಶಾಖೆಯಾಗಿ ಬೆಳೆಯುವಷ್ಟರ ಮಟ್ಟಿಗೆ ವಿಸ್ತೃತಗೊಂಡಿದೆ.

ತಮ್ಮ ಈ ಎಲ್ಲ ಕೆಲಸವನ್ನು ಕುರಿತು ಕರೀಂ ಖಾನರು ''..........ಈ ಪುರಾತನ ಕಲೆಗಳು ಕೈ ಬಿಟ್ಟು ಹೋಗ್ತಾವೆ. ಜನ ಅದರಿಂದ ದೂರ ಅಗ್ತಾ ಇದ್ದಾರೆ, ತಾತ್ಸಾರಭಾವ ತಾಳ್ತಿದ್ದಾರೆ. ಈ ಕಾರಣದಿಂದ ಈ ಪುರಾತನ ಕಲೆಗಳನ್ನು ಭದ್ರವಾಗಿ ಇಡಬೇಕು ಅನ್ನೋ ದೃಷ್ಟಿಯಿಂದ ವಿಡಿಯೋ ಚಿತ್ರಣ ಕೈಗೊಂಡೆ......ಜನಪದ ಮೊದಲಿಂದಲೂ ನನ್ನ ನೆಚ್ಚಿನ ಕ್ಷೇತ್ರ. ಅದರಲ್ಲಿ ದುಡಿಯಲು ಅವಕಾಶ ಸಿಕ್ಕಿತು. ಇದರಿಂದ ಆರ್ಥಿಕವಾಗಿ ನನಗೇನು ಸಹಾಯವಾಗಿಲ್ಲ. 'ಋಣಾನುಬಂಧರೂಪೇಣ ಪಶುಪತ್ನಿ ಸುತಾಲಯ' ಅಂತ ಪೂರ್ವೀಕರು ಹೇಳಿದಂತೆ ಋಣಾನುಬಂಧಾನು ಇರಬೇಕು, ಅದಿಲ್ದೆ ಇದ್ರೆ ಸುಯೋಗ ಪ್ರಾಪ್ತವಾಗಲ್ಲ.........ಎಂದು ಹೇಳಿರುವ ಮಾತುಗಳು ಮನನೀಯ (ಕಸ್ತೂರಿ. ಏಪ್ರಿಲ್ 2001).

ಪ್ರೌಢ ಸಾಹಿತ್ಯದಲ್ಲಿ ಸಾಕಷ್ಟು ಪರಿಶ್ರಮವಿದ್ದೂ ಜನಪದ ಸಾಹಿತ್ಯದ ಮೇಲೆ ಸಂಪೂರ್ಣ ಒಲವು ತಾಳಿ ಅದನ್ನು ತಮ್ಮ ಸಾಧನೆಯ ಕ್ಷೇತ್ರವಾಗಿ ಆಯ್ದುಕೊಂಡ ವಿಶಿಷ್ಟ ವ್ಯಕ್ತಿ ಕರೀಂಖಾನ್. ರಾಷ್ಟ್ರೀಯ ಚಳುವಳಿಗಳಿಗೆ ಜನಪದ ಸಾಹಿತ್ಯವನ್ನು ಮಾಧ್ಯಮವನ್ನಾಗಿ ಆಯ್ದುಕೊಂಡು ಜಾನಪದದ ಸಂವರ್ಧಕರಾಗಿ ದುಡಿದ ವಿರಳ ವ್ಯಕ್ತಿ ಕರೀಂಖಾನ್. ''ಸಂತೇಲಿ ಕಳೆದು ಹೋದ ಮಕ್ಕಳನ್ನು ಹುಡುಕಿ ಅವರ ತಂದೆ ತಾಯಿಗಳಿಗೆ ಒಪ್ಪಿಸುವ ರೀತೀಲಿ ನಾನು ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಸಂಪಾದಿಸುವ ಕೆಲಸ ಮಾಡಿದೆ'' ಎನ್ನುವ ನಮ್ರತೆಯ ಮೂರ್ತಿ ಕರೀಂಖಾನ್. ಕರ್ನಾಟಕ ಸರ್ಕಾರವು 1995ರಲ್ಲಿ ಕರೀಂಖಾನ್‌ರಿಗೆ. 'ಜಾನಪದ ಶ್ರೀ' ಪ್ರಶಸ್ತಿ ನೀಡಿ ಗೌರವಿಸಿತು. ಗುಲ್ಬರ್ಗ ವಿಶ್ವವಿದ್ಯಾಲಯ ಅವರಿಗೆ ಡಾಕ್ಟೊರೇಟ್ ನೀಡಿತು. ಹಂಪಿ ಕನ್ನಡ ವಿಶ್ವವಿದ್ಯಾಲಯ 'ನಾಡೋಜ ಪ್ರಶಸ್ತಿ' ನೀಡಿತು. ಹುಬ್ಬಳ್ಳಿಯ ಮೂರು ಸಾವಿರ ಜಂಗಮಮಠ 'ಜಾನಪದ ಜಂಗಮ' ಎಂಬ ಪ್ರಶಸ್ತಿ ನೀಡಿತು. ಮಂಡ್ಯದ 'ಜೀಶಂಪ ಜಾನಪದ ಪ್ರಶಸ್ತಿ' 1995ರಲ್ಲಿ ಲಭಿಸಿತು. 1998ರಲ್ಲಿ ಹಂಸಜ್ಯೋತಿ ಎಂಬ ಸಂಸ್ಥೆ ರಂಗಭೂಮಿ, ಚಿತ್ರರಂಗ, ಜಾನಪದ ಕ್ಷೇತ್ರದಲ್ಲಿ ಅನವರತ ಶ್ರಮಿಸಿದ ಹರಿಕಾರ ಎಂದು ಬಣ್ಣಿಸಿ 'ಹಂಸರತ್ನ' ಎಂಬ ಪ್ರಶಸ್ತಿ ನೀಡಿದೆ.

ಕೆ. ಶಿವರಾಮ ಕಾರಂತ

ಪ್ರೊ. ಹಿ.ಶಿ. ರಾಮಚಂದ್ರೇಗೌಡ

ವ್ಯಕ್ತಿಯಾಗಿ ಮತ್ತು ಪರಂಪರೆಯಾಗಿ, ಕಾರಂತರು ಕರ್ನಾಟಕ ಯಕ್ಷಗಾನ ಪರಂಪರೆಯ ಅವಿಭಾಜ್ಯ ಅಂಗ. ಅವರ ಬದುಕು ಮತ್ತು ಬರಹಗಳಲ್ಲೆಲ್ಲ ಈ ಪರಂಪರಾಗತ ಸಂಸ್ಕೃತಿಯ ಪ್ರಜ್ಞೆ ಒಂದು ಸೃಷ್ಟಿಕ್ರಿಯೆಯಾಲಗಿ ಕಂಡು ಬರುತ್ತದೆ. ಕೆಲವಂಶಗಳಲ್ಲಿ ಅವರ ಈ ಸೃಷ್ಟಿಕ್ರಿಯೆ ಒಡೆದುಕಾಣುವಂತೆನಿಸುತ್ತದೆ. ಅವರ ಕಾದಂಬರಿಗಳಲ್ಲಿ ಸಂಶೋಧನಗೊಳ್ಳುವ ಜನಪದವನ್ನೂ ಯಕ್ಷಗಾನ ಚಿಂತನೆಯಲ್ಲಿ ಶೋಧಿತವಾಗುವ ಜನಪದಗಳ ಸ್ವಭಾವಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಆದರೆ ಈ ವ್ಯತ್ಯಾಸ ಬಹಳ ದೊಡ್ಡದೇನಲ್ಲ. ತಾನೇ ಸೃಷ್ಟಿಕ್ರಿಯೆಯಾಗುವ ಮತ್ತು ಈಗಾಗಲೇ ಪರಂಪರೆಯಲ್ಲಿ ಹುಟ್ಟಿಬೆಳೆದು ಸಾಂಸ್ಕೃತಿಕ ಅನ್ಯತೆಯ ಧಾಳಿಯಿಂದ ಕ್ರಿಯೆಯನ್ನು ಕಳೆದುಕೊಳ್ಳುತ್ತಿರುವ ಕಲೆಯೊಂದಕ್ಕೆ ಕ್ರಿಯೆಯನ್ನು ನೀಡುವ ಸಾಮೂಹಿಕ ಜವಾಬ್ದಾರಿಯುಳ್ಳ ವ್ಯಕ್ತಿತ್ವಕ್ಕೂ ಇರುವ ಅಂತರ.

ಒಂದು ಕಲೆಯನ್ನು ಸಜೀವಗೊಳಿಸುವ ಸಂದರ್ಭವೆಂದರೆ ಪರಿಷ್ಕರಣ ಎಂದು ಮಾತ್ರ ತಿಳಿಯಬಾರದು. ಈ ಪರಿಷ್ಕರಣ ಅಂಥ ಕಲೆಯನ್ನು ಸಜೀವಗೊಳಿಸುವುದಕ್ಕಿಂತ ಕೊಲ್ಲುವುದೇ ಹೆಚ್ಚು. ಪರಿಷ್ಕರಣವಾದಿ ಒಬ್ಬ ಒಂಟಿ ವಿದ್ವಾಂಸ. ಅವನಲ್ಲಿ ಒಂದು ಕಲೆ ಮತ್ತು ಅದರ ಸಮಾಜದ ಬಗ್ಗೆ ಗಾಢವಾದ ತಿಳುವಳಿಕೆ ಇರಬಹುದು. ಆದರೆ ಆ ತಿಳುವಳಿಕೆಯನ್ನು ಆತ ಆ ಸಮಾಜದ ಕ್ರಿಯಾಶೀಲತೆಗೆ ಧಾರೆ ಎರೆಯುವ ಸೋಪಜ್ಞತೆಯನ್ನು ಹೊಂದಿಲ್ಲದಿರುವ ಸಂದರ್ಭಗಳೇ ಹೆಚ್ಚು. ಯಕ್ಷಗಾನ ಅಧ್ಯಯನ ಮತ್ತು ಪ್ರಯೋಗದ ಸಂದರ್ಭದಲ್ಲಿ ಕಾರಂತರನ್ನು ಹೀಗೆ ಪರಿಗಣಿಸಲಾಗದು. ಬಹಳ ಜನ ವಿದ್ವಾಂಸರಂತೆ ಯಕ್ಷಗಾನವನ್ನು ಅವರು ಮನರಂಜನಕಲೆ ಎಂದು ತಿಳಿದವರಲ್ಲ. ಅದೊಂದು ಸಜೀವ, ಅಂಗರಹಿತ ಪಳೆಯುಳಿಕೆ ಎಂದೂ ತಿಳಿದವರಲ್ಲ. ಯಕ್ಷಗಾನವೊಂದು ಜಾನಾಂಗಿಕ- ಸಾಂಸ್ಕೃತಿಕ ರಚನಾತ್ಮಕ ರೂಪ ಎಂದು ಪರಿಭಾವಿಸಿ ಅದರ ಫಲಗಳನ್ನು ಶೋಧಿಸಹೊರಟವರು. ಆದ್ದರಿಂದಲೇ ಅವರು ಇವತ್ತಿನ ಜಾನಪದ ಪರಿಶೀಲನೆಯ ಸಂದರ್ಭದಲ್ಲಿ ಮಹತ್ವದ ವ್ಯಕ್ತಿಯಾಗಿ ಕಂಡುಬರುತ್ತಾರೆ. ನನ್ನ ಅನುಭವಕ್ಕೆ ಬಂದ ಹಾಗೆ ಕರ್ನಾಟಕದ ಜನಪದ ರಂಗಭೂಮಿಯ ಸಾಧ್ಯತೆಗಳನ್ನು ಅದರ ಸಾಂಸ್ಕೃತಿಕ ಆಶಯಗಳೊಡನೆ ಚಿಂತಿಸಿ ಅದರ ಭವಿಷ್ಯದ ತೊಡಕುಗಳನ್ನು ಸಾಂಸ್ಕೃತಿಕವಾಗಿಯೆ ನಿವಾರಿಸುವ ಸಾಮರ್ಥ್ಯ

ಪಡೆದವರಲ್ಲಿ ಕಾರಂತರೂ ಒಬ್ಬರು. ಒಂದು ನಿರ್ದಿಷ್ಟ ಜನಾಂಗ ಮತ್ತು ಸಂಸ್ಕೃತಿಯ ನೆಲೆಗಳಲ್ಲಿ ಕಾರಂತರು ಯಕ್ಷಗಾನ ಪರಂಪರೆಯ ಕ್ರಿಯಾಶೀಲ ಬೆಳವಣಿಗೆಯ ಸಾಧ್ಯತೆಗಳನ್ನು ಪರಿಶೋಧಿಸುತ್ತಾರೆ. ಕಂಬಾರರು ಸಮಗ್ರ ಜನಪದ ಬದುಕಿನಿಂದ ರೂಪಗೊಂಡ ರಂಗಭೂಮಿಯ ಮೂಲವನ್ನು ಹಿಡಿದು ಅದರ ಸೃಷ್ಟ್ಯಾತ್ಮಕ ಮಹತ್ವ ಮತ್ತು ಸಾರ್ವಕಾಲಿಕ ಸೋಪಜ್ಞತೆಯ ಸಾಧ್ಯತೆಗಳನ್ನು ಕಂಡುಕೊಳ್ಳುತ್ತಾರೆ.

ಕಾರಂತರು ಯಕ್ಷಗಾನಗಳಲ್ಲಿ ಹೊಸ ಪ್ರಯೋಗಗಳನ್ನು ತರುತ್ತಿದ್ದಾರೆಂಬ ಅಪವಾದಾತ್ಮಕ ಅಭಿಪ್ರಾಯಗಳ ಹಿನ್ನಲೆಯಲ್ಲಿ ಅವರನ್ನು ಮತ್ತೂ ಸ್ಪಷ್ಟಪಡಿಸುವುದು ಅಗತ್ಯ. ಜನಪದ ಕಲೆಯೊಂದರೊಡನೆ ಒಬ್ಬ ವ್ಯಕ್ತಿಗೆ ಇರಬಹುದಾದ ಸಂಬಂಧ ಮತ್ತು ವಿರೋಧಗಳ ಹಿನ್ನಲೆಯಲ್ಲಿ ಆ ವ್ಯಕ್ತಿಯ ಪಾರಂಪರಿಕ ನಿಷ್ಠೆಯನ್ನು ಅಳೆಯಬಹುದು. ಆ ಸ್ಪಷ್ಟತೆ ಏಕಕಾಲದಲ್ಲಿ ಆ ವ್ಯಕ್ತಿ ಮತ್ತು ಅವನು ಬದುಕುತ್ತಿರುವ ಜನಪದವನ್ನು ದೃಢೀಕರಿಸುವ ಸಂಗತಿ ಕೂಡ ಆಗುತ್ತದೆ.

ಯಕ್ಷಗಾನ ಜನಪದ ಮತ್ತು ಕಾರಂತರು

ಯಕ್ಷಗಾನ ಕೇವಲ ಒಂದು ಕಲೆ ಮಾತ್ರವಲ್ಲ. ಅದು ಒಂದು ಜನಾಂಗದ ಬದುಕಿನ ಅಭಿವೃದ್ಧಿ ಮಾಧ್ಯಮ. ಅದು ನಮ್ಮ ಸಂಸ್ಕೃತಿಯೊಳಗೆ ಒಂದು ಸಾಂಸ್ಕೃತಿಕ ಆಶಯ (Cultural trait)ವಾಗಿ ಹುಟ್ಟಿಕೊಂಡದ್ದು. ಆ ಆಶಯ ಅದರ ಜನ ಮತ್ತು ಸಂಸ್ಕೃತಿಯನ್ನು ತನ್ನ ವಿವಿಧ ರಚನಾತ್ಮಕ ಘಟಕಗಳ ಮೂಲಕ ಪ್ರದರ್ಶಿಸುವಂಥದು. ಮತ್ತೊಂದು ಅರ್ಥದಲ್ಲಿ ಆ ಜನಾಂಗಿಕ ಜೀವನ ಮತ್ತು ನಂಬಿಕೆಯ ಅಭಿನಯ. ಈಗ ಈ ಕಲೆಯ ಜನವೆಂದರೆ ಕರ್ನಾಟಕದ ಎಲ್ಲ ವರ್ಗದ ಜನ. ಕರ್ನಾಟಕದ ಎಲ್ಲ ಕಡೆ ಯಕ್ಷಗಾನ ಬೇರೆ ಬೇರೆ ರೂಪಗಳಲ್ಲಿ ಕಂಡು ಬರುತ್ತದೆ. ಈಗ ಕಾಣುತ್ತಿರುವ ಭಿನ್ನತೆಗಳು ರಾಜಕೀಯ, ಭೌಗೋಳಿಕ ಮತ್ತು ಪೌರಾಣಧರ್ಮಗಳ ಕಾಲಾನಂತರದ ಬೆಳವಣಿಗೆ ಮತ್ತು ಪರ್ಯಾಯ ಚಿಂತನೆಯ ಅವಸ್ಥೆಗಳು. ಈ ಭಿನ್ನತೆಗಳನ್ನು ಸೂಕ್ಷ್ಮವಾಗಿ ಗಮನಿಸಿದ ಕಾರಂತರು ಅವುಗಳನ್ನು ಮೂಡಲಪಾಯ ಮತ್ತು ಪಡುವಲಪಾಯಗಳೆಂದು ಗುರುತಿಸಿದ್ದಾರೆ. ಪಡುವಲಪಾಯವೆಂದರೆ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡವನ್ನೊಳಗೊಂಡ ಪ್ರದೇಶ. ಈ ಪ್ರದೇಶವನ್ನೆ ಮತ್ತೆ ತೆಂಕುತಿಟ್ಟು ಮತ್ತು ಬಡಗುತಿಟ್ಟು ಎಂದು ವಿಂಗಡಿಸಲಾಗಿದೆ. ಇತರ ಕರ್ನಾಟಕದ ಭಾಗವನ್ನೆಲ್ಲ ಸ್ಥೂಲವಾಗಿ ಮೂಡಲಪಾಯ ಎಂದು ಕರೆಯಲಾಗಿದೆ. ಪಡುವಲಪಾಯ ಮತ್ತು ಮೂಡಲಪಾಯದ ಮಧ್ಯೆ ಕೆಲವೇ ಭಿನ್ನತೆಗಳ ಮೂಲಕ ಕಂಡುಬರುವ ಸಂಪ್ರದಾಯ ಬಂದಿದೆ. ಇದನ್ನು ಘಟ್ಟದ ಕೋರೆ ಯಕ್ಷಗಾನ ಸಂಪ್ರದಾಯ ಎಂದು ಕರೆಯಲಾಗಿದೆ. ಫ್ರಾನ್ಜ್ ಬೋವಾ ಅವರ ಸಾಂಸ್ಕೃತಿಕ ಪ್ರದೇಶ (cultural area) ದೃಷ್ಟಿಯಲ್ಲಿ ಇದೊಂದು ಯಕ್ಷಗಾನದ ಪ್ರದೇಶ. ಈ ವ್ಯತ್ಯಾಸ ಬಹಳ ವರ್ಷಗಳ ಬೆಳವಣಿಗೆಯೇನಲ್ಲ. ಹಾಗೆ ಪಡುವಲಪಾಯ ಕೂಡ ಒಂದು ಪ್ರತ್ಯೇಕ ಸಾಂಸ್ಕೃತಿಕ ಪ್ರದೇಶ. ಬಹುದೊಡ್ಡ ಪಡುವಲಪಾಯ ಪ್ರದೇಶವನ್ನು ನೋಡಿದರೆ ಯಾವುದೋ ಒಂದು ಘಟ್ಟದಲ್ಲಿ ಪಡುವಲಪಾಯ ಮೂಡಲಪಾಯದಿಂದ ಪ್ರತ್ಯೇಕಗೊಂಡ ಒಂದು ಸಾಂಸ್ಕೃತಿಕ ಪ್ರತ್ಯೇಕ ಪ್ರದೇಶವಾಗಿರಬೇಕೆಂಬುದು

ತಿಳಿಯುತ್ತದೆ. ಬಹುಶಃ ಪಡುವಲಪಾಯದ ಅಷ್ಟಮಠಗಳ ಧಾರ್ಮಿಕ ಪುನರುಜ್ಜೀವನವೇ ಅಲ್ಲಿ ಯಕ್ಷಗಾನ ಭೂತನೃತ್ಯಕ್ಕೆ ಹೊಯ್‌ಕೈಯಾದ ಜನಪದ ಕಲಾಮಾಧ್ಯಮವಾಗಿ ಬೆಳೆಯಲು ಕಾರಣವಾಗಿರಬೇಕು.

ಈ ಎಲ್ಲ ಪಾಯಗಳು ಮತ್ತು ತಿಟ್ಟುಗಳು ಬಯಲಾಟದ ಬೇರೆ ಬೇರೆ ರೀತಿಗಳು (styles). ಯಕ್ಷಗಾನ ಕೂಡ ಮೂಲ ಬಯಲಾಟದಿಂದ ಬೇರೆಯಾದ ಒಂದು ಸಂಗೀತ ಮಾದರಿಯಿಂದ ಬಂದ ಹೆಸರು. ಮೂಲ ಬಯಲಾಟಕ್ಕೆ ಈ ಸಂಗೀತ ಮಾದರಿ ಯಾವಾಗ ಸೇರಿಕೊಂಡಿತು ಮತ್ತು ಹೇಗೆ ಬಯಲಾಟವನ್ನು ಒಂದು ಬೇರೆ ಬಗೆಯನ್ನಾಗಿ ಯಕ್ಷಗಾನವನ್ನು ರೂಪಿಸಿತು ಎಂದು ಹೇಳುವುದು ಕಷ್ಟ. ಜನಪದ ಸಂಗೀತಶಾಸ್ತ್ರದ ಐತಿಹಾಸಿಕ ಅಧ್ಯಯನ ಕೆಲಮಟ್ಟಿಗೆ ಈ ಚಿಂತನೆಗೆ ಉಪಯೋಗವಾಗಬಹುದು. ಸಂಗೀತಕ್ಕೆ ಈ ಪಾಯದಲ್ಲಿ ಬಂದಿರುವ ಮಹತ್ವವನ್ನು ನೋಡಿದರೆ ದೇವಸ್ಥಾನಗಳ ಸಂಗೀತ ಮಾದರಿಯೊಂದು ಈ ಕಲೆಯನ್ನು ಪ್ರವೇಶಿಸಿ ಸಂವೃದ್ಧಗೊಳಿಸಿರಬೇಕೆಂದು ತೋರುತ್ತದೆ. ಪಡುವಲಪಾಯದಲ್ಲಿಯ ಪ್ರೌಢಧರ್ಮಗಳ ಬೆಳವಣಿಗೆ ಮತ್ತು ಮಠಗಳು ಸಾಂಸ್ಕೃತಿಕ ಕೇಂದ್ರಗಳಾಗಿ ಈ ಪಾಯದ ಜನಗಳನ್ನು ನಿಯಂತ್ರಿಸಿದ ಹಿನ್ನೆಲೆ ಇದನ್ನು ಸಮರ್ಥಿಸುತ್ತದೆ. ಜನಸಾಮಾನ್ಯರ ಭೂತ- ಪ್ರೇತ ಮತ್ತು ನಾಗನೃತ್ಯಗಳಿಂದ ಸೃಜನಗೊಂಡು ಬೆಳೆದಿದ್ದ ಬಯಲಾಟ ಇಲ್ಲಿ ಹೊಸ ಸಂಗೀತ-ನೃತ್ಯ-ಸಾಹಿತ್ಯ ಸಾಧ್ಯತೆಗಳನ್ನು ಪಡೆದುಕೊಂಡು ಬೆಳೆದದ್ದು ಹೀಗೆ.

ಹೀಗೆ ಹೊಸ ಸಾಂಸ್ಕೃತಿಕ ಅಂಶ (cultural trait)ಗಳು ಪಡುವಲಪಾಯವನ್ನು ಒಂದು ಹೊಸ ಸಾಂಸ್ಕೃತಿಕ ಪ್ರದೇಶ (cultural area)ವನ್ನಾಗಿ ಪರಿವರ್ತಿಸಿರಬೇಕು. ಆದ್ದರಿಂದಲೇ, ಭೌಗೋಳಿಕತೆ, ಭಾಷೆ ಮತ್ತು ಬದುಕಿನ ದೃಷ್ಟಿಯಿಂದ ಕೂಡ ಪಡುವಲಪಾಯದ ಜನಪದ ಮೂಡಲಪಾಯದ ಜನಪದಕ್ಕಿಂತ ಭಿನ್ನವಾಗಿದೆ. ಕಾರಂತರು ಬದುಕಿದ್ದು ಮತ್ತು ಈಗ ಬದುಕುತ್ತಿರುವುದು ಈ ಜನಪದದ ಬದುಕು. ಅವರ ಸಂಸ್ಕಾರ ಈ ಜನಪದ ಮೌಲ್ಯದಿಂದ ನಿರ್ಧರಿತವಾದ ಸಂಸ್ಕಾರ. ಇಲ್ಲಿ ಶೈವ-ವೈಷ್ಣವ ಮತ್ತು ಆದಿವಾಸಿ ಬದುಕಿನ ಸಂಸ್ಕೃತಿಗಳ ಸಂಲಗ್ನ ಉಂಟಾಗಿದೆ. ಇದರ ಜೊತೆಗೆ ಕಾರಂತರು ತಮ್ಮ ಜನಪದ ಸಂಸ್ಕೃತಿಗೆ ಬದ್ಧವಾದಂತೆಯೂ, ಪ್ರತ್ಯೇಕವಾದಂತೆಯೂ ಹೊಸ ಬದುಕಿನ ಕಡೆಗೆ ತುಡಿಯುವವರಾಗಿದ್ದಾರೆ. ಇವರ ಕಾದಂಬರಿಗಳು ಮತ್ತು ವಿಚಾರಪ್ರಚೋದಕ ಬರವಣಿಗೆ ಇದನ್ನು ಸ್ಪಷ್ಟಪಡಿಸುತ್ತದೆ. ಆದರೆ ಇದನ್ನು ವೈಜ್ಞಾನಿಕ ಬದುಕಿನ ಚಿಂತನೆ ಎಂದು ನಾನು ಕರೆಯಲಾರೆ. ವಯಸ್ಸಾದಂತೆ ಕಾರಂತರು ತಮ್ಮ ಮಾತು-ಕೃತಿಗಳಲ್ಲಿ ಹೊಸತೊಂದು ವಿಚಾರದ ದಿಕ್ಕನ್ನು ತುಳಿಯುತ್ತಿದ್ದಾರೆ. ಇಂಗ್ಲಿಷ್ ವಿದ್ಯಾಭ್ಯಾಸದ ಬಗ್ಗೆಯಾದ ಅವರ ವ್ಯಾಮೋಹಯುತವಾದ ಹೇಳಿಕೆ ಮತ್ತು ವೈದಿಕ ಧರ್ಮದ ಪುನರುಜ್ಜೀವನದ ಹಾದಿಗಳನ್ನು ಸಂಗಮಗೊಳಿಸುವ ಚಿತ್ರಕಥಾ ಬರಹಗಳೇ ಮೊದಲಾದ ಅಂಶಗಳು, ಕಾರಂತರು ಮರಳಿ ಮಠದ ಮಣ್ಣಿಗೆ ತೆರಳುತ್ತಿದ್ದಾರೆಂಬ ಸಂಶಯವನ್ನು ಯಾರಿಗಾದರೂ ಮೂಡಿಸುವುದು ಸಹಜ.

ಒಬ್ಬ ಸಾಂಸ್ಕೃತಿಕ ವ್ಯಕ್ತಿಯನ್ನು ಅರಿಯುವುದು ಅವನ ಸಮಗ್ರ ಬದುಕಿನ ಅಧ್ಯಯನದಿಂದ. ಭಾರತದ ಪರಿಸ್ಥಿತಿಯಲ್ಲಿ ಹೊಸದಕ್ಕೆ ತುಡಿಯುವುದು ಯೌವನದ ಒಂದು ಉತ್ಸಾಹ

ಮಾತ್ರವಾಗಿದೆ. ನಂತರದಲ್ಲಿ ಈ ಉತ್ಸಾಹ ಕರಗಿ ತಮ್ಮ ಸಾಂಪ್ರದಾಯಿಕ ಛತ್ರಕ್ಕೆ ಹೋಗಿ ಬೀಡುಬಿಡುವುದು ಅನೇಕರ ಚಾಳಿಯಾಗಿದೆ. ಆದ್ದರಿಂದ ಮೊದಲಿನಿಂದ ಕೊನೆಯವರೆಗೂ ತಾಳುವ ನಿಲುವು ಅಖಂಡವಾಗಿದ್ದ ಪಕ್ಷದಲ್ಲಿ ವ್ಯಕ್ತಿಯ ಸಾಧನೆ ಸಹ ಅಖಂಡವಾಗಿರುತ್ತದೆ. ಈ ಬಗೆಯ ನೈತ್ಯಾತ್ಮಕ ಅಖಂಡತ್ವ ಶ್ರೀಕುವೆಂಪು ಅವರಲ್ಲಿ ಸಾಧ್ಯವಾಗಿದೆ. ಕಾರಂತರು ಮಾತ್ರ ಮತ್ತೆ ತಮ್ಮ ಸಾಂಸ್ಕೃತಿಕ ಪ್ರದೇಶದ ರೂಢಮೂಲ ಜಾನಾಂಗಿಕ ಬದುಕನ್ನು ಅಸಲಿ ಮಾಡಿಕೊಳ್ಳುತ್ತಾರೆ. ಕುವೆಂಪು ಮತ್ತು ಕಂಬಾರರಂತೆ ಜಾತಿ ಮತ್ತು ವರ್ಗ ಜನಪದಗಳ ಕೃತಕತೆಯನ್ನು ಇವರು ವಿರೋಧಿಸುವುದಿಲ್ಲ. ತಮ್ಮ ಜನಪದದ ಗಂಭೀರ ಚಿಂತಕನೂ ಅದರ ಹಿತೈಷಿಯೂ ಆಗಿ ಅದರ ಅಭಿವೃದ್ಧಿ ಸಾಧನಗಳನ್ನು ಸ್ವಚ್ಛಗೊಳಿಸುವ, ಕ್ರಿಯಾಶೀಲವಾಗಿಸುವ, ನಮ್ರ ಪ್ರಯತ್ನವನ್ನು ಮಾಡುತ್ತಾರೆ. ಇದು ಭಾಗಿಕ ಸಾಧನೆ ಎಂದು ನಾನು ಹೇಳುವುದಿಲ್ಲ. ಪ್ರತಿ ಜನಾಂಗ ತಮ್ಮ ಜನಾಂಗಿಕ (ethnical) ಸಾಂಸ್ಕೃತಿಕ ನೆಲೆಯ ಮೇಲಿಂದ ಸಮಕಾಲೀನತೆಯನ್ನು ಅರಗಿಸಿಕೊಂಡು ಬದುಕುವುದೇ ನೈಜವಾದ ಪ್ರಗತಿ. ಆ ಪ್ರಗತಿಗೆ ಕಾರಂತರು ದಾರಿದೀಪವಾಗುತ್ತಾರೆಂದರೆ ಅವರ ಕೆಲಸ ಬಹಳ ಮಹತ್ವದೆಂದೇ ಹೇಳಬೇಕು.

ಕಾರಂತರ ಯಕ್ಷಗಾನ ಪುನರುಜ್ಜೀವನದ ಅಶೋತ್ತರಗಳಲ್ಲಿ ಈ ತುಡಿತ ವ್ಯಕ್ತವಾಗಿದೆ. ಇದು ಜನಾಂಗಿಕ ಪ್ರತಿನಿಧಿಯೊಬ್ಬನ ನೈಜವಾದ ತುಡಿತವಾಗಿದೆ. ಯಕ್ಷಗಾನವನ್ನು ಅದರ ಅಭಿನಯದ ಸಂದರ್ಭದಲ್ಲಿ ಅರ್ಥಮಾಡಿಕೊಡುವಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ. ಜನಪದ ಕಲೆಯೊಂದು ಜನಾಂಗವೊಂದರ ಸಾಂಸ್ಕೃತಿಕ ಸಿದ್ಧವಸ್ತು. ಅದು ಸರಿಯಾದ ರೀತಿಯಲ್ಲಿ ಅರ್ಥವಾಗುವುದು ಅದರ ಸಾಂಸ್ಕೃತಿಕ ಪರಿಸರದಲ್ಲಿ ಮಾತ್ರ. ''ಯಾವ ಕಲೆಯೇ ಆಗಲಿ, ಸಂಸ್ಕಾರವೇ ಆಗಲಿ, ದೇಶೀಯ ಆವರಣದಲ್ಲಿ, ಪ್ರೇರಣೆಯಲ್ಲಿ, ಹುಟ್ಟಿ ಬೆಳೆದದ್ದಾದರೆ, ಅದು ದೀರ್ಘಕಾಲ ಬಾಳುತ್ತದೆ; ಅದು ಶಕ್ತಿಶಾಲಿಯಾಗಿ ಕೆಲಸ ಮಾಡುತ್ತದೆ'' ಎಂಬ ಕಾರಂತರ ಮಾತು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಹೀಗೆ ಎಲ್ಲ ಜನಪದ ಕಲಾಮಾದರಿಗಳು ಒಂದು ಸಾಂಸ್ಕೃತಿಕ ನೆಲೆಗೆ ಬದ್ಧವಾದುವು. ಅವು ಉಳಿಯುವ ಅಥವ ಬೆಳೆಯುವ ಕಾರ್ಯ ಸಹ ಈ ಸಾಂಸ್ಕೃತಿಕ ನೆಲೆಯಲ್ಲೇ ಸಾಧ್ಯವಾಗಬೇಕು. ನಿಜವಾದ ಜನಪದ ಕಲೆಯೊಂದು ತನ್ನ ಜನಪದದೊಳಗೆ ಇರುತ್ತಾ ಬೆಳೆಯುತ್ತದೆ. ಹೀಗೆ ತನ್ನ ಜನಪದದೊಳಗೆ ಇರುತ್ತಾ ಬೆಳೆಯುವುದು ಅದರ ಸ್ವಂತಿಕೆಯನ್ನೂ ಶಕ್ತಿಯನ್ನೂ ಅರುಹುತ್ತದೆ. ಜನಪದರು ''ಆ ಸ್ವಂತಿಕೆಯನ್ನು ಎಲ್ಲಿಯ ತನಕ ಉಳಿಸಿಕೊಳ್ಳುತ್ತಾರೆಯೋ ಅಲ್ಲಿಯತನಕ ಅದರ ಘನತೆ ಉಳಿಯುತ್ತದೆ. ಯಾವುದೇ ಒಂದು ಕಲೆ ಇನ್ನೊಂದರ ಅನುಕರಣೆಗೆ ಹೋದಾಗ, ಅದು ತನ್ನ ಸತ್ವವನ್ನು ಕಳೆದುಕೊಳ್ಳುತ್ತದೆ'' ಎಂಬ ಮಾತು ವಾಸ್ತವ ಸತ್ಯ. ಹೀಗೆ ಜನಪದ ಕಲೆಯೊಂದರ ಅಸ್ತಿತ್ವನ್ನು ಅದು ಬದುಕುವ ಪರಿಸರ ಮತ್ತು ಪರಿಸ್ಥಿತಿಗಳಲ್ಲಿ ಅರ್ಥಮಾಡಿಕೊಳ್ಳುವವನು ಮಾತ್ರ ನಿಜವಾದ ಜೀವಂತಿಕೆಯುಳ್ಳ ವಿದ್ವಾಂಸ. ಆ ಶಕ್ತಿ ಕಾರಂತರಲ್ಲಿದೆ.

ಜಾನಪದ ಮತ್ತು ಕಾರಂತರು

ಜಾನಪದವೆಂಬುದು ಜನಪದ ಬದುಕಿನ ಪ್ರಕ್ರಿಯೆ. ಇದರಲ್ಲಿ ಆ ಪ್ರಕ್ರಿಯೆಯ ತಾತ್ವಿಕತೆ ಮತ್ತು ಅದನ್ನು ಅವಲಂಭಿಸಿ ಸೃಜನಗೊಳ್ಳುವ ಸಾಮಗ್ರಿಗಳೆರಡೂ ಸೇರುತ್ತವೆ. ಈ ಎರಡನ್ನೂ ಪರಸ್ಪರ ಸಂಬಂಧಿಗಳೆಂಬ ನೆಲೆಯಲ್ಲಿ ತಿಳಿದು ವಿಶ್ಲೇಷಿಸುವ ಸೋಪಜ್ಞತೆಯನ್ನೆ ಜಾನಪದ ಅಧ್ಯಯನ ಎಂದು ಕರೆಯುತ್ತೇವೆ. ಕ್ರಿಯಾರೂಪವಾದ ಜಾನಪದದ ಈ ಅಖಂಡತ್ವವನ್ನು ತಿಳಿದುಕೊಂಡವನಿಂದ ಮಾತ್ರ ಜಾನಪದ ಅಧ್ಯಯನಕ್ಕೆ ನೆಲೆ, ಬೆಲೆಗಳು ಸಿಗುತ್ತವೆ. ಇಲ್ಲದಿದ್ದಲ್ಲಿ ವಿದ್ವಾಂಸನ ಒಂಟಿತನವನ್ನು ಅವಲಂಬಿಸಿ ಅಪಾರ ಹೇಳಿಕೆಗಳು ಹೊರಬರುತ್ತವೆ. ಜಾನಪದ ಅಖಂಡತ್ವ ಛಿದ್ರಗೊಂಡು ಅದರ ಸಾಮಾಜಿಕ ಕಾರ್ಯಧಾರಿತ್ವ ಮುರಿದುಬೀಳುತ್ತದೆ. ಆಗ ಜಾನಪದ, ಈಗ ಮಾತ್ರ ಇರುವ ಸಾಮಗ್ರಿಯಾಗಿ ಅಧ್ಯಯನಕ್ಕೆ ಒಳಪಡುತ್ತದೆ. ಇದರಿಂದ ಜಾನಪದ ಸಾಯುತ್ತದೆಂಬ ಭಯ ಹುಟ್ಟುತ್ತದೆ. ಜನಪದ ತಮ್ಮ ಮೌಲ್ಯಗಳ ಬಗ್ಗೆ ಗುಮಾನಿಯನ್ನು ಹೊಂದುತ್ತದೆ. ದಿನೇ ದಿನೇ ಜನಪದ ಮತ್ತು ಅದರ ಕರ್ತೃತ್ವಶಕ್ತಿ ಕುಂದುತ್ತಾ ಹೋಗುತ್ತದೆ. ಆಗ ಆ ಜನಪದವು ಒಡೆದು ಹಂಚಿಹೋಗುವುದರ ಜೊತೆಗೆ ಅದರಿಂದ ಹುಟ್ಟಿದ, ಹುಟ್ಟಬಹುದಾದ ಜಾನಪದ ಅರ್ಥಹೀನವಾಗುತ್ತದೆ.

ಆದ್ದರಿಂದ ಜಾನಪದದ ಪ್ರತಿ ಅಂಶ ಅಥವ ಕಲೆ ಕೂಡ ಜಾನಪದದ ಅಖಂಡತ್ವಕ್ಕೆ ಬದ್ಧವಾದುದು. ಅದನ್ನು ಯಾವ ಕಾರಣಕ್ಕೂ ಒಂಟಿಯಾಗಿ ಹೇಳುವುದು ಅಥವ ವಿವರಿಸುವುದು ಸಲ್ಲ. ಒಂದು ಜನಪದ ಸಂಸ್ಕೃತಿಯ ಸಾಧನೆಯ ಮತ್ತು ಅದರ ನಿರಂತರ ಉಳಿಯುವಿಕೆಯ ಪರಿಣಾಮವಾಗಿ ಜನಪದ ಕಲೆಯೊಂದು ರೂಪುಗೊಳ್ಳುತ್ತದೆ. ಅದನ್ನು ಒಡೆಯುವುದು ಮತ್ತು ಅದರಲ್ಲಿ ಬದಲಾವಣೆಯನ್ನು ತರುವುದು ಅಷ್ಟು ಸುಲಭದ ಕೆಲಸವಲ್ಲ. ಆ ಕಲೆಯನ್ನು ಹೊಂದಿರುವ ಜನಪದ ಆ ಕಲೆಯೊಡನೆ ತಾನೂ ಬೆಳವಣಿಗೆಗೆ ಸಿದ್ಧವಾಗಿದೆಯೆ ಎಂಬ ಅರಿವಿನ ಮೇಲೆ ಆ ಕಲೆಯ ಹೊಸತನದ ಬಗ್ಗೆ ಯೋಚಿಸಬೇಕಾಗುತ್ತದೆ. ಇಲ್ಲದಿದ್ದರೆ, ಆ ಕಲೆಯನ್ನೂ ಅದರ ಜನಪದವನ್ನೂ ಒಟ್ಟಾಗಿ ಭ್ರಷ್ಟಗೊಳಿಸಿದ ''ಕಲೆಪಾತಕಿ''ಯ ಕೆಲಸವನ್ನು ಮಾಡಿದಂತಾಗುತ್ತದೆ. ಆದ್ದರಿಂದ ಒಂದು ಜನಪದದ ಅಖಂಡತ್ವವನ್ನು ಅರಿಯದೆ ಅದರ ಕಲೆಯೊಂದನ್ನು ಉಳಿಸುವ ಅಥವ ಬೆಳೆಸುವ ವೈಯಕ್ತಿಕ ಪ್ರಯತ್ನಗಳು ಯಾವಾಗಲೂ ಅಪಾಯಕಾರಿಯಾದವು.

ವ್ಯಕ್ತಿ, ಬದಲಾವಣೆಯನ್ನು ಯಾವಾಗಲೂ ತನ್ನ ವೈಯಕ್ತಿಕ ನೆಲೆ ಮತ್ತು ದೃಷ್ಟಿಕೋನಗಳಿಂದ ನೋಡುತ್ತಾನೆ. ಅವನ ಬೆಳವಣಿಗೆಯ ದೃಷ್ಟಿಯ ಕ್ರಿಯೆಯೂ ಜನಪದವೊಂದರ ಬೆಳವಣಿಗೆಯ ಕ್ರಿಯೆಯೂ ಮೂಲತಃ ಭಿನ್ನವಾಗಿರುತ್ತವೆ. ಸಾಮೂಹಿಕ ಸಿದ್ಧತೆ ನಿಧಾನ. ಯಾಕೆಂದರೆ, ಅದು ಸಾಂಸ್ಕೃತಿಕವಾದುದು. ಜನಪದ ಮತ್ತು ಅದರಲ್ಲಾಗುವ ಬದಲಾವಣೆಗಳು ಮೌಲಿಕವಾದುವು. ಪ್ರತಿ ಬದಲಾವಣೆಯೂ, ಹಿಂದಿನ ತನ್ನ ಸಾಮಾಜಿಕ ರೂಪ (structure)ದಂತೆ ರಚನಾತ್ಮಕವಾಗಿರಬೇಕಾದುದನ್ನು ಅದು ಬಯಸುತ್ತದೆ. ಆ ಬಯಕೆ ಅದರ ಅಸ್ತಿತ್ವದ ಬಯಕೆ.

ಆದ್ದರಿಂದ ಜನಪದಕ್ಕೆ ಒದಗಿಬರುವ ಬದಲಾವಣೆ ಸಾಮಾಜಿಕ (ಧಾರ್ಮಿಕ, ಆರ್ಥಿಕ ಇತ್ಯಾದಿ) ಅನಿವಾರ್ಯತೆಯೊಂದನ್ನು ಕುರಿತ ಸಾಮೂಹಿಕ ಚಿಂತನೆಯಾಗಿರಬೇಕು. ಈ ಬಗೆಯ ಅವಶ್ಯಕತೆಯನ್ನು ಜನಪದ ತಾನಾಗಿಯೇ ತುಂಬಿಕೊಳ್ಳುತ್ತದೆ. ಅದಕ್ಕಾಗಿ ತನ್ನ ಜನರನ್ನು ಒಟ್ಟಾಗಿ ಅಥವ ಪ್ರತಿನಿಧಿಗಳ ಮೂಲಕ ಪ್ರಚೋದಿಸುತ್ತದೆ. ಬ್ರಾಹ್ಮಣರು ಹೆಣ್ಣು-ಗಂಡುಗಳನ್ನು ಒಂದೆಡೆ ಸೇರಿಸಿ, ವಧು ಆಯ್ಕೆಯನ್ನು ಸುಗಮಗೊಳಿಸಿ, ತಮ್ಮ ಸಮಾಜದ ದುರಂತಗಳನ್ನು ಮುರಿಯಲು ನಡೆಸುತ್ತಿರುವ ಯತ್ನವನ್ನು ಇದಕ್ಕೆ ಜ್ವಲಂತ ಉದಾಹರಣೆಯನ್ನಾಗಿ ಕೊಡಬಹುದು.

ಯಕ್ಷಗಾನ ಪುನರುಜ್ಜೀವನ ಮತ್ತು ಕಾರಂತರು

ಜಾನಪದ ಮೂಲರೂಪ (Architype)ವೊಂದನ್ನು ಪುನರ್ರಚಿಸುವುದು ಎಂದಿಗೂ ಸಾಧ್ಯವಿಲ್ಲ. ವೈಜ್ಞಾನಿಕವಾಗಿ ಇದು ಅಸಾಧುವಾದ ಸಂಗತಿ ಕೂಡ. ಹೀಗೆ ಮಾಡುವಾಗ ಜಾನಪದ ಪರಂಪರೆಯ ಚಲನಾತ್ಮಕ ಸ್ವಭಾವ ಮತ್ತು ಇತಿಹಾಸದ ವಾಸ್ತವತೆಗಳನ್ನು ತಪ್ಪಾಗಿ ಅರ್ಥಮಾಡಿಕೊಂಡಂತಾಗುತ್ತದೆ. ಯಾವಾಗಲೂ ಜಾನಪದ ಮೂಲರೂಪವೊಂದರ ಕಲ್ಪನೆ ಫಲ ಕೊಡದ ಒಂದು ಆದರ್ಶ. ಎಲ್ಲಿಯವರೆಗೆ ಸಾಂಸ್ಕೃತಿಕ-ರಾಜಕೀಯ- ಧಾರ್ಮಿಕ-ಜನಾಂಗಿಕ ಸ್ಥಿತ್ಯಂತರಗಳು ಸಹಜವೆಂದು ನಾವು ಒಪ್ಪಿಕೊಳ್ಳುತ್ತೇವೆಯೋ ಅಲ್ಲಿಯವರೆಗೆ ಜಾನಪದ ಪರಂಪರೆಯಲ್ಲಿ ಆಗಿರುವ ವ್ಯತ್ಯಾಸಗಳು ರೂಪಾಂತರಗಳು, ಸಹಜವೆಂದೇ ಒಪ್ಪಿಕೊಳ್ಳಬೇಕಾಗುತ್ತದೆ. ಇಂಥ ಬದಲಾವಣೆಗಳ ಜೊತೆ ಕೆಲವು ಅವಾಂತರಗಳಾಗಿ ಅವು ಸಾಂಪ್ರದಾಯಿಕ ಮೂಢತೆಯ ಅನಿವಾರ್ಯ ಭಾಗಗಳಾದಾಗ ಜಾನಪದ ಅವುಗಳನ್ನು ಮೌಲ್ಯಗಳೆಂದು ಸ್ವೀಕರಿಸುವುದೂ ಉಂಟು. ಈ ಬಗೆಯ ದೋಷಗಳಿಗೆ ಜನಾಂಗಿಕ ಬದಲಾವಣೆಯಲ್ಲಿ ಆಗುತ್ತಿರುವ ದೋಷಗಳೇ ಕಾರಣಗಳು. ಸಂಸ್ಕೃತಿಗಳು ಸಂಘರ್ಷಗೊಂಡು, ಧಾರ್ಮಿಕ-ಜಾತೀಯ ಅಥವ ವರ್ಗೀಯ ಮೌಲ್ಯಗಳು ಅಪಭ್ರಂಶಗಳಾಗತೊಡಗಿದಂತೆಲ್ಲ ಇದು ಅನಿವಾರ್ಯವಾಗುತ್ತದೆ.

ಇಷ್ಟಾದರೂ ಒಂದು ಜನಪದದ ಕೆಲವು ಮಾಧ್ಯಮಗಳನ್ನು ಸಹಜವಾಗಿ ಉಳಿಸಿಕೊಂಡು ಹೋಗುವ ಪ್ರಯತ್ನ ಭಾವುಕವಾದುದಲ್ಲ. ಅದು ಜನಾಂಗಿಕ ಸಾಂಸ್ಕೃತಿಕ ಅಸ್ತಿತ್ವವನ್ನು ಉಳಿಸುವ ನಮ್ಮ ಪ್ರಯತ್ನ. ಈ ಪ್ರಯತ್ನ ಮೂಲ ಮಾತೃಕೆಯನ್ನು ಉಳಿಸುವ ಆದರ್ಶಕ್ಕಿಂತ ಭಿನ್ನವಾದುದು. ಒಂದು ಜನಾಂಗ ಮತ್ತು ಅದರ ಸಂಸ್ಕೃತಿ ಸದಾಕಾಲ ಕಾರ್ಯಾತ್ಮಕವಾಗಿ ಬದುಕಲಿ ಎಂಬುದರ ಸದಪೇಕ್ಷೆಯೆ ಇಲ್ಲಿನ ಗುರಿ. ಈ ಗುರಿಯನ್ನು ಹೊಂದಿದವನು ತನ್ನ ಜನಪದದ ಹುಟ್ಟು-ಬೆಳವಣಿಗೆಯನ್ನು ಭಾವನಾತ್ಮಕ ಅಹಂಭಾವಗಳಿಂದ ಪರಿಭಾವಿಸಬಾರದು. ಭೌಗೋಳಿಕ-ಚಾರಿತ್ರಿಕ ಅಥವ ಸಾಮಾಜಿಕ ಆಕಸ್ಮಿಕಗಳ ಜೊತೆಯಲ್ಲಿ ಆ ಜನಾಂಗ ಬದುಕಿ ಬಂದುದರ ಸಾಮರ್ಥ್ಯ, ಹಿನ್ನೆಲೆ ಮತ್ತು ಅದಕ್ಕೆ ಕಾರಣವಾದ ಅವರ ಜಾನಪದೀಯ ಭದ್ರತೆಗಳ ಹಿನ್ನೆಲೆಯಿಂದ ಚಿಂತಿಸಬೇಕು. ಆಗ ಮಾತ್ರ ಈಗಿರುವ ಜನಾಂಗಿಕ-ಸಾಂಸ್ಕೃತಿಕ ಮಾಧ್ಯಮಗಳನ್ನು ಭಾವೀ ಜನಾಗಂದ ಒಳಿತಿಗೂ ಬರುವಂತೆ ಪುನರುಜ್ಜೀವಿಸಲು ಸಾಧ್ಯ. ಒಂದು ಜನಾಂಗ ಹುಟ್ಟಿದ

ಮತ್ತು ಬದುಕುವಿಕೆಗೆ ರೂಪಿಸಿಕೊಂಡ ಸಾಂಸ್ಕೃತಿಕ ಜಾನಪದೀಯ ಅರ್ಥ ಮತ್ತು ಕಾರ್ಯಗಳ ಹಿನ್ನೆಲೆಯನ್ನು ತಿಳಿದು ಮತ್ತೆ ಅವುಗಳ ಭದ್ರ ಬುನಾದಿಯ ಮೇಲೆ ಅವರಿಗೆ ಜೀವನ ಸಹ್ಯವಾಗುವಂತೆ ಮಾಡುವುದೇ ಇಲ್ಲಿನ ಕೆಲಸ. ಅಂಥ ಕೆಲಸವನ್ನು ಆ ಜನಾಂಗದ ಸಂಸ್ಕೃತಿಯನ್ನು ಅರ್ಥ ಮಾಡಿಕೊಂಡವ ಮತ್ತು ಅದರೊಳಗೆ ಇರುವವ ಮಾತ್ರ ಮಾಡಬಲ್ಲ. ಯಾಕೆಂದರೆ, ತನ್ನ ಜನಾಂಗದ ಪ್ರತಿ ಸುಧಾರಣೆಯೂ ಅದರೊಳಗಿನದೇ ಆಗಿರಬೇಕು. ಪ್ರತಿಕಲೆಯ ಸುಧಾರಣೆಯೂ ಆ ಕಲೆಯನ್ನು ಆ ಜನಗಳಿಗೆ ಅಸಲಿಯಾಗಿ ಉಳಿಸುವಂಥ ಪ್ರಯತ್ನವಾಗಬೇಕು. ''ಈ ಸುಧಾರಣೆ ತನ್ನ ಹಾದಿಯನ್ನು ಬಿಟ್ಟು ಅನ್ಯ ಹಾದಿಯಲ್ಲಿ ಸರಿಯುವುದರಲ್ಲಿಲ್ಲ. ಆಗ 'ಈ ಕಲೆ' ಉಳಿಯುವುದಿಲ್ಲ; ಇನ್ನೊಂದೇ ಕಲೆ ಬರುತ್ತದೆ. ಪ್ರತಿ ಕಲೆಗಳಿಗೂ ''ತಮ್ಮ ತಮ್ಮದಾದ ಕಲಾಧರ್ಮಗಳಿವೆ'' ಎಂಬುದನ್ನು ಕಾರಂತರು ಚೆನ್ನಾಗಿ ಬಲ್ಲರು. ಸುಧಾರಣಾವಾದಿಯಾಗುವುದರ ಅಪಾಯ ಅವರಿಗೆ ಗೊತ್ತಿದೆ. ಈ ಸುಧಾರಣೆ ಜನಾಂಗದ ಹೊಸ ಚಿಂತನೆಯ ಬಾಳು-ಬದುಕಿಗೆ ಕಾರಣವಾಗುವುದರ ಆಶಯವೇ ಅವರ ಗುರಿ. ಆ ಕಲೆ ತನ್ನ ಸಾಂಪ್ರದಾಯಿಕ ಸ್ವಂತಿಕೆ ಮತ್ತು ಘನತೆಗಳನ್ನು ಕಾಯ್ದುಕೊಂಡು ಬದಲಾವಣೆಗೆ ಒಗ್ಗುವಂತಿರಬೇಕು. ಕಲೆಯ ಈ ವಾಸ್ತವಿಕ ಉದ್ದೇಶ ಮಾತ್ರ ನಿರ್ದೇಶಿತ ಜೀವನದ ಸತ್ಯಗಳ ಸೃಷ್ಟಿಗೆ ಕಾರಣವಾಗುತ್ತದೆ. ಯಕ್ಷಗಾನದ ಗೀತ, ಸಾಹಿತ್ಯ, ನೃತ್ಯ, ಬಣ್ಣವಿಧಾನಗಳ ಸಂವಿಧಾನಾತ್ಮಕ ಗುಣ ಮತ್ತು ಸಂಯೋಜನೆಗಳನ್ನು ಪರಿಭಾವಿಸುವಾಗಲೆಲ್ಲ ಕಾರಂತರು ಈ ಕಲೆಯ ಮೂಲಭೂತ ತುಡಿತವೇನೆಂಬುದನ್ನು ಅರ್ಥ ಮಾಡಿಕೊಂಡಿದ್ದಾರೆ. ಆದ್ದರಿಂದಲೆ ಅವರಿಗೆ ಪುನರುಜ್ಜೀವನದ ಕಾರ್ಯ ಸಾಧ್ಯವಾಗಿದೆ. ಎಲ್ಲಿಯವರೆಗೆ ಕಾರಂತರು ಈ ಪ್ರಯೋಗವನ್ನು ತಾನು ಒಂದು ಜಾನಾಂಗಿಕ-ಸಾಂಸ್ಕೃತಿಕ ಕಲೆಯೊಂದರ ಪ್ರತಿನಿಧಿ ಎಂದು ಭಾವಿಸಿಕೊಂಡು ಮುಂದುವರಿಯುತ್ತಾರೋ ಅಲ್ಲಿಯವರೆಗೆ ಈ ಪುನರುಜ್ಜೀವನ ಕಾರ್ಯದಲ್ಲಿ ತೊಡಗಿರಲು ಅವರಿಗೆ ಅವಕಾಶವಿದ್ದೇ ಇರುತ್ತದೆ. ತಾನೊಬ್ಬ ವಿಚಾರಬಲ್ಲ, ಈ ಸಮಾಜವನ್ನು, ಕಲೆಯನ್ನು ನೆಟ್ಟಗೆ ಮಾಡಬಲ್ಲ ವ್ಯಕ್ತಿ ಎಂಬ ವ್ಯಕ್ತಿಪ್ರತಿಷ್ಠೆ ಬಂದದ್ದಾದರೆ ಜೀವಂತವಾಗಿರುವ ಯಕ್ಷಗಾನ ಪರಂಪರೆಯನ್ನು ಮೂಗುಹಿಡಿದು, ನೀರಿನಲ್ಲಿ ಮುಳುಗಿಸಿಬಿಡುತ್ತಾರೆ. ಮುಂದೆ ಅವರಿಂದ ಸೃಷ್ಟಿಗೊಳ್ಳಬಹುದಾದ ಶ್ರೇಷ್ಠಕಲೆ ಸಾಮಾಜಿಕರನ್ನು ಕೊಂದು ರಾಜಪ್ರಭುತ್ವವನ್ನು ಸ್ಥಾಪಿಸಿದಂತಾಗುತ್ತದೆ.

ಕಾರಂತರಿಗೆ ಬದಲಾವಣೆ ಮತ್ತು ವಾಸ್ತವತೆಗಳ ನಡುವಿನ ಅಂತರ ಸ್ಪಷ್ಟವಾಗಿ ತಿಳಿದಿದೆ. ಯಕ್ಷಗಾನವನ್ನು ಬೀದಿಗಿಳಿಸುವ ಅಥವ ಸಿಂಹಾಸನಕ್ಕೇರಿಸುವ ಉತ್ಸಾಹ ಅವರದಲ್ಲ. ಅದರ ಜಾನಾಂಗಿಕ ಕಾರ್ಯಧಾರಿತ್ವದ ಬಗ್ಗೆ (ehno-functional) ಅವರು ಚಿಂತಿಸುವಂತಿದೆ. ಯಕ್ಷಗಾನದೊಳಗೆ ಕ್ರಿಸ್ತನ, ಮಹಮ್ಮದನ ಕಥೆಗಳನ್ನು ತಂದು ತುಂಬುವುದು ಸಾಧ್ಯವಿಲ್ಲವೆಂಬ ಅರಿವು ಸಹ ಅವರಿಗಿದೆ. ಆದರೆ ಯಕ್ಷರಂಗದ ವಿಚಾರದಲ್ಲಿ ಕಾರಂತರು 'ಯಕ್ಷಗಾನ'ವನ್ನು ಬಿಟ್ಟು, ದೂರಸರಿಯುತ್ತಿದ್ದಾರೆ ಎನಿಸುತ್ತದೆ. ಯಕ್ಷರಂಗ, ಯಕ್ಷಗಾನದ ಒಂದು

ಪಾಠಭೇದವಾಗಬಹುದೇ ವಿನಃ ಅದು ಯಕ್ಷಗಾನದ ಬೆಳೆಯುವ ರೂಪ ಎನಿಸಿಕೊಳ್ಳಲಾರದು, ಪಾರಂಪರಿಕ ಯಕ್ಷಗಾನ ಪ್ರೇಕ್ಷಕರನ್ನು ಹೆಚ್ಚು ಪರಿಗಣನೆಗೆ ತೆಗೆದುಕೊಳ್ಳದಿರುವ ಅಪಾಯವೇ ಇದಕ್ಕೆ ಕಾರಣವಾಗಿದೆ.

ಜನಪದ ಪರಂಪರೆಯ ಪ್ರಜ್ಞೆ ಮತ್ತು ಕಾರಂತರ ಕಾದಂಬರಿಗಳು

''ಯಕ್ಷಗಾನ'' ಭಾರತದ ಜನಪದಗಳ ಸಂಸ್ಕೃತಿಯ ವ್ಯವಸ್ಥೆಯಲ್ಲಿನ ಒಂದು ಸಂಘರ್ಷದ ಘಟ್ಟವಾಗಿದೆ. ಯಕ್ಷಗಾನದ ವಸ್ತು ಮತ್ತು ಪ್ರತಿಪಾದನಾ ಚಿಂತನೆಯಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ. ಆದ್ದರಿಂದ ಯಕ್ಷಗಾನದ ಪುನರ್‌ಸೃಷ್ಟಿಯ ಚಿಂತನೆ ಭಾರತೀಯ ಜನಪದಗಳ ಒಟ್ಟು ಚಿಂತನೆಯ ಸಂದರ್ಭದಿಂದ ನೋಡಿದಾಗ ಭಾಗಿಕವಾದ ಸೃಷ್ಟಿ ಎನಿಸುತ್ತದೆ. ಇದೇ ದೃಷ್ಟಿ ಕಾರಂತರ ಕಾದಂಬರಿಗಳ ಸೃಷ್ಟಿ ಮತ್ತು ಪರಿಣಾಮದಲ್ಲಿ ಅಭಿವ್ಯಕ್ತಿವಾಗಿದೆ. ಅವರ ಪ್ರಾತಿನಿಧಿಕ ಕಾದಂಬರಿಗಳ ಹೆಸರು ಮತ್ತು ಪರಿಣಾಮದ ಫಲಿತದಿಂದ ಇದನ್ನು ಗ್ರಹಿಸಬಹುದು. ಮರಳಿಮಣ್ಣಿಗೆ, ಚೋಮನದುಡಿ, ಅಳಿದ ಮೇಲೆ ಮತ್ತು ಮೂಕಜ್ಜಿಯ ಕನಸುಗಳಲ್ಲಿ ಯಥಾಸ್ಥಿತಿವಾದ ಮುಂದುವರಿಯುತ್ತದೆ. ಪುರಾತನಪ್ರಜ್ಞೆಯ ಪ್ರಾತಿನಿಧಿಕ ಸ್ವರೂಪವಾದ ಮೂಕಜ್ಜಿ ಪ್ರಾಚೀನ ಪರಂಪರೆಯೊಂದಿಗೆ ಅರ್ವಾಚೀನ ಪರಂಪರೆಯನ್ನು ಅಖಂಡಗೊಳಿಸುತ್ತಿದ್ದಾಳೆ ಎಂಬ ಅಂಶ ಮೂಡುತ್ತಿರುವಾಗಲೇ ಅದನ್ನು ಭ್ರಮೆಗೊಳಿಸಿಬಿಡುತ್ತಾಳೆ. ಈ ಹಿನ್ನೆಲೆಯಿಂದ ನೋಡಿದಾಗ ಕಾರಂತರ ಸಾಮೂಹಿಕ ಬದುಕಿನ ಚಿಂತನೆ ಮತೆತು ಸೃಷ್ಟಿಕ್ರಿಯೆ ಪ್ರಾದೇಶಿಕ ಜಾನಪದೀಯ ಸ್ವಭಾವಗಳ ಪುನರ್ ಸೃಷ್ಟೀಕರಣವೆನಿಸುತ್ತದೆ.

ಎಲ್.ಕೆ. ಅನಂತ ಕೃಷ್ಣ ಅಯ್ಯರ್

ಪ್ರೊ.ಎಚ್.ಎಂ. ಮಹೇಶ್ವರಯ್ಯ

ತ್ರಿಚೂರಿನ ಸ್ಟೇಟ್ ಮ್ಯೂಸಿಯಂನ ಕ್ಯೂರೇಟರ್ ಹಾಗೂ ಜ್ಯೂಯಾಲಜಿಕಲ್ ಗಾರ್ಡನ್ನಿನ ಸೂಪರಿಂಡೆಂಟ್ ಆಗಿದ್ದ ದಿವಾನ್ ಬಹದ್ದೂರ ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರು ಸಂಪಾದಿಸಿದ The Mysore Tribes and Castes ಎಂಬ ನಾಲ್ಕು ಸಂಪುಟಗಳು ಮೈಸೂರು ವಿಶ್ವವಿದ್ಯಾಲಯದಿಂದ 1935ರಲ್ಲಿ ಪ್ರಕಟವಾಗಿವೆ. ವಾಸ್ತವವಾಗಿ 1903ರಲ್ಲಿ ಮೈಸೂರು ಪ್ರಾಂತ್ಯದ ಮಾನವಕುಲಗಳ ಅಧ್ಯಯನ ದಿವಾನ್ ಬಹದ್ದೂರ ಹೆಚ್.ವಿ. ನಂಜುಂಡಯ್ಯ ಅವರಿಂದ ಪ್ರಾರಂಭವಾಯಿತು. ಸುಮಾರು 17 ವರ್ಷಗಳ ಕಾಲ ಈ ಪ್ರಾಂತದ ಅನೇಕ ಕುಲಗಳ ಅಧ್ಯಯನ ನಡೆಸಿ 34 ಪುಸ್ತಕಗಳನ್ನು ಪ್ರಕಟಿಸಿದರು. ಕಾರಣಾಂತರದಿಂದ ಇವರು ಅಧ್ಯಯನ ಮುಂದುವರೆಸಲಿಲ್ಲ. ಮೈಸೂರಿನ ಮಹಾರಾಜರ ಆದೇಶದ ಮೇರೆಗೆ ದಿವಾನ್ ಬಹದ್ದೂರ ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರು ಆ ಕೆಲಸವನ್ನು ವಹಿಸಿಕೊಂಡು 1903ರಿಂದ 1918ರ ಒಳಗೆ ಮೈಸೂರು ಪ್ರಾಂತದ ಕುಲಸಂಬಂಧವಾದ 34 ಸಂಪುಟಗಳನ್ನು ಪ್ರಕಟಿಸಿದರು. ಇವುಗಳಲ್ಲಿ ಅಗಸ, ಬಂಜಾರ, ಬೆಸ್ತ, ಬೇಡ, ದೊಂಬ, ಹೆಳವ, ಕೊರಚ, ಮೇದಾರ, ಕುರುಬ, ಮೊಂಡ, ವೊಡ್ಡ ಮುಂತಾದ ಜನಾಂಗಗಳು ಸೇರಿವೆ. ಕಲ್ಕತ್ತಾ ವಿಶ್ವವಿದ್ಯಾಲಯದ ಮಾನವಶಾಸ್ತ್ರ ಮತ್ತು ಪ್ರಾಚೀನ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯ ಪ್ರಾಧ್ಯಾಪಕರಾಗಿದ್ದ ಅನಂತಕೃಷ್ಣ ಅಯ್ಯರ್ ಅವರು ಬ್ರಿಟನ್, ಐರ್‌ಲ್ಯಾಂಡ್, ಅಮೇರಿಕಾ, ಇಟಲಿ, ವಿಯೆನ್ನಾ ದೇಶಗಳ ಅನೇಕ ಸಂಸ್ಥೆಗಳ ಗೌರವ ಸದಸ್ಯರಾಗಿ ಬುಡಕಟ್ಟುಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದರು. ಪ್ರತಿಯೊಂದು ಕುಲಗಳ ಇತಿಹಾಸ, ಅವುಗಳ ಬಳಿಗಳು, ವಿಧಿಕ್ರಿಯೆ ಆಚರಣೆಗಳು, ಹುಟ್ಟು ಸಾವಿನ ಜೀವನಾವರ್ತಗಳು, ಅವರ ಧರ್ಮ, ನಂಬಿಕೆ ಬದುಕಿನ ವಿಧಾನಗಳು ಅವರ ಕಲೆ ಹಾಗೂ ಜನಪದದ ವಿವರಗಳನ್ನು ಈ ಸಂಪುಟಗಳಲ್ಲಿ ಸಂಗ್ರಹಿಸಿದ್ದಾರೆ. ಕರ್ನಾಟಕದ ಆ ಕಾಲಘಟ್ಟದ ಜನಪದರ ಜೀವನದ ವಿವರಗಳನ್ನರಿಯಲು ಈ ಸಂಪುಟಗಳು ಸಹಕಾರಿಯಾಗುತ್ತವೆ.

ಹುಲ್ಲೂರು ಶ್ರೀನಿವಾಸ ಜೋಯಿಸ

ಡಾ|| ಎಸ್. ಶಶಿಕಲಾ

1982ರಲ್ಲಿ ಜನಿಸಿದ ಚಿತ್ರದುರ್ಗದ ಹುಲ್ಲೂರು ಶ್ರೀನಿವಾಸ ಜೋಯಿಸರು ಮೂಲತಃ ನ್ಯಾಯವಾದಿಗಳು. ಕರ್ನಾಟಕದ ಏಕೀಕರಣಕ್ಕಾಗಿ ದುಡಿದವರು. ಸ್ವಾತಂತ್ರ ಹೋರಾಟಗಾರರು, ಖ್ಯಾತ ಇತಿಹಾಸ ಸಂಶೋಧಕರು. ಚಿತ್ರದುರ್ಗದ ಇತಿಹಾಸವನ್ನು ಕುರಿತು ಸಂಶೋಧನೆ ನಡೆಸಿರುವ ಜೋಯಿಸರು ಚಿತ್ರದುರ್ಗದ ಚರಿತ್ರೆಯೊಂದಿಗೆ ತಳುಕು ಹಾಕಿಕೊಂಡಿರುವ ಜನಪದ ಗೀತೆಗಳನ್ನು 1940ರಷ್ಟು ಹಿಂದೆಯೇ ಸಂಗ್ರಹಿಸಿ ಪ್ರಕಟಿಸಿರುತ್ತಾರೆ. ಚಿತ್ರದುರ್ಗವು ಕೋಲಾಟಕ್ಕೆ ಮತ್ತು ಕೋಲು ಪದಗಳಿಗೆ ಪ್ರಸಿದ್ಧಿ. ಚಿತ್ರದುರ್ಗದ ಪಾಳೆಯಗಾರರ ಜೀವನಕ್ಕೆ ಸಂಬಂಧಿಸಿದ 'ಮಾಯಕೊಂಡದ ಮುತ್ತಿಗೆ ಕುರಿತ ಕೋಲು ಪದ', 'ಪಾರಿಜಾತ', 'ಚಿತ್ರದುರ್ಗ ಪತನ ಕುರಿತ ಕೋಲುಪದ', 'ಸುಲ್ತಾನನ ಜಗಳದ ಪದ'ಗಳನ್ನು ಸಂಗ್ರಹಿಸಿ ಪ್ರಕಟಿಸಿರುವ ಜೋಯಿಸರು ಜನಪದ ಸಾಹಿತ್ಯವನ್ನಾಧರಿಸಿ ಕೆಲವಾರು ಕೃತಿಗಳನ್ನು ಕೂಡಾ ಪ್ರಕಟಿಸಿರುತ್ತಾರೆ. 'ಇತಿಹಾಸ ಸಂಶೋಧನ ಪ್ರಸಕ್ತ', 'ಐತಿಹ್ಯ ವಿಮರ್ಶನ ವಿಚಕ್ಷಣ' ಜೋಯಿಸರಿಗೆ ಸಂದ ಬಿರುದುಗಳು.

ಎನ್. ಅನಂತರಂಗಾಚಾರ್

ಡಾ|| ಎಸ್. ಶಶಿಕಲಾ

ಜನಪದ ಸಾಹಿತ್ಯದಲ್ಲಿ ಮಾನೌಮಿ ಚೌಪದಗಳಿಗೆ ವಿಶೇಷ ಸ್ಥಾನವಿದೆ. ಅನೇಕ ಜನಪದ ನುಡಿಗಟ್ಟುಗಳು, ನಡಾವಳಿಗಳು ಈ ಚೌಪದಗಳಲ್ಲಿ ಕಂಡು ಬರುತ್ತವೆ. ಇಂತಹ ವಿಶಿಷ್ಟ ಚೌಪದಗಳನ್ನು ಸಂಗ್ರಹಿಸಿ 1940ರಲ್ಲಿ 'ಮಾನೌಮಿಯ ಚೌಪದನಗಳು' ಎಂಬ ಹೆಸರಿನಲ್ಲಿ ಪ್ರಕಟಿಸಿದ ಯಶಸ್ಸು ಎನ್. ಅನಂತರಂಗಾಚಾರ್ ಅವರದು. ಜನಪದೀಯ ಗುಣ, ಗೇಯಂಶಗಳನ್ನುಳ್ಳ ಈ ಕೃತಿಯಲ್ಲಿ ದೊಡ್ಡ ಕೃಷ್ಣರಾಜ ಪ್ರಭುಗಳು, ಮೈಸೂರಿನ ಅನೇಕ ಪ್ರಸಿದ್ಧ ದಳವಾಯಿಗಳು, ಮಣೆಗಾರರು, ಚಿನಿವಾರರು, ಗೌಡ- ಸೆಟ್ಟಿ ಮುಂತಾದವರನ್ನು ಕುರಿತ ಗೀತೆಗಳೊಂದಿಗೆ ಕೆಲವು ಒಗಟುಗಳನ್ನು ಕುರಿತ ಚೌಪದಗಳು ಇದ್ದು ಅತ್ಯಂತ ಆಕರ್ಷಕವಾದುವುಗಳಾಗಿವೆ.

ಬಿ.ಎನ್. ರಂಗಸ್ವಾಮಿ

ಡಾ|| ಎಸ್. ಶಶಿಕಲಾ

ಮೈಸೂರು ಜಿಲ್ಲೆಯ ಬದನವಾಳು ಗ್ರಾಮದ ರಂಗಸ್ವಾಮಿಯವರು ಗೊರೂರು ರಾಮಸ್ವಾಮಿ ಅಯ್ಯಂಗಾರರ ಸಾಹಚರ್ಯದೊಂದಿಗೆ ಜಾನಪದ ಕ್ಷೇತ್ರವನ್ನು ಪ್ರವೇಶಿಸಿದವರು. 1940ರಲ್ಲಿ ರಂಗಸ್ವಾಮಿಯವರ 'ಹಳ್ಳಿಯ ಪದಗಳು' ಜನಪದ ಗೀತ ಸಂಗ್ರಹ ಬೆಳಕು ಕಂಡಿತು. ಈ ಸಂಗ್ರಹದಲ್ಲಿ ರಂಗಸ್ವಾಮಿಯವರು ವೈಜ್ಞಾನಿಕ ಸಂಗ್ರಹ ಕಾರ್ಯದ ಹೊಳಹನ್ನು ಪ್ರದರ್ಶಿಸಿರುತ್ತಾರೆ. ಜನಪದ ಸಾಹಿತ್ಯ ಸಂಗ್ರಹ ಅಷ್ಟೇನೂ ಸುಲಭವಾದ ಕಾರ್ಯವಲ್ಲ. ಜನಪದರೊಂದಿಗೆ ಬೆರೆತು, ಅವರ ಮನಸ್ಸನ್ನರಿತು, ಸಾಹಿತ್ಯ ಸಂಗ್ರಹಿಸಬೇಕೇ ಹೊರತು ಜೋರು, ಅಧಿಕಾರ, ಅಹಮಿಕೆಗಳಿಂದ ಸಾಧ್ಯವಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತಾರೆ. ಒಟ್ಟು 81 ಪುಟಗಳುಳ್ಳ ಈ ಸಂಗ್ರಹದಲ್ಲಿ 500ಕ್ಕೂ ಹೆಚ್ಚಿನ ತ್ರಿಪದಿಗಳಿವೆ. ತವರು-ಸಂಗಾತಿ-ಬಸುರಿ-ಬಾಣಂತಿ, ಮಗು ಎಂಬ ಉಪಶೀರ್ಷಿಕೆಗಳನ್ನಾಗಿ ಈ ತ್ರಿಪದಿಗಳನ್ನು ವಿಂಗಡಿಸಿಕೊಂಡಿದ್ದಾರೆ. ವಿಶೇಷವಾಗಿ 'ಗಂಗೆ ಗೌರಿ ಜಗಳ' ಪ್ರಸಂಗ ಆಪ್ಯಾಯಮಾನವಾದ ತ್ರಿಪದಿ ರೂಪದಲ್ಲಿದೆ. ಜನಪದರ ಬದುಕಿನ ವಿವಿಧ ಆಯಾಮಗಳನ್ನು ಪರಿಚಯಿಸುವ ಈ ಸಂಗ್ರಹವು ಕನ್ನಡ ಜನಪದ ಗೀತ ಸಾಹಿತ್ಯ ಮತ್ತು ಸಂಸ್ಕೃತಿಯ ಮಹತ್ವವನ್ನು ಪರಿಚಯಿಸಿ ಕೊಡುತ್ತದೆ.

ಎಂ.ಎಸ್. ಅನಂತ ಪದ್ಮನಾಭರಾವ್

ಡಾ|| ಎಸ್. ಶಶಿಕಲಾ

1945ರ ಡಿಸೆಂಬರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾದ ಅತ್ಯುತ್ತಮವಾದ ಲೇಖನ 'ಕೊಡಗಿನ ಜನಪದ ಸಾಹಿತ್ಯ'ವನ್ನು ಕುರಿತಾದದ್ದು. ಶ್ರೀ ಎಂ.ಎಸ್. ಅನಂತ ಪದ್ಮನಾಭರಾಯರು ಈ ಲೇಖನದ ಲೇಖಕರು. ಪ್ರಾಸ್ತಾವಿಕವಾಗಿ ಕೊಡವ ಜನಾಂಗದ ಗುಣ ಸ್ವಭಾವಗಳನ್ನು ವಿವರಿಸಿರುವ ಲೇಖಕರು ಕೊಡವರ ಧಾರ್ಮಿಕ ಸಾಹಿತ್ಯವು ಮುಕ್ತ ಛಂದಸ್ಸಿನಿಂದ ಕೂಡಿದ್ದು ಪದ್ಯಬಂಧವು ರಗಳೆಯನ್ನು ಹೋಲುತ್ತದೆಂದು ಅಭಿಪ್ರಾಯಪಟ್ಟಿದ್ದಾರೆ. ಕೊಡವರ ಆರಾಧ್ಯ ದೇವತೆಯಾದ ಕಾವೇರಿಯಮ್ಮನನ್ನು ಕುರಿತ ಸ್ತುತಿಗೀತೆಯನ್ನು ಕೊಡವ ಭಾಷಾ ಮೂಲದೊಂದಿಗೆ ಕನ್ನಡಿಸಿ ಕೊಟ್ಟಿದ್ದಾರೆ. ಕಥನ ಕವನ ಒಂದನ್ನು ಸಮಗ್ರವಾಗಿ ಸಂಗ್ರಹಿಸಿಕೊಟ್ಟಿದ್ದು, ಸಾವಿರಾರು ಸಾಲುಗಳುಳ್ಳ ಇಂತಹ ಅಸಂಖ್ಯಾತ ಕಥನ ಗೀತೆಗಳು ಕೊಡವರಲ್ಲಿ ಪ್ರಚಾರವಿದ್ದು, ಇವುಗಳನ್ನು ಹಾಡುವ ಪ್ರತ್ಯೇಕ ಗಾಯಕ ವರ್ಗ ಕೊಡಗಿನಲ್ಲಿದೆ ಎಂದು ಸೂಚಿಸಿರುತ್ತಾರೆ. ನಡಿಕೇರಿಯಂಡ ಚಿಣ್ಣಪ್ಪನವರ 'ಪಟ್ಟೋಲೆ ಪಳಮೆ' ಕೃತಿಯನ್ನು ಸ್ಮರಿಸಿರುವ ರಾಯರು ಕೊಡವ ಜನಪದ ಗೀತೆಗಳ ಸಂಗ್ರಹಕ್ಕೆ ನೆರವಾದ ಮಿತ್ರರನ್ನು ಸ್ಮರಿಸಿದ್ದಾರೆ.

ಅಚ್ಚಪ್ಪ

ಡಾ|| ಎಸ್. ಶಶಿಕಲಾ

ಹೊಸ ಅಗ್ರಹಾರ ಅಚ್ಚಪ್ಪನವರು ಜನಪದ ಗಾದೆಗಳ ಕ್ಷೇತ್ರದಲ್ಲಿ ಕೆಲಸ ಮಾಡಿ ಪ್ರಖ್ಯಾತರಾಗಿದ್ದಾರೆ. ೧೯೪೪ ರಷ್ಟು ಹಿಂದೆಯೇ 'ಕನ್ನಡ ಗಾದೆಗಳು' ಎಂಬ ಗ್ರಂಥವನ್ನು ಕಲ್ಲಚ್ಚಿನಲ್ಲಿ ಪ್ರಕಟಿಸಿದರು. ೧೪೨ ಪುಟಗಳ ಈ ಗ್ರಂಥದಲ್ಲಿ ೩೪೫೭ ಗಾದೆಗಳನ್ನು ಸಂಗ್ರಹಿಸಿಕೊಡಲಾಗಿದೆ. ಪ್ರಾಚೀನ, ಮಧ್ಯಕಾಲೀನ ಮಾತ್ರವಲ್ಲದೆ ಹೊಸಗನ್ನಡದಲ್ಲಿ ಬಳಕೆಯಾಗುತ್ತಿರುವ ನವೀನ ಗಾದೆಗಳು ಇದರಲ್ಲಿ ಸೇರ್ಪಡೆಯಾಗಿವೆ. ಈ ಕೃತಿಗೆ ಮುನ್ನುಡಿ ಬರೆದ ನಾ. ಕಸ್ತೂರಿಯವರು ಗಾದೆಗಳ ಮಹತ್ವವನ್ನು ವಿವರಿಸಿದ್ದಾರೆ. ಗಾದೆಗಳನ್ನು ಇಲ್ಲಿ ಅಕಾರಾದಿಯಾಗಿ ಜೋಡಿಸಲಾಗಿದೆ. ಅಚ್ಚಪ್ಪನವರ ಇನ್ನೊಂದು ಕೃತಿ 'ಗ್ರಂಥಸ್ಥ ಗಾದೆಗಳು' ಇದರಲ್ಲಿ ನೃಪತುಂಗನಿಂದ ಆರಂಭಿಸಿ ಮುದ್ದಣ್ಣನವರೆಗೆ ಲಭ್ಯವಿದ್ದ ಸುಮಾರು ೧೬೫ ಕೃತಿಗಳಲ್ಲಿ ಬಳಕೆಯಾದ ಹತ್ತು ಸಾವಿರ ಗಾದೆಗಳನ್ನು ಶ್ರಮವಹಿಸಿ ಸಂಗ್ರಹಿಸಿರುತ್ತಾರೆ. ಕನ್ನಡ ಜಾನಪದದ ಹಿರಿಯ ತಲೆಮಾರಿನ ಸಂಗ್ರಾಹಕರಲ್ಲಿ ಅಚ್ಚಪ್ಪನವರೂ ಒಬ್ಬರು.

ಮತಿಘಟ್ಟ ಕೃಷ್ಣಮೂರ್ತಿ

ಡಾ. ಹಂಪನಹಳ್ಳಿ ತಿಮ್ಮೇಗೌಡ

ಮತಿಘಟ್ಟ ಕೃಷ್ಣಮೂರ್ತಿ ಕರ್ನಾಟಕದ ಶ್ರೇಷ್ಠ ಜಾನಪದ ಸಂಗ್ರಹಕಾರರಲ್ಲಿ ಒಬ್ಬರಾಗಿದ್ದು, ಸಂಗ್ರಹವೇ ಇವರ ವೃತ್ತಿ. ಕನ್ನಡ ನಾಡಿನ ಸಾಹಿತ್ಯ, ಸಂಸ್ಕೃತಿ ಬಗೆಗೆ ಅಪಾರ ಒಲವುಳ್ಳವರಾಗಿದ್ದು, ಜನಪದ ಸಾಹಿತ್ಯ ಸಂಗ್ರಹ, ಪತ್ರಿಕೋದ್ಯಮ ಮತ್ತುಸಾಹಿತ್ಯ ಕ್ಷೇತ್ರದಲ್ಲಿ ಆರು ದಶಕಗಳಿಗಿಂತಲೂ ಹೆಚ್ಚುಕಾಲ ಇವರು ದುಡಿದಿದ್ದಾರೆ.

ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಹಳೇಬೀಡು ಹೋಬಳಿ ಮತಿಘಟ್ಟ ಗ್ರಾಮದ ಬಡಕೃಷಿಕ ಕುಟುಂಬದಲ್ಲಿ ೧೫.೧೦.೧೯೧೨ ರಂದು ಇವರ ಜನನ. ತಂದೆ ಲಿಂಗಣ್ಣಯ್ಯ, ತಾಯಿ ಚನ್ನಮ್ಮ. ವಿದ್ಯಾಭ್ಯಾಸ ಮತಿಘಟ್ಟದಲ್ಲಿ ಕೂಲಿಮಠದಿಂದ ಪ್ರಾರಂಭ, ಪ್ರಾಥಮಿಕ ಶಿಕ್ಷಣ ಬೆಳವಾಡಿ ಗ್ರಾಮದಲ್ಲಿ, ಮಾಧ್ಯಮಿಕ ವಿದ್ಯಾಭ್ಯಾಸ ಬೇಲೂರಿನಲ್ಲಿ.

ಜನಪದ ಸಾಹಿತ್ಯ ಸಂಗ್ರಹಕ್ಕೆ ಮೂಲ ಪ್ರೇರಣೆ ತಾಯಿಯಲ್ಲಿದ್ದ ಜಾನಪದ ಸಂಪತ್ತು ಮತ್ತು ತಾಯಿಯ ಊರಾದ ಕಳಸಾಪುರದ ಸುಬ್ಬಮ್ಮನವರ ಹಾಡುಗಾರಿಕೆ. ಇವರಲ್ಲಿದ್ದ ಜಾನಪದ ಆಸಕ್ತಿಯಿಂದ ಕೆಲಸಗಾರರು ಹಾಡುತ್ತಿದ್ದ ಹಾಡುಗಳನ್ನೇ ಸಂಗ್ರಹಿಸಿದರು. ಸಂಗ್ರಹಿಸಿದ ಗೀತೆಗಳನ್ನು ಮೊದಲಿಗೆ 'ಜಯ ಕರ್ನಾಟಕ', 'ಸರಸ್ವತಿ' ಪತ್ರಿಕೆಗಳಲ್ಲಿ ಪ್ರಕಟಿಸಿದರು.

ಜನಪದ ಸಾಹಿತ್ಯ ಸಂಗ್ರಹಕ್ಕೆ ಪೂರ್ತಿಯಾಗಿ ತಮ್ಮನ್ನು ತೊಡಗಿಸಿಕೊಂಡರು. ಸಂಸಾರವನ್ನು ಬಿಟ್ಟು ಕರ್ನಾಟಕದ ಉದ್ದಗಲಕ್ಕೂ ಸಂಚರಿಸಿ ಮೂಲೆ, ಮೂಲೆಗಳಿಂದ ಜನಪದ ಸಾಹಿತ್ಯ ಸಂಗ್ರಹಿಸಿದರು. ಜನಪದ ಸಾಹಿತ್ಯದ ಬಗ್ಗೆ ಉಪನ್ಯಾಸ ನೀಡಿ ಬಂದ ಹಣದಿಂದ ಸಂಚರಿಸಿ ಸಂಗ್ರಹಿಸಿದ್ದಾರೆ. ಕಲಾವಿದರಿಗೆ ಊಟ, ಬಟ್ಟೆ ಕೊಟ್ಟಿದ್ದಾರೆ. ಜಂಗಮರ ಜೊತೆ ಗುಹೆಯಲ್ಲಿ ಉಪವಾಸವಿದ್ದು ಸಂಗ್ರಹಿಸಿದ್ದಾರೆ. ಬಸ್ಸಿನಲ್ಲಿ ಸಂಚರಿಸುವಾಗ ಯಾರಾದರೂ ಹಾಡುವವರು ಸಿಕ್ಕರೆ ಅವರ ಜೊತೆಯಲ್ಲಿಯೆ ಪಯಣ. ಒಂದೊಂದು ಮನೆಯಲ್ಲಿ ಒಂದೊಂದು ಹೊತ್ತು ಊಟ. ಬ್ರಾಹ್ಮಣ ಎಂಬ ಮಡಿವಂತಿಕೆ ಇಲ್ಲ. ಇದಕ್ಕೆಲ್ಲ ಸಂಪೂರ್ಣ ಸಹಕಾರ ನೀಡಿದವರು ಹೆಂಡತಿ ಲಲಿತಮ್ಮ. ಇವರಿಗೆ ಹತ್ತು ಹೆಣ್ಣು ಮಕ್ಕಳು, ಒಬ್ಬ ಮಗ.

ಮತಿಘಟ್ಟ ಕೃಷ್ಣಮೂರ್ತಿಯವರು ಸ್ವಾತಂತ್ರ್ಯಪೂರ್ವದಿಂದಲೂ ಕರ್ನಾಟಕದಾದ್ಯಂತ ಸಂಚರಿಸಿ ಸಂಗ್ರಹಿಸಿರುವ ಜಾನಪದ ಸಾಮಗ್ರಿಯನ್ನು ನೋಡಿದರೆ ಅವರು ಜಾನಪದದ ಬಗ್ಗೆ

ಆಸಕ್ತಿ ಹೊಂದಿರುವುದರ ಜೊತೆಗೆ ಜನಪದ ನಿಲುವನ್ನು ಹೊಂದಿದವರಾಗಿದ್ದಾರೆ. ಬ್ರಾಹ್ಮಣ ಸಮುದಾಯದಲ್ಲಿ ಹುಟ್ಟಿ ಬೆಳೆದ ಅವರು ಸಾಮಾನ್ಯರಲ್ಲಿ ಸಾಮಾನ್ಯರಾದ ಜನಪದರೊಡನೆ ಬೆರೆತು,ಕಲೆತು ಅವರಲ್ಲಿರುವ ಜಾನಪದ ಸಂಪತ್ತನ್ನು ನಶಿಸದಂತೆ ಹಿಡಿದಿಟ್ಟಿರುವುದು ಅವರಲ್ಲಿರುವ ಸಾಂಸ್ಕೃತಿಕ ಕಾಳಜಿಯನ್ನು ತೋರುತ್ತದೆ. ದೇಶೀಯತೆಯ ಕಡೆಗೆ ಇದ್ದ ಒಲವು, ಮಾತೃಭೂಮಿಯ ಅಪಾರವಾದ ವಾತ್ಸಲ್ಯ, ಅಭಿಮಾನ ಅವರನ್ನು ಬಡತನದಲ್ಲೂ ನಾಡಿನಾದ್ಯಂತ ಸಂಚರಿಸುವಂತೆ ಮಾಡಿದೆ. ಈ ಕಾರಣದಿಂದ ಜಾನಪದ ವಿದ್ವಾಂಸರಲ್ಲಿ ಇವರಿಗೆ ಮೊದಲ ಸ್ಥಾನ ದೊರಕುತ್ತದೆ.

ಮತಿಘಟ್ಟ ಕೃಷ್ಣಮೂರ್ತಿಯವರು ಒಬ್ಬ ವ್ಯಕ್ತಿಯಲ್ಲ; ಒಂದು ಸಂಸ್ಥೆ. ಏಕೆಂದರೆ ಒಂದು ಸಂಸ್ಥೆ ಮಾಡುವ ಕೆಲಸವನ್ನು ಒಬ್ಬರೇ ಮಾಡಿರುವುದು ಶ್ಲಾಘನೀಯ. ಇವರ ಒಟ್ಟು ಸಂಗ್ರಹ ಸುಮಾರು ಹತ್ತು ಸಾವಿರ ಪುಟಗಳಷ್ಟಿದೆ. ಇವರು ಮದರಾಸು, ಬೆಂಗಳೂರು ಮತ್ತು ಮೈಸೂರು ಆಕಾಶವಾಣಿ ಕೇಂದ್ರಗಳಲ್ಲಿ ಜನಪದ ಗೀತೆಗಳನ್ನುಹಾಡಿದ್ದಾರೆ. ಇವರು ಸಂಗ್ರಹಿಸಿದ ಜನಪದ ಗೀತೆಗಳನ್ನು ಬಿ.ಕೆ. ಸುಮಿತ್ರ ಮತ್ತು ತಮ್ಮ ಮಕ್ಕಳಿಂದ ಹಾಡಿಸಿ ಎರಡು ಧ್ವನಿಸುರಳಿಯನ್ನು ಕೂಡ ಮಾಡಿದ್ದಾರೆ.

ಇವರಿಗೆ ದೊರಕಿರುವ ಪುರಸ್ಕಾರಗಳೆಂದರೆ ಜಾನಪದ ಅಕಾಡೆಮಿಯ ಸದಸ್ಯತ್ವ ಮತ್ತುಪ್ರಶಸ್ತಿ. ಸ್ವಗ್ರಾಮದಲ್ಲಿ ಸನ್ಮಾನ. ಹಲವಾರು ಸಂಘ ಸಂಸ್ಥೆಗಳು ಗೌರವಿಸಿವೆ. ೨೦೦೨ ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯ ಗೌರವಕ್ಕೂ ಪಾತ್ರರಾಗಿದ್ದಾರೆ. ಕರ್ನಾಟಕ ಸರ್ಕಾರದ ಕಲಾವಿದರ ಮಾಸಾಶನವೂ ದೊರಕುತ್ತಿದೆ.

ಪ್ರಕಟವಾಗಿರುವ ಇವರ ಜಾನಪದ ಕೃತಿಗಳೆಂದರೆ ನಾಡಪದಗಳು, ನಮ್ಮ ಹಳ್ಳಿಯ ಹಾಡುಗಳು, ಏಳು ಕೊಳ್ಳದ ಎಲ್ಲಮ್ಮ, ಶಕುನದ ಹಕ್ಕಿ ಮತ್ತುಇತರ ಕಥೆಗಳು, ಕನ್ನಡ ಜನಪದ ಸಾಹಿತ್ಯ ಭಂಡಾರ ಸಂಪುಟ ಒಂದು- ಗೀತೆಗಳು, ಕನ್ನಡ ಜನಪದ ಸಾಹಿತ್ಯ ಭಂಡಾರ ಸಂಪುಟ-2 ಗೃಹಿಣಿ ಗೀತೆಗಳು, ಹೊನ್ನ ಹೊತ್ತಿಗೆ, ಕಿರುಲಾವಣಿಗಳು ಮತ್ತು ಹಾಸನ ಜಿಲ್ಲೆಯ ಕೋಲಾಟದ ಪದಗಳು. ಶಿಷ್ಟ ಕೃತಿಗಳೆಂದರೆ ಪಚ್ಚೆ.

ಸವದತ್ತಿ ಎಲ್ಲಮ್ಮನ ಕ್ಷೇತ್ರ ಪರಿಚಯ ಹಾಗೂ ಮಹಿಮೆಯೇ ಪ್ರಧಾನವಾದ ಕೃತಿ 'ಏಳುಕೊಳ್ಳದ ಎಲ್ಲಮ್ಮ.' ಇದು ೧೯೬೫ ರಲ್ಲಿ ಪ್ರಕಟವಾಗಿದೆ. ಇದು ಗದ್ಯ ಪದ್ಯಗಳನ್ನೊಳಗೊಂಡ ಕೃತಿ. ಭಾರತ ಹುಣ್ಣಿಮೆಯಂದು ನಡೆಯುವ ಎಲ್ಲಮ್ಮನ ಜಾತ್ರೆ, ಅಲ್ಲಿರುವ ಏಳು ಗುಡ್ಡಗಳ, ಏಳು ಕೊಳ್ಳಗಳ ವರ್ಣನೆ, ಎಲ್ಲಮ್ಮನ ಹುಟ್ಟಿನ ವಿಚಾರ ಎಲ್ಲವೂ ಅದ್ಭುತವಾಗಿ ವರ್ಣನೆಗೊಂಡಿವೆ. ಒಟ್ಟಿನಲ್ಲಿ ಒಂದು ಕ್ಷೇತ್ರದ ಸಾಂಸ್ಕೃತಿಕ ಪರಂಪರೆಯನ್ನು ತೆರೆದಿಡುವ ಮೌಲ್ಯಯುತ ಕೃತಿ ಇದಾಗಿದೆ.

ಇವರ ಜನಪದ ಕಥಾ ಸಂಕಲನ 'ಶಕುನದ ಹಕ್ಕಿ ಮತ್ತು ಇತರ ಜನಪದ ಕಥೆಗಳು' ೧೯೬೭ ರಲ್ಲಿ ಪ್ರಕಟವಾಗಿದೆ. ಇದರಲ್ಲಿ ಹನ್ನೊಂದು ಕತೆಗಳಿದ್ದು ಅವುಗಳನ್ನು ಹಾಸನ, ದಕ್ಷಿಣ

ಕನ್ನಡ, ಧಾರವಾಡ, ಬೆಳಗಾವಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಸಂಗ್ರಹಿಸಿದ್ದಾರೆ. ಆದರೆ ಹಾಸನ ಜಿಲ್ಲೆಯಲ್ಲಿ ಸಂಗ್ರಹಿಸಿರುವ ಕಥೆಗಳೇ ಹೆಚ್ಚಿವೆ. ಈ ಕೃತಿಯ ಬಿನ್ನಹ ಭಾಗದಲ್ಲಿ ಸಂಪಾದಕರು ಜನಪದ ಸಾಹಿತ್ಯ ಬೇಗ ನಾಶವಾಗುತ್ತಿದೆಯಲ್ಲ ಎಂಬ ಕಾಳಜಿಯ ಜೊತೆಗೆ ಒಂದು ಸಂಸ್ಕೃತಿಯಿಂದ ಸಾಹಿತ್ಯ ಪುನರ್‌ಜೀವನ ಪಡೆಯುತ್ತದೆ ಎಂದು ಹೇಳಿರುವುದು ಮಾತೃಮೂಲದ ಪ್ರತಿಪಾದನೆ ಹಾಗೂ ಈ ಮಣ್ಣಿನ ಕಂಪು ಜನಪದ ಸಂಸ್ಕೃತಿಯಲ್ಲಿ ಅರಳಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಮತಿಘಟ್ಟ ಕೃಷ್ಣಮೂರ್ತಿಯವರ ಜನಪದ ಗೀತೆಗಳ ಸಂಕಲನದ ಮೊದಲ ಕೃತಿ ೧೯೪೭ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿರುವ 'ನಾಡಪದಗಳು'. ಇದು ಇವರ ಅಣ್ಣನವರಾದ ಎಲ್. ಗುಂಡಪ್ಪನವರ ಹೆಸರಿನಲ್ಲಿ ಪ್ರಕಟವಾಗಿದ್ದರೂ ಈ ಕೃತಿಯಲ್ಲಿರುವ ಗೀತೆಗಳನ್ನು ವಾಸ್ತವವಾಗಿ ಸಂಗ್ರಹಿಸಿದವರು ಕೃಷ್ಣಮೂರ್ತಿ ಮತ್ತು ಇವರ ಅಣ್ಣ ಮುತ್ತು ರಾಮಸ್ವಾಮಿ. ಇದು ನಾನು ಕೃಷ್ಣಮೂರ್ತಿಯವರನ್ನು ವೈಯಕ್ತಿಕವಾಗಿ ಭೇಟಿ ಮಾಡಿದಾಗ ತಿಳಿದ ವಿಚಾರ. ಈ ಸಂಕಲನದ ವೈಶಿಷ್ಟ್ಯವೆಂದರೆ ಟಿಪ್ಪುಸುಲ್ತಾನನ ಎರಡು ಹಾಡುಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿರುವುದು. ಬಿಎಂಶ್ರೀಯವರು ಮುನ್ನುಡಿ ಬರೆದಿರುವುದರಿಂದ ಕೃತಿಯ ಮೌಲ್ಯ ಹೆಚ್ಚಾಗಿದೆ. ಇವರ ಮುಂದಿನ ಕೃತಿ 'ನಮ್ಮ ಹಳ್ಳಿಯ ಹಾಡುಗಳು' ಎಂಬ ಚಿಕ್ಕ ಕೃತಿ. ಇದರಲ್ಲಿರುವ ಎಲ್ಲಾ ಗೀತೆಗಳು ಬೃಹತ್ ಸಂಪುಗಳಲ್ಲಿ ಪ್ರಕಟವಾಗಿವೆ.

ಇವರ ಪ್ರಮುಖ ಕೃತಿಯೆಂದರೆ 'ಕನ್ನಡ ಜನಪದ ಸಾಹಿತ್ಯ ಭಂಡಾರ ಸಂಪುಟ-೧' ಇದು ೧೯೭೫ ರಲ್ಲಿ ಬೆಂಗಳೂರಿನ ಗುರುಮೂರ್ತಿ ಪ್ರಕಾಶನದಿಂದ ಪ್ರಕಟವಾಗಿದೆ. ಇದರಲ್ಲಿ ೧೦೫೩ ಪುಟಗಳಿದ್ದು ೪೦೮ ಗೀತೆಗಳಿವೆ. ಈ ಕೃತಿಯನ್ನು ಪ್ರಕಟಿಸಲು ಮುಂಗಡವಾಗಿ ಹಣ ಪಡೆದಿದ್ದು, ಓದುಗರನ್ನು ಜಾನಪದದಲ್ಲಿ ಭಾಗಿಯಾಗುವಂತೆ ತೊಡಗಿಸಿಕೊಳ್ಳುವ ವಿಧಾನವನ್ನು ಅನುಸರಿಸಿರುವುದು ಒಂದು ನೂತನ ಕ್ರಮವಾಗಿದೆ.

ಸಂಪಾದಕರಾದ ಕೃಷ್ಣಮೂರ್ತಿಯವರು 'ಬಿನ್ನಹ' ಭಾಗದಲ್ಲಿ ''ಕನ್ನಡ ಜನಪದ ಸಾಹಿತ್ಯ ಸಂಗ್ರಹಣೆ, ಪ್ರಕಟಣೆ ಹಾಗೂ ಸಂಪಾದನೆಯ ಕಾರ್ಯವೀಗ ಹಿಂದೆಂದಿಗಿಂತಲೂ ಹೆಚ್ಚು ವ್ಯಾಪಕವಾಗಿ ತೀವ್ರಗತಿಯಿಂದ ನಡೆಯಬೇಕಾದುದು ಅಗತ್ಯವೆನಿಸಿದೆ. ತಲೆತಲಾಂತರದಿಂದ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಹರಿದು ಬೆಳೆದುಬಂದ ನಮ್ಮೀ ಸಾಹಿತ್ಯವಾಹಿನಿಯು ಈ ಶತಮಾನದ ಆರಂಭದಲ್ಲೇ ಆಧುನಿಕ ನಾಗರಿಕತೆಯ ಮರುಳುಗಾಡನ್ನು ಪ್ರವೇಶಿಸಿ, ತನ್ನ ವೈಸಿರಿಯನ್ನು ಕಳೆದುಕೊಂಡು, ಈಗ ಬಡವಾಗಿ ಕಂದಿ ಕುಂದಿ, ಅನತಿ ಭವಿಷ್ಯದಲ್ಲೇ ಸಂಪೂರ್ಣವಾಗಿ ಇಂಗಿ ಹೋಗುವ ಅಪಾಯಕ್ಕೆ ಪಕ್ಕಾಗಿದೆ.'' ಎಂಬುದಾಗಿ ಹೇಳಿರುವುದರಲ್ಲಿ ಹೆಚ್ಚು ಹೆಚ್ಚು ಜನಪದ ಸಾಹಿತ್ಯ ಸಂಗ್ರಹ ಆಗಬೇಕೆಂಬ ತೀವ್ರತರವಾದ ತುಡಿತವಿದೆ. ಹುಟ್ಟ

ಹುಣ್ಣಿಮೆಗಳು ಕಡಿಮೆಯಾಗಿದ್ದು, ಮದುವೆ ಮುಂಜಿಗಳಲ್ಲಿ ಜನಪದ ಹಾಡುಗಳನ್ನು ಹೇಳದಿರುವುದೇ ಜನಪದ ಸಾಹಿತ್ಯ ಹಿಂಗಿ ಹೋಗಲು ಕಾರಣ ಎಂಬ ವ್ಯಗ್ರತೆಯೂ ಇವರಲ್ಲಿದೆ. ''ಸಂಗ್ರಹಕಾರರು ಪಾಠಾಂತರಗಳು ದೊರಕದೆ ತಾವೆ ತಮ್ಮ ಮನಸ್ಸಿಗೆ ಸರಿದೋರಿದಂತೆ ಹಾಡುಗಳನ್ನು ತಿದ್ದುವುದು ಯುಕ್ತವಲ್ಲ.... '' ವ್ಯಾಕರಣದೋಷಗಳಿದ್ದರೆ, ಅಪಾರ್ಥಕ್ಕೆಡೆಕೊಡುವ ಭಾಗಗಳಿದ್ದರೆ, ವಿಪರೀತ ಅಸ್ಪೃಶ್ಯತೆ ಇದ್ದರೆ ಅಂಥ ಹಾಡುಗಳನ್ನು ಪಾಠಾಂತರ ದೊರೆಯುವವರೆಗೆ ಪ್ರಕಟಿಸದೆ ಇಟ್ಟುಕೊಳ್ಳಬಹುದು.... ಪ್ರಾಸಾಕ್ಷರಗಳಿರಬೇಕೆಂದು ತ್ರಿಪದಿಗಳನ್ನೆಲ್ಲಾ ಹಿಗ್ಗಾಮುಗ್ಗಾ ಜಗ್ಗಾಡಿಸಿ ತಿದ್ದುವುದು ಸರ್ವಥಾ ಸಲ್ಲದು.'' ಎಂದು ಮನಸ್ಸಿಗೆ ಬಂದಂತೆ ತಿದ್ದುವವರ ಬಗ್ಗೆ ಕಿವಿಮಾತು ಹೇಳಿದ್ದಾರೆ.

ಇಲ್ಲಿಯ ಹಾಡುಗಳನ್ನು ನಾಡಿನೆಲ್ಲೆಡೆ ಸಂಗ್ರಹಿಸಿದ್ದು ಪ್ರಮುಖವಾಗಿ ಹಾಸನ, ಚಿಕ್ಕಮಗಳೂರು,ತುಮಕೂರು ಜಿಲ್ಲೆಯವುಗಳಾಗಿವೆ. ಕೃತಿಯ ಆದಿಯಲ್ಲಿ ಬೆಟಗೇರಿ ಕೃಷ್ಣಶರ್ಮರ ಮೊದಲ ನುಡಿಗಳು ಮೌಲ್ಯಯುತವಾಗಿವೆ. ಸಂಪಾದಕರು ಕೆಲವು ಜನಪದ ಸಂಕೇತಗಳನ್ನು ಕೊಟ್ಟಿದ್ದಾರೆ. ಅವುಗಳೆಂದರೆ ಹೆಣ್ಣು ನೀರು, ಭೂಮಿಯ ಸಂಕೇತ. ನೀರು ಕೇಳುವುದು, ನೇಗಿಲು ಗಂಡಿನ ಪ್ರೇಮ ಯಾಚನೆ ಸಂಕೇತ. ನೀರು ಕುಡಿಯುವುದು ಮಿಲನದ ಸಂಕೇತ. ನಿಂಬೆ, ಕತ್ತಲೆ ಹೆಣ್ಣಿನ ವಯಸ್ಸಿನ ಸಂಕೇತಗಳಾಗಿದ್ದು ಇವು ಅಧ್ಯಯನಕಾರರಿಗೆ ಅನುಕೂಲವಾಗಿವೆ.

ಜನಪದ ಛಂದಸ್ಸನ್ನು ಕುರಿತು ದ್ವಿಪದಿ, ಏಳೆ, ತ್ರಿಪದಿ, ಚತುಷ್ಪದಿ, ಪಂಚಪದಿ, ಷಟ್ಪದಿ, ಅಷ್ಟಪದಿ, ರಗಳೆ, ಸಾಂಗತ್ಯ, ಧವಳ, ಲಾವಣಿ ಮತ್ತು ದುಂದುಮೆ ಹಾಗೂ ಅಪರೂಪದ ಛಂದಸ್ಸು ಎಂಬವುಗಳನ್ನು ವಿವರಣೆಯ ಮೂಲಕ ತಿಳಿಸಿದ್ದಾರೆ. ತ್ರಿಪದಿಯ ಹಿರಿಮೆಯನ್ನು ಕುರಿತು ಹೇಳುತ್ತಾ ತ್ರಿಪದಿ ಎಂದು ಪ್ರಸಿದ್ಧವಾದ ಛಂದೋರೂಪಗಳಲ್ಲದೆ, ಮೂರು ಪಾದಗಳನ್ನುಳ್ಳ ಬೇರೆ ರೀತಿಯ ಪದಗಳು ಜನಪದ ಸಾಹಿತ್ಯದಲ್ಲಿವೆ. ಗ್ರಾಮೀಣರು ಹಾಡುವ ಧಾಟಿಯನ್ನು ಅನುಸರಿಸಿ ಸಂಪಾದಕರು ಅವುಗಳನ್ನು ಸೊಲ್ಲು, ತನಿಸೊಲ್ಲು, ಸವಿಸೊಲ್ಲು ಎಂದು ಹೆಸರುಗಳನ್ನು ಸೂಚಿಸಿರುವುದಲ್ಲದೆ ಶುದ್ಧ ತ್ರಿಪದಿ ಮತ್ತು ಪ್ರಬುದ್ಧ ತ್ರಿಪದಿಗಳೆಂದು ವಿಭಾಗಿಸಿದ್ದಾರೆ. ಇವು ಕೃಷ್ಣಮೂರ್ತಿಯವರ ಸಂಶೋಧನೆಯ ಫಲವಾಗಿದ್ದು ಮುಂದಿನವರಿಗೆ ಮಾರ್ಗದರ್ಶಕವಾಗಿವೆ.

ಕೃತಿಯ ಮೊದಲ ಭಾಗದಲ್ಲಿ ಕೋಲಾಟದ ಪದಗಳಿದ್ದು ಅವುಗಳನ್ನು ಪ್ರಾರ್ಥನಾಗೀತೆಗಳು, ಪ್ರೇಮಗೀತೆಗಳು, ಚಾರಿತ್ರಿಕ ಗೀತೆಗಳು, ಕ್ಷಾಮಗೀತೆಗಳು ಮತ್ತು ಸಂಕೀರ್ಣ ಗೀತೆಗಳೆಂದು ಒಳಭಾಗಗಳಾಗಿ ವಿಂಗಡಿಸಿದ್ದಾರೆ. ಪ್ರಾರ್ಥನಾ ಗೀತೆಗಳಲ್ಲಿ ಗಣಪತಿ, ಗ್ರಾಮ ದೇವತೆಗಳು ಮುಂತಾದ ಗೀತೆಗಳಿದ್ದು ಅವುಗಳಲ್ಲಿ ಚಾಮುಂಡಿ, ಬೇಲೂರು ಚನ್ನಯ್ಯ, ಚೌಡವ್ವ, ದುರ್ಗವ್ವ, ಕೃಷ್ಣನಿಗೆ ಸಂಬಂಧಿಸಿದ ಗೀತೆಗಳು ಪ್ರಮುಖವಾಗಿವೆ. ಪ್ರೇಮ ಗೀತೆಗಳಲ್ಲಿ ನಾನಾ ರೂಪದ ಗೀತೆಗಳಿದ್ದು, ಇಲ್ಲಿಯ ನಾಯಕ ನಾಯಕಿಯರು ರಾಜಕಾರಣಿಯರಲ್ಲ. ಸಾಮಾನ್ಯರಾದ

ಹೆಣ್ಣುಗಂಡುಗಳು. ಇಲ್ಲಿರುವ ಉತ್ತಮ ಕಾವ್ಯ ಗುಣವೇ ರಸೋತ್ಪತ್ತಿಯಾಗಿದೆ. ಹೆಣ್ಣು ಗಂಡುಗಳ ಪರಸ್ಪರ ಆಕರ್ಷಣೆಯೇ ಜೀವಸೃಷ್ಟಿಯ ಮೂಲ ಸೂತ್ರವಾಗಿದ್ದು, ಪ್ರೇಮ ಕಾಮಗಳು ಒಂದು ನಾಣ್ಯದ ಎರಡು ಮುಖಗಳು ಎಂಬಂತೆ ಈ ಗೀತೆಗಳಲ್ಲಿ ಅಭಿವ್ಯಕ್ತವಾಗಿವೆ.

ಚಾರಿತ್ರಿಕ ಗೀತೆಗಳಲ್ಲಿ ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದವುಗಳದೇ ಮೇಲುಗೈಯಾಗಿದ್ದು ಮದಕರಿನಾಯಕನಿಗೆ ಸಂಬಂಧಿಸಿದ ಎಂಟು ಗೀತೆಗಳಿವೆ. ದುರ್ಗದ ನಾಯಕನಿಗೂ, ತುರುಕರೊಡನೆ ಕಾದಾಡಿದ ನಾಯಕನಿಗೂ ಭಿನ್ನವಾದ ವ್ಯಕ್ತಿತ್ವವಿದ್ದು ಬೇರೆ ಬೇರೆ ವ್ಯಕ್ತಿಗಳಾಗಿ ಕಾಣುತ್ತಾರೆ. ಮೈಸೂರು ಯುದ್ಧಕ್ಕೆ ಸಂಬಂಧಿಸಿದಂತೆ ಕುಂಪ್ಣಿಯವರ ಆಕ್ರಮಣದಿಂದ ಸುಲ್ತಾನ ತನ್ನ ದೌಲತ್ತು ಕಳೆದುಕೊಳ್ಳುವ ಗೀತೆಯು ಪ್ರಮುಖವಾದುದಾಗಿದೆ. ಮೊಹರಂ ಹಬ್ಬದ ಆಚರಣೆಗೆ ಕಾರಣವಾದ ಹಜರತ್ ಹುಸೇನರ ಬಲಿದಾನವನ್ನು ಕುರಿತ 'ಹಸೇನ ಹುಸೇನ', 'ಸ್ವಾಮಿ ಹುಸೇನ' ಹಾಡುಗಳಲ್ಲದೆ ಬರಗಾಲದ ಕರಾಳ ದಿನಗಳನ್ನು ಎದುರಿಸುವ ರೈತರ ಕಣ್ಣೀರಿನ ಗೀತೆಗಳು ಇವೆ.

ಸಂಕೀರ್ಣ ಗೀತೆಗಳಲ್ಲಿ ನೀತಿಯನ್ನು ಹೇಳುವ, ಮೃಗ ಪಕ್ಷಿಗಳಿಗೆ ಸಂಬಂಧಿಸಿದ, ಪ್ರಕೃತಿ, ಸ್ಥಳದ ಐತಿಹ್ಯ, ಸಾವು, ಪರಂಗಿಯವರನ್ನು ಕುರಿತ, ಕುಣಿಗಲು ಕೆರೆ, ಜವರಾಯ ಮುಂತಾದ ವಸ್ತು ವೈವಿಧ್ಯತೆಯ ಹಲವಾರು ಗೀತೆಗಳಿವೆ.

ಎರಡನೆಯ ಭಾಗದಲ್ಲಿ ಬೀಸುವ ಪದಗಳಿವೆ. ''ಬೀಸುವ ಕಲ್ಲು ಒಂದು ಮಹಾಯುಗದ ಸಂಕೇತ. ಆರ್ಷೇಯ ಸಮಾಜದಲ್ಲಿ ಬೀಸುವ ಕಲ್ಲಿನ ಉದಯ ಈ ಶತಮಾನದ ಅಣುಸ್ಫೋಟಕ್ಕಿಂತಲೂ ಹೆಚ್ಚಿನ ಕ್ರಾಂತಿಯನ್ನುಂಟು ಮಾಡಿರಬಹುದು.'' ಎಂಬ ಮಾತು ಅರ್ಥಪೂರ್ಣವಾದುದು. ಏಕೆಂದರೆ ಇಂದು ಅಣುಬಾಂಬು ನಾಗರಿಕ ಜಗತ್ತಿಗೆ ಎಷ್ಟು ಅವಶ್ಯಕವಾಗಿದೆಯೋ ಅಷ್ಟೇ ಅವಶ್ಯಕವಾಗಿತ್ತು, ಹಿಂದೆ ಬದುಕಲು ರಾಗಿಕಲ್ಲು. ಅದಿಲ್ಲದಿದ್ದರೆ ಜೀವನವೇ ಸಾಗುತ್ತಿರಲಿಲ್ಲ. ಜನಪದರಿಗೆ ರಾಗಿಕಲ್ಲು, ಒರಳು, ಒನಕೆಗಳು ಕೇವಲ ಜಡವಸ್ತುಗಳಾಗಿರದೆ ದೈವತ್ವವನ್ನು ಪಡೆದಿದ್ದವು. ಇಂದೂ ಕೂಡ ಅವುಗಳನ್ನು ಉಪಯೋಗಿಸದಿದ್ದರೂ ಪೂಜಿಸುವ ಪದ್ಧತಿ ರೂಢಿಯಲ್ಲಿದೆ. ಇಲ್ಲಿರುವ ಬೀಸುವ ಪದಗಳು ದೇವರು, ಅಣ್ಣತಮ್ಮ, ತಂದೆ ತಾಯಿ, ತೌರು, ಜಾತ್ರೆ, ಯಾತ್ರೆ, ಚಂದ್ರ ಮುಂತಾದವರನ್ನು ಕುರಿತವುಗಳಾಗಿವೆ.

ಸಂಕಲನದ ಮೂರನೇ ಭಾಗದಲ್ಲಿ ಸೋಬಾನೆ ಪದಗಳಿದ್ದು, ಅವುಗಳು ಸಾಮಾನ್ಯವಾಗಿ ಮದುವೆ, ಮುಂಜಿ, ಚೌಲ, ನಾಮಕರಣ, ಒಸಗೆ ಇತ್ಯಾದಿ ಸಂದರ್ಭಗಳಲ್ಲಿ ಹೇಳುವ ಹಾಡುಗಳಾಗಿವೆ. ಸಂಪಾದಕರು ಬ್ರಾಹ್ಮಣರು ಹಾಗೂ ಬ್ರಾಹ್ಮಣೇತರರ ಹಾಡುಗಳೆಂದು ವಿಭಾಗಿಸಿದರೂ ಅಂತಹ ವ್ಯತ್ಯಾಸಗಳೇನು ಇಲ್ಲ.

ನಾಲ್ಕು ಹಚ್ಚೆಗಳು ಎಂಬ ಭಾಗದಲ್ಲಿ ಬಲೀಂದ್ರನ ಪೂಜೆ, ಕೊಂತ್ಯಮ್ಮನ ಪೂಜೆ,ತಿಂಗಳು ಮಾವನ ಪೂಜೆ ಮತ್ತುಬಸವನ ಅಷ್ಟಮಿ ಎಂಬ ನಾಲ್ಕು ಹಬ್ಬಗಳಿಗೆ, ಪೂಜೆಗಳಿಗೆ ಸಂಬಂಧಿಸಿದ

ಗೀತೆಗಳನ್ನು ಕೊಟ್ಟಿದ್ದಾರೆ. ಮಿಶ್ರಗೀತೆಗಳು ಭಾಗದಲ್ಲಿ ಮಾರಿಯ ಪದ, ಬಾಂದಿನವರ ಹಾಡು, ಹತ್ತಿಯ ಹಾಡು ಮುಂತಾದ ಗೀತೆಗಳಿದ್ದು ಇಂತಹ ಗೀತೆಗಳು ಬೇರೆ ಕಡೆ ಅಪರೂಪ. ಇವು ಇಲ್ಲಿನ ವೈಶಿಷ್ಟ್ಯವಾಗಿವೆ.

ಕಥನ ಗೀತೆಗಳು ಭಾಗದಲ್ಲಿ ಪುರಾಣ ವ್ರತ ಕತೆಗಳು, ರಾಮಾಯಣದ ಕಥೆಗಳು, ಕೃಷ್ಣನ ಬಾಲಲೀಲೆ, ಶಿವಕತೆಗಳು, ಚಾರಿತ್ರಿಕ ಕಥೆಗಳು, ಸಾಮಾಜಿಕ ಕಥೆಗಳು ಮತ್ತು ಶಿವಶರಣೆ ಚೆನ್ನವ್ವ ಎಂಬ ಗೀತೆಗಳಿವೆ. ಸಾಮಾಜಿಕ ಕಥೆಯಾದ ಉತ್ತರದೇವಿಯ ಹಾಡು, ಚಾರಿತ್ರಿಕ ಕತೆಗಳಲ್ಲಿ ಲಕ್ಕಣ್ಣ-ಈರಣ್ಣ ಹಾಡು ಮಹತ್ವದವುಗಳಾಗಿವೆ. ಶಿವಶರಣೆ ಚೆನ್ನವ್ವನನ್ನು ಕುರಿತ ಕಥೆ ೮೫೦ ತ್ರಿಪದಿಗಳನ್ನೊಳಗೊಂಡ ೨೫೫೦ ಸಾಲುಗಳ ಜನಪದ ಕಾವ್ಯ. ಇದನ್ನು ಕತ್ತಲುರಾಯನ ಕತೆ, ಕಾಳಿಂಗರಾಯನ ಕತೆ ಎಂಥಲೂ ಕರೆಯುವುದುಂಟು.

ಮತಿಘಟ್ಟ ಕೃಷ್ಣಮೂರ್ತಿಯವರ ಮತ್ತೊಂದು ಬೃಹತ್ ಕೃತಿ 'ಕನ್ನಡ ಜನಪದ ಸಾಹಿತ್ಯ ಭಂಡಾರ ಸಂಪುಟ-೨ ಗೃಹಿಣೀ ಗೀತೆಗಳು.' ೧೯೮೨ ರಲ್ಲಿ ಸಂಪಾದಕರೇ ಈ ಕೃತಿಯನ್ನು ಪ್ರಕಟಿಸಿದ್ದಾರೆ.ಇದು ೧೧೯೪ ಪುಟಗಳ ೫೧೫ ಗೀತೆಗಳನ್ನೊಳಗೊಂಡ ಕೃತಿ. ಈ ಸಂಕಲನದಲ್ಲಿರುವ ಗೀತೆಗಳು ಸಾಮಾನ್ಯ ಜನರ ಹಾಡಿಗಿಂತ ಮೇಲೆ ಮತ್ತು ದಾಸ ಸಾಹಿತ್ಯಕ್ಕಿಂತ ಸ್ವಲ್ಪ ಕೆಳಗೆ ಒಂದು ಮಧ್ಯದ ಸಾಹಿತ್ಯ ನೆಲೆಯಾಗಿ ಬರುತ್ತವೆ. ಜನಸಾಮಾನ್ಯರು ಅವಿದ್ಯಾವಂತರು. ದಾಸ ಸಾಹಿತ್ಯ ರಚಿಸಿದವರು ವಿದ್ಯಾವಂತ ದಾರ್ಶನಿಕರು. ಇವರ ಮಧ್ಯೆ ಅರೆ ವಿದ್ಯಾವಂತ ಬ್ರಾಹ್ಮಣ ಹೆಣ್ಣು ಮಕ್ಕಳು ಮತ್ತು ಮೇಲು ಮಧ್ಯಮ ವರ್ಗದವರ ಹಾಡುಗಳು ಇಲ್ಲಿ ಹೆಚ್ಚಾಗಿ ಕಾಣುತ್ತವೆ. ಉದಾಹರಣೆಗೆ ನಾರಾಯಣ ಸ್ತೋತ್ರ, ದತ್ತಾತ್ರೇಯ ಸ್ತೋತ್ರ, ತುಳಸಿ ಮಹಾತ್ಮೆ, ತುಳಸಿಧವಳ, ತುಳಸಿದೇವಿ ಬಾರೆ ನೀನು, ತುಳಸಿ ಯಾತ್ರೆ, ಕಪಿಲಾ ಸ್ತೋತ್ರ, ವೃಂದಾವನಸೇವೆ, ಸಾಲಿಗ್ರಾಮದ ಮಹಿಮೆ, ಆದಿಶಕ್ತಿಯ ಸ್ತೋತ್ರ, ವರಮಹಾಲಕ್ಷ್ಮಿ ಸ್ತೋತ್ರ, ಬಾರಮ್ಮ ಬನದಶಂಕರೀ, ಬನಶಂಕರಿಸ್ತೋತ್ರ, ತಾವರೆಗಂಧಿನಿ, ದೇವಿಪೂಜೆ, ಲಲಿತಾ ಕಲ್ಪೋಕ್ತಪೂಜೆ, ಲಕ್ಷ್ಮೀಪೂಜೆ, ಕಾಶಿವಿಶ್ವೇಶ್ವರನ ಅಭಿಷೇಕ, ಅಶ್ವತ್ಥಪೂಜೆ, ಮಾಘದ ಗೌರಿ, ಚೈತ್ರದ ಗೌರಿ ಹೀಗೆ ಬಹುತೇಕ ಇಲ್ಲಿಯ ಹಾಡುಗಳು ಸಾಮಾನ್ಯ ಜನಪದರಿಂದ ಮೇಲೇರಿದ ತಮ್ಮದೇ ಆದಂತಹ ತಾತ್ವಿಕ ನೆಲೆಯನ್ನು ಹೊಂದಿದವರ ಹಾಡುಗಳಾಗಿವೆ. ಇವುಗಳನ್ನು ಸಾಮಾನ್ಯ ಜನಪದ ಗೀತೆಗಳ ವರ್ಗಕ್ಕೆ ಸೇರಿಸಬಹುದೇ ಎಂಬ ಪ್ರಶ್ನೆ ಏಳುತ್ತದೆ. ಇಲ್ಲಿ ನಾವು ಜಾನಪದದ ವಿಸ್ತೃತ ಪರಿಕಲ್ಪನೆಯ ಕಡೆಗೆ ಹೋಗಬೇಕಾಗುತ್ತದೆ. ಅದು ಹೀಗೆ;

೧. ಸಾಮಾನ್ಯರಿಗೆ ಸಾಮಾನ್ಯವಾದ ಜಾನಪದ

೨. ವರ್ಗವೊಂದರೊಳಗೆ ಸಾಮಾನ್ಯವಾದ ಜಾನಪದ

ಸಾಮಾನ್ಯರಿಗೆ ಸಾಮಾನ್ಯವಾದ ಜಾನಪದ ಸ್ವರೂಪದಲ್ಲಿ ಮತ್ತು ಕಾರ್ಯಾಚರಣೆಯಲ್ಲಿ ಜಗತ್ತಿನಾದ್ಯಂತ ಒಂದೇ ಸ್ವರೂಪದ್ದಾಗಿರುತ್ತದೆ. ವರ್ಗ ಸ್ವಭಾವದ ಜಾನಪದ ಸ್ವರೂಪ ಹಾಗಲ್ಲ. ವರ್ಗ, ಜಾತಿ ಅಥವಾ ವರ್ಣಗಳು ಜನಸಾಮಾನ್ಯರಿಂದ ಮೇಲೇರಿದ ವರ್ಗಗಳು. ವಿಶಿಷ್ಟ ಧರ್ಮ,

ಭಾಷೆ ಅಥವಾ ತಾತ್ವಿಕತೆಯ ಮೇಲೆ ಅವು ಸಾಮಾನ್ಯರಿಂದ ಮೇಲೆ ಬಂದಿರುತ್ತವೆ ಅಥವಾ ದೂರದ ನೆಲೆಯನ್ನು ಸೃಷ್ಟಿಸಿಕೊಂಡಿರುತ್ತವೆ. ಈ ವಿಶಿಷ್ಟತೆಯಿಂದ ಪ್ರತ್ಯೇಕವಾಗಿರಲು ಸದಾ ಪ್ರಯತ್ನಿಸುತ್ತವೆ. ಆದರೆ ಈ ವಿಶಿಷ್ಟತೆ ಒಂದು ಸಮಕಾಲೀನ ತಾತ್ವಿಕತೆಯೆ ಹೊರತು ಸರ್ವಸಮ್ಮತ ಜನ ಮನೋಧರ್ಮ ಅಲ್ಲ. ಜಾನಪದವೆಂಬುದು ಸರ್ವಸಮ್ಮತ ಮನೋಧರ್ಮ. ಅದು ಜನಸಾಮಾನ್ಯರಲ್ಲಿರುವ ಹಾಗೆ ಜನಸಾಮಾನ್ಯರಿಂದ ಮೇಲೆ ಬಂದವರಲ್ಲಿ ಇರುವುದು ಅನಿವಾರ್ಯ. ಅವರಲ್ಲಿಯೂ ಸಾರ್ವಕಾಲಿಕವಾದುದೆಂದರೆ ಜಾನಪದವೇ. ಅವರ ಮತತತ್ವ ವಿಚಾರಗಳು ತಾತ್ಕಾಲಿಕವಾಗಿ ಕಂಡ ತಾತ್ವಿಕತೆಗಳು. ತಮ್ಮ ಸಂರಕ್ಷಣೆಗಾಗಿ ಅಥವಾ ಅನುಕೂಲಕ್ಕಾಗಿ ಆ ತಾತ್ವಿಕತೆಯನ್ನು ಉಳಿಸಿಕೊಂಡು ಬಂದಿರುತ್ತಾರೆ. ಆದರ ಮೊತ್ತ ಪ್ರಮಾಣ ಕಡಿಮೆ. ಅವರಲ್ಲಿಯೂ ಜಾನಪದ ಪ್ರಮಾಣ ಹೆಚ್ಚು. ಅಂತಹ ಜಾನಪದವನ್ನು ಅವರು ತಮ್ಮ ನೆಲೆಗೆ ಹಾಗೂ ಸ್ಥಿತಿಗೆ ಅನುಕೂಲವಾಗುವ ಹಾಗೆ ಎತ್ತರಿಸಿಕೊಂಡು ಹೇಳುತ್ತಾರೆ. ಕೃಷ್ಣಮೂರ್ತಿಯವರ ಗೃಹಿಣೀ ಗೀತೆಗಳು ಕೃತಿಯನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ಜನಸಾಮಾನ್ಯರಲ್ಲಿ ತುಳಸಿ ಪೂಜೆ ಮತ್ತು ಮಹಾತ್ಮೆ, ಸಾಲಿಗ್ರಾಮದ ಮಹಿಮೆ, ಲಲಿತ ಕಲ್ಪೋಕ್ತ ಪೂಜಾ ಸಂಬಂಧಿ ಗೀತೆಗಳು ಹುಟ್ಟುವುದು ಅಸಾಧ್ಯ. ವ್ರತ ಕಥೆಗಳ ಒಂದು ಪ್ರಕಾರವೇ ಜನಸಾಮಾನ್ಯರಲ್ಲಿ ಇಲ್ಲ. ಈ ಪ್ರಕಾರ ಕೂಡ ಸಾಮಾನ್ಯ ಜನಪದರಿಂದ ತನ್ನನ್ನು ಎತ್ತರಿಸಿಕೊಂಡ ಜನಪದದ ಅಭಿವ್ಯಕ್ತಿಗಳಾಗಿವೆ. ಉದಾಹರಣೆಗೆ ಸ್ವರ್ಣಗೌರಿ ಕಥೆ, ಮಂಗಳಗೌರಿ ಕಥೆ, ಋಷಿ ಪಂಚಮಿ ಹಾಗೂ ಸೋಮವಾರ ಅಮಾವಾಸ್ಯೆ ಕಥೆ ಇತ್ಯಾದಿ. ಆದ್ದರಿಂದ ಈ ಕೃತಿಯನ್ನು ಪ್ರತ್ಯೇಕ ನೆಲೆಯಿಂದಲೇ ನೋಡುವ ಅಗತ್ಯವಿದೆ.

ಮತಿಘಟ್ಟ ಕೃಷ್ಣಮೂರ್ತಿಯವರ ಸಂಗ್ರಹದ ವಿಶೇಷತೆಯನ್ನು ಎರಡು ನೆಲೆಯಿಂದ ಗಮನಿಸಬಹುದಾಗಿದೆ.

೧. ಸಾಮಾನ್ಯರಲ್ಲಿ ಸಾಮಾನ್ಯನೆಂಬ ಜನಪದನಿಂದ ಸಂಗ್ರಹಿಸಿದುದು.

೨. ತಮ್ಮದೇ ವರ್ಗದಲ್ಲಿಯ ವಿಶಿಷ್ಟೀಕರಿಸಿಲ್ಪಟ್ಟ ಜಾನಪದವನ್ನು ಸಂಗ್ರಹಿಸಿದುದು.

ಇವತ್ತಿನ ಜಾನಪದ ಅಧ್ಯಯನಕ್ಕೆ ಇದೊಂದು ಒಳ್ಳೆಯ ಆಸಕ್ತಿದಾಯಕ ಕೊಡುಗೆ. ಭಾರತದ ಆರಂಭಿಕ ಜಾನಪದ ವಿದ್ವಾಂಸರು ಜಾನಪದ ಎಂಬುದು ಕೆಳವರ್ಗದ ಸಂಪತ್ತು ಮಾತ್ರ, ಮೇಲು ವರ್ಗದಲ್ಲಿ ಜಾನಪದ ಇಲ್ಲ. ಅಲ್ಲಿರುವುದೆಲ್ಲ ಶಿಷ್ಟ, ಎಂಬ ಸಾರಾಸಗಟು ಆಲೋಚನೆಯನ್ನು ಮಂಡಿಸಿದರು. ಇವತ್ತಿಗೂ ಬಹುಜನ ವಿದ್ವಾಂಸರು ಇದೇ ಅಭಿಪ್ರಾಯವನ್ನು ಉಳ್ಳವರಾಗಿದ್ದಾರೆ. ಕರ್ನಾಟಕದಲ್ಲಿ ಜಾನಪದ ಅಧ್ಯಯನ ವೈಜ್ಞಾನಿಕ ಮಾತ್ರವಲ್ಲದೆ ವೈಚಾರಿಕ ಹಿನ್ನೆಲೆಯಲ್ಲಿ ಆರಂಭವಾದಾಗ ಜಾನಪದವನ್ನು ಜಾತಿವರ್ಗ ಸೀಮಿತತೆಯಲ್ಲಿ ಅಧ್ಯಯನ ಮಾಡದೆ ಅದನ್ನೊಂದು ಸರ್ವವ್ಯಾಪಿ ಮನೋಧರ್ಮವಾಗಿ ಅಧ್ಯಯನ ಮಾಡುವ ಅಗತ್ಯತೆಯನ್ನು ಒತ್ತಿ ಹೇಳಲಾಯಿತು. ಈ ಬಗೆಯ ಚಿಂತನೆಯನ್ನು ಚಂದ್ರಶೇಖರ ಕಂಬಾರ, ಬಿ.ಎ. ವಿವೇಕ ರೈ

ಹಿ.ಶಿ. ರಾಮಚಂದ್ರೇಗೌಡ, ಪುರುಷೋತ್ತಮ ಬಿಳಿಮಲೆ, ಟಿ.ಎಸ್. ಸತ್ಯನಾಥ ಮುಂತಾದವರು ಬೆಳೆಸಿದರು. ಒಂದು ಪ್ರದೇಶದ ಅಥವಾ ದೇಶದ ಜಾನಪದವನ್ನು ಸಮಗ್ರವಾಗಿ ಕುರಿತು ಮಾತನಾಡಬೇಕಾದರೆ ಈ ಬಗೆಯ ವಿಸ್ತೃತ ಆಲೋಚನಾಕ್ರಮ ಅಗತ್ಯವಾಗುತ್ತದೆ. ಇಲ್ಲದಿದ್ದರೆ ಜಾನಪದವನ್ನು ಖಂಡ ಖಂಡಗಳಲ್ಲಿ ಕತ್ತರಿಸಿಟ್ಟು ನೋಡಬೇಕಾಗುತ್ತದೆ. ಈ ಬಗೆಯ ಅಧ್ಯಯನದಿಂದ ಇನ್ನೊಂದು ಉಪಯೋಗ ಉಂಟು. ಅದೇನೆಂದರೆ ಒಂದು ಪ್ರದೇಶದ, ದೇಶದ ಭಿನ್ನ ಆಲೋಚನೆಗಳನ್ನು ಗುರುತಿಸಿಕೊಳ್ಳುವುದು. ಈ ಹಿನ್ನೆಲೆಯಿಂದ ನೋಡಿದಾಗ ಮತಿಘಟ್ಟ ಕೃಷ್ಣಮೂರ್ತಿಯವರ ಈ ಕೃತಿ ಅತ್ಯಂತ ಮುಖ್ಯದಾಖಲೆಯಾಗಿ ಕಾಣುತ್ತದೆ.

ಮತಿಘಟ್ಟ ಕೃಷ್ಣಮೂರ್ತಿಯವರು ಭಾರತದ ಜಾನಪದಕ್ಕಿಂತ ಭಾರತದ ಸಂಸ್ಕೃತಿಪರ ಜೀವನದ ಕಡೆ ಹೆಚ್ಚು ಆಸಕ್ತಿ ಉಳ್ಳವರು. ಹಿಂದೂ ಧರ್ಮದ ತಾತ್ವಿಕತೆಯನ್ನು ಸಾಮಾನ್ಯ ಜನರಲ್ಲಿಯೂ ಕಾಣಹೊರಟವರು. ಅದರಿಂದಾಗಿ ಜಾನಪದವನ್ನು ಹೊರಗೆ ಮಾತ್ರ ಹುಡುಕದೆ ತಮ್ಮ ಸಮುದಾಯದಲ್ಲಿಯೇ ಇರುವ ಸಾಮಾನ್ಯರಲ್ಲಿ ಸಾಮಾನ್ಯರಾದ ಸ್ತ್ರೀಯರ ಜಾನಪದವಾದ ಸಂಪ್ರದಾಯದ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಇದರಿಂದ ಜಾನಪದವನ್ನು ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಹೊರಟಾಗ ಆಗುವ ಲಾಭಗಳು ಏನು ಎಂಬುದನ್ನು ಪರೋಕ್ಷವಾಗಿ ತೋರಿಸಿಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಈ ಕೃತಿ ಬಹಳ ಮುಖ್ಯವಾಗುತ್ತದೆ.

ಎರಡನೆಯ ಮಹಾಯುದ್ಧದ ನಂತರ ಹಳ್ಳಿಗಳ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಗಟ್ಟು, ಅಲ್ಲಾಡಿ ಬದುಕು ಅಲ್ಲೋಲ ಕಲ್ಲೋಲವಾಯಿತು.ಅಂತಹ ಸಂದರ್ಭದಲ್ಲಿ ವಸಾಹತೀಕರಣ ಜಾನಪದವನ್ನು ಹುಟ್ಟುಹಾಕಿತು. ಏಕೆಂದರೆ ವರ್ತಮಾನದ ಕಷ್ಟವನ್ನು ಗೆಲ್ಲಲು ಭೂತಕಾಲದ ಭವ ಮೌಲ್ಯಗಳನ್ನು ಎತ್ತಿಹಿಡಿಯ ಹೊರಟಿದ್ದು ಜಾನಪದದ ಆರಂಭಿಕ ತತ್ವ ಚಿಂತನೆಯಲ್ಲಿ ಒಂದು ಅಂಶವಾಯಿತು. ಆದರೆ ಬರಬರುತ್ತಾ ಶಿಷ್ಟರು ಅಶಿಷ್ಟರು ಎನ್ನದೆ ತಮ್ಮೊಳಗಿನ ಜಾನಪದವನ್ನು ಕಂಡುಕೊಳ್ಳಲು ಹೊರಟಿದ್ದು ಬಹಳ ಮುಖ್ಯವಾದ ಸಂಗತಿ. ಜಾನಪದದ ಉದಯಕ್ಕೆ ಮೊದಲು ಸ್ಪಷ್ಟೀಕರಣ ಪ್ರಕ್ರಿಯೆಯಲ್ಲಿದ್ದ ಸಮಾಜ ಶಿಷ್ಟವಾಗಲು ಬೇಕಾದ ''ವಿಶಿಷ್ಟವನ್ನು ಹುಡುಕಿ ಹೊರಟಿತ್ತು.'' ಜಾನಪದದ ಉದಯದೊಂದಿಗೆ ಈ ಶಿಷ್ಟ ಸಮಾಜಗಳು ತಮ್ಮಲ್ಲಿರುವ ಜಾನಪದವೆಂಬ ವಿಶಿಷ್ಟವನ್ನು ಹುಡುಕಿಕೊಂಡ ಪ್ರಯತ್ನ ಸಾಂಸ್ಕೃತಿಕ ಬದಲಾವಣೆಯಲ್ಲಿಯ ಒಂದು ಅದ್ಭುತ ಸಾಧನೆ ಎಂದೇ ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಕೃತಿಯು ತುಂಬಾ ಯಶಸ್ವಿಯಾಗಿದೆ.

ಬ್ರಿಟೀಷರ ನಂತರ ಹಿಂದೂಗಳು ಛಿದ್ರವಾಗಿದ್ದರು. ಹಿಂದೂ ಧರ್ಮ ಯಾರೊಬ್ಬರದೂ ಅಲ್ಲ, ಅದು ಸಾರ್ವತ್ರಿಕವಾದುದು. ಇದು ಜನಪದರ ಆಲೋಚನೆ. ಜನಪದ ಸಾಹಿತ್ಯ ಸಂಗ್ರಹದ ಚಟುವಟಿಕೆ ಮತ್ತು ವಿಶ್ಲೇಷಣೆ ಹಿಂದೂ ಧರ್ಮಕ್ಕೆ ಆದ ಆಘಾತಕ್ಕೆ ಪರಿಹಾರವನ್ನು ಕಂಡುಕೊಳ್ಳಲು ಹೊರಟಿದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಧರ್ಮದ ವಿಸ್ತೃತ ಭಾವನೆಯೂ

ಇಲ್ಲಿದೆ. ಇಲ್ಲಿ ಕೃಷ್ಣಮೂರ್ತಿಯವರು ಬ್ರಾಹ್ಮಣ ಹಿಂದೂ ಮತ ತತ್ವದಿಂದ ಬ್ರಾಹ್ಮಣ ಭಾರತೀಯ ಸಾರ್ವತ್ರಿಕ ಹಿಂದೂ ತತ್ವಕ್ಕೆ ಮನ್ನಡೆದಿದ್ದಾರೆ, ಆ ಮೂಲಕ ಕನ್ನಡ ಜಾನಪದಕ್ಕೆ ಬ್ರಾಹ್ಮಣ ಜಾನಪದದ ನೆಲೆಯನ್ನು ಜೋಡಿಸಿದ್ದಾರೆ. ಅವರ ಮುಂದಿನ ವಿಭಾಗಕ್ರಮ ಕೂಡ ಇದನ್ನು ಸ್ಪಷ್ಟಪಡಿಸುತ್ತದೆ. ಉದಾಹರಣೆಗೆ, ಮೊದಲನೆಯದಾಗಿ ಗೀತ ಮಾದರಿ.

ಈ ಸಂಗ್ರಹದಲ್ಲಿರುವ ಹಲವಾರು ಹಾಡಗಳು ಆತ್ಮ ಬೋಧನೆಯವಾಗಿದ್ದು ಚಿಕ್ಕವರಿಗೆ ಬೋಧಪ್ರದವಾದರೆ ದೊಡ್ಡವರಿಗೆ ಜ್ಞಾನಪ್ರದವಾದವುಗಳಾಗಿವೆ. ಆದರೆ ಇಲ್ಲಿಯ ಕೆಲವು ಹಾಡುಗಳಲ್ಲಿ ಪುರಂದರದಾಸರ, ಕನಕದಾಸರ ಅಂಕಿತವೂ ಕೂಡ ಇರುವುದು ವಿಶಿಷ್ಟವಾಗಿದೆ. ಉದಯರಾಗಗಳನ್ನು ಅಜ್ಜಿಯರು ಹಾಡಿದರೆ ನೆಲೆ -೨ ರಲ್ಲಿರುವ 'ಮನೆವಾಳ್ತೆ' ಹಾಡುಗಳನ್ನು ಸೊಸೆಯರು ಕೆಲಸ ಮಾಡುತ್ತಾ ಹಾಡಿರುವವುಗಳಾಗಿವೆ. ನೆಲೆ-3 ರಲ್ಲಿ ಹಿಂದೂ ಧರ್ಮದಲ್ಲಿರುವ ನಾಲ್ಕು ವರ್ಣಗಳು, ನಾಲ್ಕು ಆಶ್ರಮಗಳು, ನಾಲ್ಕು ಪುರುಷಾರ್ಥಗಳ ಬಗೆಗಿನವುಗಳಾಗಿವೆ. ನೆಲೆ-4 ರಲ್ಲಿ ದೇವರಪೂಜೆಗೆ ಸಂಬಂಧಿಸಿದ ಹಾಡುಗಳಿದ್ದರೆ ನೆಲೆ-5 ರಲ್ಲಿ ವ್ರತಕಥೆಗಳಿವೆ. ನೆಲೆ-೬ ರಲ್ಲಿರುವವು ಪೌರಾಣಿಕ ಕಥೆಗಳಾಗಿದ್ದು ರಾಮ, ಕೃಷ್ಣನಿಗೆ ಸಂಬಂಧಿಸಿದವುಗಳಾಗಿವೆ. ಈ ಭಾಗದಲ್ಲಿ ಎಂಟು ಲೌಕಿಕ ಕತೆಗಳಿದ್ದು ದಿನಾಂಕ ೨೮.೨.೧೮೯೭ ರಂದು ಮೈಸೂರು ಅರಮನೆಗೆ ಬೆಂಕಿಬಿದ್ದ ಕತೆಯು ಐತಿಹಾಸಿಕ ದಾಖಲೆಯಾಗಿ ಉಳಿದಿದೆ. ರೈಲಿನ ಹಾಡು, ನಲ್ಲಿಯ ಹಾಡು, ಜಮಾಬಂದಿ ಹಾಡುಗಳು ವಿಶೇಷವಾಗಿವೆ. ನೆಲೆ-೭ ರಲ್ಲಿ ಸತಿಪತಿಯರು ಹೇಗಿರಬೇಕು ಎಂಬುದನ್ನು ವೇದ, ಮನಶಾಸ್ತ್ರಗಳನ್ನು ಆಧರಿಸಿ ಹೇಳಿದ ಹಾಡುಗಳಾಗಿವೆ. ನೆಲೆ-೮ ರಲ್ಲಿ ಚೌಲ-ಮುಂಜಿಗೆ ಸಂಬಂಧಿಸಿದ ಹಾಡುಗಳಿದ್ದರೆ ನೆಲೆ-೯ ರಲ್ಲಿ ಜೋಗುಳದ ಹಾಡುಗಳು, ನೆಲೆ-೧೦ರಲ್ಲಿ ಆಧ್ಯಾತ್ಮ-ಆರತಿ-ಮಂಗಳಗಳ ಬಗ್ಗೆ ಹಲವಾರು ಹಾಡುಗಳಿವೆ. ಕೊನೆಯಲ್ಲಿ ಪರಿಶಿಷ್ಟ ಕೊಟ್ಟಿದ್ದು ಅದರಲ್ಲಿ ದಶಾವತಾರದ ಕಥೆಗಳು ಹಾಗೂ ಶಿವಕಥೆಗಳನ್ನು ಕೊಟ್ಟಿರುವುದೂ ಕೂಡ ವಿಶಿಷ್ಟವಾಗಿಯೇ ಇದೆ. ಒಟ್ಟಾರೆಯಾಗಿ ಈ ಕೃತಿಯನ್ನು ಗಮನಿಸಿದಾಗ ಭಾರತೀಯ ಪುರಾತನ ಹಿಂದೂ ಸಂಸ್ಕೃತಿಯನ್ನು ಪುನರುಜ್ಜೀವಗೊಳಿಸಿ ಮುನ್ನಡೆಸಲು ಪ್ರಯತ್ನ ಮಾಡಿರುವುದು ತಿಳಿಯುತ್ತದೆ. ಆತ್ಮಸಾಕ್ಷಾತ್ಕಾರದ ಆದಮ್ಯ ಉತ್ಕಟತೆಯೂ ಇದೆ.

ಅಯ್ಯ ಜನಪ್ರಿಯ ಗೀತೆಗಳ 'ಹೊನ್ನ ಹೊತ್ತಿಗೆ' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಕೃಷ್ಣಮೂರ್ತಿಯವರೇ ಸಂಪಾದಕರು ಹಾಗೂ ಪ್ರಕಾಶಕರೂ ಆಗಿ 'ಕನ್ನಡ ಜನಪದ ಸಾಹಿತ್ಯ ಭಂಡಾರ' ಪ್ರಕಾಶನದ ಹೆಸರಿನಲ್ಲಿ ೨೦೦೧ ರಲ್ಲಿ 'ಕಿರುಲಾವಣಿಗಳು' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಇದರಲ್ಲಿ ವೈವಿಧ್ಯಮಯವಾದ ೬೩ ಲಾವಣಿಗಳಿವೆ. ೧೯೫೦ ರಲ್ಲಿ ಮೈಸೂರಿನ ಪೈಲ್ವಾನರ ಮನೆಯ ಕಡತದಲ್ಲಿದ್ದವುಗಳನ್ನು ಬರೆದುಕೊಂಡು ಪ್ರಕಟಿಸಿದ್ದಾರೆ. ಇವು ಗರಡಿ ಮನೆಯ ಪೈಲ್ವಾನರು ರಚಿಸಿರುವರೆಂಬುದು ಸವಾಲ್-ಜವಾಬು ಎಂಬ ಲಾವಣಿಯಲ್ಲಿ ಬರುವ ಹಲವಾರು ಹೆಸರುಗಳಿಂದ ತಿಳಿಯುತ್ತದೆ. ಆದಿ ಶಕ್ತಿ, ತತ್ವವಿಚಾರ, ಕಾಲವನ್ನು ಕುರಿತ ಮೂರು ಮುಖದ ಪಕ್ಷಿ, ಸೂರ್ಯನನ್ನು ಕುರಿತ ಗೀತೆ, ಜಾರೆಯ ಬಗ್ಗೆ, ಕೃಷ್ಣರಾಜನನ್ನು ಕುರಿತ ಹಾಡು,

ಸರ್ಜಪ್ಪನಾಯಕನನ್ನು ಕುರಿತದ್ದು, ಸುರಪುರ-ಚಿತ್ತೂರು ಯುದ್ಧದ ವರ್ಣನೆ, ಬೆಂಗಳೂರು, ಸಿಂಹಾಸನ ಪುರಿ ವರ್ಣನೆ, ಮೀನಿನ ಲಾವಣಿ ಮುಂತಾದ ಲಾವಣಿಗಳಿದ್ದು ಇದೊಂದು ವೈಶಿಷ್ಟ್ಯಪೂರ್ಣ ಕೃತಿಯಾಗಿದೆ.

ಇವರ ಇತ್ತೀಚಿನ ಕೃತಿ 'ಹಾಸನ ಜಿಲ್ಲೆಯ ಕೋಲಾಟದ ಪದಗಳು' ಇದನ್ನು ಸಂಪಾದಕರೇ ಕನ್ನಡ ಜನಪದ ಸಾಹಿತ್ಯ ಭಂಡಾರ ಪ್ರಕಾಶನದಿಂದ ೨೦೦೨ ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ೮೦ ಕೋಲಾಟದ ಪದಗಳಿದ್ದು ಅವುಗಳನ್ನು ಚೆನ್ನರಾಯಪಟ್ಟಣದವರಾದ ರಂಗೇಗೌಡ ಮತ್ತು ನಂಜೇಗೌಡ ಅವರಿಂದ ೧೯೫೨ ರಲ್ಲಿ ಸಂಗ್ರಹಿಸಿದವುಗಳಾಗಿವೆ. ಈ ಪದಗಳು ವೈವಿಧ್ಯಮಯವಾಗಿದ್ದು ಹಾಸನ ಜಿಲ್ಲೆಯಲ್ಲಿಯೇ ಹೆಚ್ಚು ಪ್ರಸಿದ್ಧಿ ಪಡೆದವುಗಳಾಗಿವೆ. ಪ್ರತಿ ಕೋಲಾಟದ ಪದವು ಯಾವ ಬಗೆಯದು ಎಂಬ ಮಾಹಿತಿಯನ್ನು ಒದಗಿಸಿರುವುದು ಸೂಕ್ತವಾಗಿದೆ.

ಮತಿಘಟ್ಟ ಕೃಷ್ಣಮೂರ್ತಿಯವರ ಎರಡು ಬಿಡಿ ಲೇಖನಗಳು ಪ್ರಕಟವಾಗಿವೆ. ಅವುಗಳಲ್ಲಿ ಮೊದಲನೆಯದು ೧೯೬೭ ರಲ್ಲಿ ತರೀಕೆರೆಯಲ್ಲಿ ನಡೆದ ಪ್ರಥಮ ಜಾನಪದ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ 'ತರೀಕೆರೆಯ ಪಾಳೆಯಗಾರರು.' ಇದು 'ಹೊನ್ನ ಬಿತ್ತೇವು ಹೊಲಕೆಲ್ಲ' ಕೃತಿಯಲ್ಲಿ ಪ್ರಕಟವಾಗಿದೆ. ಇದು ತರೀಕೆರೆಯ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಾಹಿತಿಯನ್ನೊದಗಿಸುತ್ತದೆ. ತರೀಕೆರೆಯ ನಿರ್ಮಾಣ, ಪಾಳೆಯಗಾರರ ವಂಶಾವಳಿ, ಅವರಲ್ಲಿಯೇ ಇದ್ದ ಅಂತಃಕಲಹ ಮುಂತಾದ ಅಂಶಗಳ ಜೊತೆಗೆ ಈ ಪಾಳೆಗಾರಿಕೆ ವಂಶ ಕೆಂಗಪ್ಪ ನಾಯಕನಿಂದ ಪ್ರಾರಂಭವಾಗಿ ಸರ್ಜಾ ಹನುಮಪ್ಪನಾಯಕನವರೆಗೆ ನಡೆದುಕೊಂಡು ಬಂದ ವಿಚಾರ ಮತ್ತು ಅದರ ಮೂಲ ಪುರುಷ ವಿಜಯನಗರ ಸಾಮ್ರಾಜ್ಯದ ಪ್ರತಿನಿಧಿ ದೂಮರಾಜ ಎಂಬ ವಿಚಾರದೊಂದಿಗೆ ಬ್ರಿಟೀಷರ ವಿರುದ್ಧ ಹೋರಾಡಿದ ವಿಚಾರವೂ ಇದೆ.

ಇವರ ಮತ್ತೊಂದು ಲೇಖನ ೧೯೮೩ ರಲ್ಲಿ ಪ್ರಕಟವಾದ 'ಮಲೆನಾಡು ಜಾನಪದ' ಕೃತಿಯಲ್ಲಿ ಪ್ರಕಟವಾಗಿದೆ. ಇದರಲ್ಲಿ ಮಲೆನಾಡಿನ ಹಾಗೂ ಬಯಲುನಾಡಿನ ಜನಪದ ಸಾಹಿತ್ಯದ ಬಗ್ಗೆ ತುಲನಾತ್ಮಕವಾಗಿ ಚಿಂತಿಸಿರುವ ಮತ್ತು ಜಾನಪದ ವಿದ್ವಾಂಸರಿಗೆ ಕೆಲವು ಸಲಹೆಗಳನ್ನು ನೀಡಿರುವುದು ಮುಖ್ಯ ವಿಚಾರವಾಗಿದೆ.

ಮತಿಘಟ್ಟ ಕೃಷ್ಣಮೂರ್ತಿಯವರು ಜನಪದ ಸಾಹಿತ್ಯ ಯಾರಿಗೂ ಬೇಡದಾಗಿದ್ದು, ಉದಾಸೀನದಿಂದ ತಿರಸ್ಕೃತವಾಗಿದ್ದ ಕಾಲದಲ್ಲಿ ಕರ್ನಾಟಕದಾದ್ಯಂತ ಸಂಚರಿಸಿ ಸಂಗ್ರಹಿಸಿದುದು ಬಹಳ ಪ್ರಮುಖವಾದುದಾಗಿದೆ. ಈ ದೃಷ್ಟಿಯಿಂದ ಕರ್ನಾಟಕದ ಜಾನಪದ ಸಂಗ್ರಹಕಾರರಲ್ಲಿ ಮೊದಲಿಗರಾಗುತ್ತಾರೆ. ಇವರ ಹೆಸರು ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗಿ ಉಳಿಯಲಿದೆ.

ಎಲ್. ಗುಂಡಪ್ಪ

ಡಾ|| ಎಲ್.ಜಿ. ಸುಮಿತ್ರ

ಮಲ್ಲಯ್ಯಶಿವನೆ ನೀವೆಲ್ಲಿ ಬೀಡಿಕೆಬಿಟ್ರಿ
ಮಲ್ಲಿಗೆ ಬೆಳೆದ ಮತಿಗಟ್ಟ- ಊರಮುಂದೆ
ಬಯಲಾಗೆ ಬಿಟ್ರು ಪರುಸೆಯ.

ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಮತಿಗಟ್ಟ, ಎಲ್. ಗುಂಡಪ್ಪನವರು ಹುಟ್ಟಿ ಬೆಳೆದ ಹಳ್ಳಿ. ಈ ಮತಿಘಟ್ಟದ ಲಿಂಗಣ್ಣಯ್ಯನವರ ಮೊದಲ ಮಗ ಎಲ್. ಗುಂಡಪ್ಪನವರು. ಅವರ ತಮ್ಮ ಮತಿಘಟ್ಟ ಕೃಷ್ಣಮೂರ್ತಿಯವರು ಈ ಹಳ್ಳಿಯಲ್ಲಿ ಸಂಗ್ರಹಿಸಿದ ಹಾಡುಗಳನ್ನು ಸೇರಿಸಿ ಸಂಪಾದಿಸಿ 'ನಾಡಪದಗಳು' ಎಂಬ ಪುಸ್ತಕವನ್ನು ಅವರು 1947ರಲ್ಲಿ ಪ್ರಕಟಿಸಿದರು. ಈ ಸಂಗ್ರಹದ ಮುನ್ನುಡಿಯನ್ನು 1943ರಲ್ಲೇ ಬರೆದುಕೊಟ್ಟಿದ್ದರು, ಶ್ರೀ.ಬಿ.ಎಮ್. ಶ್ರೀಕಂಠಯ್ಯನವರು. ಈ ಸಂಗ್ರಹದ ಹಾಡುಗಳನ್ನೂ, ಅವನ್ನು ತೆನೆಗಳನ್ನಾಗಿ ವಿಂಗಡಿಸಿ ಗುಂಡಪ್ಪನವರು ಬರೆದ ಪರಿಚಯ ಮತ್ತು ಟಿಪ್ಪಣಿಗಳನ್ನೂ, ಹಸ್ತಪ್ರತಿಯಲ್ಲಿ ಅವರು ಪರಿಶೀಲಿಸಿದ್ದರು. ''ಇದುವರೆಗೆ ನಾನು ನೋಡಿರುವ ಸಂಗ್ರಹಗಳಲ್ಲೆಲ್ಲ ಈಗಿನ ಸಂಗ್ರಹವೇ ಸರ್ವೋತ್ತಮವಾದದ್ದು ಮತ್ತು ಅತ್ಯಂತ ಸ್ವಾರಸ್ಯವಾದದ್ದು. ಇದು ಸಂಗ್ರಹವಾಗಿ ಬಂದಿರುವುದು ಪ್ರಸಿದ್ಧ ಹೊಯ್ಸಳ ರಾಜಧಾನಿ ದೋರಸಮುದ್ರ (ಹಳೆಯಬೀಡು) ಪ್ರಾಂತ್ಯದಿಂದ. ಇದರಲ್ಲಿ ಕೆಲವು ಚಾರಿತ್ರಿಕ ಲಾವಣಿಗಳು (ಉದಾ:ಲಕ್ಕಣ್ಣ ಈರಣ್ಣರೆಂಬ ರಾಜಕುಮಾರರನ್ನೂ, ಶ್ರೀರಂಗಪಟ್ಟಣದ ಪತನವನ್ನೂ ಕುರಿತವು). ಅನೇಕ ಹೆಂಗಸರು ಹಾಡುಗಳೂ, ಎದೆಕರಗಿಸುವ ಕರುಣ ಕಥೆಗಳೂ, ಧಾರ್ಮಿಕ ಭಾವಗೀತೆಗಳೂ ಇವೆ....ಈ ಹಾಡುಗಳ ಸಂಗ್ರಾಹಕರನ್ನೂ ಸಂಪಾದಕರನ್ನೂ ಅವರ ಬಹು ಸೊಗಸಾದ ಈ ಕಾರ್ಯಕ್ಕಾಗಿ ಅಭಿನಂದಿಸುತ್ತೇನೆ'' ಎನ್ನುತ್ತಾರೆ ಬಿ.ಎಂ.ಶ್ರೀಯವರು.

ಗುಂಡಪ್ಪನವರಿಗೆ ಹಳ್ಳಿಯ ಹಾಡುಗಳಲ್ಲಿ ಆಸಕ್ತಿ ಹುಟ್ಟಿದ್ದು ಹೇಗೆ ಎಂಬುದನ್ನು ಅವರು ಈ ಪುಸ್ತಕದ ''ಬಿನ್ನಹ''ದಲ್ಲಿ ಹೇಳಿಕೊಂಡಿದ್ದಾರೆ. ''ನಮ್ಮೂರಿನ ಹೆಂಗಸರೆಲ್ಲ ಹಾಡಿನ ವಿಶ್ವಕೋಶದಂತಿದ್ದ ನಮ್ಮ ಅಜ್ಜಿಯ ಹತ್ತಿರ ಹಾಡು ಹೇಳಿಸಿಕೊಳ್ಳುವುದಕ್ಕೆ ಬರುತ್ತಿದ್ದರು. ಚಿಕ್ಕ ಹುಡುಗಿಯರು ಕೋಲಾಟದ ಹಾಡನ್ನೂ, ಮದುವೆಯಾದ ಮತ್ತು ಆಗಲಿರುವ

ಹುಡುಗಿಯರು ಉರುಟಣೆಯ ಹಾಡು, ಬೀಗರಹಾಡು, ಮತ್ತು ಮಂಗಳಗೌರಿ ಮುಂತಾದ ವ್ರತಕತೆಗಳನ್ನೂ, ಹಿರಿಯ ಹೆಂಗಸರು ಉದಯರಾಗ, ತುಳಸಿಯ ಪೂಜೆ, ಸುದಾಮನ ಹಾಡು, ಗಜೇಂದ್ರಮೋಕ್ಷ, ಗಿರಿಜಾಕಲ್ಯಾಣ, ಮೊದಲಾದ ಶಾಸ್ತ್ರದ ಮತ್ತು ತತ್ವದ ಹಾಡುಗಳನ್ನೂ ಹೇಳಿಕೊಳ್ಳುತ್ತಿದ್ದರು. ನಮ್ಮ ಮನೆಯ ಸುತ್ತಮುತ್ತ ಒಕ್ಕಲಿಗರ ಮನೆಗಳು. ನಮ್ಮ ಸಣ್ಣ ಹಳ್ಳಿಯಲ್ಲಿ ಯಾರ ಮನೆಯಲ್ಲಿ ರಾಗೀಕಲ್ಲುಪದ ಹೇಳಿದರೂ ನಮ್ಮ ಮನೆಗೆ ಚೆನ್ನಾಗಿ ಕೇಳಿಸುತ್ತಿತ್ತು. ಮನೆಯಲ್ಲೇ ಇದ್ದುಕೊಂಡು ಇವನ್ನೆಲ್ಲ ಕೇಳಬಹುದಾಗಿತ್ತು. ಕೋಲಾಟ ನಡೆಯುತ್ತಿದ್ದುದು ಮಾತ್ರ ಸ್ವಲ್ಪ ದೂರದಲ್ಲಿ. ಅಲ್ಲದೆ ಅದನ್ನು ಕಣ್ಣಿಂದ ನೋಡಲೂ ಬೇಕಷ್ಟೆ. ಅದಕ್ಕೆ ತಕ್ಕಷ್ಟು ಅವಕಾಶವಿರಲಿಲ್ಲ. ಅಲ್ಲಿ ಹೋಗಬೇಕೆಂಬ ಕುತೂಹಲ ಹೆಚ್ಚಾಗಿದ್ದರೂ ಹೊರಗೆ ಹೊರಡಲು ಧೈರ್ಯವಿಲ್ಲ. ಹಿರಿಯರಿಗೆ ಈ ಪದಗಳು ಬೇಕಿಲ್ಲ. ನನಗೆ ಬೇರೆ ಜೊತೆ ಇಲ್ಲ. ಬಾಗಿಲ ಬಳಿ ನಿಂತು ಕಿವಿಗೊಟ್ಟು ಆಲಿಸುತ್ತಿದ್ದೆ. ನಮ್ಮ ತಾಯಿ ಈ ಕಷ್ಟವನ್ನರಿತು ಅವರಿಗೆ ಬಿಡುವಾದಾಗಲೆಲ್ಲ ಜೊತೆಗೆ ಬರುತ್ತಿದ್ದರು. ಹೀಗೆ ಚಿಕ್ಕಂದಿನಲ್ಲೇ ಅಕ್ಷರಾಭ್ಯಾಸಕ್ಕೆ ಮೊದಲೇ ನನಗೆ ಈ ಪದಗಳ ಪರಿಚಯವಾಯಿತು. ಆಗ ಅವುಗಳ ಅರ್ಥ, ಸ್ವಾರಸ್ಯ ಒಂದೂ ತಿಳಿಯುತ್ತಿರಲಿಲ್ಲ. ಒಂದೊಂದರ ಅಭಿಪ್ರಾಯ ಮಾತ್ರ ಮಸುಕು ಮಸುಕಾಗಿ ಮನಸ್ಸಿಗೆ ಹೊಳೆಯುತ್ತಿತ್ತು. ಒಟ್ಟಿನಲ್ಲಿ 'ಇವು ಚೆನ್ನಾಗಿವೆ; ನಮಗೆ ಬೇಕು' ಎನ್ನಿಸುತ್ತಿತ್ತು. ಈಚೆಗೆ ವಿದ್ಯಾಭ್ಯಾಸಕ್ಕಾಗಿ ಹದಿನೈದು ಇಪ್ಪತ್ತು ವರ್ಷ ಹೊರಗಿದ್ದು ಊರಿಗೆ ಹಿಂದಿರುಗಿದಾಗ ಅವುಗಳ ಬೆಲೆ ಮನದಟ್ಟಾಗಿತ್ತು'' ಎನ್ನುತ್ತಾರೆ. ಹೀಗೆ ಬಾಲ್ಯದ ದಿನಗಳಲ್ಲೇ ಗುಂಡಪ್ಪನವರ ಜಾನಪದ ಆಸ್ಥೆಯಲ್ಲಿ ಒತ್ತಾಸೆಯಾಗಿದ್ದ ಅವರ ತಾಯಿಯವರೂ ನೂರಾರು ಸಂಪ್ರದಾಯದ ಹಾಡುಗಳನ್ನು ಹಾಡುತ್ತಿದ್ದರು. ಅವನ್ನೂ ಮುಂದೆ ಕೃಷ್ಣಮೂರ್ತಿಯವರು ಸಂಗ್ರಹಿಸಿದರು.

ತಮ್ಮ ಬಾಲ್ಯದ ದಿನಗಳಲ್ಲೇ ಶಾಲೆಯಲ್ಲಿ ಬಹು ಬುದ್ಧಿವಂತನೆನಿಸಿಕೊಂಡು ತಾಲೂಕಿಗೇ ಮೊದಲು ಬರುತ್ತಿದ್ದ ಇವರ ತಮ್ಮ ಮತಿಘಟ್ಟ ಕೃಷ್ಣಮೂರ್ತಿ ಶಾಲೆಯನ್ನು ಬಿಟ್ಟು ಮುಂದೆ ಹಳ್ಳಿಯ ಹಾಡುಗಳನ್ನು ಸಂಗ್ರಹಿಸುತ್ತಿದ್ದರು. ಅದನ್ನು ಪ್ರಕಟಿಸುವ ಹಿರಿಯ ಆಸೆ ಹೊತ್ತವರು ಗುಂಡಪ್ಪನವರು. ನಲವತ್ತರ ದಶಕದ ಮೊದಲಲ್ಲಿ, ಅವುಗಳ ಸಂಪಾದನೆಯನ್ನು ಕೈಗೊಂಡರು. ಮತಿಘಟ್ಟ ಕೃಷ್ಣಮೂರ್ತಿ ತಮ್ಮ ಜೀವನದುದ್ದಕ್ಕೂ ಸಂಗ್ರಹಿಸಿದ ಜಾನಪದ ಗೀತೆಗಳ ಸಂಗ್ರಹ ಎಷ್ಟು ಮಹತ್ವದ್ದು ಎಷ್ಟು ಬೃಹತ್ತಾದದ್ದು ಎನ್ನುವುದನ್ನು ಈ ಕ್ಷೇತ್ರದಲ್ಲಿ ತೊಡಗಿದವರೆಲ್ಲರೂ ಬಲ್ಲರು.

ಈ ಪುಸ್ತಕದ ಸಂಪಾದಕರಾಗಿ ಗುಂಡಪ್ಪನವರು ಬಹು ಆಸ್ಥೆಯಿಂದ ಕೆಲಸ ಮಾಡಿದವರು. ಅದು ಬಿ.ಎಂ.ಶ್ರೀಯವರಿಂದ ಹಿಡಿದು ಮುಂದಿನ ಪೀಳಿಗೆಯ ಅನೇಕ ಜಾನಪದ ವಿದ್ವಾಂಸರಿಗೆ ದಾರಿದೀಪವಾಯಿತು. ಗುಂಡಪ್ಪನವರು ನಿಘಂಟು ರಚನಾಕಾರರು, ಹಳಗನ್ನಡದ ಕಾವ್ಯಗಳನ್ನೂ ಸಂಪಾದಿಸಿದವರು. ಅವರ ಈ ಮನೋಧರ್ಮ, ನಾಡಪದಗಳ ಸಂಪಾದನೆಯ ಕಾರ್ಯದಲ್ಲಿ ಸ್ಪಷ್ಟವಾಗಿದೆ. ತಮ್ಮ ತಮ್ಮನ ಸಂಗ್ರಹದ ಅಸಂಖ್ಯಾತ ಹಾಡುಗಳ ಪೂರ್ಣ ಪಾಠವನ್ನು ಅಚ್ಚು

ಹಾಕಿಸುವುದು ಆರ್ಥಿಕವಾಗಿ ಅಸಾಧ್ಯವಾಗಿತ್ತು. ಈ ಕೊರತೆಯನ್ನು ಅವರು ಜಾನಪದ ಮನೋಧರ್ಮ ಹಾಗೂ ಪದಪ್ರಜ್ಞೆಗಳಿಗೆ ಲೋಪಬರದಂತಹ ಆಯ್ಕೆ, ಸಂಕಲನ, ಇತ್ಯಾದಿಗಳಿಂದ ನಿವಾರಿಸಿದರು. ''ತಮ್ಮ ಸೋದರರಿಬ್ಬರು ಸಂಗ್ರಹ ಮಾಡಿ ತಂದ ಬಗೆಬಗೆಯ ಜನಪದ ಗೀತೆಗಳನ್ನೂ ಲಾವಣಿಗಳನ್ನೂ ಆಯ್ದು ಪರಿಚಯ ಟಿಪ್ಪಣಿಗಳೊಡನೆ ಸಂಪಾದಿಸಿ 'ನಾಡಪದಗಳು' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದು ಗುಂಡಪ್ಪನವರು ಮಾಡಿದ ಒಂದು ಮಹತ್ವದ ಕೆಲಸ ಎಂದಿದ್ದಾರೆ, ಹಾ.ಮಾ.ನಾಯಕರು. ಕನ್ನಡ ಜನಪದ ಕಾವ್ಯಗಳ ಪ್ರಕಟಣೆಯಲ್ಲಿ ಅತ್ಯಂತ ಗಣ್ಯವಾದ ಸ್ಥಾನವನ್ನು ಪಡೆದುಕೊಂಡಿರುವ 'ನಾಡಪದಗಳು' ಸಂಕಲನ........ ಎಂದು ಹೆಸರಿಸುತ್ತಾರೆ ಜೀ.ಶಂ.ಪ. ಅವರು. ಮತಿಘಟ್ಟ ಕೃಷ್ಣಮೂರ್ತಿಗಳು ತಮ್ಮ ಸಂಗ್ರಹದ ಈ ಹಾಡುಗಳನ್ನು ಮುಂದೆ ತಮ್ಮ ಇನ್ನೂ ಅನೇಕ ಸಂಗ್ರಹಗಳಲ್ಲಿ ಸೇರಿಸಿ ಪ್ರಕಟಿಸಿದ್ದಾರೆ. ಆದರೆ, 'ನಾಡಪದಗಳು' ಪುಸ್ತಕ ಈಗ ಅಚ್ಚಿನಲ್ಲಿ ಲಭ್ಯ ಇಲ್ಲದಿರುವುದರಿಂದ ಅದನ್ನು ಗುಂಡಪ್ಪನವರು ಸಂಪಾದಿಸಿದ ರೀತಿಯ ಕೆಲವು ವಿವರಗಳನ್ನು ಕೊಡುತ್ತೇನೆ. ಅವರು ತಮ್ಮ ಬಿನ್ನಹದಲ್ಲಿ ಹೀಗೆ ಹೇಳುತ್ತಾರೆ. ''ಈ ಹಾಡುಗಳನ್ನು ಗಂಡಸರ ಹಾಡು, ಹೆಂಗಸರ ಹಾಡು, ಎಂದು ಎರಡು ಬಗೆಯಾಗಿ ವಿಂಗಡಿಸಬಹುದು. ಬಂಡಿಯ ಪದ, ಕೋಲಾಟದ ಪದ, ಮಾರಿಯ ಪದ, ಚೋಮನ ಪದ ಮೊದಲಾದವು ಗಂಡಸರು ಹೇಳುವ ಹಾಡುಗಳು. ರಾಗಿ ಕಲ್ಲು ಪದ, ಸುವ್ವಿಯ ಪದ, ಹಚ್ಚೆಯ ಪದ, ಒಸಗೆಯ ಪದ, ಸೋಬಾನೆಯ ಪದ, ತಿಂಗಳುಮಾವನ ಪದ ಮುಂತಾದವು ಹೆಂಗಸರು ಹೇಳುವವು.

ಇಲ್ಲಿನ ಹಾಡುಗಳನ್ನು ಎಂಟು ಅಧ್ಯಾಯಗಳಲ್ಲಿ ವಿಂಗಡಿಸಿದ್ದಾರೆ. ಕೋಲಾಟದ ಪದಗಳು, ತಿಂಗಳು ಮಾವನ ಪದಗಳು, ರಾಗಿಕಲ್ಲಿನ ಪದಗಳು, ಕಥೆ ಮತ್ತು ಶಾಸ್ತ್ರದ ಹಾಡುಗಳು, ಬ್ರಾಹ್ಮಣರ ಹಾಡುಗಳು, ಚರಿತ್ರೆಗೆ ಸಂಬಂಧಿಸಿದ ಪದಗಳು, ಬ್ರಾಹ್ಮಣರ ಹಾಡುಗಳು, ಬಸವನ ಅಷ್ಟಮಿಯ ಹಾಡುಗಳು. ಈ ಪ್ರತಿ ತೆನೆಗೂ ಅಲ್ಲಿನ ಹಾಡುಗಳ ಪರಿಚಯಾತ್ಮಕ ಲೇಖನ ಬರೆದಿದ್ದಾರೆ.

ಜಾನ್ ಲೇಡನ್ ಎಂಬ ಸ್ಕಾಟ್ಲೆಂಡಿನ ಕವಿಯೊಬ್ಬನು ಶ್ರೀರಂಗಪಟ್ಟಣದ ಕಡೆಗಾಲವನ್ನು ಕುರಿತ ಎರಡು ಕವನಗಳನ್ನು ಇಂಗ್ಲೀಷಿಗೆ ಭಾಷಾಂತರ ಮಾಡಿರುವನೆಂಬ ಸಂಗತಿಯನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರಾಗಿದ್ದ ಶ್ರೀಮಾನ್. ಬಿ. ನಾಗೇಶರಾವ್, ಎಂ.ಎ. ಅವರು ತಿಳಿಸಿದರು. ಆ ಕವನಗಳನ್ನು ಓದಿ ನೋಡಿದಾಗ ಒಂದು ಕನ್ನಡದಿಂದಲೂ, ಇನ್ನೊಂದು ಹಿಂದೂಸ್ತಾನಿಯಿಂದಲೂ ಭಾಷಾಂತರಿಸಿದ್ದೆಂದು ತಿಳಿಯಿತು. ಅವೆರಡನ್ನೂ ಮತ್ತೆ ಕನ್ನಡಿಸಿ ಇಲ್ಲಿ ಕೊಟ್ಟಿದ್ದೇನೆ.

ಈ ಜಾನ್ ಲೇಡನ್ ಕವಿ ಶ್ರೀರಂಗಪಟ್ಟಣ ಇಂಗ್ಲೀಷರ ಕೈಗೆ ಬಿದ್ದ ತರುಣದಲ್ಲೆ (1803ರ ಸುಮಾರಿನಲ್ಲಿ) ಮೈಸೂರಿಗೆ ಬಂದು ಕಮೀಷನರುಗಳ ವೈದ್ಯರಾಗಿ ಕೆಲವು ಕಾಲ ಇದ್ದರು. ನಲವತ್ತರ ದಶಕದಲ್ಲಿಯೇ ಮಾಡಿದ ಈ ರೀತಿಯ ಕಾರ್ಯ ಗುಂಡಪ್ಪನವರ ಜಾನಪದ

ಸಂವೇದನೆಗೂ ವಿದ್ವತ್ತಿಗೂ ಸಾಕ್ಷಿಯಾಗಿದೆ. ಅವರ ಸಂಪಾದನೆಯಲ್ಲಿ 'ನಾಡಪದಗಳು' ಹಾಡುಗಳ ಸಂಗ್ರಹವೇ ಅಲ್ಲದೆ ವ್ಯಾಸಂಗ ಯೋಗ್ಯವಾದ ಸಂಶೋಧನಾತ್ಮಕ ಗ್ರಂಥವಾಗಿ ಹೊರಬಂದಿತು. ಮುಂದಿನ ದಿನಗಳಲ್ಲಿ ಅವರ ಬರವಣಿಗೆಯ ಕಾರ್ಯಕ್ಷೇತ್ರ ವಿಸ್ತಾರವಾಯಿತು. ಆದರೆ ಜಾನಪದದ ಒಲವು ಅವರನ್ನು ಬಿಡಲಿಲ್ಲ.

1951ರಲ್ಲಿ ಅರುಂಧತಿ ಎಂಬ ಕಿರು ಹೊತ್ತಿಗೆಯನ್ನೂ 'ಕನ್ನಡಿ ಸೇವೆ' ಎಂಬ ತಮ್ಮ ಪುಸ್ತಕದಲ್ಲಿ, ಉಳಿಸಿಕೊಳ್ಳಬೇಕಾದ ಕೆಲವು ಮಾತುಗಳು, 'ಕೋಡು', 'ನಾಡಬಯಲಿನಲ್ಲಿ ಗೌರೀಶಿಖರ', 'ಲಾವಣಿ ಅಥವಾ ವೀರಕಥೆ', 'ಮಲೆರಾಯ' ಮುಂತಾದ ಜಾನಪದಕ್ಕೆ ಸಂಬಂಧಿಸಿದ ಪ್ರಬಂಧಗಳನ್ನು ಪ್ರಕಟಿಸಿದರು.

1975ರಲ್ಲಿ ಗುಂಡಪ್ಪನವರಿಗೆ ಸಂದ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪ್ರದಾನದ ಉಲ್ಲೇಖದಲ್ಲಿ ''ಚಿಕ್ಕಂದಿನಿಂದಲೂ ಹಳ್ಳಿಯ ಹಾಡು ಕತೆಗಳಲ್ಲಿ ಆಸಕ್ತಿಯನ್ನು ಹೊಂದಿದ್ದ ಇವರು ಮುಂದೆಯೂ ಅದನ್ನು ರೂಢಿಸಿಕೊಂಡು ತಮ್ಮ ಕುಟುಂಬವಿಡೀ ಇದರಲ್ಲಿ ಆಸಕ್ತಿ ತಳೆಯುವಂತೆ ಮಾಡಿದ್ದಾರೆ.''ಎಂದಿದೆ. ನಮ್ಮ, ಎಂದರೆ ಅವರ ಮಕ್ಕಳ ನಿತ್ಯ ಜೀವನವನ್ನು ಅವರು ಸಾಹಿತ್ಯಮಯವನ್ನಾಗಿಸಿದ್ದೇ ಅಲ್ಲದೆ ಜಾನಪದದ ಬಗೆಗೆ ಅತೀವ ಆಸಕ್ತಿಯನ್ನು ಪ್ರೇರೇಪಿಸಿ ಬೆಳೆಸಿದರು.

ಗುಂಡಪ್ಪನವರ ವಿದ್ವತ್ತು ಎಷ್ಟು ಅಗಾಧವೋ ಅವರ ಸ್ವಭಾವ ಅಷ್ಟೇ ಸರಳ. ಗುಂಡಪ್ಪನವರು ''ವಿನಯ ಸೌಜನ್ಯಗಳ ಸಾಕಾರ ಮೂರ್ತಿ'' ಎನ್ನುತ್ತಾರೆ, ನಿರಂಜನರು. ಗುಂಡಪ್ಪನವರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕವೃತ್ತಿ ಮಾಡುತ್ತಲೇ ತಮಿಳು, ಇಂಗ್ಲಿಷ್, ಸಂಸ್ಕೃತಗಳಿಂದ ಮಹತ್ತರವಾದ ಭಾಷಾಂತರ ಕಾರ್ಯಗಳನ್ನು ಕೈಗೊಂಡದ್ದೇ ಅಲ್ಲದೆ ಆದಿಪುರಾಣದ ಸಂಪಾದನೆಯನ್ನೂ ಮಾಡಿದರು. ತಿರುಕ್ಕುರಳ್, ಶಿಲಪ್ಪದಿಗಾರಂ, ಪೆರಿಯಪುರಾಣ ಮುಂತಾದ ತಮಿಳಿನ ಪುರಾತನ ಗ್ರಂಥಗಳನ್ನೂ, ಸಂಸ್ಕೃತದಿಂದ ಭಾಸನ ನಾಟಕಗಳನ್ನೂ; ಇಂಗ್ಲೀಷಿನಿಂದ ಟಾಲ್‌ಸ್ಟಾಯ್ ಅವರ ಕತೆಗಳೇ ಮೊದಲಾದ ಅನೇಕ ಕತೆ ಕಾದಂಬರಿಗಳನ್ನೂ ಭಾಷಾಂತರಿಸಿದರು.

ಇಂಗ್ಲಿಷ್-ಕನ್ನಡ ಹಾಗೂ ಕನ್ನಡ-ಕನ್ನಡ ನಿಘಂಟುವಿನ ಕೆಲಸದಲ್ಲೂ ಪ್ರಮುಖ ಪಾತ್ರ ವಹಿಸಿದರು, ಗುಂಡಪ್ಪನವರು. ವಿನಯಶೀಲರಾದ ಇವರಿಗೆ ತಡವಾಗಿಯೇ ಆದರೂ ಅಕಾಡಮಿ ಮುಂತಾದ ಸಂಸ್ಥೆಗಳ ಪ್ರಶಸ್ತಿಗಳು ಸಂದವು. ಎಂಭತ್ತು ಮೂರು ವರ್ಷ ಕಾಲ ಗುಂಡಪ್ಪನವರು ಹರ್ಷಚಿತ್ತರಾಗಿ ಸಾರ್ಥಕ ಜೀವನವನ್ನು ನಡೆಸಿದರು.

ಶಿವೇಶ್ವರ ದೊಡ್ಡಮನಿ

ಡಾ|| ಎಸ್. ಶಶಿಕಲಾ

೧೯೪೮ ರಲ್ಲಿ ಪತ್ರಿಕೆಗೆ 'ಜನಪದ ಸಾಹಿತ್ಯದಲ್ಲಿ ಸೌಂದರ್ಯ' ಎಂಬ ವಿಷಯವನ್ನು ಕುರಿತು ನಾಲ್ಕು ಲೇಖನಗಳನ್ನು ಬರೆದಿರುವ ದೊಡ್ಡಮನಿ ಅವರು ೧೯೫೦ ರ ಸುಮಾರಿಗೆ ಕೈಗೊಂಡ ಜಾನಪದ ಕಾರ್ಯ ಉಲ್ಲೇಖನೀಯ. ೧೯೫೭ ರಲ್ಲಿ ಮುದ್ರಣಗೊಂಡ 'ನವಿಲೂರ ಮನೆಯಿಂದ' ಎಂಬ ಸಂಕಲನವೂ ದೊಡ್ಡಮನಿ ಅವರಿಂದ ಸಂಗ್ರಹಿಸಲ್ಪಟ್ಟ ಅಪರೂಪದ ಜನಪದ ಹಾಡುಗಳ ಸಂಗ್ರಹ.

ಕೆ.ಆರ್. ಲಿಂಗಪ್ಪ

ಎಸ್.ಎಂ. ಮುತ್ತಯ್ಯ

ಕನ್ನಡ ಜಾನಪದ ಅಧ್ಯಯನದ ಆದ್ಯ ಪ್ರವರ್ತಕರಲ್ಲಿ ಕೆ.ಆರ್. ಲಿಂಗಪ್ಪ ಅವರು ಒಬ್ಬರು. ಜಾನಪದ ಪ್ರಕಾರಗಳ ಸಂಗ್ರಹ ಹಾಗೂ ಅವುಗಳ ಕ್ರಿಯಾತ್ಮಕ ಅಳವಡಿಕೆಗೆ ಪ್ರೇರೇಪಿಸಿದ ಮಹಾನ್ ವ್ಯಕ್ತಿತ್ವ. ಜನಪದ ಹಾಡುಗಳನ್ನು ತಮ್ಮ ಸುಮಧುರ ಕಂಠದಿಂದ ಹಾಡುತ್ತ ಕರ್ನಾಟಕ ಜಾನಪದವನ್ನು ನಾಡಿನಾದ್ಯಂತ ಪರಿಚಯಿಸಿದ ಕೀರ್ತಿ ಲಿಂಗಪ್ಪ ಅವರದು. ಜಾನಪದ ಸಂಗೀತ ರತ್ನ, ಜಾನಪದ ಕಂಠಸಿರಿ, ಜಾನಪದ ಕೋಗಿಲೆ, ಜಾನಪದ ನುಡಿಗಾರುಡಿಗ ಎಂಬ ಹತ್ತಾರು ಬಿರುದುಗಳನ್ನು ಪಡೆದ ಶ್ರೀಯುತರು ಜನಪದ ಹಾಡುಗಳ ಹಾಡುಗಾರಿಕೆಯಲ್ಲೇ ತಮ್ಮ ಜೀವನದ ಸಾರ್ಥಕತೆಯನ್ನು ಕಂಡುಕೊಂಡವರು. ವೃತ್ತಿಯಲ್ಲಿ ವಕೀಲರಾಗಿದ್ದರೂ ಸಂಪೂರ್ಣ ಗಮನ ಜಾನಪದದ ಕಡೆಗೆ.

ಕೆ.ಆರ್. ಲಿಂಗಪ್ಪ ಅವರು ಜನಿಸಿದ್ದು ೦೮.೦೬.೧೯೨೭ರಲ್ಲಿ. ಜನ್ಮಸ್ಥಳ ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು, ಶಿವನಿ ಹೋಬಳಿಯ ಕಲ್ಲೇನಹಳ್ಳಿ. ತಾಯಿ ಬಸಮ್ಮ. ತಂದೆ ರಂಗಪ್ಪ. ತಾಯಿ ಬಸಮ್ಮ, ಲಿಂಗಪ್ಪ ಅವರ ಜನನದಿಂದ ಸಾಕಷ್ಟು ಖುಷಿಗೊಂಡು ''ನನ್ನ ಹೊಟ್ಟೇಲೊಂದು ಚಿನ್ನ ಹುಟ್ಟಿತು ತಾಯಿ'' ಎಂದು ಹಾಡಿ ಸಂಭ್ರಮಿಸಿದ್ದಳು. ಲಿಂಗಪ್ಪ ಅವರ ಕುಟುಂಬ ಹಳ್ಳಿಯ ಪಟೇಲರ ಮನೆತನಕ್ಕೆ ಸೇರಿದ್ದರೂ ಹಾಸಿ ಹೊದ್ದದ್ದು ಮಾತ್ರ ಬಡತನ. ಇವರು ಶಿಕ್ಷಣ ಪಡೆದವರೂ ಅಲ್ಲ. ಆದರೆ ಭಾವ ಶ್ರೀಮಂತಿಕೆ ಮತ್ತು ಲೋಕಾನುಭವಕ್ಕೆ ಕಡಿಮೆಯೇನಿರಲಿಲ್ಲ. ಇಂಥ ನಿರಕ್ಷರಕುಕ್ಷಿಗಳ ಕುಟುಂಬದಲ್ಲಿ ಲಿಂಗಪ್ಪ ಮೊದಲ ಬಾರಿಗೆ ಶಾಲೆಯ ಪ್ರವೇಶಮಾಡಿದರು. ಶ್ರೀಯುತರು ಮಾಧ್ಯಮಿಕ ಶಿಕ್ಷಣವನ್ನು ಅಜ್ಜಂಪುರದಲ್ಲಿ, ಪ್ರೌಢಶಾಲಾ ಶಿಕ್ಷಣವನ್ನು ದಾವಣಗೆರೆಯಲ್ಲಿ, ಇಂಟರ್ ಮೀಡಿಯಟ್ ಶಿಕ್ಷಣವನ್ನು ಶಿವಮೊಗ್ಗದಲ್ಲಿ ಪಡೆದರು. ನಂತರ ಮೈಸೂರಿನಲ್ಲಿ ಬಿ.ಎ. ಮತ್ತು ಕಾನೂನು ಪದವಿಗಳನ್ನು ಪಡೆದರು. ವಿದ್ಯಾಭ್ಯಾಸವನ್ನು ಮುಗಿಸಿದ ತಕ್ಷಣ ೨೫ ರೂ ಸಂಬಳಕ್ಕೆ ಆಹಾರ ಇಲಾಖೆಯಲ್ಲಿ ಬಿಲ್‌ಕ್ಲರ್ಕ್ ಆಗಿ ಸೇರಿಕೊಂಡರು. ಹೀಗೆ ಸರ್ಕಾರಿ ಯಂತ್ರದಲ್ಲಿ ಸಿಕ್ಕಿಕೊಳ್ಳಲು ಹವಣಿಸುತ್ತಿದ್ದ ಲಿಂಗಪ್ಪನವರನ್ನು ಸಾರ್ವಜನಿಕ ಕ್ಷೇತ್ರಕ್ಕೆ ಎಳೆತಂದವರು ಟಿ.ಸಿ. ಬಸಪ್ಪನವರು. ತರೀಕೆರೆಯ ದಿ||ಟಿ.ಸಿ. ಬಸಪ್ಪನವರ ಸಲಹೆಯ ಮೇರೆಗೆ ಲಿಂಗಪ್ಪ ತರೀಕೆರೆಯಲ್ಲಿ ವಕೀಲಿವೃತ್ತಿ ಆರಂಭಿಸಿದರು.

ವಕೀಲ ವೃತ್ತಿಯ ಜೊತೆಗೆ ಜಾನಪದದ ಬಗ್ಗೆ ತೀವ್ರ ಆಸಕ್ತಿಯಿಂದ ನಾಡಿನ ತುಂಬೆಲ್ಲಾ ಓಡಾಡಿದರು. ಇಂಥ ಶ್ರದ್ಧೆ-ಶ್ರಮಗಳಿಂದ ಜೀವನ ಸಾಗಿಸುತ್ತಿದ್ದ ಲಿಂಗಪ್ಪ ಅವರಿಗೆ ಬಾಳಸಂಗಾತಿ ಪಾರ್ವತಮ್ಮ. ಈ ದಂಪತಿಗಳಿಗೆ ಹತ್ತು ಜನ ಮಕ್ಕಳು.

ಜಾನಪದ ಸಂಗ್ರಹ, ಸಂಪಾದನೆ ಮತ್ತು ಸಂಶೋಧನೆಗೆ ಸಂಬಂಧಿಸಿದಂತೆ ಲಿಂಗಪ್ಪನವರು ಮಾನವಮಿ ಪದಗಳು (೧೯೪೯) ಮಲೆನಾಡಿನ ಮಡಿಲಲ್ಲಿ (೧೯೫೪) ಇವಲ್ಲದೆ ಇನ್ನೂ ಹತ್ತಾರು ವಿಮರ್ಶಾ ಲೇಖನಗಳನ್ನು ರಚಿಸಿದ್ದಾರೆ. ಅಂತಹವುಗಳಲ್ಲಿ 'ಜೀವಂತ ಜನಾಂಗದ ಜೀವನಾನುಭವ ಜನಪದ ಸಾಹಿತ್ಯ' ಎಂಬುದು ಅತ್ಯುತ್ತಮ ವಿಮರ್ಶಾತ್ಮಕ ಪ್ರಬಂಧವೆನಿಸಿದೆ. ಜಾನಪದದ ಮೇಲೆ ಹೊಸ ಬೆಳಕನ್ನು ಚೆಲ್ಲಿದ ಈ ಪ್ರಬಂಧ ಆಕಾಶವಾಣಿಗೆ ಸಿದ್ಧಪಡಿಸಿದ್ದಾಗಿದೆ. ಹಾಗೆಯೇ 'ತರೀಕೆರೆ ತೆರೆದ ದಾರಿ' ಮತ್ತೊಂದು ಮಹತ್ವಾಕಾಂಕ್ಷಿ ಲೇಖನವಾಗಿದೆ. ಈ ಲೇಖನದಲ್ಲಿ ಜಾನಪದ ಕುರಿತ ಲಿಂಗಪ್ಪ ಅವರ ಸೈದ್ಧಾಂತಿಕ ನಿಲುವು ಸ್ಪಷ್ಟವಾಗಿ ಬಿಂಬಿತವಾಗಿದೆ.

ಮಾನವಮಿ ಪದಗಳು ೧೯೪೯ರಲ್ಲಿ ಪ್ರಕಟವಾದ ಈ ಕೃತಿ ಜನಪದ ಗೀತೆಗಳ ಸಂಕಲನವಾಗಿದೆ. 'ಈ ಸಂಕಲನದಲ್ಲಿ ಗಣೇಶನ ಪದ' ಹಲಗೆ ತೊಳೆಯುವ ಪದ, ಗಂಗಾದೇವಿಯ ಪದ, ಬನ್ನಿಮಹಂಕಾಳಿ ಪದ, ಗೌಡರ ಪದ, ಹರಕೆಯ ಪದ, ಬಸವಣ್ಣನವರ ಪದ, ಬೀರಲಿಂಗನ ಪದ, ಬ್ರಾಹ್ಮಣರ ಪದ, ಗೊಲ್ಲರ ಪದ ಮತ್ತು ಒಗಟುಗಳನ್ನು ಕಾಣುತ್ತೇವೆ. ಮಲೆನಾಡಿನ ಈ ಮಾನವಮಿ ಪದಗಳಲ್ಲಿ ಆದಿಪ್ರಾಸ ಅಂತ್ಯ ಪ್ರಾಸಗಳು ನಿಯತವಾಗಿ ಬರುವುದನ್ನು ಕಾಣಬಹುದು. ಹಾಡುಗಳ ಪರಿಚಯ ಸಮೇತ ಇಲ್ಲಿ ಕೊಡಲಾಗಿದೆ.

ಮಲೆನಾಡಿನ ಮಡಿಲಲ್ಲಿ ಸ್ವತಃ ಮಲೆನಾಡಿನವರೇ ಆದ ಲಿಂಗಪ್ಪ ಅವರಿಗೆ ಮಲೆನಾಡ ಜಾನಪದ ಪ್ರಕಾರಗಳ ಬಗ್ಗೆ ವಿಶೇಷ ಆಸಕ್ತಿ. ಪ್ರಸ್ತುತ ಸಂಕಲನದಲ್ಲಿ ಅಂಥ ಒಂದು ಭಾವ ಎದ್ದು ಕಾಣುತ್ತದೆ. ೧೯೫೪ರಲ್ಲಿ ಪ್ರಕಟವಾದ ಈ ಸಂಕಲನದಲ್ಲಿ ಭೂಮಿತಾಯಿ ಪೂಜೆಮಾಡುವ ಹಾಡು, ಅರ್ಜುನ ಸ್ವಾಮಿಯ ಹಾಡು, ಉತ್ತರದೇವಿಯ ಹಾಡು ಇನ್ನೂ ಮೊದಲಾದವು ಸೇರಿವೆ.

ಕರ್ನಾಟಕ ಜಾನಪದ ಅಧ್ಯಯನದ ಇತಿಹಾಸದಲ್ಲಿ ಲಿಂಗಪ್ಪ ಅವರ ಗಟ್ಟಿ ಅನನ್ಯತೆ ಇರುವುದು ಜನಪದ ಹಾಡುಗಾರಿಕೆಯಲ್ಲಿ. ಮೂಲತಃ ಗ್ರಾಮೀಣ ಸಮುದಾಯದ ಕುಟುಂಬವೊಂದರಲ್ಲಿ ಜನಿಸಿದ ಲಿಂಗಪ್ಪನವರಿಗೆ ಹಾಡುಗಾರಿಕೆ ಎಂಬುದು ತೀರಾ ಸಹಜವಾಗಿ ಒಲಿದ ಕಲೆ. ತಾಯಿ ಬಸಮ್ಮ ಉತ್ತಮ ಹಾಡುಗಾರ್ತಿಯಾಗಿದ್ದರಿಂದಲೇ ಲಿಂಗಪ್ಪ ಜಾನಪದ ಕೋಗಿಲೆಯಾಗಲು ಸಾಧ್ಯವಾಯಿತು. ವಿದ್ಯಾರ್ಥಿ ದೆಸೆಯಿಂದಲೇ ಹಾಡುವುದನ್ನು ಕಲಿತಿದ್ದ ಇವರಿಗೆ ಅಂದಿನಿಂದಲೂ ಅಭಿಮಾನಿಗಳ ದಂಡು ದೊಡ್ಡದು. ಜನಪದ ಗೀತೆಗಳ ಗಾಯನಕ್ಕೆ ತನ್ನನ್ನು ತೊಡಗಿಸಿಕೊಂಡಿದ್ದಕ್ಕೆ ಸಾಕಷ್ಟು ಅಪಹಾಸ್ಯಕ್ಕೊಳಗಾದ ಲಿಂಗಪ್ಪ ಯಾವುದೇ ಕೀಳರಿಮೆ ಅನುಭವಿಸಲಿಲ್ಲ. ಬದಲಿಗೆ ದೃಢವಾದ ಆತ್ಮ ವಿಶ್ವಾಸದಿಂದ ಮುನ್ನಡೆದರು.

ಲಿಂಗಪ್ಪ ಅವರು 'ಬೆಳಗಾನೆ ಎದ್ದು ಯಾರ್ಯಾರ ನೆನೆಯಾಲಿ' ಎಂದು ಶುರುವಿಟ್ಟುಕೊಂಡರೆ ಗಂಟೆಗಟ್ಟಲೆ ನಿರಂತರವಾಗಿ ಹಾಡುಗಾರಿಕೆ ಮುಂದುವರೆಯುತ್ತಿತ್ತು. ಕೇಳುವವರಿಗೂ ಕೂಡ

ಸಮಯದ ಪರಿವೆಯೇ ಇರುತ್ತಿರಲಿಲ್ಲ. ಜನಪದ ಗೀತೆಗಳ ದೊಡ್ಡ ಕಣಜವೇ ಲಿಂಗಪ್ಪ ಅವರ ಎದೆಯಲ್ಲಿ ತುಂಬಿಕೊಂಡಿತ್ತು. ಗರತಿಯ ಹಾಡುಗಳನ್ನೇ ಹೆಚ್ಚು ಹಾಡುತ್ತಿದ್ದರು. ಅವುಗಳಲ್ಲಿಯೂ ಬೀಸುವ ಪದ, ಕುಟ್ಟುವ ಹಾಡು, ಕೋಲಾಟದ ಹಾಡು, ಬೀಗರ ಹಾಡು, ತತ್ವಪದಗಳು, ಜರಿಯುವ ಹಾಡುಗಳು, ಸುಗ್ಗಿಯ ಹಾಡುಗಳು, ಮಾನವಮಿ ಹಾಡುಗಳು, ಪ್ರೇಮಗೀತೆಗಳು. ತೊಟ್ಟಿಲು ಹಾಡುಗಳು ಮುಖ್ಯವಾದವು. ಇಂಥ ಎಲ್ಲಾ ಹಾಡುಗಳನ್ನು ಮಧುರವಾಗಿ ಹಾಡುತ್ತ ಅವುಗಳಲ್ಲಿ ವ್ಯಕ್ತವಾಗಿರುವ ಜೀವನ ದೃಷ್ಟಿಯನ್ನು ಜನರಿಗೆ ತಲುಪಿಸಿದ್ದಾರೆ.

ಲಿಂಗಪ್ಪನವರ ಹಾಡುಗಾರಿಕೆಯ ಈ ಶಕ್ತಿಯನ್ನು ಅನೇಕ ಜನ ವಿದ್ವಾಂಸರು ಹಾಡಿಹೊಗಳಿದ್ದಾರೆ. ಪ್ರ.ತಿ.ನ ಅವರು ಹೀಗೆ ಹೇಳಿದ್ದಾರೆ. ''ಕನ್ನಡ ಜನರಿಗೆ ಜನಪದ ಸಾಹಿತ್ಯದ ರಸದೌತಣವನ್ನು ನೀಡುವುದರ ಮೂಲಕ ಲಿಂಗಪ್ಪನವರು ಲಿಂಗಪೂಜೆಯನ್ನು ಮಾಡಿದ ಪುಣ್ಯವನ್ನೆ ಸಂಪಾದಿಸುತ್ತಿದ್ದಾರೆ. ಅವರ ಈ ಜಾನಪದ ಪೂಜೆ ಈ ನಾಡಿನ, ಈ ನುಡಿಯ, ಈ ಜನರ ಶ್ರೇಯಸ್ಸಿಗೆ ಅವ್ಯಾಹತವಾಗಿ ಮುಂದುವರೆಯಲಿ. ಕನ್ನಡ ಜನ, ಸಂಘಸಂಸ್ಥೆಗಳು ಲಿಂಗಪ್ಪನವರ ಈ ಪೂಜೆಯಲ್ಲಿ ಪಾಲ್ಗೊಳ್ಳಲಿ ಎಂದು ಹಾರೈಸಬೇಕಿದೆ'' (ಉದ್ಧೃತ: ಬಸವರಾಜ ನೆಲ್ಲಿಸರ:೧೯೭೮:೨೭) ಎನ್ನುವ ಈ ಮಾತು ಅರ್ಥಪೂರ್ಣವಾದುದು. ಜನಪದ ಹಾಡುಗಳು ಹಾಗೂ ಲಿಂಗಪ್ಪನವರ ಕಂಠಕ್ಕೆ ಅದೆಂಥ ಹೊಂದಾಣಿಕೆ ಎಂದರೆ ಪಾಟೀಲ್ ಪುಟ್ಟಪ್ಪ ಅವರು ಹೇಳಿರುವಂತೆ ''ಇವರ ಕಂಠದಲ್ಲಿ ಏನೋ ಒಂದು ಗಾರಡಿ ಇದೆ. ಅವರ ಧ್ವನಿಯಲ್ಲಿ ಏನೋ ಒಂದು ಸಮ್ಮೋಹನಿ ಇದೆ. ಜಾನಪದದಿಂದ ಲಿಂಗಪ್ಪನವರಿಗೆ ಮೆರಗು ಬಂದಿದೆಯೋ ಅಥವಾ ಲಿಂಗಪ್ಪನವರಿಂದ ಜಾನಪದಕ್ಕೆ ಮೆರಗು ಬಂದಿದೆಯೋ ಪೃಥಕ್ಕರಿಸಿ ಹೇಳುವುದು ಕಷ್ಟ. ಹಾಲು ಸಕ್ಕರೆ ಸಮ್ಮಿಲನವಾದಂತೆ'' (ಉದ್ಧೃತ:ಬಸವರಾಜ ನೆಲ್ಲಿಸರ:೧೯೭೮:೨೨) ಒಟ್ಟಾರೆ ಲಿಂಗಪ್ಪ ಅವರು ಹಾಡಲು ಪ್ರಾರಂಭಿಸಿದರೆ ಕೇಳುವವವರಿಗೆ ರಸದೌತಣ. ಅವರಿಗಿದ್ದ ಅಂಥ ಶಕ್ತಿಯನ್ನು ಗೊ.ರು.ಚ. ಅವರು ಹೀಗೆ ವರ್ಣಿಸಿದ್ದಾರೆ. ''ಕುಮಾರ ವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದೆನ್ನುತ್ತಾರೆ. ಕೆ.ಆರ್. ಲಿಂಗಪ್ಪನವರು ಹಾಡಿದರೆ ದ್ವಾಪರವೇ ಕಲಿಯಾಗಿ ಬಿಡುತ್ತದೆ'' (ಗೊ.ರು.ಚ:೧೯೭೯:)

ಲಿಂಗಪ್ಪನವರು ಜಾನಪದ ಸಂಬಂಧ ಹಾಡುಗಾರಿಕೆಯಷ್ಟೇ ಶ್ರದ್ಧೆಯಿಂದ ಮಾಡಿದ ಮತ್ತೊಂದು ಕೆಲಸ ಪ್ರವರ್ತಕಗಿರಿ. ಕೆ.ಆರ್. ಲಿಂಗಪ್ಪ ಅವರು ಜಾನಪದದ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದರು. ಕರ್ನಾಟಕದ ಜಾನಪದ ಸೊಬಗನ್ನು, ಆಳ-ಹರವುಗಳನ್ನು ಸ್ವತಃ ಕಂಡಿದ್ದರು. ಜೊತೆಗೆ ವಿವಿಧ ರೀತಿಯ ಗ್ರಂಥಗಳನ್ನು ಅಭ್ಯಾಸ ಮಾಡಿದ್ದರು. ಸ್ಟಿತ್ ಥಾಂಸನ್, ಅಲನ್ ಡಂಡೆಸ್, ರಿಚರ್ಡ್ ಡಾರ್ಸನ್, ಅರ್ನೆ ಆಂಟಿ ಮೊದಲಾದ ಪಾಶ್ಚಾತ್ಯ ವಿದ್ವಾಂಸರ ವಿಚಾರಧಾರೆಗಳನ್ನು ಓದಿ ತಿಳಿದಿದ್ದರು. ಇಷ್ಟೆಲ್ಲ ವಿದ್ವತ್ತಿದ್ದರೂ ಭಾಷಣ-ಬರವಣಿಗೆ ಮಾಧ್ಯಮಗಳಿಗಿಂತ ಗಾಯನ ಮಾಧ್ಯಮವೇ ಇವರಿಗೆ ಹೆಚ್ಚು ಪ್ರಿಯ. ಇವರ ಅತ್ಯುತ್ತಮ

ಇನ್ನೊಂದು ಸಾಧನೆ ಎಂದರೆ ೧೯೬೭ರಲ್ಲಿ ನಡೆಸಿದ ತರೀಕೆರೆಯ ಅಖಿಲ ಕರ್ನಾಟಕ ಪ್ರಥಮ ಜಾನಪದ ಸಮ್ಮೇಳನ. ಜಾನಪದ ಅಧ್ಯಯನದ ಸಂಗ್ರಹ ಹಾಗೂ ಅಧ್ಯಯನದ ಅನಿವಾರ್ಯತೆ ಹಾಗೂ ಸ್ವರೂಪಗಳನ್ನು ನಾಡಿನ ಪ್ರಜ್ಞಾವಂತರಿಗೆ ತಿಳಿಸುವ ಸಲುವಾಗಿ ಅನೇಕ ಜನ, ಹಿರಿಯರು ಮತ್ತು ತರುಣ ವಿದ್ವಾಂಸರು ಇಲ್ಲಿ ಕೂಡಿದ್ದರು. ಈ ಸಮ್ಮೇಳನದ ನೆನಪಿನ ಸಂಚಿಕೆಯಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಕೃತಿ ಬಿಡುಗಡೆಯಾಯಿತು. ಇವುಗಳ ಫಲವಾಗಿ ಜಾನಪದ ಅಧ್ಯಯನ ಹಾಗೂ ಆಸಕ್ತಿ ಸಾಕಷ್ಟು ಚಾಲನೆಯನ್ನು ಪಡೆದವು. ' ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಕೃತಿ ಇಂದಿಗೂ ಆಚಾರ್ಯ ಕೃತಿಯಾಗಿ ಆಕರ ಗ್ರಂಥವಾಗಿದೆ. ಇದರ ಎಲ್ಲಾ ಶ್ರೇಯಸ್ಸು ಸಮ್ಮೇಳನವನ್ನು ಆಯೋಜಿಸಿದ ಕೆ.ಆರ್. ಲಿಂಗಪ್ಪ ಅವರಿಗೇ ಸಲ್ಲುತ್ತದೆ. ಇವರ ಪ್ರೇರಣೆಯಿಂದ ಜಾನಪದಕ್ಕೆ ವಾಲಿದವರು ಅನೇಕ ಜನ. ಅಂಥವರಲ್ಲಿ ಗೊ.ರು.ಚ. ಒಬ್ಬರು. ಅವರೇ ಹೇಳುವ ಹಾಗೆ ''ಜಾನಪದ ಹುಚ್ಚಾಸ್ಪತ್ರೆಗೆ ನನ್ನನ್ನು ದಾಖಲು ಮಾಡಿದ ಕೀರ್ತಿಯೂ ಅವರದೆ. ಇವರು ೧೯೬೩ರಲ್ಲಿ ಪ್ರಕಟವಾಗಿರುವ ''ಮಲ್ಲಿಗೆಯ ಮೊಗ್ಗು ಸುರಿದಾವೆ'' ಪುಸ್ತಕಕ್ಕೆ ಬರೆದಿರುವ ಲೇಖನ 'ತರೀಕೆರೆ ತೆರೆದ ದಾರಿ', ಇದರಲ್ಲಿ ಲಿಂಗಪ್ಪನವರ ಸ್ಪಷ್ಟ ಸೈದ್ಧಾಂತಿಕ ನಿಲುವು ಗೋಚರಿಸುತ್ತದೆ. ಅದನ್ನು ಹೀಗೆ ಕ್ರೋಢೀಕರಿಸಬಹುದು. ''ಜಾನಪದ ಒಂದು ಸಂವೃದ್ಧ ಕ್ಷೇತ್ರವಾಗಿದ್ದು ಅದರಲ್ಲಿ ಅದೆಷ್ಟು ಕೆಲಸ ಮಾಡಿದರೂ ಸಾಲದು. ಇದು ನಾಗರಿಕತೆಯ ನಾಗಾಲೋಟಕ್ಕೆ ಸಿಕ್ಕಿ ನಾಶವಾಗುತ್ತಿದೆ ಎಂಬುದು ಸುಳ್ಳಲ್ಲ. ಹಾಗಾಗಿ ವಯೋವೃದ್ಧರ ಜ್ಞಾನ ರಾಶಿಯನ್ನೆಲ್ಲ ಸಂಗ್ರಹಿಸಿಡಬೇಕು. ಬರೀ ಸಂಗ್ರಹಿಸಿಟ್ಟರೆ ಸಾಲದು. ಅದನ್ನು ಬದುಕಿಗೆ ಕ್ರಿಯಾತ್ಮಕವಾಗಿ ಅಳವಡಿಸಿಕೊಳ್ಳಬೇಕು. ಈ ಬಗ್ಗೆ ಯುವಕ-ಯುವತಿಯರಿಗೆ ವಿಶೇಷವಾದ ಪ್ರೇರೇಪಣೆಯನ್ನು ನೀಡಬೇಕು. ಇಂದು ಜನಪದ ಕಲೆಗಳು ಹಾಗೂ ಕಲಾವಿದರನ್ನೊಳಗೊಂಡು ಬದುಕು ಕೀಳರಿಮೆಯಿಂದ ನರಳುತ್ತಿದೆ. ಹಾಗಾಗಿಯೇ ನಾವು ಮಕ್ಕಳನ್ನು ಸರ್ಕಾರಿ ನೌಕರಿ ಎಂಬ ಪಟ್ಟಿಯೊಳಗೆ ಒಂದು ಜವಾನನ ಕೆಲಸಕ್ಕಾದರೂ ಸೇರಿಸುತ್ತೇವೆ. ಆದರೆ ಜನಪದ ಕಲೆ ಮತ್ತು ವೃತ್ತಿಗಳನ್ನು ನಂಬಲಾರೆವು. ಈ ಪರಿಸ್ಥಿತಿ ಒಳ್ಳೆಯದಲ್ಲ. ಇದನ್ನು ಹೋಗಲಾಡಿಸಲು ಜಾನಪದಕ್ಕೆ ಬೆಲೆ ಬರಬೇಕು. ಹೀಗೆಂದು ಇಡೀ ಜಾನಪದ ಸಂಪೂರ್ಣ ಉಪಯುಕ್ತ ಸಂಗತಿಗಳನ್ನೇ ಹೊಂದಿದೆ ಎಂದು ಭಾವಿಸಬೇಕಿಲ್ಲ. ಇದರಲ್ಲಿ ಒಳ್ಳೆಯದು ಕೆಟ್ಟದ್ದು ಎರಡೂ ಇವೆ. ಅವುಗಳನ್ನು ವಿದ್ವಾಂಸರು ಸಂಶೋಧಕರು ಸೋಸಿ ತೆಗೆಯಬೇಕು. ಜನಪದರಲ್ಲಿ ಮನೆಮಾಡಿರುವ ಮೌಢ್ಯತೆ ಹಾಗೂ ಕಂದಾಚಾರಗಳನ್ನು ಕಿತ್ತೊಗೆಯಬೇಕು''.

ಲಿಂಗಪ್ಪನವರ ಮಹತ್ವದ ಮತ್ತೊಂದು ಸಾಧನೆ ವಿವಿಧ ಸಂಘಸಂಸ್ಥೆಗಳ ಸದಸ್ಯ ಹಾಗೂ ಸಹಭಾಗಿತ್ವದ ಕಾರ್ಯಭಾರ. ಈ ದೃಷ್ಟಿಯಿಂದ ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾಗಿ, ವಯಸ್ಕರ ಶಿಕ್ಷಣ ಸಲಹಾ ಮಂಡಳಿಯ ಸದಸ್ಯರಾಗಿ, ತರೀಕೆರೆ ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿ, ಕರ್ನಾಟಕ ಜಾನಪದ ಪರಿಷತ್ತಿನ ಉಪಾಧ್ಯಕ್ಷರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ದುಡಿದಿದ್ದನ್ನು ವಿಶೇಷವಾಗಿ ಪ್ರಸ್ತಾಪಿಸಬೇಕು. ಇನ್ನೂ

ಗಮನಿಸಬೇಕಾದ ಮತ್ತೊಂದು ಸಂಗತಿ ಎಂದರೆ, ಈಗಿನ ಕುವೆಂಪು ವಿಶ್ವವಿದ್ಯಾನಿಲಯ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರವಾಗಿತ್ತು. ಆ ಸ್ನಾತಕೋತ್ತರ ಕೇಂದ್ರ ಆರಂಭವಾಗಲು ಸಾಕಷ್ಟು ಶ್ರಮಪಟ್ಟವರ ಸಾಲಿನಲ್ಲಿ, ಕೆ.ಆರ್. ಲಿಂಗಪ್ಪನವರು ಒಬ್ಬರು. ಇದೆಲ್ಲದರ ಜೊತೆಗೆ 'ಬೆಳಕು' ಪತ್ರಿಕೆಯ ಸಂಪಾದಕರಾಗಿ, 'ಪುಸ್ತಕ ಪ್ರಪಂಚ'ದ ಉಪಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದನ್ನು ಗಮನಿಸಿದರೆ ಲಿಂಗಪ್ಪನವರ ಕಾರ್ಯಕ್ಷೇತ್ರದ ವ್ಯಾಪ್ತಿ ಹಾಗೂ ಅವರ ಕ್ರಿಯಾಶೀಲ ವ್ಯಕ್ತಿತ್ವ ಅರಿವಿಗೆ ಬರುತ್ತದೆ.

ಲಿಂಗಪ್ಪ ಅವರ ಇಂಥ ಬಹುಮುಖಿ ವ್ಯಕ್ತಿತ್ವವನ್ನು ಗಮನಿಸಿ ಹಲವಾರು ಸಂಘಸಂಸ್ಥೆಗಳು ಬಿರುದು-ಬಹುಮಾನಗಳಿತ್ತು ಸನ್ಮಾನಿಸಿವೆ. ಅಂಥವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ: ಚಿತ್ರದುರ್ಗ ಬೃಹನ್ಮಠದಿಂದ 'ಜಾನಪದ ಸಂಗೀತ ರತ್ನ' ;ಬಾಳೆ ಹೊನ್ನೂರು ಮಠದ 'ಸಾಹಿತ್ಯ ಭಾಸ್ಕರ; ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ (೧೯೭೬) ಪಡೆದಿದ್ದಾರೆ. ಇಷ್ಟೇ ಅಲ್ಲದೆ ೧೯೮೮ರಲ್ಲಿ ಯಗಟಿಯಲ್ಲಿ ನಡೆದ ಕುಮಾರವ್ಯಾಸ ಕುರಿತ ಸಮ್ಮೇಳನದ ಅಧ್ಯಕ್ಷತೆ, ೧೯೯೩ರಲ್ಲಿ ಚಿಕ್ಕಮಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಸ್ಥಾನಗಳು ಇವರಿಗೆ ದಕ್ಕಿವೆ. ವಿಶೇಷದ ಸಂಗತಿ ಎಂದರೆ ೧೯೭೯ರಲ್ಲಿ ಲಿಂಗಪ್ಪನವರ ಸಹಸ್ರಾರು ಅಭಿಮಾನಗಳು ಸೇರಿ ರಾಜ್ಯಮಟ್ಟದ ಅಭಿನಂದನಾ ಸಮಾರಂಭ ಮಾಡಿದ್ದಾರೆ. ಅದರ ಸ್ಮರಣಾರ್ಥವಾಗಿ ಗೊ.ರು.ಚ. ಅವರ ಸಂಪಾದಕತ್ವದಲ್ಲಿ 'ಗ್ರಾಮಜ್ಯೋತಿ' ಎಂಬ ಅಭಿನಂದನಾ ಗ್ರಂಥ ಹೊರತಂದಿದ್ದಾರೆ. ಮತ್ತೊಂದು ಗಮನಾರ್ಹ ಸಂಗತಿ ಎಂದರೆ ಕೆ.ಆರ್. ಲಿಂಗಪ್ಪ ಅವರ ಹೆಸರಲ್ಲಿ ಒಂದು ಟ್ರಸ್ಟ್ ಆರಂಭವಾಗಿದೆ. ಈ ಟ್ರಸ್ಟಿನ ವತಿಯಿಂದ ಜನಪದ ಕಲಾವಿದರಿಗೆ 'ಕೆ.ಆರ್. ಲಿಂಗಪ್ಪ ಜಾನಪದ ಪ್ರಶಸ್ತಿ' ನೀಡಲಾಗುತ್ತಿದೆ.

ತಲೆಮಾರು - ೧ ಲೇಖಕರ ವಿಳಾಸ

1. ಡಾ|| ಬಿ.ಎಸ್. ತಲ್ವಾಡಿ
   'ಜಾನಪದ' ನಂ. 91 ಬಿ,
   7ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ,
   ಗಂಗೊಂಡನಹಳ್ಳಿ,
   ಬೆಂಗಳೂರು-560 039.
2. ಡಾ||ಎಸ್. ಶಶಿಕಲಾ
   ಪ್ರವಾಚಕರು, ಭಗವಾನ್ ಬುದ್ಧ ಪ್ರಥಮದರ್ಜೆ ಕಾಲೇಜು
   ಅನುಭವ ನಗರ, ನಾಗರಬಾವಿ ರಸ್ತೆ,
   ಬೆಂಗಳೂರು-560 072.
3. ಡಾ. ಚಕ್ಕೆರೆ ಶಿವಶಂಕರ್
   ನಂ. 21, 'ಪುಷ್ಯ', ಕವಿ ಕೇಶಿರಾಜ ರಸ್ತೆ,
   10ನೇ 'ಎ' ಕ್ರಾಸ್, ಶ್ರೀನಗರ,
   ಬೆಂಗಳೂರು-560 050.
4. ಪ್ರೊ. ಎಚ್.ಎಂ. ಮಹೇಶ್ವರಯ್ಯ
   ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ
   ಕರ್ನಾಟಕ ವಿಶ್ವವಿದ್ಯಾಲಯ,
   ಪಾವಟೆ ನಗರ, ಧಾರವಾಡ.
5. ಡಾ|| ಕೆ.ಆರ್. ಸಂಧ್ಯಾರೆಡ್ಡಿ
   'ಸಮಯಾ', ನಂ. 1044,
   4ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ,
   ಶ್ರೀನಿವಾಸನಗರ, ಬನಶಂಕರಿ 1ನೇ ಹಂತ,
   ಬೆಂಗಳೂರು-560 050.
6. ಡಾ|| ಸಿ.ಕೆ. ನಾವಲಗಿ
   ಕನ್ನಡ ಪ್ರವಾಚಕರು
   ಜೆ.ಇ.ಎಸ್ ಕಲಾ ಮತ್ತು ವಾಣಿಜ್ಯ ಮಹಾ ವಿದ್ಯಾಲಯ
   ಗೋಕಾಕ್, ಬೆಳಗಾವಿ.

7. ಪ್ರೊ. ಹಿ.ಶಿ. ರಾಮಚಂದ್ರೇಗೌಡ
ಜಾನಪದ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು-570 006.

8. ಡಾ. ಮೃತ್ಯುಂಜಯ ಹೊರಕೇರಿ
ಪ್ರವಾಚಕರು, ಕನ್ನಡ ವಿಭಾಗ
ಸೊಂಡೂರು ಸ್ನಾತಕೋತ್ತರ ಕೇಂದ್ರ,
ಬಳ್ಳಾರಿ ಜಿಲ್ಲೆ -583 119.

9. ಡಾ|| ಎಂ.ಎಸ್. ವಾಲಿ
ವಿಶ್ರಾಂತ ಪ್ರಾಧ್ಯಾಪಕರು
'ಶಿವಯೋಗಿ ನಿಲಯ'
ವಿದ್ಯಾನಗರ ಕಾಲನಿ,
ಬಿಎಲ್‌ಡಿಇ ಆಸ್ಪತ್ರೆ ಎದುರು
ಬಿಜಾಪುರ-586 103

10. ಡಾ|| ಹಾ.ಮಾ. ನಾಯಕ (ದಿವಂಗತ)
ವಿಶ್ರಾಂತ ಕುಲಪತಿಗಳು
'ಗೋಧೂಳಿ', ಜಯಲಕ್ಷ್ಮೀಪುರಂ,
ಮೈಸೂರು-570 012.

11. ಡಾ|| ಎನ್.ಆರ್. ನಾಯಕ
ವಿಶ್ರಾಂತ ಪ್ರಾಧ್ಯಾಪಕರು
ಪ್ರಭಾತ ನಗರ, ಹೊನ್ನಾವರ,
ಉತ್ತರ ಕನ್ನಡ ಜಿಲ್ಲೆ.

12. ಶಿವಾನಂದ ಬೇಕಲ್
ಸಹಾಯಕ ಕೇಂದ್ರ ನಿರ್ದೇಶಕರು
ದೂರದರ್ಶನ ಕೇಂದ್ರ
ಗುಲಬರ್ಗಾ-585 104

13. ಡಾ|| ಸಿ.ಜಿ. ವೆಂಕಟಯ್ಯ
ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ವಿಜ್ಞಾನ ಕಾಲೇಜು,
ಬೆಂಗಳೂರು.

14. ಡಾ|| ಎಲ್.ಜಿ. ಸುಮಿತ್ರ
1157, 3ನೇ ಮುಖ್ಯರಸ್ತೆ,
2ನೇ ಹಂತ, ಗಿರಿನಗರ,
ಬೆಂಗಳೂರು-560 085.

15. ಎಸ್.ಎಂ. ಮುತ್ತಯ್ಯ
ಸಂಶೋಧಕರು, ಕನ್ನಡ ಭಾರತಿ,
ಕುವೆಂಪು ವಿಶ್ವವಿದ್ಯಾಲಯ,
ಶಂಕರಘಟ್ಟ, ಶಿವಮೊಗ್ಗ.

16. ಡಾ. ಶೀ.ನಂ. ಶಂಕರನಾರಾಯಣ
ಪ್ರಾಧ್ಯಾಪಕರು, ಕನ್ನಡ ಭಾರತಿ
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ, ಶಿವಮೊಗ್ಗ.

17. ಡಾ. ಹಂಪನಹಳ್ಳಿ ತಿಮ್ಮೇಗೌಡ
ಪ್ರವಾಚಕರು, ಸರ್ಕಾರಿ ಪ್ರಥಮದರ್ಜೆ ಕಲಾ ಕಾಲೇಜು
ಹಾಸನ.